START

START

START

START

START

ROLL NO: 165.

MICROFILMED BY

KARNATAKA STATE

ARCHIVES

1983

KODAGU Weekly

News paper :-

File No : ARS 19 APP 83

From 23:6:1944

Contd/.

Reg. No. M. 1388.
KODAGU MERCARA. (Coorg).

ಕೊಡಗು

ಸಂಪಾದಕರು:—ಶ್ರೀ ಪಿ. ಬಿ. ಚಿಣ್ಣಪ್ಪ. ವಾರ್ಷಿಕ ಚಂದಾ: ರೂ: ೩–೮–೦.

ಸಂಪುಟ ೭೮ | ತಾರೀಕು ೨೭—೫—೧೯೪೪ನೇ: ಶುಕ್ರವಾರ. | ಸಂಚಿಕೆ ೪

THE CANARA BANKING CORPORATION, Ltd.,

(Incorporated in British India with Limited liability)

ESTD: 1906. Head Office—UDUPI.

(BRANCHES & AGENCIES IN ALL PRINCIPAL CITIES OF INDIA.)

ANNOUNCEMENT.

A branch of the Bank has been opened at
Tobacco Street,
CALICUT on 20-5-1944.

52-4

ಧಾತು ವೃದ್ಧಿ ರಸಾಯನ (ಗಾಜರ ಬಿಳಿಯಾಮ ಕಂಪನಿಯ (DANDY)

"ರ್ಯಾಕ್ಟೋ - ಫಾಸ್ಫೇಟೋ - ಮಾಲ್ಟ್" ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ರಸಾಯನ! ಈ ಔಷಧಿಯನ್ನು ಕುಡಿದರೆ ಆರೋಗ್ಯವು ಉಂಟಾಗುವುದು. ಧಾತುಕ್ಷೀಣತೆಯುಳ್ಳವರಿಗೆ ಬಹಳ ಬಹಳ ಬೇಗ ನಿಮ್ಮ ಶರೀರವನ್ನು ಸುಧಾರಿಸಿಕೊಳ್ಳುವವರಿಗೆ, ಆರೋಗ್ಯಕ್ಕಾಗಿ ಬಹಳ.

ವಿದ್ಯಾರ್ಥಿಗಳಿಗೆ, ವಕೀಲರುಗಳಿಗೆ, ವೈದ್ಯರಿಗೆ, ಡಾಕ್ಟರರಿಗೆ, ಪ್ರಯಾಣಿಕರಿಗೆ, ಯೋಗಿಗಳಿಗೆ, ಸಿಪಾಯಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ – ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿ ಪಡಿಸುವುದು. ಮೆದುಳಿಗೆ ಬಲವನ್ನುಂಟುಮಾಡುವುದು, ಜ್ಞಾಪಕಶಕ್ತಿಗೆ ಉಪಯೋಗವಾಗಿರುವುದು. ಇದರಲ್ಲಿ ಸಮಜೀರ್ಣಕರವಾದ ಎಲ್ಲಾ ವಿಟಮಿನ್ನುಗಳು ಕೆಲವು ಔಷಧಿಗಳನ್ನು ಹೆಚ್ಚು ಬಲ ಉಪಯೋಗ ಮಾಡುವ ಔಷಧಗಳವೆ.

ಇವುಗಳಲ್ಲಿ ಇರುವ ಫಾಸ್ಫೋಲಿಪಾಯ್ಡ್, ಹೈಪೋಫೆಸ್ಫೈಟಿನ್, ಸೋಡಿಯಂ ಗ್ಲಿಸರೋ ಫಾಸ್ಫೇಟ್ ಪೆಪ್ಸಿನ್, ಸಾಲ್, ಮಾಲ್ಟ್ ಎಕ್ಸ್‌ಟ್ರಾಕ್ಟ್ ದ್ರಾಕ್ಷಾಸವ – ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ.

ಇಂದಿನಿಂದಲೇ ಸೇವಿಸಿ ಬಲುಬೇಗ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಅಂಗಡಿಗಳಲ್ಲಿವೆ.

42 ರಘುಪತಿ ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮೂಲಕ ಗೋವಾ ಪಾಂಟೆ.

ಜೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿ., ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.] [1921ರಲ್ಲಿ ಸ್ಥಾಪಿತವಾದದ್ದು.

ಶೇರ್ ಬಂಡವಾಳ .... 1,00,000 0 0 ಸಮಸ್ತರುಜ್ ಫಂಡಿನಲ್ಲಿ 2,03,052 1 7
ಸಮಸ್ತರುಜ್ ಫಂಡ್ ಮೀಸಲು .... 89,310 0 0 ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಸ್ 1,27,750 0 4
ಜಮಾಬಂದಿ ಶೇಷಗಳು .... 1,97,967 0 10 ಸ್ಥಿರ್ ಡಿಪಾಜಿಟ್ಸ್ 3,374 14 4

ಈ ಬ್ಯಾಂಕಿನಿಂದ ಈ ಸಂಜೆಯ ಸಹಕಾರಿ ಸಂಘಗಳಿಗೆಯೂ ಜೊಡ್ಡಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಸ್‌ದಾರರಿಗೆ ಅವರ ಡಿಪಾಜಿಟ್ಸ್‌ಗಳಾಗಿರುವ ಸೇವಿಂಗ್ಸ್‌ನಲ್ಲಿ 90% ಕೊಡುವಾಗಲೆ. ನಿಶ್ಚಿತ ಠೇವಣಾತಿಗಳಿಗೆ 1ವರ್ಷದಿಂದ 3 ವರ್ಷಗಳ ವರೆಗೆ ಶೇಕಡ 2. 3 ವರ್ಷಗಳಿಂದ 5 ವರ್ಷಗಳವರೆಗೆ 2½. 5 ವರ್ಷಗಳಿಂದ 10 ವರ್ಷಗಳ ವರೆಗೆ 3½. 10 ಮತ್ತು ಅದಕ್ಕಿಂತ ಮೇಲ್ಪಟ್ಟ ವರ್ಷಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಸ್‌ಗಳಿಗೆ (on daily balance) ಶೇ. 0-8-0. ಸ್ಥಿರ್ ಡಿಪಾಜಿಟ್ಸ್ ಹೊಂದಿಕೊಳ್ಳುವುದನ್ನು ಕಲ್ಯಾಣಕ್ಕೆ ನಿಶ್ಚಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು:— ಶ್ರೀ. ಐನಂಡ ಪಿ. ಕಾರ್ಯಪ್ಪನವರು.

ಮ್ಯಾನೇಜರು:— & ಸೆಕ್ರೆಟರಿ:— ಶ್ರೀ ಕೊಂಗೆಟ್ಟಿರ ಟಿ. ಅಪ್ಪಯ್ಯನವರು.

ತಾ. 1-3-1944. (52-51)

ಗಾಂಧಿ-ವೇವೆಲ್ ಪತ್ರಗಳು.

ಜೈಲಿನೊಳಗಿದ್ದಾಗ ಮಹಾತ್ಮಗಾಂಧಿ ಮತ್ತು ವೈಸರಾಯಿ ಲಾರ್ಡ್ ವೇವೆಲ್ಲ ರೊಡನೆ ನಡೆದ ಪತ್ರವ್ಯವಹಾರವು ಈಗ ಪ್ರಕಟವಾಗಿದೆ. ಆವರ ಸಾರವನ್ನು ಇದರಡಿ ಕೊಟ್ಟಿರುವೆವು.

ಗಾಂಧಿಯವರ ಫೆ. 17 ರ ಪತ್ರ.

'ಕಾಂಗ್ರೆಸು ಮತ್ತು ನಾನು ನಮ್ಮ ಮೇಲೆ ಹೇರಲ್ಪಟ್ಟಿರುವ ಆರೋಪಗಳಿಗೆ ಜವಾಬ್ದಾರರಲ್ಲ. ನಿಷ್ಪಕ್ಷಪಾತಿ ನ್ಯಾಯಮಂಡಲವು ಇವನ್ನು ವಿಚಾರಿಸಿದರೆ ತಿಳಿದೀತು. ಹಿಂದೂದೇಶದ ಐಶ್ವರ್ಯವು ಹಿಂದೂದೇಶದ ಸ್ವಾತಂತ್ರ್ಯಕ್ಕಾಗಿ ಕಾಕರಿಸುತ್ತಿದೆ. ಇದೇ ಐಶ್ವರ್ಯವು ಜಪಾನರನ್ನೂ, ಬ್ರಿಟಿಷ್ ಅಧಿಕಾರವನ್ನೂ ದ್ವೇಷಿಸುವದು. ದೇಶದಲ್ಲಿಯ ಪ್ರಕೃತ ಪರಿಸ್ಥಿತಿಯಿಂದ ತೃಪ್ತರಾಗಿರುವ ಅಧಿಕಾರಿಗಳು ಎಚ್ಚರಗೊಳ್ಳಬೇಕು. ಭವಿಷ್ಯದಲ್ಲಿ ಪೂರ್ಣ ಜವಾಬ್ದಾರಿಯೂ ಇವತ್ತೆ ಯೋಗ್ಯ ಕಾರ್ಯಕ್ಕೆ ಕೈಹಾಕಿಕೊಳ್ಳಬೇಕು. ರಕ್ಷಣಾತ್ಮಕ ಹೇತುವಾದ ಯುದ್ಧಗಳು ಮುಂದೆ ನಿಲ್ಲಬೇಕಾದರೆ ಹಾಗೆ ವರ್ತಿಸಬೇಕು. ಆದ್ದರಿಂದ ನಿಜವಾದ ಯುದ್ಧ ಪ್ರಯತ್ನವು ಹಿಂದೀಯರ ಕೇಳಿಕೆಯನ್ನು ಸಲ್ಲಿಸಬೇಕು. 1942 ನೇ ಆಗಸ್ಟಿನಲ್ಲಿ ಮಾಡಿದ ಗೊತ್ತುವಳಿ ನಿಯಮಬದ್ಧವಾದುದು. ಅದರಲ್ಲಿ ಹಿಂದೀಯರ, ಬ್ರಿಟಿಷರ, ಜಗತ್ತಿನ ಹಿತವು ಹುದಿದೆ. ನಾನು ಬ್ರಿಟಿಷರ ಮಿತ್ರನು. ಅವರಿಗೆ ಕೇಡುಬಯಸಲಾರೆ. ಈ ದೃಷ್ಟಿಯಿಂದಲೇ ಬ್ರಿಟಿಷರ ಹಿತಕ್ಕಾಗಿ 'ಕ್ವಿಟ್ ಇಂಡಿಯಾ' ಶ್ಲೋಕ ಉದ್ಭೂತವಾಗಿದೆ.'

ವೈಸರಾಯರ ಉತ್ತರ.

'ಸರಕಾರದ ನೀತಿಯನ್ನು ಪ್ರತ್ಯೇಕ ಇಲ್ಲಿ ವಿಂಗಡಿಸುವ ಅಗತ್ಯವಿಲ್ಲ. ನ್ಯಾಯ ಶಾಸನ ಸಭೆಯಲ್ಲಿ ಫೆಬ್ರವರಿ 17 ರಲ್ಲಿ ನಾನು ಮಾಡಿದ ಭಾಷಣದಲ್ಲಿ ಅದು ಬಿಡಿಸಿ ಹಾಗಿದೆ. ನಿಮ್ಮ ಆರೋಗ್ಯವನ್ನು ಆವರ ಪ್ರತಿಯೊಂದನ್ನು ಕುರಿತು ವಿಚಾರಿಸಿರುವೆನು ಶ್ರೀಮತಿ ಕಸ್ತೂರಿಬಾಯಿಯವರ ನಿಧನಕ್ಕೆ ನನ್ನ ಮತ್ತು ನನ್ನ ಪತ್ನಿಯ ಹೃತ್ಪೂರ್ವಕ ಸಂತಾಪಗಳು.'

ಗಾಂಧಿಯವರ 2ನೇ ಪತ್ರ.

ಎಂಡನೆ ಪತ್ರದ ಬಹುಭಾಗವು ಡಾ ಸ್ತೂರ್‌ಬಾರವರ ನಿಧನದಿಂದ ಕಮಗೂಟಾದ ವ್ಯಥೆ, ಜೈಲಿನೊಳಗೆ ಅದು ಹೇಗೆ ಅಪಹಾಸ್ಯವಾಗಿದೆ ಎಂಬುದರಿಂದ ಕೂಡಿತ್ತು. ಒಬ್ಬ ಪತ್ನೀಧರ ಹಿತದೃಷ್ಟಿಯಿಂದ ಈ ಸಮಯದಲ್ಲಿ ತಮ್ಮ ಜವಾಬ್ದಾರಿಯನ್ನು ಬಿಟ್ಟುಕೊಡಲಾಗುವದಿಲ್ಲವೆಂಬ ವೇವೆಲ್ಲರ ಭಾಷಣದ ಭಾಗವನ್ನು ಉಲ್ಲೇಖಿಸಿ ಸರಕಾರವು ತಾವೇ ರೂಪಿಸಿದ ಪಕ್ಷವೊಂದರ ಹಿತಕ್ಕಾಗಿ ನಿಲ್ಲುವ ನಿರ್ಧಾರ ತೋರಿರುವದರಿಂದ ಪರಿಸ್ಥಿತಿಯು ನಿರಾಕಾರವಾಗಿದೆಯೆಂದಿರುವರು. ರಾಜಕೀಯ ಬಂಧಿಗಳನ್ನು ಬಿಡುಗಡೆಮಾಡಬೇಕಾದರೆ ಆಗಸ್ಟ್ ಗೊತ್ತುವಳಿಯನ್ನು ಹಿಂತೆಗೆದುಕೊಳ್ಳಬೇಕೆಂಬ ಮಾತನ್ನು ಅಲ್ಲಗೆಳೆದು ಅದು ಸಾಧ್ಯವಿಲ್ಲವೆಂದು ಸಾವಿರಾರು ಜನರು ಸೇರಿ ಮಾಡಿದ ತೀರ್ಮಾನವನ್ನು ಒಬ್ಬರಾಗಿ ಜೈಲಿನಲ್ಲಿ ಹಿಂದಿಗೆಯುವದು ಅಸಾಧ್ಯವೆಂದೂ, ಪುಣೆಯ ಬಿಡುಗಡೆ ವಿಷಯವನ್ನು ಪ್ರಸ್ತಾಪಿಸಿದವರು ಸಭೆ ಸೇರಿ ಆ ಬಗ್ಗೆ ವಿಚಾರಿಸುವ ವಿಷಯವಲ್ಲವೆಂದೂ, ವೇವೆಲ್ಲರೂ ಗಾಂಧಿಜಾನ್ ಅರಮನೆಗೆ ಬಂದಮೇಲೆ ಅಹಮದ್ ನಗರಕ್ಕೆ ದಯಮಾಡಿಸಿ ಮುಂದಾಳುಗಳನ್ನು ಭೇಟಿಮಾಡುವದು ಉಚಿತವೆಂದೂ ಸೂಚಿಸಿದ್ದರು.

ಪುನದ ಶ್ರಿಪ್ಸರ ಕೊಡುಗೆ.

ವೈಸರಾಯರು ತಮ್ಮ ಉತ್ತರದಲ್ಲಿ, 'ನಿಮ್ಮ ಪತ್ರಕ್ಕೆ ಧೀರ್ಘವಾಗಿ ಉತ್ತರ ಬರೆಯುವದು ಅನಾವಶ್ಯಕವಲ್ಲ ನಿಮ್ಮ ಅಭಿಪ್ರಾಯಗಳ ಮತ್ತು ನಿಮ್ಮ ಬಂಧನದ ಕಾರಣದ ಬಗ್ಗೆ ನಿಮಗೆ ಸ್ಪಷ್ಟ ತಿಳಿಸಬೇಕಿಲ್ಲ. ವೈಸರಾಯರು ಪುನದ ಶ್ರಿಪ್ಸರ ಕೊಡುಗೆಯನ್ನೆ ಒತ್ತಿ ಹೇಳುತ್ತಾರೆ. ಹಿಂದೂದೇಶವನ್ನು ಆಪತ್ಕಾಲದ ವ್ಯವಸ್ಥೆಗೀಡುಮಾಡದೆ ಇವನ್ನು ಕಾರ್ಯರೂಪದಲ್ಲಿ ತರಲು ನಾನು ಯತ್ನಿಸುತ್ತೇನೆ. ಹಿಂದೂದೇಶವನ್ನು ಜಗತ್ತಿನ ರಾಷ್ಟ್ರಗಳ ಸಮಾನತೆಗೆ ತರಲು ಮತ್ತು ಜಗತ್ತಿನಲ್ಲಿ ಪ್ರಜಾಧಿಪತ್ಯವನ್ನು ಪಡಿಸಲು ಅಗಾಧಕಾರ್ಯ ಮಾಡಬೇಕಿದೆ. ದೇಶದ ಮುಂದಾಳುಗಳೆಲ್ಲರೂ ಒಂಗೂಡೇಶದ ಬಿಡುಗಡೆಯ ಧ್ಯೇಯಕ್ಕಾಗಿ ಸಜ್ಜಳಾಗಬೇಕು. ಕಾಂಗ್ರೆಸ್ ಪಕ್ಷವು ಪ್ರಸ್ತುತ ನೀತಿಯ ಸ್ವರಾಜ್ಯಕ್ಕೆ ಕಲಂಕವ್ಯಾಯಮಾಡಲು ಕಾಂಗ್ರೆಸು ನಿರಾಕರಿಸಿದೂ ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆ ಕೊಡುವಂತೆ ಪ್ರೇರೇಪಿಸಿತು. ಈ ಸಂದಿಗ್ಧ ಸಮಯದಲ್ಲಿ ಬ್ರಿಟಿಷ ಭಾಷಣವನ್ನು ಬಿಟ್ಟು ತೀರಾಲಗಬೇಕೆಂದು ರೂಪು ಮಾಡಿಕು. ಇದರಿಂದ ಹಿಂದೂದೇಶದಲ್ಲಿ ನೀತು ಜವಾಬ್ದಾರಿಯನ್ನು ಎಮಂತಿಸುವ ನಮ್ಮ ಶಕ್ತಿಗೆ ಸ್ವಲ್ಪ ಪೆಟ್ಟಿಗಾವಮೆ ಪಟ್ಟಿಬಿದ್ದಂತೆ. ಪಕಾನರಿಗೆ ಬೇಕೆಂದು ಪಹಾಯ ಮಾಡಲು ನೀವು ವ್ಯಯತ್ನಿಸುತ್ತಿದ್ದೀರೆಂದು ನಿಮ್ಮ ಮತ್ತು ಕಾಂಗ್ರೆಸಿನ ಮೇಲೆ ಆರೋಪ ಹೊರಿಸಲಾರೆ. ಆದರೆ ನಿಮ್ಮ ಕಾರಿನ ಪರಿಣಾಮ ಏನಾಗಬಹುದೆಂಬದನ್ನು ತಿಳಿಯದ ಬುದ್ಧಿಹೀನರು ನೀವು. ನಾನು ಆ ಸಮಯದಲ್ಲಿ ಮುಖ್ಯ ಸೇನಾನಿ ಆಗಿದೆ. ಬರ್ಮಾಗಡಿಗಿದ್ದ ಟೈಲಿಗ್ರಾಫ್, ಟೆಲಿಫೋನ್ ಸಂಬಂಧವೆಲ್ಲ ಕತ್ತರಿಸಲ್ಪಟ್ಟವು. ಕಾಂಗ್ರೆಸ್ ಧ್ವಜವನ್ನು ಉಪಯೋಗಿಸುವ ಕಾಂಗ್ರೆಸ್ ಸಹಾಯಕರ ಕೆಲಸವಿದು.

ಹಿಂದೂದೇಶದ ಬಹುಮತ ಪಕ್ಷವನ್ನು ಅಗಸಕಾರ ಮಾಡೋಲನವೆ ಪ್ರತಿನಿಧಿಸುತ್ತದೆ ಎಂಬುದನ್ನು ನಾವು ಒಪ್ಪಲಾರೆ. ಕಾಂಗ್ರೆಸು ದೇಶಕ್ಕೆ ಮಾಡಬಹುದಾದ ಬಹು ದೊಡ್ಡ ಸೇವೆಯೆಂದರೆ ಅಸಹಕಾರವನ್ನು ಬಿಟ್ಟು, ಹಿಂದೂದೇಶದ ಮುನ್ನಡೆಗೆ ಸಹಾಯಮಾಡುವದಾಗಿದೆ.'

ಗಾಂಧೀಜಿಯವರ ಏಪ್ರಿಲ್ 9ರ ಪತ್ರ.

ಇದಕ್ಕೆ ಉತ್ತರವಾಗಿ ಗಾಂಧಿಯವರು ಹೇಳುತ್ತಾರೆ 'ಜವಾಹರ ದೊರೆಯ ಬೇಕಾದರೆ ಪರಸ್ಪರರಲ್ಲಿ ಸಮಾನತೆ, ನಂಬಿಕೆ ಇರಬೇಕು. ಗತ ವರ್ಷಗಳ ಅನುಭವದಿಂದ ಹಿಂದೂದೇಶದ ಸಂಗಡನ ಭವಿಷ್ಯತ್ಪ್ರಶ್ನೆಯನ್ನು ಈ ಸರಕಾರವು ಕೆಟ್ಟುವದೆಂದು ಕಾಂಗ್ರೆಸು ನಂಬಲಾರದು. ನಮ್ಮ 'ಕ್ವಿಟ್ ಇಂಡಿಯಾ' ಗೊತ್ತುವಳಿಯು ಅಕ್ಷತ್ಯಾಗದ ದ್ವೇಷಕಲ್ಪವಲ್ಲದೆ ಅವರಲ್ಲಿ ಹಿಂಸೆಯ ಕಾರುಹು ಇಲ್ಲ ಇದಕ್ಕೆ ವ್ಯತಿರಿಕ್ತವಾಗಿ ಪರಿಸಿದವರು ಕಾಂಗ್ರೆಸಿನಿಂದ ಅಧಿಕಾರ ಹೊಂದಿದವರಲ್ಲ. ದೇಶದಲ್ಲಾದ ಅವ್ಯವಸ್ಥೆಗೆ ಕಾಂಗ್ರೆಸಿಗರ 'ತ್ವರಿತದ ದನ್ನೆಗಿಲಿ' ಕಾರಣವಾದ್ದರಿಂದ ಜವಾಬ್ದಾರಿಯ ಸರಕಾರದ ಹೆಗಲ ಮೇಲೆ ನಿಲ್ಲುವದು.' ಹಿಂದೂದೇಶದ ಪರಿಸ್ಥಿತಿಯನ್ನು ವಿವರಿಸಿ ಗಾಂಧಿಯವರು, 'ನಿಮ್ಮ ಪತ್ರದಲ್ಲಿ ವ್ಯಕ್ತಮಾಡಿದ ಅಭಿಪ್ರಾಯ ನಿಮ್ಮಲ್ಲಿರುವ ವರೆಗೆ ನನಗೆ ಯೋಗ್ಯವಾದ ಸ್ಥಳವೆಂದರೆ ನೀವು ಹೇಳುವಂತೆ ಸರಕಾರದ ನೆರೆಮನೆಯೇ ಆಗಿದೆ. ಸರಕಾರದ ಹೃದಯ ಬದಲಾಗುವ ವರೆಗೆ ನಾನು ಜೈಲಿನಲ್ಲೇ ಇರಲು ತೃಪ್ತನಾಗಿರುವೆ.'

ಮೊದಾಪ್ತೆಕ್ಕಿಜೆ.

ನನ್ನ ಹೆಸರಿನಲ್ಲಿ ಜಪಾಬಂದಿ ಇದ್ದು ನನ್ನೆ ಅನುಭವ ನ್ಯಾಯಿನವಸ್ಥೆರೂಪ ಶ್ರೀ ಮಂಗಲನಾಡಿನ ಕೋಕೊಡು ಗ್ರಾಮದ 525 ಬಿಟ್ಟು ಒಳ್ಳೆ ನೀರಾವರಿ ಭೂಮಿ, ಅಂದಾಜು 30 ಪಟ್ಟಿ ಉತ್ಪನ್ನ ಜಾಗ, ವಾಸಕ್ಕೆ ಹಂಚಿನಮಾಕಿನ ಮನೆಯೂ ಪಟ್ಟಿ ಆಯ್ದ ಗ್ರಾಮದಲ್ಲಿ ಬೇರೆ 300 ಬಿಟ್ಟಿ ನೀರಾವರಿ ಉತ್ಪನ್ನ ಭೂಮಿ ಮತ್ತು ಕಾಫಿ ತೆಕ್ಕಿಜೆ ವ್ಯವಸಾಯಕ್ಕೆ ಅನುಕೂಲವಾದ ಈ ಸ್ಥಳದಲ್ಲಿ ಯಾವ ವ್ಯವಸಾಯವನ್ನೂ ಮಾಡದೆ ಫಲದಕ್ಕಾದ 1¼ ವರ್ಷ ಜಾಗವೂ ಮೂರಾಬಿಟ್ಟಿದೆ. ಈ ಎರಡು ಸ್ವತ್ತುಗಳನ್ನು ಒಟ್ಟಾಗಿಯೂ ಪ್ರತ್ಯೇಕ ಪ್ರತ್ಯೇಕವಾಗಿಯೂ ಮಾರಾಟಮಾಡಲಾಗುವದು. ಖರೀದಿದಾರರು ಹೆಚ್ಚಿನ ವಿವರಗಳಿಗೆ ಈ ಅಡ್ರೆಸಿಗೆ ಬರೆದು ತಿಳಿದುಕೊಳ್ಳಬಹುದು.

ಕೊಡಂದೇರ ಎಂ. ಕಾರ್ಯಪ್ಪ,
3-3 ಬಲ್ಯಮಂಡೂರು, ಕುಟ್ಟ.

ವೀರರಾಜೇಂದ್ರಪೇಟೆಗೆ
'ಕೊಡಗು' ಏಜೆಂಟರು.
ಶ್ರೀ. ಕೆ. ಯಂ. ಸುಬ್ರಾಯನವರು.

ದ್ವಿತೀಯರಂಗದ ಮಂದಗತಿ.

ಹಿಟ್ಲರನ ಗುಪ್ತಾಸ್ತ್ರ?

ಫ್ರಾನ್ಸಿನ ಕರಾವಳಿಯಲ್ಲಿಳಿದ ಮಿತ್ರಸೇನೆಗಳು ಹೆಚ್ಚು ಪ್ರಗತಿಯನ್ನು ಪಡೆದಂತೆ ಕಂಡುಬರುವದಿಲ್ಲ. ಆಶಿಸಿದಷ್ಟು, ಜನರು ಊಹಿಸಿದಷ್ಟು ಮುಂದೆ ನಡೆಯುವದು ಮಿತ್ರರಿಂದ ಆಗಲಿಲ್ಲ. ಅಂದೂ ತೀರ ಪ್ರದೇಶದಲ್ಲಿ ಸುಮಾರು 80 ಮೈಲುಗಳ ವರೆಗಿನ ಪ್ರದೇಶವನ್ನು ಮಿತ್ರರು ಹಿಡಿದಿದ್ದಾರೆ ಶೆರ್‌ಬರ್ಗ್ ಭೂಪಟದಲ್ಲಿ ಕಿರಿದ ಸೇನೆಗಳು ದಕ್ಷಿಣದ ಸೊಂಟೆವರ್ಗ್ ಪಟ್ಟಣವನ್ನು ಹಿಡಿಯ ಹಾಗೆಯೇ ಟಿಲ್ಲಿ-ಟ್ರುಪೆರ್ನ್ ಎಂಬ ಊರುಗಳನ್ನು ಆಕ್ರಮಿಸಿದ್ದವು. ಆದರೆ ಜರ್ಮನರು ಈ ಮೂರು ಭಾಗಗಳನ್ನೂ ಪುನರಾಕ್ರಮಿಸಿಕೊಂಡು ಮಿತ್ರರನ್ನು ಹಿಮ್ಮೆಟ್ಟಿಸಿರುವದು. ಪುನಹ ಮಿತ್ರರು ಪುನಹ ಈ ಪ್ರದೇಶಗಳ ಮೇಲೆ ಪ್ರಚಂಡ ಧಾಳಿಗೆ ತೊಡಗಿದ್ದಾರೆ. ಟಿಲ್ಲಿಯ ಬೀದಿ ಬೀದಿಗಳಲ್ಲಿ ಕದನವಾಗುತ್ತಿದೆ. ಶೆರ್‌ಬರ್ಗ್ ಬಂದರಿನಿಂದ ಮಿತ್ರರು 8 ಮೈಲುಗಳ ದೂರವಲ್ಲದ್ದಾರೆ. ಆ ಮೇರಿಕದ ತೋಪುಗಳು ಬಂದರಿನ ಮೇಲೆ ಗುಂಡು ಹಾರಿಸುತ್ತಿವೆ. ಜರ್ಮನರು ಬಹು ಕೆಚ್ಚಿನಿಂದ ಪ್ರತಿಭಟಿಸುತ್ತಿದ್ದಾರೆ. ಹೊಸ ಹೊಸ ಸೇನೆಗಳನ್ನೆ ತರಿಸಿ ತುಂಬುತ್ತಿದ್ದಾರೆ. ಮಿತ್ರರನ್ನು ಹಿಂದಕ್ಕಟ್ಟಲು ಗೋರಿಂಗನ ಸುಗ್ರೀವಾಜ್ಞೆ ಆಗಿದೆ. ರೋಮೆಲ್ಲನು ಕಾದಿಟ್ಟ ಜರ್ಮನ್ ಉತ್ತಮ ಸೇನೆಗಳನ್ನು ಮುಂದೆ ತರುತ್ತಿರುವನು. ರಣಕೌಶಲ ವಿಕಾರದ ರಂಡ್‌ಸ್ಟೆಟನು ತನ್ನಲ್ಲಿರುವ ಶಕ್ತಿಯನ್ನು ವಿವೇಕಾನಿಕೆ ಪ್ರಯೋಗಿಸಿ ಕಳ್ಳಾಬಿಳ್ಳಿಯೊಗುಮಪನಲ್ಲ. ಸಮಯೂಸಮಯ ನೋಡಿ ಆವಶ್ಯವಿದ್ದಲ್ಲಿ ಸಾಹಸಕೊರಿಸುವ ಚಾಣಾಕ್ಷ ಸೇನಾನಿಯವನು. ಅವನೂ ಸಿದ್ಧನಾಗಿ ನಿಂತಿದ್ದಾನೆ. ಮಿತ್ರರು ಮೇಲಿಂದ ಮೇಲೆ ಸೇನೆಗಳನ್ನು ತಂದು ತುಂಬುತ್ತಿದ್ದಾರೆ. ಆದರೂ ಶತ್ರುಗಳ ಸೈನ್ಯಸಂಖ್ಯೆಯೇ ಹೆಚ್ಚಿರುವಂತೆ ಕಂಡುಬರುತ್ತದೆ. ಫ್ರಾನ್ಸ್ ಕರಾವಳಿಯಲ್ಲಿ ಬ್ರಿಟಿಷರು ಬಂದಿಳಿದಾಗ ಅವರನ್ನು ಎದುರಿಸಿದವರು ಬಹುಭಾಗ ಇತರ ಜನಾಂಗಗಳ ಸೈನಿಕರೆಂದು ಹೇಳಲಾಗಿದೆ. ಜರ್ಮನರು ತಮ್ಮ ಉತ್ತಮ ಸೇನೆಗಳನ್ನು ಹಿನ್ನೆಲೆಯಲ್ಲಿ ಇಟ್ಟಿದ್ದಾರೆ. ಹೀಗಿದ್ದರೂ ಮಿತ್ರರು ಫ್ರಾನ್ಸಿನ ಕರಾವಳಿಯಲ್ಲಿ ಇಳಿಯಲು ಸಮರ್ಥರಾದುದು ಹೇಳಿಕೊಳ್ಳಬಹುದಾದ ವಿಷಯವೆನ್ನುವಲ್ಲಿ ಎರಡಭಿಪ್ರಾಯವಿಲ್ಲ. ಮೊನ್ನೆ ಮೊನ್ನೆಯಾಗಿ ಬ್ರಿಟಿಷ್ ಪ್ರಧಾನ ಚರ್ಚಿಲ್ಲರೂ, ಫ್ರಾನ್ಸ್ ಸ್ವತಂತ್ರ ಪಕ್ಷದ ನಾಯಕ ಡಿಗಾಲೆಯವರೂ ಫ್ರಾನ್ಸ್ ಕರಾವಳಿಗೆ ಹೋಗಿಬಂದರೆಂದಾಗ ಮಿತ್ರರು ಫ್ರೆಂಚ್ ಕರಾವಳಿಯಲ್ಲಿ ಬಲವಾಗಿ ತಳವೂರಿದರು ಎನ್ನಬಹುದು. ಮಿತ್ರರು ಫ್ರಾನ್ಸಿಗೆ ನುಗ್ಗಿದಾಗ ಜರ್ಮನರ ವಿಮಾನ ಶಕ್ತಿ ಕುಗ್ಗಿದೆಯೆನ್ನಲಾಗಿದೆ. ಆದರೆ ಇದೀಗ ಅವರ ವಿಮಾನ ಶಕ್ತಿ ಪ್ರದರ್ಶನ ಆಗುತ್ತಿದೆ. ಫ್ರಾನ್ಸಿನ ಈ ಎರಡು ವಾರಗಳ ಕದನದಲ್ಲಿ ಜರ್ಮನರ 396 ವಿಮಾನಗಳು ನಷ್ಟವಾಗಿದ್ದರೆ ಮಿತ್ರರ 564 ವಿಮಾನಗಳು ನಾಶವಾಗಿವೆ. ಪೌರ್ವಿಮ ರಣರಂಗದಲ್ಲಿ ಜರ್ಮನರ 2500 ವಿಮಾನಗಳು ಬಹುದೆಂದು ಮಿತ್ರರ ಅಂದಾಜು ಇದೆ. ಇದು ಎಷ್ಟರ ಮಟ್ಟಿಗೆ ನಿಜವೆಂದು ನಾನು ಹೇಳಲಾರೆ. ಹೇಗೂ ವಿಮಾನ ಶಕ್ತಿಯಲ್ಲಿ ಮಿತ್ರರ ಕೈಮೇಲಾಗಿದೆಯೆಂದು ಹೇಳಿಕತ್ತಾರೆ. ಆದರೆ ಈ ವಾರ ಹಿಟ್ಲರನು ಬ್ರಿಟನಿನ ಮೇಲೆ ಅತ್ಯಾಧುನಿಕವಾದ ಧಾಳಿಯನ್ನು ಮೂಡಿದ್ದಾನೆ. ವೈಮಾನಿಕರಿಲ್ಲದ ಆಸೆಂಕ ವಿಮಾನಗಳಿಂದ ಇಂಗ್ಲೆಂಡಿನ ಮೇಲೆ ಬಾಂಬುಹಾಕಿಸಿದ್ದಾನೆ. ಇದು ಜರ್ಮನರ ಹೊಸ ಶೋಧನೆ. ಇವರ ಪ್ರಕಾರ ವಿಮಾನಕ್ಕೆ ವೈಮಾನಿಕನಿರಬೇಕಾದುದಿಲ್ಲ. ವಿಮಾನದಲ್ಲಿ ಬಾಂಬುಗಳನ್ನು ತುಂಬಿಸಿ ರೇಡಿಯೋ ಶಕ್ತಿಯಿಂದ ರತ್ರ ಪ್ರದೇಶಗಳಿಗೆ ಬಾಂಬುಹಾಕಿಸುವ ನವೀನ ಶೋಧನೆಯನ್ನು ಮೂಡಿದ್ದಾರೆ. ಇದರಿಂದ ಜನನಷ್ಟವಿಲ್ಲದೆ ಬಾಂಬುಹಾಕುವದು ಸಾಧ್ಯವಾಗಿದೆ. ಕೆಲವೊಂದು ನಿರ್ದಿಷ್ಟ ದೂರದಿಂದ ಈ ವಿಮಾನಗಳನ್ನು ಹಿಂದಕ್ಕೆ ತರುವ ಸಿದ್ಧಿಯನ್ನೂ ಹೂಡಿಕೊಂಡಿರುವರಂತೆ. ಈ ವಿಷಯವನ್ನು ದಾಟಿಹೋದ ವಿಮಾನಗಳು ಹಿಂದಕ್ಕೆ ಬರಲಾರವು. ಮೊನ್ನೆ ಬ್ರಿಟನಿನ ಮೇಲೆ ಈ ರೀತಿಯ ವಿಮಾನಗಳನ್ನು ಪ್ರಯೋಗಿಸಿ ಜರ್ಮನರು ಧಾಳಿ ಮಾಡಿದ್ದಾರೆ. ಈ ಧಾಳಿಯನ್ನು ಎದುರಿಸಲು ತಕ್ಕ ಯೋಜನೆಯನ್ನು ಮಿತ್ರರು ಹೂಡುತ್ತಿದ್ದಾರೆ. ಹಿಟ್ಲರನ ಗುಪ್ತಾಸ್ತ್ರವು ಇದೇ ಆಗಿರಬಹುದೇ ಎಂದು ಸಂಶಯವಾಗುತ್ತಿದೆ.

ಈ ಮಧ್ಯೆ ಮಿತ್ರರ ಶಿಬಿರದಲ್ಲಿ ದುರ್ದೈವಿ ಸಂಗತಿಯೊಂದು ನಡೆದಿದೆ. ಫ್ರಾನ್ಸಿನಲ್ಲಿ ಮಿತ್ರರು ವಶಪಡಿಸುವ ಭಾಗವನ್ನು ಫ್ರಾನ್ಸ್ ಸ್ವತಂತ್ರಪಕ್ಷದ ನಾಯಕ ಡಿಗಾಲೆಯವರ ನೇತೃತ್ವಕ್ಕೊಪ್ಪಿಸುವ ಮಾತುಕಥೆ ಮೊದಲು ಆಗಿತ್ತು. ಆದರೆ ಈಗ ಅದನ್ನು ಅಮೇರಿಕನ್ ಸೇನಾನಿ ಐಸೆನ್‌ಹೋವರವರ ವಶಕ್ಕೆ ಒಪ್ಪಿಸಲಾಗಿದೆ. ಇದರಿಂದ ಡಿಗಾಲೆಯವರಿಗೆ ಅತ್ಯಾಶ್ಚರ್ಯವುಂಟಾಗಿ ಅವನ್ನು ಪ್ರತಿಭಟಿಸಿರುವರು. ಆದರೂ ಮಿತ್ರರು ಇದನ್ನು ಗಮನಕ್ಕೆ ತೆಗೆದುಕೊಂಡಂತೆ ಇಲ್ಲ. ಹೀಗೆ ಒಳಗೊಳಗೆ ಭಿನ್ನಾಭಿಪ್ರಾಯ ಉಂಟಾಗಿದೆ. ಡಿಗಾಲೆಯವರು ಸ್ವಾತಂತ್ರ್ಯ ಪ್ರಿಯ ಫ್ರೆಂಚರ ಪ್ರೇಮಕ್ಕೆ ಪಾತ್ರರಾದವರು. ಮಿತ್ರರ ಈ ನೀತಿಯಿಂದ ಫ್ರಾನ್ಸಿನ ಸ್ವತಂತ್ರ ಪಕ್ಷದವರಿಗೆ ನಿರಾಶೆಯಾಗಿರಲು ಸಾಕು. ಸಮಧಾನಕರ ರೀತಿಯಲ್ಲಿ ಇದನ್ನು ತೀರ್ಮಾನಿಸಿಕೊಂಡಷ್ಟು ಹಿತವಿದೆ.

ಇತ್ತ ಮಂಡಿಪುರ ರಂಗದಲ್ಲಿ ಈ ವಾರದ ಎರಡು ವಾರಗಳಿಂದ ಮಿತ್ರರ ಸ್ಥಿತಿ ಸ್ವಲ್ಪ ಸುಧಾರಿಸಿದ್ದರೂ ಆಶಿಸಿದಷ್ಟು ಆಗಿಲ್ಲ. ಜಪಾನರು ಕೋಹಿಮಾ ಇಂಫಾಲು ರಸ್ತೆಯ ಸುಮಾರು 70 ಮೈಲುಗಳನ್ನು ವರಪಡಿಸಿಕೊಂಡಿರುವರು. ಜಪಾನರನ್ನು ಮಿತ್ರರು ಹಿಮ್ಮೆಟ್ಟಿಸುತ್ತಿದ್ದಾರೆ. ಆದರೆ ಬಹು ಮಂದಗತಿಯಿಂದ ಈ ರೀತಿಯ ಮುನ್ನಡೆಯೂದರೆ ಮಳೆಗಾಲ ಮುಗಿಯುವ ವರೆಗೆ ಜಪಾನರು ಈಗ ಇರುವಲ್ಲೇ ಇರಬಹುದು. ಬರ್ಮಾಗಡಿಯಲ್ಲಿ ವಂದಿಗಾರರಾಗಿರುವ ಟಿ. ಜಿ. ನಾರಾಯಣಸ್ವರ ನವರು ನೋಡಿದರೆ ಜಪಾನರ. ಮೇಲೇರಿಬರಬಹುದೇ ಅನಿಸುತ್ತದೆ. ಅವರ ವರದಿಯಂತೆ ಜಪಾನರ ಹತ್ತಿರ ಆಕ್ಸ್ಯತ್ಮವಾದ ಯುದ್ಧ ಸಾಧನಗಳಿವೆ. ಮಳೆಗಾಲಕ್ಕೆ ಬೇಕಾದ ಸರ್ವಸಿದ್ಧತೆಗಳೂ ಅವರಲ್ಲಿವೆ. ಮಂಡಿಪುರ ಯುದ್ಧವಲ್ಲಿ ಗಂಡಾಂತರವು ತಪ್ಪಿದ್ದರೂ, ಜಪಾನರ ಮುತ್ತಿಗೆಯ ಭಯ ಸಿಂಬಿಲ್ಲ. ಆಕಾಶಮಾರ್ಗವಾಗಿ ಹೊರತು ಉಳಿಗ ಯಾವ ಮಾರ್ಗದಿಂದಲೂ ಮಿತ್ರರು ಇಂಫಾಲಿಗೆ ನುಗ್ಗುವ ಸಾಧ್ಯತೆಯಿಲ್ಲ. ಆತ್ಮ ಉತ್ತರ ಬರ್ಮಾದಲ್ಲಿ ಪ್ರಗತಿ ಸಾಕಷ್ಟಿಲ್ಲ. ಮಿಟೆಕಿಯೊನಕ್ಕಾಗಿ ಉಗ್ರಕದನ ನಡೆಯುತ್ತಿದೆ. ಅರಕಾನ್ ಗಡಿಯಲ್ಲಿ ಸುದ್ದಿಯೇ ಇಲ್ಲ. ಈ ರಂಗದ ಸಂಗತಿಗಳ ಪೂರ್ಣಾವಲೋಕನ ಮಾಡಿದರೆ ಜಪಾನರು ಹಿಂದೂಡೇಶಕ್ಕೆ ಧಾಳಿ ನೂಡಿದುದು ಕೇವಲ ಬೈನಾಕ್ಕೆ ಸಹಾಯ ಹೋಗದಂತೆ ತಡೆಯಲಿಕ್ಕಾಗಿರಬಹುದು ಎಂದೆನಿಸುತ್ತದೆ. ಹೇಗೂ ಈಗ ಬರುತ್ತಿರುವ ಸಂಕುಚಿತ ವಾರ್ತೆಗಳಿಂದ ಜಪಾನರ ಮುಂದಿನ ಧೋರಣೆಯೇನು ಎಂಬುದನ್ನು ತಿಳಿಯುವದು ಕಷ್ಟ. ಹೇಗೂ ಮಳೆಗಾಲ ತೀರುವ ವರೆಗೆ ತಮ್ಮ ಯೋಜನೆಯನ್ನು ಅವರು ಜಯಲು ಮಾಡಲಿಕ್ಕಿಲ್ಲವೆಂದೆನಿಸುತ್ತದೆ.

ಸೀಮೆಣ್ಣೆ.

ಅಂಗಡಿಗಳಿಂದ ಸೀಮೆಣ್ಣೆ ಪಡೆಯುವದು ಬಹು ಕಷ್ಟದ ಸಂಗತಿಯಾಗಿದೆ. ಮೂರುವರೆ ಕದ್ದು ನೂರುವವರಂತೆ ಒಂದು ಬಾಗಿಲನ್ನು ತೆರೆದು ಮೂಂಟ ಮೂಡುವರು. ಒಂದೊಂದು ಯೂನಿಟ್ ಎಣ್ಣೆ ಪಡೆದ ವದು ಜನರ ಎಣ್ಣೆಯನ್ನು ನೇರಿಸಿ ಆಳೆದಾಗ ಆದು ಒಂದು ಕುಪ್ಪಿಯಾದ ನಿದರ್ಶನವಿದೆ. ಈ ರೀತಿ ಆಳತೆಯಲ್ಲೂ ತೊಂದರೆಯಿದೆ. ಅಮ್ಮತ್ತಿಯಂಧಾನಣ್ಣ ಟವುನಿನಲ್ಲಿ ಹದಿನೈದು ದಿನಕೊಮ್ಮೆಯಂತೆ 5-6 ಟನ್ನು ಎಣ್ಣೆ ಮಾರುತ್ತಾರೆ. ಇದನ್ನು ಎಡೆಯೂ ಮೂರು ಜನರಿಗೆ ಕೊಟ್ಟೆದ್ದರೆ ನಾಲ್ಕೈದು ಗಂಟೆಯಲ್ಲಿ ಬಟವಾಡೆಯು ಮುಗಿದು ಎಲ್ಲರಿಗೂ ಅನುಕೂಲವಾಗುತ್ತಿತ್ತು. ಆದರೆ ಒಂದೇ ಅಂಗಡಿಗೆ ಕೊಟ್ಟು ಆ ಅಂಗಡಿಯವನು ಒಂದು ಬಾಗಿಲು ತೆಗೆದುಕೊಂಡು ಮಾರಾಟ ಮಾಡುವ ಕ್ರಮವು ನೂರುವವರಿಗೂ, ಪಡೆಯುವವರಿಗೂ ತೊಂದರೆಗೆ ಕಾರಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಯೋಗ್ಯವ್ಯವಸ್ಥೆ ಮಾಡಬೇಕು.

ಐ. ಎ. ಮಾದಪ್ಪ.

ಕೊ ಡ ಗು

ತಾ. ೨೩-೬-೧೯೪೪ನೇ ಶುಕ್ರವಾರ

ಪ್ರಚಲಿತ ಸಮಾಚಾರಗಳು.

ಫ್ರಾನ್ಸಿನ ಯುದ್ಧ ಭೀಕರ ರೂಪ ತಾಳುತ್ತಿದೆ. ಜರ್ಮನರು ನಿಲ್ದಾಣಗಳ ಮೇಲೆ ನೆಲ, ಜಲ, ಆಕಾಶಮಾರ್ಗಗಳಿಂದ ಪ್ರಚಂಡ ಧಾಳಿಯೊಗುತ್ತಿದೆ. ಟಿಲಿಯ ಪಶ್ಚಿಮದಲ್ಲಿ ಆತ್ಯುಗ್ರ ಟ್ಯಾಂಕುಕಾಳಗ ನಡೆಯುತ್ತಿದೆ. ಲೆರ್‌ಬರ್ಗ್ ನಗರವು ಮಿತ್ರರ ವಶವಾಗಿಬಹುದೆಂದು ಹೇಳಲಾಗುತ್ತಿದೆ. ಮಿತ್ರ ಸೇನಾ ಸರಂಜಾಮುಗಳು ನಾರ್ಮಂಡಿಯಲ್ಲಿ ಬಂದಿಳಿಯುತ್ತಿವೆ. ಜರ್ಮನ್ ಸೇನಾನಿ ರೋಮೆಲನು 3 ಲಕ್ಷ ಯೋಧರು ಮತ್ತು ಐದು ಟಾಂಜರ್ ಡಿವಿಜನುಗಳ ಸಮೇತ ಸಿದ್ಧನಾಗಿ ನಿಂತಿದ್ದಾನೆ.

ಇದರ ಮಧ್ಯೆ ಜರ್ಮನಿಯ ಮುಖ್ಯ ಪಟ್ಟಣ ಬರ್ಲಿನ್ನನ್ನು ಯಾರು ಮುಂದೆ ಮುಟ್ಟುವದೆಂದು ಸ್ಟಾಲಿನ್, ಈಸೆನ್‌ಹೋವರರಲ್ಲಿ ಸ್ಪರ್ಧೆ ಬಂದಿರುವದಂತೆ. ಇಕ್ಕಡೆಯವರೂ ಬರ್ಲಿನ್ನಿನಿಂದ ಸುಮಾರು 700 ಮೈಲುಗಳ ದೂರದಲ್ಲಿದ್ದಾರೆ. ಇವರ ಸ್ಪರ್ಧೆ ಹೀಗಿದ್ದರೆ ಹಿಟ್ಲರನ ಗುಪ್ತಾಸ್ತ್ರಗಳು ದಿನಕ್ಕೊಂದರಂತೆ ಹೊರಬೀಳುತ್ತಿವೆ! ಪ್ರಥಮವಾಗಿ ವೈಮಾನಿಕಶಿಲ್ಪದ ವಿಮಾನಗಳು. ನಂತರ 'ಹೆವಿಲ್‌ಕಾರ್'! ಇದೀಗ ಜೊತೆಯೊಂದು ಆಯುಧ ಸಿದ್ಧವಾಗಿದೆ. ಜರ್ಮೆಕ ಪೆಟ್ಟಿಗೆಯಂಥಾ ಇದನ್ನು ಗಾಳಿಗೆ ಗುಂಡು ಹಾರಿಸುತ್ತಾರೆ. ಇದು ಆಕಾಶದಲ್ಲಿ ಹೋಗಿ ಒಡೆಯುತ್ತದೆ. ಒಡೆಯುವಾಗ ಬೆಳ್ಳಿಯ ಮಾದರಿಯ ಲೋಹದ ಉದ್ದವಾದ ಪರಂಪರೆಗಳು ಹಾರಿ ಸಿಕ್ಕಿದುವನ್ನು ನಾಶಮಾಡುತ್ತವೆ!

ಅತ್ತ ಮೆರಿನಾ ದ್ವೀಪಕಲ್ಪದಲ್ಲಿ ಭಯಂಕರವಾದ ನೌಕಾ ಯುದ್ಧವು ಜಪಾನರಿಗೂ ಮಿತ್ರರಿಗೂ ನಡೆಯುತ್ತಿದೆ. ಜಪಾನರು ತಮ್ಮ ವಿಶಿಷ್ಟ ನೌಕಾ ಶಕ್ತಿಯನ್ನು ಪ್ರಯೋಗಿಸಿರುವರಂತೆ. ಈ ನೌಕಾಯುದ್ಧದ ಮೇಲೆಯೇ ಶಾಂತಿಸಾಗರದ ಭವಿಷ್ಯ ನಿರ್ಣಯವಾಗಬಹುದೆನ್ನುತ್ತಾರೆ. ಇಂಡಿಯೂದ ಹೈಕಮಿಷನರಾಗಿ ಚೈನಾಕ್ಕೆ ಹೋದ ಕೆ. ಪಿ. ಮೆನನ್‌ರವರು ಚೈನಾದ ಪರಿಸ್ಥಿತಿ ಶೋಚನೀಯವಿದೆಯೆಂದಿದ್ದಾರೆ. ರಷ್ಯಾದವರು ಫಿನ್‌ಲೇಂಡಿನ ಮೇಲೇರಿ ಆದನ್ನು ನುರಿಯುವ ಪ್ರಯತ್ನದಲ್ಲಿರುವರು. ಜರ್ಮನರನ್ನೂ ಕ್ರಮಶಃ ಹಿಮ್ಮೆಟ್ಟಿಸುತ್ತಿರುವರು.

ಈ ಮಧ್ಯೆ ಜರ್ಮನ್ ವಿಮಾನಗಳು ಲಂಡನ್ನಿನ ಮೇಲೆ ಬಾಂಬುಹಾಕುವದನ್ನು ನಿಲ್ಲಿಸಿರುವದಿಲ್ಲ. ಇವೆಲ್ಲದರಲ್ಲಿ ಮಿತ್ರರು ಜಯಪಡೆಯುತ್ತಿರುವ ವಾರ್ತೆಗಳಿವೆ. ಆದರೆ ಅಲ್ಲಿಂದ ನಿಶ್ಚಿತವಾದ ವರ್ತಮಾನವೇ ಬಂದಿರುವದಿಲ್ಲ

ಹಿಂದೂದೇಶದಲ್ಲಿ ಗಾಂಧಿಯವರೆ ಪ್ರಕೃತಿ ಸುಧಾರಿಸುತ್ತಿದೆ. ಗಾಂಧಿ ವೈಸರಾಯ್ ಪತ್ರವ್ಯವಹಾರ ಪ್ರಕಟವಾಗಿದೆ. ಬಿಕ್ಕಟ್ಟು ಬಗೆಹರಿಯುವ ಚಿಹ್ನೆಗಳು ಕಂಡುಬರುವದಿಲ್ಲ. ಒರಿಸಾದ ಮುಖ್ಯ ಮಂತ್ರಿಗಳಾದ ಪರ್ಲೇಕಮಿಡಿ ರಾಜರು ಮಂತ್ರಿಮಂಡಳದಲ್ಲಿ ಬಂದ ಭಿನ್ನಾಭಿಪ್ರಾಯದ ಕಾರಣ ರಾಜಿನಾಮೆಕೊಟ್ಟು ಹೊಸ ಮಂತ್ರಿಮಂಡಳ ರಚಿಸಲಿದ್ದಾರೆ. ಬಂಗಾಳದ ಮಂತ್ರಿಮಂಡಳವು ಶೋಚನೀಯಪರಿಸ್ಥಿತಿಯಲ್ಲಿದೆ. ಮಂತ್ರಿಮಂಡಳದ ಪಕ್ಷದ 11 ಜನ ಸದಸ್ಯರು ವಿರೋಧ ಪಕ್ಷವನ್ನು ಸೇರಿರುವರು. ಇಲ್ಲಿರುವ ಈ ಮುಸ್ಲಿಂ ಮಂತ್ರಿಮಂಡಳದ ಕೆಲಸದ ಮೇಲಿನ ಅಪನಂಬಿಕೆಯೇ ಇದಕ್ಕೆ ಕಾರಣವಂತೆ. ಮಂತ್ರಿಮಂಡಳವು ಬದಲಾಗಬಹುದೇ ಎಂಬ ಊಹಾಪೋಹಗಳಿವೆ.

ಈ ಮಧ್ಯೆ ನವಭಾರತ ನಿರ್ಮಾಣ ಕರ್ತೃಗಳಲ್ಲೊಬ್ಬರೂ ಜಗತ್ಪ್ರಸಿದ್ಧ ವಿಜ್ಞಾನ ಶಾಸ್ತ್ರಜ್ಞರೂ, ಉಜ್ವಲ ಲಾಸ್ಯಭಕ್ತರೂ ಆದ ಸರ್ ಪ್ರಫುಲ್ಲಚಂದ್ರ ರೇ ಅವರು ತಮ್ಮ 83ನೇ ವಯಸಿನಲ್ಲಿ ಕರಂಧಾಮವಪನ್ನೈದಿದುದು ಇಡೀ ಭರತಖಂಡವನ್ನು ದುಃಖಸಾಗರದಲ್ಲಿ ಮುಳುಗಿಸಿದೆ.

ಈ ಪ್ರಚಲಿತ ವಿಚಾರಗಳ ಮಧ್ಯೆ ಹಿಂದೂ ದೇಶದ ಬಿಕ್ಕಟ್ಟು ಬಗೆಹರಿಯುವ ಚಿಹ್ನೆಗಳು ಕಂಡು ಬರುವದಿಲ್ಲ. ಕಾಂಗ್ರೆಸ್, ಗಾಂಧೀಜಿಯವರುಗಳ ಮೇಲೆ ಸರಕಾರವು ಹೊರಿಸಿದ ಆರೋಪವನ್ನು ಖಂಡಿಸಿ ಮಹಾತ್ಮರು ಕೊಟ್ಟ ಉತ್ತರವು ಪ್ರಕಟವಾಗಿದೆ. 'ಕಾಂಗ್ರೆಸಿಗರನ್ನು ದಸ್ತಗಿರಿ ಮಾಡಿ ದೇಶವನ್ನು ಗಂಡಾಂತರದಿಂದ ರಕ್ಷಿಸಿದೆವು ಎಂದು ಸರಕಾರವು ಹೇಳುತ್ತಿದೆ. ಈ ದಸ್ತಗಿರಿಗಳ ಕಾರಣದಿಂದ ಉಂಟಾದ ಶಿಕ್ಷೋಭೆ, ಅವ್ಯವಸ್ಥೆಗಳ ಜವಾಬ್ದಾರಿಯನ್ನು ಮಾತ್ರ ಸರಕಾರ ಯಾಕೆ ಮತ್ತೊಬ್ಬರ ಮೇಲೆ ಹಾಕಲೆತ್ನಿಸುವದು? ಎಂದು ಗಾಂಧೀಜಿಯವರು ಅದರಲ್ಲಿ ಕೇಳಿದ್ದಾರೆ.

ವಾರ್ತಾತರಂಗ.

ಒಳದೇಶ.

ಕೊಡಗಿನಲ್ಲಿ ಮಳೆಗಾಲ ಪ್ರಾರಂಭವಾದಂತೆ ಕಂಡುಬಂದರೂ ಸಾಕಷ್ಟು ಮಳೆಯಿಲ್ಲದೆ ವ್ಯವಸಾಯ ಕೆಲಸವು ತೀರಾ ಹಿಂದೆ ಬಿದ್ದಿರುವಂತಿದೆ.

ಬೆಂಗಳೂರಿನ ಸೆಂಟ್ ಜೋಸೆಫ್ಸ್ ಇಂಡಿಯನ್ ಹೈಸ್ಕೂಲಿನಲ್ಲಿ ಓದುತ್ತಿದ್ದ ಶ್ರೀ ಪುಟ್ಟಚಂಡ ಟಿ. ಬೆಳ್ಳಿಪ್ಪನವರು ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ಮಡಿಕೇರಿಯಿಂದ ಭಾಗಮಂಡಲ್ಕೆ ಟಪ್ಪಾಲನ್ನು ಸಾಗಿಸಲು ಭಗಂಡೇಶ್ವರ ಸರ್ವಿಸಿಗೆ ಕೊಟ್ಟಿರುವರು.

ಕಾವೇರಿ ಹೊಳೆಯ ಹೆಬ್ಬರಿಕಡು ಬೆಂಗಾಮಿ ಸೇತುವೆಯು ರೊಪ್ಪ ಜೋಗಿರು ವದರಿಂದ ಮೊನ್ನಾರ್ಡು ಲೈನಿನ ಬಸು ಮಡಿಕೇರಿಯಿಂದ ಬೆಳಿಗ್ಗೆ 8-30 ಗಂಟೆಗೂ, ಸಾಯಂಕಾಲ 3-30 ಗಂಟೆಗೂ ವೀರಾಜಪೇಟೆಯಿಂದ ಬೆಳಿಗ್ಗೆ 10 ಗಂಟೆಗೂ ಸಾಯಂಕಾಲ ೪ ಗಂಟೆಗೂ ಹೊರಡುವದು.

ವೀರಾಜಪೇಟೆ.

ಎನೆಡು ಕಾರಣಗಳು ಸುತ್ತು ಒಂದು ಕೋವಿನ ಮಂಬಯಿ ಹೀಗೆ 3 ರಾಸುಗಳು ತಾ. 11-6-44 ರಿಂದ ಇಲ್ಲಿಯ ಬೆಂಕ್ಲೂರು ಗ್ರಾಮದ ಶ್ರೀ. ಬಡಕಡ ನಂಜಪ್ಪನವರಲ್ಲಿ ಇರುವವೆಂದೂ ಪೂರಿಕರು ಇದಕ್ಕೆ ಪಕ್ಕ ರಿಬುವಾತಂಬೊಟ್ಟು ಇವುಗಳನ್ನು ಹೊಡೆಯುಕೊಂಡು ಹೋಗಬಹುದೆಂದೂ ತಿಳಿಸುತ್ತಾರೆ.

ನಾಪೋಕ್ಲು

ಬಲ್ಲಿಯ ಹೈಸ್ಕೂಲು ತೆರೆಯುವ ಸಮಾರಂಭವು ತಾ. 15-6-44 ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಪಿ. ಸಿ. ಉತ್ತಪ್ಪ ಬಿ. ಎ., ಎಲ್. ಟಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ಯಾರ್ಥಿಗಳಿಕ್ಕೆ ಹೊಡುಗರೂ ಮಾಜಿಶಿಕ್ಷಕರೂ ಆದ ಶ್ರೀ ಪಳಂಗೆಯಂಡ ಎ. ಸಾಬ್ಬಯ್ಯ ಇವರು ಪ್ರಾರ್ಥನೆಯಿಂದ ಸಭೆಯ ಕಾರ್ಯವನ್ನು ಪ್ರಾರಂಭಿಸಿದರು. ಶ್ರೀ ಕಾಳೇರಮಂಡ ಪಿ. ಪೂವಯ್ಯನವರು ವರದಿಯನ್ನು ಓದಿದ ನಂತರ ಶ್ರೀ. ಪಿ. ಯಂ. ಪೊನ್ನಪ್ಪನವರು ಬಂದ ಸಂದೇಶಗಳನ್ನು ಸಭೆಯ ಮುಂದೆ ಓದಿದರು. ಅಧ್ಯಕ್ಷರು ಸ್ಫೂರ್ತಿದಾಯಕವಾದ ಭಾಷಣವನ್ನು ನೂಡಿದರು. ಹೈಸ್ಕೂಲನ್ನು ಬಲವಾದ ಅಸ್ತಿವಾರದಲ್ಲಿ ಸ್ಥಾಪಿಸಬೇಕಾದರೆ ಇದೇ ಸಮಯದಲ್ಲಿ ಎಂಟೂ ಎರಡು ಸಾವಿರ ರೂಪಾಯಿಗಳನ್ನು ಧನಸಹಾಯ ಪೂಡಬೇಕೆಂದೂ ಹೇಳಿದರು. ಶ್ರೀ ಯಸ್. ಯಸ್. ನಾರಾಯಣಮೂರ್ತಿಯವರು ವಂದನೆಗಳನ್ನು ಅರ್ಪಿಸಿದರು. ಉಪಹಾರವಾದ ಮೇಲೆ ಶ್ರೀ. ಗೋಪಾಲದಾಸರ ಹರಿಕಥೆಯೊಡನೆ ಕಾರ್ಯಕ್ರಮವು ಕೊನೆಗೊಂಡಿತು.

ಇಲ್ಲಿಯ ಹೈಸ್ಕೂಲಿನ ಸಾಲ್ಕನೇ ಫಾರಂನಲ್ಲಿ 36 ಹುಡುಗರೂ 6 ಹುಡುಗಿಯರೂ ಅಭ್ಯಸಿಸುತ್ತಿರುವರು.

ಶ್ರೀ. ಕೋಟ್ರಂಡ ಎಸ್. ಪೊನ್ನಪ್ಪ ಬಿ. ಎ. ಇವರನ್ನು ಅಧ್ಯಾಪಕರನ್ನಾಗಿ ನೇಮಿಸಲಾಗಿದೆ.

ಸೋಮವಾರಪೇಟೆ.

ಕೊಡಗು ಕಾಫಿ ಪ್ಲಾಂಟರುಗಳ ಮಿಟಿಂಗು ತಾ. 12-6-44 ರಲ್ಲಿ ನಡೆದು ಮಡಿಕೇರಿಯಲ್ಲಿ ಒಂದು 'ಕಾಫಿ ಮನೆ'ಯನ್ನು ತೆರೆಯುವಂತೆಯೂ, ಕೊಡಗಿನಿಂದ ಫೂಲಿಂಗ್ ಚೇಂಪ್ರಗಳಿಗೆ ಕಾಫಿ ಸಾಗಿಸಿಕೊಳ್ಳುವಂತೆಯೂ, ಇಂಡಿಯನ್ ಕಾಫಿ ಬೋರ್ಡಿನವರನ್ನು ಕೇಳಿಕೊಳ್ಳಲು ತೀರ್ಮಾನಿಸಿತು. ಕಾಫಿಯ ಮೇಲೆ ಖಂಡಿಗೆ ರೂ. 70/-ರಂತೆ ಹಾಕಿರುವ ತೆರಿಗೆಯನ್ನು ನಿವೇದಿಸಲಾಯಿತು. ಬರುವ ವರ್ಷ

ಕಾಫಿಯ ಬೆಲೆ ಕಡಿಮೆ ಮಾಡುವಂಥ ಪ್ರಯತ್ನವನ್ನು ನಿಷೇಧಿಸಿ ಬೆಲೆ ಹೆಚ್ಚು ಮಾಡುವವರ ಬಗ್ಗೆ ಕಡಿಮೆ ಮಾಡಿದ ಆನ್ಯಾಯವೆಂದು ತೀರ್ಮಾನಿಸಲಾಯಿತು. ಬಿಲ್ಲು ಮತ್ತು ಬಿಲ್ಲರೀ ವ್ಯಾಪಾರಿಗಳಿಗೆ ಇಟ್ಟಿರುವ ಲಾಭದ ದರವು ಬಹಳ ಮನಸ್ಸಿಗೆ ದೊರಯುವಂತೆ ಮತ್ತು ಕೊಂಡು ಕೊಳ್ಳುವವನು ಕೊಡುವ ಬೆಲೆಗಳ ದೃಷ್ಟಿಯಿಂದ ಬಹು ಹೆಚ್ಚಾಗಿದೆಯೆಂದೂ, ಸ್ಟಾಲ್‌ದರುಗಳಿಗೆ ನಿಯಂತ್ರಿತ ಬೆಲೆಯಲ್ಲಿ ವೈವಸಾಯ ಸಾಧನಗಳನ್ನು ಒದಗಿಸಬೇಕೆಂದೂ, ತೀರ್ಮಾನಿಸಿದ್ದಲ್ಲದೆ ಕೊಡಗು ಸರಕಾರವು ಉತ್ತಮ ಹೊಡುವ ಎತ್ತುಗಳ ಸಂಖ್ಯೆ, ಕರೆಯುವ ಹಸು, ಎಮ್ಮೆಗಳನ್ನೂ, ವೈವಸಾಯಗಾರರಿಗೆ ನ್ಯಾಯ ಬೆಲೆಗೆ ಒದಗಿಸಿಕೊಡಬೇಕೆಂದೂ ತೀರ್ಮಾನಿಸಲಾಯಿತು.

ಹೊಡ್ಲಿಪೇಟೆ.

ಕೊಡಗು ವೀರಶೈವ ವಿದ್ಯಾನಿಧಿ ಫಂಡಿನ ಕಮಿಟಿಯವರ ದಕ್ಷಿಣ ಕೊಡಗಿನ ಸ್ಟೊಸ್ಮೆಂಬರ್ ಟೆ, ಶ್ರೀವ ಗಲಗಳಲ್ಲಿ ಶ್ರೀ. ಟಿ. ಉತ್ತಪ್ಪ ಬಿ. ಎ. ಯವರ ಅಧ್ಯಕ್ಷತೆಯಲ್ಲಿ ವಿಚಾರಣೆ ನಡೆಸಿ ಹೊಸ್ಮಂಬರ್ ಟೆಯಲ್ಲಿ 660 ರೂ. ಶ್ರೀಮಂಗಲದಲ್ಲಿ 275 ರೂ ಹಣ ಸಮಾಜದ ವಾರ್ಷಿಕ ಸಭೆಯಲ್ಲಿ ಪೊನ್ನಂಪೇಟೆಯಲ್ಲಿ 190, ಶ್ರೀಮಂಗಲದಲ್ಲಿ ರೂ. 126 ನಗದ್ದು ಸಂಗ್ರಹವಾಗಿದೆ

ವಂದನೆ.

ಸಮಸ್ತ ಪ್ರೀತಿಯ ಕುಟುಂಬಿಯವರ ಸಿದ್ಧ ನಮಿಸಿ ನಮಸ್ಕರಿಸುವುದೇನೆಂದರೆ ಅವರ ಮಗು ರಲ್ಲಿ ಸಹ ಗುವನ್ನೂ, ಸಹಾನುಭೂತಿಯನ್ನೂ ತೋರಿ ನನ್ನ ಆನೇಕ ಬಂಧು ಮಿತ್ರರಿಗೆ ಸಂತಾಪ ಸೂಚಕ ಪತ್ರ ಬರೆದಿರುತ್ತಾರೆ. ಇವರೆಲ್ಲರ ವೈಕ್ತಿಕವಾಗಿ ಒರೆಯಲು ಆಸಾಧ್ಯವಾದುದರಿಂದ ಈ ಪತ್ರಿಕೆ ಮೂಲಕ ನಮ್ಮ ನಂದನೆಗಳನ್ನು ಅರ್ಪಿಸಿರುತ್ತೇವೆ ಇದನ್ನು ಸ್ವೀಕರಿಸಬೇಕೆಂದು ನಮ್ಮ ವಿಷಯವಾಗಿ ಆದರೆಯಾದ ವಿನಂತಿ

ಕೊಡೆಂಡೆ ಮಾಚಯ್ಯ,
" ಬೋಪಯ್ಯ,
'ಆತಿಥ್ ಗ್ರೀವ್', ಪೊನ್ನೆಟ್ಟಿ.

ಕೃತಜ್ಞತಾ ಪತ್ರ.

ತಾ. 29-5-44ರಲ್ಲಿ ದಿವಂಗತರಾದ ನನ್ನ ಪ್ರೀತಿಯ ಪುತ್ರ ಅಜ್ಜಿಯ್ಯನ ನಿಯೋಗದಿಂದ ದುಃಖಿತಳಾದ ನನ್ನನ್ನು ತಮ್ಮ ಸಂತಾಪ ಸೂಚನಾ ಪತ್ರ ಗಳಿಂದ ಮತ್ತು ಧೈರ್ಯವಾರ್ಥಕ ವಚನಗಳಿಂದ ಸಂತೈಸಿದ ನನ್ನ ಬಂಧು ಮಿತ್ರರಿಗೆ ಪ್ರತ್ಯೇಕ ಪ್ರತ್ಯೇಕ ಬರೆಯು ನನ್ನ ಶರೀರಜ್ಜಿಯನ್ನು ಆರ್ಪಿಸಲು ತಪ್ಪಾದುದರಿಂದ ಅಸ್ವಸ್ಥರಿಗೂ ಈ ಮೂಲಕ ನನ್ನ ವಂದನಾ ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮಿಸೆಸ ಮುಕ್ಕಾಟಿರ ಮುತ್ತಣ್ಣ.
ದೇವಣಗೇರಿ.

ನಾಪೋಕ್ಲು ಹೈಸ್ಕೂಲ್ ಫಂಡು.

ನಾಪೋಕ್ಲಿನಲ್ಲಿ ಹೈಸ್ಕೂಲು ಸ್ಥಾಪಿಸಬೇಕೆಂದು ಈಗಿನ ಏಪ್ರಿಲ್ ತಿಂಗಳಿನಲ್ಲಿ ಹೆಚ್ಚುವರಿಯಾಗಿ ತಾ. 1—6—44ರಿಂದ 4ನೇ ಫಾರಂನ್ನು ಬರೆದು ಹುಸಗಾ ಸಂಖ್ಯೆಯ ಈ ಗಾಗಲೇ 42ಕ್ಕೆ ತಲುಪಿದೆ ಒಟ್ಟಾ ವಿದ್ಯಾರ್ಥಿಗಳಾಗಿ ಫಾರ್ಮ್ ಪ್ರೀ ಪಿ ಸಿ ಉತ್ತೀರ್ಣರಾಗಿ ಇವರೆ ಸೇತೃದಲ್ಲಿ ತಾ 15—6—44ರಲ್ಲಿ ಬಿ ದ್ಯಾಲಯಾ ಸಂಸ್ಥಾಪಕತ್ವ ಬಗ್ಗೆ ವಿಜ್ಞಾಪಿಸುವ ನವೆಯಿಂದು ಮಂಡನೀಯರುಗಳು ತಕ್ಕ ಪ್ರತ್ಯುತ್ತರ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಅಲ್ಲದೆ ಸಹಾಯ ನೀಡಿರುವವರು ಇನ್ನೂ ಸಹಾಯ ಮಾಡುತ್ತಿರುವರು ಅವರುಗಳ ಧನ ಸಹಾಯವನ್ನು ಸ್ಮರಣ ಪತ್ರಿಕೆಯು ಮೂಲಕ ಸೂಚನೆ ಬಂಧಿಸಲು ಪ್ರಯತ್ನಿಸಬೇಕೆಂದು ಹಿಂದೆ ಕೇಳಿಕೊಂಡಿದ್ದೆನು ಆದರೆ ಅಂಥಾ ಪತ್ರಿಕೆಯನ್ನು ಪ್ರಕಟಿಸಲು ಕಾರ್ಯಾಕ್ಷಿಯು ಸಂಗಡ ಕಲ್ಪಿಸಿ ಮೊದಲು ಕಾರಣ ಈ ಪತ್ರಿಕೆಯ ಮೂಲಕ ಸೂಚನೆಯನ್ನು ನಿಸ್ಸಂಶಯವಾಗಿ ಧನಾಗಿ ಆ ಸಂಸ್ಥೆಯ ಹೆಸರಾ ಕಾಲ್ಪನಿಕ ಪಟ್ಟಿಯನ್ನು ಪ್ರತಿ ವಾರ್ಷಿಕದಲ್ಲಿ

ಇಂತಿರಲಿ ಹೈಸ್ಕೂಲು ಸ್ಥಾಪಿತ ಪ್ರಸ್ತಾಪ ಆಗುವದಕ್ಕಿಂತಲೂ ಬಹಳ ಜನರ ಅಭಿಪ್ರಾಯವಿದ್ದಲೂ ಸಂಸ್ಥೆಯು ಸಂಸ್ಥಾಪನೆಯಾಗಿದೆಯೂ ಅಂದಾಜು ರೂ 18,000/ ಫಂಡಾಗಿದೆ ಇದರಲ್ಲಿ ಬೆಸ್ಟಿನ ಅಂ ವ ಸರಕಾರ ಸಹಾಯಗಳಿಂದ ಒಂದು ಹಾಗೆಯಾಗಿ ನಮ್ಮ ಈ ಯೋಜನೆಗೆ ಸಾಕಾರಗೊಳಿಸಿಕೊಳ್ಳಲಿದೆ ಎಂಬುದನ್ನು ಸೂಚಿಸಬಹುದಾಗಿದೆ

ಧನ ಸಹಾಯ ಮಾಡಿದವರು.

ರೂ 1೮೦—೨ ಜ ಎ ಕೈಪ್ಪನವರ ಮೂಲಕ—ಶ್ರೀ ಚಾಳಿಯ ಮಂ ಪೈರ ಉತ್ತಪ್ಪ, ಕೇಟಿರ ಗಣಪ, ಪೊನ್ನಕ್ಕಿರ ಮಾದಯ್ಯ, ಚಟ್ಟಂಡ ಬಿ ಕೆ ಅಯ್ಯಪ್ಪ, ಬಿ ಕೆ ಧರ್ಮಯ್ಯ, ಬಿ ಕೆ ಬೋಪಯ್ಯ, ಚಿ ಬಿ ಪೂವಯ್ಯ, ಜಮ್ಮಡಿರ ಎಂ ಬೋಪಯ್ಯ, ಎಂ ಎಂ ಐಯ್ಯಪ್ಪ ಬಿ ಎಲ್ಲಪ್ಪ, ಸಿ ಪಿ ಅಚ್ಚಪ್ಪ, ಕೆ ಪೂವಯ್ಯ, ಸಿ ಎಂ ಮಂಜಯ್ಯ, ಎಲ್ ದಿಲೀಪ, ಎ ಕೆ ಕಾಳಯ್ಯ, ಪಿ ಎಂ ಸುಬ್ಬಯ್ಯ, ಕೆ ಪಿ ಮಾದಯ್ಯ, ಎ ಬಿ ಅಚ್ಚಪ್ಪ, ಸಿ ಪಿ ಪೊಣ್ಣಪ್ಪ ಕಲಿಯ್ಯ ಸಿ ಪಿ ಮಂಜಪ್ಪ, ಎನ್ ಪಿ ಅಪ್ಪಣ್ಣ, ಪಿ ವಿ ಸಿ ಕಾರ್ಯಪ್ಪ, ಪಿ ಪಿ ಮೊಣ್ಣಪ್ಪ ಕೆ ಟಿ ಪೆಣ್ಣಪ್ಪ ಇವರುಗಳು

ರೂ ೨೦೦—೦—೦ ಬಿ ಎಂ ಕಾರ್ಯಪ್ಪನವರ ಮೂಲಕ ದಕ್ಷಿಣ ಕೊಡಗಿನ ಮಂ ಪೈರ ಬೇರೆರ ಉತ್ತಪ್ಪ, ಕೆ ಪೂ ಕಾರ್ಯಪ್ಪ, ಪಿ ಕೆ ಪಾಪು ಗಾ, ಪಿ ಪಿ ಪೂವಪ್ಪ, ಎಂ ಪಿ ಸುಬ್ಬಮ್ಮ, ಶ್ರೀಮತಿ ಕಿರುವಾಂಡ ಪೆಂಬಯ್ಯ ಎಂ ರುಗಳು

ರೂ ೧೦೦ ಕೊಟ್ಟವರು—ಶ್ರೀ ಎಂ ಕಾರಿಯಪ್ಪ, ಆರ್ ಪಿ ಮಾಚಿಮಂ ಪಿ ಪಿ ಚಿಂ ಪಿ ಕಾರಿಯಪ್ಪ ಮತ್ತು ಕಾಫಿ ಪ್ಲಾಂಟರ್ಸ್ ಅಸೋಸಿಯೇಷನ್ ಸಭೆಯಲ್ಲಿ ಸೇರಿದ್ದ ಎಲ್ಲಾ ಸದಸ್ಯರುಗಳು ಹಾಗೂ ಇನ್ನೂ ಅನೇಕ ಸಜ್ಜನರು ಸಹಾಯ ಮಾಡಿರುವರು ಇನ್ನೂ ಸಹಾಯ ಮಾಡಬೇಕಾಗಿ ಕೋರಿಕೆ ಇದೆ ಇವರೆಲ್ಲರಿಗೂ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ವಂದನೆಗಳು

ಪ್ರೀತಿಯಾ ಪೊಲ್ಲೆರ ಮುದ್ದಪ್ಪ ಇವರ 8, ಬಿ ಲ್ಲೆಟಿರ ಅಚ್ಚಪ್ಪ ಮತ್ತು ಚಿಟ್ಟಿ ಯಂತ ಕಾರ್ಯಪ್ಪ ರೂ. 10ರತೆ, ಮಚ್ಚಾಟಿರ ಪಯ್ಯಣ್ಣನವರ ಸುಪ್ಪ ಳು ರೂ 11, ಅಚ್ಚಾಂಡಿರ ಪೂವಪ್ಪ 10, ಚೆಪ್ಪುಡಿ ರಾಮಾಯಣಕರು 20, ಪಾಲ್ ಮುಲ್ 6 ಪಿ ಈ ಕೋಟೋಳಿರ ಚಂಗಪ್ಪ, ಮಾಳೆರ ಒಪ್ಪಪ್ಪ, ಕಾಟು ಮಾಣಿಯಂಡ ಗಣಪಪ್ಪ ಲಿಯಾಂಡಿರ ಭಯ್ಯ, ಅಪಿಯಚ್ಚ ಬೋಪಯ್ಯ ತಿಕ್ಕೆಪ್ಪ ಈ ಎ ಪೊನ್ನಿರ ಮೇಯಣ್ಣ ಇವರುಗಳು ರೂ 25ರಂತೆ ಮೂಕಂಡಿ ಪದಮೇಶ್ವರಯ್ಯ 10, ಮಂಡಂಡ ಮಂದಪ್ಪ, ಬಿನ್ನಂಡಿರ ಕಾಳಪ್ಪ, ಬಿಪ್ಪಡಿಚ್ಚಿರ ಕಾಣಿಯಪ್ಪ, ಕೊಂಡಿರ ಪಳಂಗಪ್ಪ ಇವರುಗಳು ರೂ ೨೦ರಂತೆ, ಸಾಳೋ ಕ್ಕುಲಾಡಾ ಬಾಲಕರು ರೂ 68—೦—೦, ಸುಬೇದಾರ್ ಸ್ಕೂಲ್ ಮೂವೆರ ಕಾಳಪ್ಪ ಮತ್ತು ಅಣ್ಣಾಟಂಡ ತಂಗಪ್ಪ ರವರು 100ರಂತೆ, ಸಂದಾಬಡ ಮನೆಯ ಶ್ರೀ ಶಾಂತಮಲ್ಲಪ್ಪ ರೂ 105, ಕೋಳಿರ ಐಯ್ಯಪ್ಪ ರೂ 200, ಬೊಪ್ಪಂಡ ಅಚ್ಚಪ್ಪ ರ ಕೋವರು ರೂ 400, ಕಂಗಾಣಂಡ ಅಚಪ್ಪ ರೂ 500, ಬಿಪ್ಪಾಟಂಡ ಸೂಬಪ್ಪ ರೂ 100 ಮುಖ್ಯ ರೂ 2,568—12—0 (ನೋಡಿ

ಕೊಡಗು ಮುಜರಾಯಿ ಇಲಾಖಾ ಆಫೀಸಿನಿಂದ

ಇಸ್ತಿಹಾರು ನಾಮೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ:—

ಸನ್ 1892ನೇ ಇಸವಿ 4ನೇ ನಂಬ್ರ ರೆಗ್ಯುಲೇಶನ್ ಅನುಸರಿಸಿ ಹಜರತ್ ಶ್ರೀಫ್ ಕನಿಶನರ್ ನಾಮೇಬರವರು ಮಂಜೂರು ಮಾಡಿದ 1892ನೇ ಇಸವಿ ಡಿಸೆಂಬರ್ ತಾ. 19ನೇ ನಂಬ್ರ 67ನೇ ನೋಟಿಫಿಕೇಶನಿನಲ್ಲಿ ನಮೂದಿಸಿರುವ ರೂಲ್ಸ್ ಪ್ರಕಾರ ಈ ಕೆಳಗೆ ನಮೂದಿಸಿರುವ ಮೆಂಬರು ಕೆಲಸವು ಖಾಲಿ ಬಿದ್ದಿರುವದರಿಂದ ಇವರ ಬದಲಿಗೆ ಬೇರೆ ಮೆಂಬರು ಜನರಿಂದ ಚುನಾಯಿಸಲ್ಪಡುತ್ತಾರೆ.

ನಂ	ಯಾರ ಬದಲಿಗೆ	ಮೆಂಬರುಗಳ ಅವಧಿ ಪೂರೈಸಿದ ದಿನಾಂಕ	ಮೆಂಬರುಗಳನ್ನು ಚುನಾಯಿಸುವುದಕ್ಕೆ ಸಭೆ ನಡೆಯುವ ಸ್ಥಳ	ತಾರೀಖು ಘಂಟೆ
	ಮೆ ಪಿ ಎಂ ಪೊಣ್ಣಪ್ಪ ಪೊನ್ನಿಯಂಡ (ರಾಜೀನಾಮೆ ಕೊಟ್ಟವರು)	19-2-1944	ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲ್	7-7-44 12೦೦ದ 5ರ ವರೆಗೆ

ಕೊಡಗು ದೇವಸ್ಥಾನಗಳ ಆಡಳಿತ ಜಗ್ಗೆ ಜೋಫ್ ಕಮಿಶನರ್ ನಾಮೇಬರವರ ರೆಗ್ಯುಲೇಶನ್ ನೋರೆ, ಮಡಿಕೇರಿ ಮತ್ತು ಪಾಡಿನಾಲ್ಕುನಾಡ್ ತಾಲೂಕುಗಳಿಗೆ ನೇಮಿಸಲಾದ ಮೆಂಬರು ಮೆ. ಪಿ. ಎಂ. ವಿಜಯರತ್ನಂ ಮೂವಲಿಯೂರು ಇವರು ಖಾತ್ರಿಯಾಗಿ ಮೇಲಿನ ಮೆಂಬರುಕೆಲಸವು ಖಾಲಿ ಬಿದ್ದಿರುವದರಿಂದ, ನೋಟೀಸ್ ನಮೂದಿಸಿರುವ ಸ್ಥಳಗಳಲ್ಲಿ ನಾಲ್ಕೆ ನಮೂದಿಸಿರುವ ಸಮಯಕ್ಕೆ ಸರಿಯಾಗಿ ಆರ್ಜಿದಾರರ ಪರವಾಗಿ ಓಟ್ಸ್ ಕೊಡಲು ಮಾಡಿಕೊಳ್ಳಲಿಕ್ಕೆ ಜಗ್ಗೆ ನೇಮಕ ಮಾಡಿರುವ ಗುಂಡಿರತಕ್ಕ ಪಲ್ಲರುಗಳು ಬೆಂಪಲ ಕಮಿಟಿ ಮೆಂಬರು ಶ್ರೀ ಕೆ ರಾಮಕೃಷ್ಣಪ್ಪ, ಬಿ. ಎ., ಎಲ್. ಟಿ. ಯವರು, ದೇವಸ್ಥಾನಗಳ ಮೇನೇಜರು ಓಟ್ಸ್ ರಿಕಾರ್ಡ್ ಮಾಡುತ್ತಾರೆ. ಮೆಂಬರಾಗಿಲು ಬಾಯಸ್ ಇರತಕ್ಕವರು ಓಟ್ಸ್ ಕೊಡಲು ನೆನಪು ಮಾಡಿಕೊಂಡಿರತಕ್ಕ ತಾರೀಕಿಗೆ ಮೂರು ದಿವಸಗಳೊಳಗೆ ಆಪರನರ ಅರ್ಜಿಯನ್ನು ಈ ಕೆಳಗೆ ದಸ್ಕತ್ತು ಮಾಡಿದವರಿಗೆ ತಲುಪುವಂತೆ ಕಳುಹಿಸತಕ್ಕದ್ದು. ಬಾಯಿದೆ ನಂತರ ಬರತಕ್ಕ ಅರ್ಜಿಯನ್ನು ಅಂಗೀಕರಿಸುವುದಿಲ್ಲವಾದ ವಿವರ ಮುಂತಾದ

ಮಡಿಕೇರಿ.
20-6-44.

ರಾ. ಸಾ. ಪಿ. ಎ. ಚಂಗಪ್ಪ.
ಪ್ರೆಸಿಡೆಂಟ್.

ಜೂಹುವಿನಲ್ಲಿ!

ಮಹಾತ್ಮಗಾಂಧಿಯವರು ಜೂಹೂ ವಿನಲ್ಲಿ ಆರೋಗ್ಯವರ್ಧನೆಗಾಗಿ ಇರುವರು. ದಿನವಹಿ ಭಾರತದ ಭಾಗ್ಯವಿಧಾತನನ್ನು ದರ್ಶನಮಾಡಲು ಹಿಂದೂದೇಶದ ಜನರು ಬೇಧಭಾವವಿಲ್ಲದೆ ಬರುತ್ತಿರುತ್ತಾರೆ. ಮದ್ರಾಸಿನವರು, ಮಂಗಳೂರಿನವರು, ಬಂಗಾಳದವರು, ಪಂಜಾಬ್, ಗುಜರಾತಿಯವರು ಹೀಗೆ ಮೂನವ ಯಾತ್ರೆ ಜೂಹೂವಿನ ಕಡೆ ಧಾವಿಸುತ್ತಿದೆ. ಪ್ರತಿ ದಿನ ಸಾಯಂಕಾಲ ಪ್ರಾರ್ಥನೆಗೆ ಹತ್ತು ಸಾವಿರದ ವರೆಗೂ ಜನರು ಕಿಕ್ಕಿರಿದಿರುವದುಂಟು. ಗಾಂಧಿಯವರ ದರ್ಶನಕ್ಕೆ ಯೋಗ್ಯ ಸ್ಥಳ ದೊರೆಯಬೇಕು; ಹತ್ತಿರದಲ್ಲಿ ನಿಂತು ಗಾಂಧಿಯವರನ್ನು ನೋಡಲನುವಾಗಬೇಕು; ಅವರ ಸ್ವರವನ್ನು ಕೇಳಲನುವಾಗಬೇಕೆಂದು ಜನರು ಎಷ್ಟೋ ಹೊತ್ತಿಗೆ ಮುಂಚೆಯೇ ಪ್ರಾರ್ಥನೆ ನಡೆಯುವ ಸ್ಥಳದಲ್ಲಿ ಕಾದು ಕೂತಿರುತ್ತಾರೆ. ಕ್ಷುಪ್ರ ಸಮಯದಲ್ಲಿ ಗಾಂಧಿಯವರು ಅವರಿಗಾಗಿ ವಿಶೇಷವಾಗಿ ಏರ್ಪಡಿಸಿದ ಆಸನದಲ್ಲಿ ಬಂದು ಕೂರುತ್ತಾರೆ. ಒಡನೆ ಜಯಘೋಷದಲ್ಲಿ ಅವರೋತ್ಸವಗಳು ಹೊರ ಹೊಮ್ಮುತ್ತವೆ. ಪ್ರತಿಯೊಬ್ಬನ ಕಣ್ಣು ಎನೆಯಿಕ್ಕದೆ ತದೇಕ ದೃಷ್ಟಿಯಿಂದ ಭಾರತದ 'ಬಾಪು'ವನ್ನು ನೋಡುತ್ತನೆ. ಗಂಡಂದಿಯರು ಹೆಂಡತಿಯರಿಗೆ 'ನೋಡಲ್ಲಿ ಗಾಂಧೀಜಿ' ತಾಯಿಯರು ಮಕ್ಕಳಿಗೆ ಅದೇ ನುಡಿ ನುಡಿಯುತ್ತಾರೆ. ಇಡೀ ವಾತಾವರಣವೇ 'ನೋಡಲ್ಲಿ ಗಾಂಧೀಜಿ' ಎಂದು ಮೊಳಗುತ್ತದೆ. ನಂತರ ಪ್ರಾರ್ಥನೆ ಪ್ರಾರಂಭವಾಗುತ್ತದೆ. 'ರಘುಪತಿ ರಾಘವ ರಾಜಾ ರಾಂ, ಪತಿತ ಪಾವನ ಸೀತಾ ರಾಂ' ಸುತ್ಯವ್ಯವಾದ ಕಂಠ. ಇಡೀ ಜನಸ್ತೋಮದಿಂದ ಶಾಂತ ಹಾಗೂ ವಜ್ರ ಕಂಠದ ಈ ಪವಿತ್ರ ನುಡಿಯು ದೇವತೆಗಳಿಗೆ ಅರ್ಪಿಸುವ ಅರ್ಘ್ಯದೋ ಎಂಬಂತೆ ನೀಲೇಳುತ್ತದೆ. ಗಾಂಧೀಜಿಯವರ ಆ ಧ್ಯಾನ ಗಾಂಭೀರ್ಯ, ಆ ನೀರವತೆ, ಆ ಮೌನ ಮುಖ ಮುದ್ರೆ ಅವರು ದೈವ ಸಾಕ್ಷಾತ್ಕಾರ ಪಡೆದಿರುವರೆಂಬುವುದನ್ನು ಎತ್ತಿ ತೋರಿಸುತ್ತವೆ. ನಂತರ ಬೈಬಲಿನಿಂದ, ಗೀತೆಯಿಂದ, ಕುರಾನಿನಿಂದ ಶ್ಲೋಕಗಳು ಓದಲ್ಪಡುತ್ತವೆ. ಅಲ್ಲಿಗೆ ಪ್ರಾರ್ಥನೆ ಮುಗಿಯುತ್ತದೆ. ನಂತರ ಗಾಂಧಿಯವರು ತಮ್ಮ ಸುತ್ತ ಮುತ್ತಲಿರುವವರೊಡನೆ ಒಂದೆರಡು ಸರಸ ಮಾತುಗಳನ್ನಾಡುತ್ತಾರೆ. ಇಡೀ ಜನತೆಯ ದೃಷ್ಟಿ ನಿರ್ಬಲ ಶರೀರಧಾರಿಯಾದ ಗಾಂಧಿಯವರ ಮೇಲೆ ಕೇಂದ್ರೀಕರಿಸಿರುತ್ತದೆ. ಎಲ್ಲರೂ ಅಶಾ ದೃಷ್ಟಿಯುಳ್ಳವರಾಗಿರುತ್ತಾರೆ. ನಿರ್ಬಲರಾಗಿ, ತಮ್ಮ ವ್ಯಕ್ತಿತ್ವವನ್ನು ತಿಳಿಯದಿದ್ದ ಜನರನ್ನು ಎಚ್ಚರಿಸಿ ಸ್ವಾತಂತ್ರ್ಯ ಮಂತ್ರವನ್ನುಪದೇಶಿಸಿದ ವ್ಯಕ್ತಿಯ ಕಡೆಗೆ ಮಮತೆಯಿಂದ ನೋಡುತ್ತಾರೆ. ಅದೇ ವ್ಯಕ್ತಿ ಸ್ವಾತಂತ್ರ್ಯವನ್ನು ಸಾಧಿಸಿಕೊಡುವದೆಂದು ಆಶಾಯುತರಾಗಿ ನೋಡುತ್ತಾರೆ. ನಂತರ ಭಾರತೀಯರ ಶಾಂತ ಹಾಗೂ ವಜ್ರ ಕಂಠದ 'ಮಹಾತ್ಮಗಾಂಧೀಕಿ ಜೈ' ಗಗನವನ್ನು ಭೇದಿಸುವಂತೆ ಮೊಳಗುತ್ತದೆ.

ಗಾಂಧೀಜಿಯವರು ತನ್ನ ನಾಡಿನ ಜನತೆಯ ಪ್ರೇಮದ ಆಳದಿಂದ ಅಸ್ಪೃಶ್ಯತೆ ಕಿತರಾಗಿ, ಅವರ ಚಿಂತನೆಯಿಂದ ಧ್ಯಾನ ಮಗ್ನರಾಗಿ ಪೀಠದಿಂದ ಎದ್ದು ಬರುತ್ತಾರೆ. ಕಳೆದ 21 ತಿಂಗಳುಗಳಲ್ಲಿ ಧಾರವೀಯರು ಪಡಬಾರದ ಕಷ್ಟ ಪಟ್ಟಿದ್ದಾರೆ. ಸಹಸಲಾರದ ಉಪವಾಸವನ್ನು ಸಹಿಸಿದ್ದಾರೆ. ಗಂಡಂದಿಯರು ಹೆಂಡತಿಯರನ್ನು, ತಂದೆ ತಾಯಿಗಳು ಮಕ್ಕಳನ್ನು, ಸತಿಯರು ಪತಿಯರನ್ನು ಕಳಕೊಂಡು ಕೊಳಲುತ್ತಿದ್ದಾರೆ. ಎಂಬ ವೃಸನಧಾರವು ಅವರ ಮೃದು ಹೃದಯದ ಮೇಲೆ ತೂಗದೆ ಇಲ್ಲ. ಅದರೆ ಅವರು ಇದರಿಂದ ಉದ್ದಿಗ್ನ ಮೂನಸರಾಗದೆ ಶಾಂತತೆಯಿಂದ ವರ್ತಿಸುತ್ತಾರೆ. ಕ್ರಮೇಣ ಪ್ರಾರ್ಥನೆಗೆ ಬಂದ ಜನ ಸಮೂಹವು ಕರಗತೊಡಗುತ್ತದೆ. ಬಡವರು ಕಾಲ್ನಡಿಗೆಯಿಂದ ಮನೆಯ ಕಡೆ ಹೋಗುತ್ತಾರೆ. ಬಸ್ಸುಗಳು, ಕಾರುಗಳು, ಬೈಲುಗಳು ಜನರನ್ನು ಹೊತ್ತುಕೊಂಡು ಸಾಗುತ್ತವೆ. ಸುತ್ತಲೂ ಕಾರ್ಗತ್ತಲೆ ಕವಿಯುತ್ತದೆ. ಜನರು ಕಣ್ಣಿಗೆ ಗೋಚರಿಸುವುದಿಲ್ಲ. ಕೇವಲ ಪಾದರಕ್ಷೆಗಳ ಶಬ್ದಗಳು ಮಾತ್ರ ಕೇಳಿಬರುತ್ತವೆ. ಮಧ್ಯೆ ಮಧ್ಯೆ ರಾಷ್ಟ್ರೀಯ ಜೈ ತನ್ಯ ಪ್ರಜೋದಕ ಗೀತೆಗಳು ಕೆಲವರಿಂದ ಹಾಡಲ್ಪಡುವವು. ಹೀಗೆ ಭಾರತದ ಮಂಗಳಮೂರ್ತಿ ಮಹಾತ್ಮರ ದರ್ಶನ ಮಾಡಿ, ಪುನೀತರಾಗಿ ಜನರು ತಮ್ಮ ಮನೆದಲ್ಲಿ ನಾನಾ ವಿಧದ ಪವಿತ್ರ ಕಲ್ಪನೆಗಳನ್ನು ಮಾಡಿಕೊಂಡು ಹಿಂತಿರುಗುವರು.

ಬಾತ್ಮಿ.

ಶನಿವಾರಸಂತೆ ಹೋಬಳಿಯಲ್ಲಿ ಸ್ತ್ರೀಯರಿದ್ದಾರೆ!

ಕೊಡಗು ನಾಡಿನ ಮಹಿಳೆಯರ ಭಾಗ್ಯಾಕಾಶದಲ್ಲಿ ಬೆಳ್ಳಯ ಚುಕ್ಕಿಯಂತೆ ಮಿನುಗುತ್ತಿರುವ ಮಹಿಳಾಸಮಾಜಗಳು ನಮ್ಮ ಕೊಡಗಿನಲ್ಲಿ ಮೂಡಿಬರುತ್ತಿವೆ. ಈ ಸಮಾಜಗಳು ನಾನಾ ಉದ್ದಿಶ್ಯಗಳನ್ನು ಮುಂದಿಟ್ಟುಕೊಂಡು ಮಹಿಳಾ ಪ್ರಚಾರಕರು ಪ್ರಚಾರಕಾರ್ಯವನ್ನು ಕೊಡಗಿನ ಇತರ ಕಡೆಗಳಲ್ಲಿ ನಡೆಯಿಸ್ತಿದ್ದಾರೆ. ಕೊಡಗಿನಲ್ಲಿ ಮಹಿಳಾ ಆರ್ಗನೈಜರ್ (ಪ್ರಚಾರಕ) ರನ್ನು ನೇಮಿಸಿ ಸರ್ವಸಾಮಾನ್ಯ ಒಂದು ಸರ್ಪಕ್ಕೆ ಮುಟ್ಟಿರುತ್ತೆ. ದಕ್ಷಿಣ ಕೊಡಗಿನ ಅನೇಕ ಭಾಗಗಳಲ್ಲಿ ಹಲವಾರು ಮಹಿಳಾಸಮಾಜಗಳು ಸ್ಥಾಪಿತವಾಗಿ ಈಗಾಗಲೇ ಅನೇಕ ತರಹದ ಲೆಲಸ ಕಾರ್ಯಗಳನ್ನು ನಿರ್ವಹಿಸುತ್ತಿವೆ. ಆದರೆ ಉತ್ತರ ಕೊಡಗಿನಲ್ಲಿ ತೆಗೆದುಕೊಂಡರೆ ಸೋಮವಾರಪೇಟೆಯಿಂದೀಚೆಗೆ ಸಾಮಾನ್ಯವಾಗಿ ಸ್ತ್ರೀಯರಿಲ್ಲವೆಂಬದಾಗಿ ನೃಸಷ್ಟಾ ಪಕರ ಅಭಿಪ್ರಾಯವಿರಬಹುದೆ? ಖಂಡಿತವಾಗಿಯೂ ಕೊಡ್ಲಿಪೇಟೆ ಮತ್ತು ಶನಿವಾರಸಂತೆಗಳಲ್ಲಿಯೂ ಸ್ತ್ರೀಯರಿದ್ದಾರೆ. ಮುಂದಿನ ಆದರ್ಶ ಸ್ತ್ರೀಯರಾಗಲು ಆರ್ಹರಾದ ಯುವತಿಯರು ಅನೇಕರಿದ್ದಾರೆ, ಎಂಬುದನ್ನು ಸಂಬಂಧಪಟ್ಟವರು ಆರಿತುಕೊಂಡು ಇನ್ನಾದರೂ ಶನಿವಾರಸಂತೆ ಹೋಬಳಿಯಲ್ಲಿ ಪ್ರಚಾರಕಾರ್ಯವನ್ನು ಶೀಘ್ರದಲ್ಲಿಯೇ ಕೈಕೊಳ್ಳುವರೆಂದು ಹಾರೈಸುತ್ತೇನೆ.

'ಹೋಬಳಿ ಹಿತೈಷಿ.'

ನವಯೌವ್ವನ

ಕೂಟ್ಟು ಧಾತುಪುಷ್ಟಿಯನ್ನುಂಟುಮಾಡಿ, ವಿವಾಹಿತರಿಗೆ ಸಂತೃಪ್ತಿಯನ್ನೂ, ಪರಮಾನಂದವನ್ನೂ ಕೊಡಲು ಮದನಮಂಜರಿ ಮಾತ್ರೆಗಳು ದಿವ್ಯೌಷಧ.

ಡಬ್ಬಿ ಒಂದಕ್ಕೆ 1 ರೂಪಾಯಿ.

ಮದನಮಂಜರಿ ಫಾರ್ಮಸಿ,
184, ಬೈನಾಬಜಾರ್ ರೋಡ್,
ಮದ್ರಾಸ್.

ಮಡಿಕೇರಿ—ಡಾ. ಕೆ. ಜಿ. ಕರುಂಬಯ್ಯ,
ಸೋಮವಾರಪೇಟೆ—ಡಾ. ಜಿ. ಎ. ಐಯ್ಯ,
ವೀರಾಜಪೇಟೆ—ಎ. ಸಿ. ಸುಬ್ಬಮ್ಮಯ್ಯ.

"ಟ್ರಾಪಿಕಲ್"

ಕಂಪೆನಿಯಲ್ಲಿ ವಿಮೆ ಮಾಡುವದೇ

ಯೋಗ್ಯವೆಂದು ನಿನ್ನ 1944ರ ತೀರ್ಮಾನವಾಗಲಿ

1943ರಲ್ಲಿ ಮಾಡಿದ ವಿಮಾ ಮೌಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಜೇರಿ:—ಹೊಸ ದಿಲ್ಲಿ.

ಹೆಚ್ಚಿನ ಮಾಹಿತಿಗೆ ಈ ಪತ್ರಕ್ಕೆ ಬರೆಯಿರಿ:—

ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟಿ ಬ್ರಾಂಚ್ ಮೇನೇಜರ್, ಮಂಗಳೂರು.

24)

ತ್ಯಾಗಭೂಮಿ

—೨೨—

ಯೋಶವಂತಿ ಕಸ್ತೂರಿಬಾಯಿಯವರ ಸ್ಮಾರಕ ನಿಧಿಗೆ ಧನ ಸಂಗ್ರಹವು ದೇಶದ ಅನೇಕ ಸ್ಥಳಗಳಲ್ಲಿ ಆವ್ಯಾಹತವಾಗಿ ನಡೆದಿರುತ್ತಿದೆ. ಇಡೀ ಹಿಂದೂದೇಶದಲ್ಲಿ ಸಂಗ್ರಹಿಸಬೇಕೆಂದು ನಿಶ್ಚಯಿಸಿರುವ 75 ಲಕ್ಷ ರೂಪಾಯಿಗಳ ಮೇರೆಯನ್ನು ನಿಧಿಯು ಆ ಕ್ಷಣಾಬರಡೊಳಗೆ ದಾಟುವ ಚಿಹ್ನೆಗಳು ಕಂಡುಬರುತ್ತಿವೆ. ಇದು ಹೆಗ್ಗಳಿಕೆಯಾಯ ಕನಾಡ ವಿಚಾರ. ಆದರೆ ಕೊಡಗಿನಲ್ಲಿ ಈ ಪವಿತ್ರ ನಿಧಿಗಾಗಿ ಸಂಗ್ರಹಿಸುವು ನಿಶ್ಚಯಿಸಿರುವ ಕಡಿಮೆ ಪಂತ ಹೆಸ್ಸುಸಾವಿರ ರೂಪಾಯಿಗಳು. ಇತರ ಭಾರತೀಯರಂತೆ ಕೊಡಗಿನವರಿಗೂ ಹುರುಪು ಇಗಾಜ ದಾವರೆ, ಇತರರಂತೆ ನಮಗೂ ದೇಶಸೇವೆಯ ಇರುವಪಡಾರೆ, ಇತರರಂತೆ ಭಕ್ತಿಗಾಗಿ ಕಣ್ಣೀರಿಟ್ಟೂ ಮಾತೆಯಲ್ಲಿ ಜನಸ್ಥ ಪ್ರೀತಿ ಇರುವಪಡಾರದ ನಮ್ಮಿಲ್ಲಿಯ ನಿಧಿಯು ಬರುವ ಸೆಪ್ಟೆಂಬರ್‌ದೊಳಗೆ ಹತ್ತುಸಾವಿರದ ಗಡಿಯನ್ನು ದಾಟಬೇಕು. ಕೊಡಗಿನಲ್ಲಿ ನಿಧಿ ಸಂಗ್ರಹಮಾಡಲು ಪ್ರಾರಂಭಿಸಿದು ಐದುವಾರಗಳಾದವು. ಈ ವರೆಗೆ ರೂ. 3243 ವಸೂಲಾಗಿದೆ. ಇನ್ನು ಮೂರು ತಿಂಗಳುಗಳ ಅವಧಿ ಮಾತ್ರ ಇದೆ. ಕೆಸ್ಪೆಂಬರ್ 15 ರೊಳಗೆ ನಿಧಿ ಸೇರಬೇಕಾದ ಕಾರ್ಯವು ಸಫಲಗೊಳ್ಳಬೇಕು ಹೀಗಾಗಬೇಕಾದರೆ ಕೊಡಗು ನಾಡಿನ ಪ್ರತಿಯೊಬ್ಬನೂ ತನ್ನ ಶಕ್ತಿಗೆ ತಕ್ಕಂತೆ ಧನ ಸಹಾಯಮಾಡಬೇಕು. ಪ್ರತಿಯೊಬ್ಬ ವ್ಯಕ್ತಿಗೂ ಧನ ಸಹಾಯಮಾಡಲು ಅನುಕೂಲತೆ ಇದೆ. ಒಂದು ರೂಪಾಯಿಯಿಂದ ಏಳಿದು ಒಂದು ಲಕ್ಷದ ವರೆಗೆ ಸಹಾಯ ಮಾಡುವ ಸಾಧ್ಯತೆಯಿದೆ. ಒಂದು ಕೊಪಾಯಿ ಕೊಡಲು ಶಕ್ತಿ ಇಲ್ಲದವರು ಕೊಡಗಿನಲ್ಲಿ ವೀರಾ ವಿರಳ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ನೋಟುಗಳು ಓಡಾಡುತ್ತಿರುವ ಅತಿ ಪ್ರಸರಣದ ಕಾಲವಿದು. ಪ್ರತಿಯೊಬ್ಬನೂ ತಮ್ಮ ಖರ್ಚನ್ನು ಕಡಿಮೆ ಮಾಡಿ ಶಕ್ತ್ಯಾನುಸಾರ ಸಹಾಯನೂಡಬೇಕು. ಕೊಡಗು ಬ್ರಾಂದಿ 1943-44 ನೇ ಸಂವತ್ಸರದ ಎಕ್ಸೈಸ್ ಉತ್ಪತ್ತಿ ೮ ರು ಲಕ್ಷಕ್ಕೆ ಏರಿದೆ. ರೂಪಾಯಿ ೮ರು ಲಕ್ಷಕ್ಕಿಂತಲೂ ಮಿಕ್ಕಿ ಸರಕಾರಕ್ಕೆ ಮಾನವ ಪಾಪೀಯಗಳಿಗಾಗಿ ತೆರಿಗೆ ಕೊಡುವ ಸಾಧಿನವರು ನಮ್ಮ ನಾಡಿನ ಸ್ತ್ರೀಯರ ಈ ಪವಿತ್ರ ಕಾರ್ಯಕ್ಕಾಗಿ ಸಾಧ್ಯವಾಗುವ ರೂಪಾಯಿಯನ್ನು ಕೊಡುವುದಿಲ್ಲವೇ? ಕೊಡಗಿನ ಜನರ ಜೀವನವನ್ನು ಕೆಲವೆಷ್ಟು ಪರೀಕ್ಷಿಸಿದರೆ ಇತರ ಪ್ರಾಂತಗಳಿಗಿಂತಾ ಇದು ಸುಖದಿಂದಿದೆಯೆಂಬುದು ಕಂಡುಬಾರದಿರದು. ಪ್ರತಿ ಸಾಮಾನುಗಳ ಕ್ರಯ ಹೆಚ್ಚಿದೆ; ಆದರೆ ಹೊಟೆಲಿನಲ್ಲಿ ಕೂರಲು ಸ್ಥಳವಿರುವದಿಲ್ಲ. ಸೇಂದಿ ಸಾರಾಯಿ ಅಂಗಡಿಗಳ ವಿಚಾರವಿರಲಿ, ರಸ್ತೆ ರಸ್ತೆಗಳಲ್ಲಿ ಕುಡಿದು ಮತ್ತರಾಗಿ ತಿರುಗುವ ದೃಶ್ಯಗಳು ಎಂದೆಲ್ಲು! ಬಟ್ಟೆಗೆ ಕತ್ತುವೇದ್ದರೂ ಸೂಟಿನ ಬರ್ಮೂರಿ, ಸೀರೆ, ಕುಪ್ಪಸಗಳ, ಫಾಡರು ಕ್ರೀಂಗಳ ವಿಚಾರ ಕಗ್ಗಿಲ್ಲ! ಇನೆಲ್ಲಾ ಬಡತನದ ನುಡ್ಡಿಲ್ಲವೆಂದರೆ ಚಿಡ್ಡಿಗಳೇ? ಈ ರೀತಿ ಪದ್ಧು ಮೊರಿ ವ್ಯಯಮಾಡುವವರು ಕಸ್ತೂರ್‌ಬಾ ಗಾಂಧಿನಿಧಿಯ ಧ್ಯೇಯವನ್ನು ಮನಗಂಡು, ಅವರ ಭವಿಷ್ಯಕ್ಕೆ ಧಾರವಾಡ ಜಾನ ಜ್ಯೋತಿ ಮಾಸಾಶ್ರಿರ ಪ್ರೇಮಾ ಪುತ್ಥಳಿ ಕಸ್ತೂರಿಬಾರ ಹೆಸರಿನಲ್ಲಿ ತಮ್ಮ ಒಂದು ತಿಂಗಳ, ಒಂದು ವರ್ಷದ ಖರ್ಚಾ ಕಡಿಮೆ ಮಾಡಿ ಧನ ಸಹಾಯಮಾಡಲಾರೇ? ಕೊಡಗು ನಾಡಿನ ವನಿತಾಶ್ರಮವೆಂದವು ತಮ್ಮ ಒಂದೆರಂದು ವೀರೆಯ ಖರ್ಚನ್ನು ಈ ಪರ್ಣ ಉಳಿಸಿ ವನಿತೆಯರ ಪೂರ್ಣದರ್ಶಿಕೆ ಮಾತೆ ಕಸ್ತೂರ್‌ಬಾಬಾಳ ನಿಧಿಗೆ ಕೊಡಲಾರೇ? ಕಸ್ತೂರ್‌ಬಾ ನಿಧಿ ನಾಡಿನ ನಾರೀ ವ್ಯಂದದ ಪುರೋಭಿವೃದ್ಧಿಗಾಗಿ, ನಾರಿನ ತಾಗರೀಕರಾವ ಇಂದಿನ ಹನುಮಕ್ಕಳ ಹಿತಕ್ಕಾಗಿ ಮೀಸಲಾಗಿದೆ. ಅವ್ಯಾಂದ ಗರ್ವರೂ ಇವಕ್ಕೆ ದೃಷ್ಟಿಯಿಂದ ಪ್ರಯತ್ನಿಸಬೇಕು. ನೂರಾರು ಸಾಹಿತ್ಯ ಪ್ರೀತಿಯರನ್ನು ತಯಾರಿಸುವ, ಭವಿಷ್ಯದ ಲಕ್ಷ್ಮಿಯನ್ನು ಉತ್ತಮ ನಾಗರೀಕರೆಂಬ ರತ್ನಗಳನ್ನು ಉದಾತ್ತ ಧ್ಯೇಯಪಥದಲ್ಲಿ ಸಾಗುವಂತೆ ಪವಿತ್ರಕಾರ್ಯಕ್ಕೆ ಸಹಾಯಮಾಡುವ ಧನವಿದ್ದೀರಿ? ಈ ನಿಧಿಗೆ ಸಹಾಯನೂಡಬಲ್ಲ ಸೈಮುಂದೆ ಚಾಚಿದ ಪೃದಯವಿದ್ದೀರಾ? ನಾಡಿನ ಪ್ರತಿಯೊಬ್ಬನೂ ಈ ಉತ್ತಮೋತ್ತಮನು ಕಾರ್ಯಾರ್ಥಕ್ಕೆ ತಮ್ಮ ಶಕ್ತಿಗನುಸಾರ ಸಹಾಯ ನೂಡುವತು ಸಾಧ್ಯವಿದೆ. ಪುರುಷರೂ ಪುರುಷರಾಗಿರಿ, ಹೆಂಗಸರಾಗಲಿ, ಸ್ತ್ರೀಯರಾಗಲೀ, ಈ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಸಹಾಯ ಮಾಡಬೇಕು. ಸಿರಿವಂತರು ಸಾವಿರಾರು ರೂಪಾಯಿಗಳಂತೆ ಕೊಡುತ್ತಿದ್ದರೆ ಬಡವರು ಒಂದೊಂದಾಗಿ ಕೊಡಬಹುದು. ಈ ವಿಷಯದ ದೃಷ್ಟಿಯಲ್ಲಿ ದೊಡ್ಡವರು ಚಿಕ್ಕವರೆಂಬ ಬೇಧಭಾವವಿಲ್ಲ. ನೋಡಬೇಕಾದುದು ಕೊಟ್ಟ ಧನದ ಮೌಲ್ಯವನ್ನಲ್ಲ; ಎದೆಯ ಒಳವನ್ನು. ಸ್ವಾರ್ಥದ ಜೀವನ ಎಷ್ಟು ದಿನ? ಇಂದೋ ನಾಳೆಯೋ ಬೇಸರದ ಜೀವನಕ್ಕೆ ಬೆಂಬು ಬಾರು ಮರುಭೂಮಿಯಾಗುವುದು. ಆದರೆ ಮಹತ್ಕಾರ್ಯದಲ್ಲಿ ಒಂದರಲ್ಲಿ ಭಾಗಿಯಾಗುವ ಆನಂದವು ಚಿರಂತನವಾದುದು. ಇದರಲ್ಲಿ ಒಂದು ಆನಂದವಿದೆ. ಒಂದು ಸಿದ್ಧಿಯಿದೆ. ಈ ಆನಂದಕ್ಕಾಗಿ, ಈ ಸಿದ್ಧಿಗಾಗಿ ಸರ್ವರೂ ಸ್ವಯಂ ಮಾಡಬೇಕು.

ಕಸ್ತೂರಿಬಾ ನಿಧಿ.

ಶ್ರೀ ಚೆಕ್ಕೆರ ಪಿ. ಪೂಚಯ್ಯ	ರೂ.
ನವರು,	110
,, ಎಸ್. ಎಸ್. ರಾಮಮೂರ್ತಿ & ಸಹೋದರರು,	100
,, ಪಾರ್ವಂಗಡ ಚಂಗಪ್ಪನವರು, ತೆಕ್ಕಮಂ	50
,, ಪೊಡಾಮಂಡ ಮೂವಯ್ಯ	,, 50
,, ಬಜ್ಜಿಕುಟ್ಟರ ಯಸ್. ಚಿಣ್ಣಪ್ಪ	,, 30
,, ಚೇಂಗಂಡ ಸೋಮಯ್ಯ	,, 20
,, ಪೋಪಂಚೀರ ಯಂ. ಬಿದ್ದಯ್ಯ,	15
,, ಚಿಟ್ಟೆರ ಚಂಗಪ್ಪ	,, 10
,, ಮನೆಯಪಂಡ ಬಿ. ಸೋಮಯ್ಯ,	10
ಮಿಸೆಸ್. ಎಚ್. ಬಿ. ಪಂಜಿಪ್ಪ	,, 10
ಶ್ರೀ. ಕೆ. ಎಂ. ಕುಶಾಲಪ್ಪ, (ಲಕ್ಕಂಡ)	10

೮ ರೂ. ಕೊಟ್ಟವರು.

ಶ್ರೀಮಗಳಾದ ಕೇಚೆರ ಪಿ. ಚಂಗಪ್ಪನವರು, ಯಂ ಕಾಸಿ ಸಾಹೆಬರು, ಕಂ ಡ್ರಕ್ತಂಡ ಸಿ. ದೇಜುಪ್ಪನವರು, ಕೊಡಂಬೆರ ಬಿ. ಚಂಗಪ್ಪನವರು, ಜಿ. ಆರ್. ವಾಲ್ಕರ ಮಲು, ಮನೆಯಂಪಂಡ ಬಿಂ. ನಾಣಯ್ಯನವರು, ಮೂಕೊಟ್ಟು ಕೆ. ಸುಬ್ಬಯ್ಯನವರು, ಧಾಯಕಂಡ ಬಿ ಕರುಂಬಯ್ಯನವರು, ಮಿಸಸ್ ಜೋಸಿರ ಬೆಳ್ಯಪ್ಪನವರು, ಶ್ರೀಮತಿ ಎ. ಸೋಮವ್ವನವರು, ಮಿಸೆಸ್. ಮುಕ್ಕಾಟಿರ ಪೂಣಚ್ಚ, ಶ್ರೀ ಕೋಟಿರ ಸೋಮಣ್ಣನವರು, ಶ್ರೀಮಂತೆ ಲಿಲ್ಲು ಮಂಜಂದ ಪೊನ್ನಪ್ಪನವರು.

2 ರೂ. ಕೊಟ್ಟವರು.

ಶ್ರೀಮತಿ ಕಡೇಮಾಡ ಮಾಚಯ್ಯನವರು, ಶ್ರೀ ಚೇರಿರ ಪೂಚಯ್ಯನವರು, ಮಿಸೆಸ್. ಕೆ. ವಿ. ಗೌರಮ್ಮನವರು ಶ್ರೀ. ಎಂ ಸಿ. ಪೊನ್ನಪ್ಪ, ಶ್ರೀ. ಎಂ. ಎಸ್. ಸುಬ್ಬಯ್ಯನವರು.

1 ರೂ. ಕೊಟ್ಟವರು.

ಶ್ರೀಮಗಳಾದ ಮಂಜಿಯಿರ ಪೂವಯ್ಯ, ಪೆಮ್ಮಂಡ ಐಯ್ಯಣ್ಣ, ಎಂ. ಎಂ. ಕುಳಿಪನವರು, ಮಿಸೆಸ್. ಸಿ. ಎ. ದೇವಯ್ಯ, ಮಿಸೆಸ್. ಸಿ. ಬೋಪಯ್ಯ, ಮಿಸೆಸ್. ಐ. ಬಿ. ಪೂವಯ್ಯ, ಮಿಸೆಸ್. ಎಸ್. ಎನ್. ಜೋಪಯ್ಯ, ಶ್ರೀ. ಬಿ. ಅಚ್ಚಿಯ್ಯ, ಶ್ರೀ. ಕೆ. ಬಿ. ಅಯ್ಯಪ್ಪ, ಶ್ರೀ. ಸಿ. ಎಚ್. ಅಬ್ದುಲ್ಲಾ ಹಿತಚಿಂತಕರು ಮೂರು ಜನರು ಒಂದೊಂದು ರೂಪಾಯಿ.

ಈ ವರೆಗೆ ಒಟ್ಟು ರೂ. 3243/- ರೂ. ಜಮೆಯಾಗಿದೆ.

ವ್ಯವಸಾಯಗಾರರಿಗೆ ಸುಸಮಯ.

ಗದ್ದೆ ಮಟ್ಟು ಕಾಫಿತೋಟಕ್ಕೆ ಬೇಕಾಗುವ ಉತ್ತಮ ದರ್ಜೆಯ ಗುಳ್ಳ, ಗುದ್ದಲಿ, ಮುಳ್ಳುಸೌದೆಗಲ್ಲಿ, ಪಿಕಾಸಿ, ಹಾತಿ, ಕತ್ತಿ, ಕಸಿ ಚಾಕು, ಕೊಡಲಿ, ಜಪಾನಿನ ದಬ್ಬೆ, ಕೂಲಿ ಕಂಬಿ, ಸೈಮಿಶಸ್ತ್ರಿಗೆ ಬೇಕಾದ ಪ್ಯಾಕಿಂಗ್ ಮೆತ್ತು ಜಟ್, ಪಬ್ಬರ್‌ಹೋಸ್ ಮುಂತಾದವೆಲ್ಲಾ (Spar parts) ಸಾಮಾನುಗಳಿಗೂ ನಮ್ಮಲ್ಲಿ ದೊರೆಯುತ್ತವೆ.

ಪಲ್ಲರ ಮಿಷನ್ ಸಾಮಾನ್ಯ ರೈಪಂಪುಗಳನ್ನು ರಿಪೇರಿ ಸಹ ಮಾಡುತ್ತೇವೆ. ಧಾರಣೆ ದಸ್ತೈಕ್ ಬೆಚ್ಚನ ಪಂಗಡಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ನೀಕಾರಾಯಣಯ್ಯ ಅಂಡ್ ಕೊ.,
ವಿಶ್ವೇಶ್ವರಪುರ, ಬೆಂಗಳೂರು ಸಿಟಿ.

12-8

EMPIRE OF INDIA
LIFE ASSURANCE COMPANY LIMITED,

29) ESTAB. [illegible]

A FEW SALIENT FEATURES OF THE FORTY-SIXTH ANNUAL REPORT.

Total Income [illegible] ... Rs. 87,07,000
Assurances in Force Exceed ... „ [illegible]
Assets Exceed .... „ [illegible]

Claims paid since the Company was established Exceed Rs. 1,95,00,000,

Head Offices: Empire of India Life Building, BOMBAY.

APPLICATIONS FOR AGENCIES INVITED.

Branch Offices: [illegible] Kempegowda Road, BENGALORE.

BHUVANENDRA PRODUCTS LIMITED,
KATAPADI. (S. Kanara). DEPOT— Ashwatha Galli, Hubli.
'ಭುವನೇಂದ್ರ' ಕನ್ನಡಿಗ ಬುದ್ಧಿಯ ಪರಿಶುದ್ಧ ಉತ್ಪನ್ನಗಳು.

ಗರ್ಭಾಶಯದ ದೋಷದಿಂದ ಗರ್ಭಧಾರಣೆಯಾಗದಿರುವುದು, ಶರೀರದ ಅಶಕ್ತತಾನಿವಾರಣೆಗಾಗಿ, ಗರ್ಭಾಶಯದ ಅಶಕ್ತತೆಯಿಂದ ಗರ್ಭಪಾತವಾಗುವುದು, ಸೂತಕರೋಗ, ಪೈಪ್ರಸ ಸಂಬಂಧ ಪಿಡೆ ಇತ್ಯಾದಿಗಳು ಬರದಿರುವಷ್ಟರ ಸೇವನೆಯಿಂದ ಗುಣಹೊಂದುವವು. ಗರ್ಭಧಾರಣೆಗೆ ಸಹಾಯ ಮಾಡುವುದು. ವೀರ್ಯವೃದ್ಧಿಮಾಡಿ ಮೇಹಕ್ಕೆ ದೊಡ್ಡ ಚೈತನ್ಯ ಕೊಡುವುದು.

ನಮ್ಮ ಕೊಡಗು ಏಜೆಂಟರು– (1) ಮಂಗಳೂರು ಸೋರ್ಟ್ಸ್, ಜನರಲ್ ಬುಚೆರ್ಸ್, ಮಡಿಕೇರಿ. (2) ಮಂಗಳೂರು ಎಮ್ಯುನಿಶನ್ ಸ್ಟೋರ್ಸ್, ಮಡಿಕೇರಿ. (3) ಟಿ. ವಿ. ಕೆ. ನಂಗಯ್ಯಜೆಕ್ಕರ, ಮಡಿಕೇರಿ. (4) ಡಬ್ಲ್ಯು. ಎಂ. ಪಾಣತ್ಯಾಯ್ಯ, ಪೊನ್ನಂಪೇಟೆ. (5) ಬಿ. ಎಂ. ಬಿ. ಅಯ್ಯರ್ಸ್, ಪೊನ್ನಂಪೇಟೆ. (6) ಎಸ್. ಶ್ರೀನಿವಾಸಯ್ಯ, ಫಾರಮ್ಸ್ಟ್, (7) ಕೆ. ಎಸ್ ರಾಜಶೇಖರಪ್ಪ & ಸನ್ಸ್, ಸೋಮವಾರಪೇಟೆ. (8) ಡಾ. ಎ. ಸಿ. ಸುಬ್ಬರಾಯಯ್ಯ, ವೀರಾಜಪೇಟೆ. (9) ಡಾ. ಐ. ಆರ್. ಅಪ್ಪಣ್ಣ, L. I. M., ವೀರಾಜಪೇಟೆ. (10) ಡಾ. ಟಿ. ಜಿ. ಕಡಂಬಯ್ಯ ಮಡಿಕೇರಿ. (11) ಬ್ರೂಕ್ ಬಾಂಡ್ ಕೋ-ಆಪರೇಟಿವ್ ಸೊಸೈಟಿ, ವೀರಾಜಪೇಟೆ. (12) ಶ್ರೀ ಎ. ಎಸ್. ಮಾಚಯ್ಯ, ಕ್ಲರ್ಕ್ ಆಫೀಸರ್, ಮಂಗಳೂರ **(13) ಡಾ. ಯಚ್**. ವೆಂಕಟಿಸಂಗಾಚಾರ್ಯ, ಬಿ.ಎ. ಎಂ. ಯಸ್. ಸೋಮವಾರಪೇಟೆ.

ಭುವನೇಂದ್ರ ಪ್ರೊಡಕ್ಟ್ಸ್, ಲಿಮಿಟೆಡ್, ಕಟಪಾಡಿ, ಜಿ. ಕನ್ನಡ.

52–12 ಡಿಪೋ:– ಮೊದಲ ಗಲ್ಲಿ, ಹುಬ್ಬಳ್ಳಿ.

ನಾಳೆ ಎಂಬುವದಿಲ್ಲ!

ನಮ್ಮ ಆಜ್ಞ ಮುತ್ಸದ್ದಿಯಂದಿರು ಯಾವಾಗಲೂ "ಶುಭಸ್ಯ ಶೀಘ್ರಂ" ಎಂದು ಹೇಳುತ್ತಾರೆ. ನಿಮ್ಮ ಬಳಗದವರಿಗೂ ಮತ್ತು ಪ್ರೀತಿಗೆ ಪಾತ್ರರಾದವರಿಗಾಗಿ ನೀವು ಮಾಡಲೇಬೇಕಾದ ಉತ್ತಮ ಸೇವೆ ವಿಷಯದಲ್ಲಿ ಇದೇ ಆವರಣ ಅಭಿಪ್ರಾಯವನ್ನು ಈಗಲೇ ಮಾಡಬೇಕು. **ಬುದ್ಧಿವಂತರು ಜೀವಿಸಿದ್ದಲ್ಲಿನ್ನು ಸಂಪಾದಿಸಿದ ಉತ್ತಮಿಯಿಂದ ಗಳಿಸಿ ಮಾಡಿ ಸ್ಥಿರವಾದ ಪೆರಮಾನವನ್ನು ಪಡೆಯುತ್ತಾರೆ. ಅವರು ತಮ್ಮ ಭವಿಷ್ಯವನ್ನು ಸಾರ್ವಜನಿಕ ನಂಬಿಕೆಗೆ ಪಾತ್ರವಾದ ಒಂದು ಕಂಪನಿಗೆ ಒಪ್ಪಿಸುತ್ತಾರೆ.**

ನಮ್ಮ 33 ವರ್ಷಗಳ ಅನುಭವದಿಂದ [illegible]

ದಿ ಬೋಂಬೇ ಲೈಫ್ ಎಶ್ಯುರೆನ್ಸ್ ಕಂಪೆನಿ, ಲಿ.

ಇದನ್ನು ನಿಮಗೆ ನಿಷ್ಠಾವಂತನ್ನಾಗಿ ಸೂಚಿಸುತ್ತೇವೆ.

ಭಾರತದಾಳ್ಯದ ಪ್ರತಿಯೊಂದು ಪಟ್ಟಣಗಳಲ್ಲಿಯೂ ಕೆಲಸಗಾರರಿಗೆ ಬೇಕಾದಷ್ಟು ಅವಕಾಶವಿರುವುದು ಕೇಳಿಕೊಳ್ಳಿರಿ.

ಕೊಚ್ಚಿಕಾರ್ ಬ್ರದರ್ಸ್ ಲಿ.—ಸ್ಥಾನಿಕ ಏಜೆಂಟರು.

ಪತ್ರಿಕಾ ಆಂಗಡಿಯವರಲ್ಲಿ, ಹಿಂದಿ ಸಂಖ್ಯೆಗಳನ್ನು ಕೊಂಡು ಪೋ. ಬಾ. 357. ಮಂಗಳೂರು, ಮದ್ರಾಸು.

30) ಕಚೇರಿಗಳು ಪತ್ರಿಕೆ **ಏಜೆನ್ಸಿಗಳು** ಪತ್ರಿಕಾ ಆಂಗಡಿಯವರಲ್ಲಿರುತ್ತವೆ.

ಕಸ್ತೂರ್‌ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ

ನಿಧಿಗೆ ಧನ ಸಹಾಯ ಮಾಡಿರಿ.

Printed and Published by P. I. Belliappa at 'Kodagu' Press, Mercara, for 'Kodagu' Ltd.

REG. NO. M. 1570.
KOZHIKODE MERCARA, (Coorg)



ಸಂಪುಟ ೨೪ | ಮಲಬಾರು ೨೦- ೮-೧೯೪೪ನೇ ಶುಕ್ರವಾರ. | ಸಂಚಿಕೆ ೩

THE CANARA BANKING CORPORATION, Ltd.,

(Incorporated in British India with Limited liability)

ESTD: 1906 Head Office:-UDIPI.

(BRANCHES & AGENCIES IN ALL PRINCIPAL CITIES OF INDIA.)

ANNOUNCEMENT.

A branch of the Bank has been opened at Tobacco Street, CALICUT on 26-5-1944.

52-5

ಧಾತು ವೃದ್ಧಿ ರಸಾಯನ ಎಂದು ಕುಖ್ಯಾತ ಅಂಚೆಯಿಂದ (ZANDU)

"ರ್ಯಾಕೊ - ಫಾಸ್ಫೋ - ನಾಲ್ಸ್" ಎಂಬ ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ರಸಾಯನ! ಈ ಕಾಯಿಲೆಯವರಿಗೆ ಟಾನಿಕ್. ಆರೋಗ್ಯವಂತರಾಗಿರುವವರಿಗೆ ಟಾನಿಕ್. ಧಾತುಕ್ಷೀಣಿಯಿಂದ ಪರಿಗೆ ಟಾನಿಕ್. ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮಜೀವಿಗಳಿಗೆ, ಮೂಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ – ಎಲ್ಲರಿಗೂ ಹೇತವಾದ ರಸಾಯನವಿದು. ಇದು ಜಠರಾಗ್ನಿಯನ್ನು ಪಡಿಸುವುದು. ಮೆದುಳಿಗೆ ಬಲವನ್ನುಂಟುಮಾಡುವುದು. ನಾಲಿಗೆಗೆ ರುಚಿಯನ್ನುಂಟುಮಾಡುವುದು. ಇವರೆಲ್ಲಾ ನವಜೀವನಕರ ಎಲ್ಲಾ ಸಮಿಮ್ಮುಗಳು ಕೆಂಪು ರಕ್ತಕಣಗಳನ್ನು ಪೆಚ್ಚಿಸುವ ಅಮೂಲ್ಯ ಔಷಧಗಳು.

ಇದರಲ್ಲಿ ಇತ್ತೀಚಿಗೆ ಪ್ರಾಸ್ಫರಮೊಲ್ಯ, ಪೆಪ್ಟೋಗ್ಲೋಬಿನ್, ಸೋಡಿಯಮ್ ಗ್ಲಿಸರೊ ಫಾಸ್ಫೇಟ್ ಪೆಪ್ಟಿನ್, ಸಾಲ, ಮೂಲ್ಯ ವಿಟ್ಯಾಮಿನ್ ಡ್ರಾಕ್ಸಿಸವ – ಮೊದಲಾದ ಪ್ರಸಿದ್ಧ ಔಷಧಿಗಳಿಂದ.

ಇಂಥ ಮತ್ತೊಂದು ಸಂಜೀವಿನಿ ಔಷಧಿಯು ಇದು ಎಲ್ಲಾ ಪ್ರಸಿದ್ಧ ಔಷಧ ಪ್ರಾಪುಗಳಲ್ಲಿದೆ.

48 ಝಂಡು ಫಾರ್ಮಾಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್, ಗೋಖಲೆ ರೋಡ್ ಬಾಂಬೆ.

ಸೌಥ್ ಕೆನರಾ ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿ., ಮಂಗಳೂರು.

ಸೂಚನೆ – ಈ ಬ್ಯಾಂಕಿನ ಸೊಸೈಟಿಸ್ ಆಕ್ಟ್ ಪ್ರಕಾರ ನೋಂದಾಯಿಸಲಾಗಿದೆ. [1921ರಲ್ಲಿ ಸ್ಥಾಪಿಸಲಾಯಿತು.

ಷೇರು ಬಂಡವಾಳ .... 1,00,000 ರೂ. | ಪಡೆದ ಸಾಲ 2,07,000 1 7

ಸಂಗ್ರಹ ನಿಧಿಗಳು ... 60,000 ರೂ. | ಸೇವಿಂಗ್ಸ್ ಬ್ಯಾಂಕ್ ಠೇವಣಿಗಳು 1,27,700 0 4

ಇತರ ಠೇವಣಿ .... 1,07,600 ರೂ. | ಶೇರ್ಸ್ ಮತ್ತು ಇತರ ... 3,00 14 4

ಈ ಬ್ಯಾಂಕಿನಿಂದ ಈ ದೇಶದ ಸಂಸ್ಥಾನಗಳು ಇತರ ಸಹಕಾರಿ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳಿಗೆ ಸಾಲ ಕೊಡುವುದಲ್ಲದೆ ಸಾಮಾನ್ಯ ಬ್ಯಾಂಕಿಂಗ್ ವ್ಯವಹಾರವನ್ನೂ ನಡೆಸಲಾಗುವುದು. ಠೇವಣಿಯಿಂದ 3 ವರ್ಷಗಳ ಒಳಗೆ ಕೇಳಿದ ತಕ್ಷಣ ಹಿಂತೆಗೆದುಕೊಳ್ಳುವ ಠೇವಣಿಗಳಿಗೆ 2½ ವರ್ಷಗಳಿಗೆ 3½ ಠೇವಣಿಗಳಿಗೆ 4½ ಠೇವಣಿಗಳಿಗೆ ಬಡ್ಡಿ ಕೊಡಲಾಗುವುದು. ಸೇವಿಂಗ್ಸ್ ಬ್ಯಾಂಕ್ ಖಾತೆಗಳಿಗೆ (daily balance) ಶೇ. 3½. ಕ್ರಿಸ್ತ ಶಿವಾಜಿಯ ಜೊಂ ಬಿಟ್ಟಿಲ್ಲ. ಇತರ ವ್ಯವಹಾರಗಳಿಗೆ ವಿಚಾರಿಸಬಹುದು.

ನಮ್ಮ ಕ್ಲೈಂಟಾರ್ಡಿಕ್ ಕೋ-ಆಪರೇಟಿವ್ ಸಂಸ್ಥೆಗಳಿಗೆ ವಿಶೇಷ ಸೌಲಭ್ಯವನ್ನು ಕೊಡಲು ಪರಿಶೀಲನೆ ಮಾಡುತ್ತಾರೆ.

ಪ್ರೆಸಿಡೆಂಟ್ – ಶ್ರೀ. ಐನಂಡ ಪಿ. ಕಾರ್ಯಪ್ಪನವರು.

ಮ್ಯಾನೇಜರ್—& ಸೆಕ್ರೆಟರಿ:— ಶ್ರೀ ಕೊಂಗೆಟ್ಟಿರ ಪಿ. ಬೆಳ್ಯಪ್ಪನವರು.

ತಾ. 1-6-1944. (5-52)

ಕಸ್ತೂರ್ಬಾ ಸಾಯುತ್ತಿರಲಿಲ್ಲ.

ಯೋಗ್ಯ ವೈದ್ಯಕೀಯ ಸಹಾಯ ಕೊಡುತ್ತಿದ್ದರೆ.

ಕಸ್ತೂರಿಬಾಯಿ ಗಾಂಧಿಯವರಿಗೆ ಖಾಯಿಲೆಯಾಗಿ ಆ ಕಾರಣ ಗಾಂಧೀಜಿ ಮತ್ತು ಸರಕಾರದೊಡನೆ ಆದ ಪತ್ರವ್ಯವಹಾರಗಳು ಪ್ರಕಟವಾಗಿವೆ.

1943 ನೇ ಮೇ ತಿಂಗಳಲ್ಲಿ ಕಸ್ತೂರಿಬಾರೊಡನಿದ್ದ ಡಾ. ಗಿಲ್ಡರ್ ಮತ್ತು ಸುಶೀಲಾನಾಯರ್ ಇವರುಗಳು ಕರ್ನಲ್ ಭಂಡಾರಿಯವರಿಗೆ ಪತ್ರ ಬರೆದು ಕಸ್ತೂರ್‌ಬಾರವರಲ್ಲಿ ಖಾಯಿಲೆಯ ಚಿಹ್ನೆಗಳು ಕಂಡು ಬರುತ್ತಿವೆಯೆಂದೂ ಅವರ ಶಿಶ್ರೂಷೆಮಾಡಲು ಅವರ ಮೊಮ್ಮಗ ಕಾನೂಗಾಂಧಿಯನ್ನು ಜೈಲಿನೊಳಗೆ ಇರುವಂತೆ ಬಿಡಬೇಕೆಂದು ಕೇಳಿದ್ದರು. ಅನೇಕ ಸಾರಿ ಖುದ್ದಾಗಿಯೂ ಈ ವಿಚಾರ ಹೇಳಲಾಗಿತ್ತು.

ಈ ವಿಚಾರ ಯಾವ ನಿಗವನ್ನೂ ತೆಗೆದುಕೊಳ್ಳದಿರಲು 1944 ನೇ ಜನವರಿ ತಿಂಗಳಲ್ಲಿ ಗಾಂಧಿಯವರು ಇಂಡಿಯಾ ಸರಕಾರಕ್ಕೆ ಪತ್ರ ಬರೆದು ದಿನೆ ದಿನೇ ಕಸ್ತೂರ್‌ಬಾಯಿಯವರ ಖಾಯಿಲೆ ಜೋರಾಗುತ್ತಿದೆಯೆಂದೂ, ಕಸ್ತೂರ್‌ಬಾರ ಆಶಯದಂತೆ ಪೂನಾದ ಡಾ. ದಿನ್ಶಾಮೆಹತಾರವರನ್ನು ಚಿಕಿತ್ಸೆಗೆ ಕರೆಸಬೇಕೆಂದೂ, ಕಾನೂ ಗಾಂಧಿಯನ್ನು ಶಿಶ್ರೂಷೆಗೆ ಬಿಡಬೇಕೆಂದೂ ಬರೆದುದಲ್ಲದೆ ಕಸ್ತೂರ್‌ಬಾಗಾಂಧಿಯವರು ಸರಕಾರದ ಕೈದಿಯೂದ ಕಾರಣ ನನಗೆ ಆ ಕೆಯ ವಿಚಾರದಲ್ಲಿ ಯಾವುದೊಂದನ್ನು ಹೇಳಲಿಕ್ಕೂ ಸಾಧ್ಯವಿಲ್ಲವೆಂದೂ ಬರೆದಿದ್ದರು. ಸರಕಾರವು ಈ ವರೆಗೆ ಯೋಗ್ಯ ರೀತಿ ವರ್ತಿಸಿಲ್ಲವೆಂದೂ, ಸಹಾಯಕ್ಕೆ ಬಂದಾಗಲೂ ಸಹ ಹೃತ್ಪೂರ್ವಕವಾಗಿ ಮಾಡಿಲ್ಲವೆಂದೂ ಬರೆದಿದ್ದರು.

ಸರಕಾರವು ಪುನಹ ತಟಸ್ಥವಿದ್ದ ಕಾರಣ ಜನವರಿ 27 ರಲ್ಲಿ ಪುನಹ ಒಂದು ಪತ್ರ ಬರೆದರು. ಇದರಲ್ಲಿ ಡಾ. ದಿನ್ಶಾಮೆಹತಾ ಮತ್ತು ಆಹೋರಿನ ವೈದ್ಯರಾಜ ಶರ್ಮ ಇವರನ್ನು ಕರೆಸಲು ಪುನಹ ಕೇಳಿದ್ದರು. ಆಯುರ್ವೇದ ಪಂಡಿತ ವೈದ್ಯರಾಜರಾಗಿ ಚಿಕಿತ್ಸೆಗೆ ಬಂದಾಗ ಜೈಲಿನೊಳಗೇ ಅವಶ್ಯವಿದ್ದರೆ ಇರುವ ಏರ್ಪಾಡೂ ಮಾಡಬೇಕೆಂದು ಕೇಳಿದ್ದರು. ಸರಕಾರವು ಇದಕ್ಕೆ ಕಿಂಚಿತ್ ಕಿವಿಗೊಟ್ಟರೂ ಯೋಗ್ಯ ವ್ಯವಸ್ಥೆ ಮಾಡಲಿಲ್ಲ. ಇಪ್ಪರಲ್ಲಿ ಕಸ್ತೂರ್‌ಬಾರ ದೇಹಸ್ಥಿತಿ ಚಿಂತಾಜನಕವಾಗುತ್ತಾ ಬಂತು. ಕಡೆಗೆ ಗಾಂಧೀಜಿಯವರು ಫೆಬ್ರವರಿ 16 ರಲ್ಲಿ ಪುನಹ ಒಂದು ಪತ್ರ ಬರೆದರು. ಈ ಸಮಯಕ್ಕೆ ವೈದ್ಯರಾಜರು ಮಹಾತ್ಮರ ಅನುಮತಿಯಿಂದ ಕಸ್ತೂರ್‌ಬಾರ ಚಿಕಿತ್ಸೆಗೆ ಪ್ರಾರಂಭಿಸಿದ್ದರು. ಆದರೆ ಬೇಕಾದ ಅನುಕೂಲತೆ ಸರಕಾರದಿಂದ ಒದಗಲಿಲ್ಲ. ಗಾಂಧಿಯವರು ತನ್ನ ಪತ್ರದಲ್ಲಿ ಹೀಗೆ ಹೇಳುತ್ತಾರೆ. 'ವೈದ್ಯರಾಜರಿಗೆ ಸಕಲ ಸಹಾಯವೂ ದೊರೆಗುವದೆಂದು ಊಹಿಸಿದ್ದೆ. ರೋಗಿಯು ರಾತ್ರಿ ಬಹಳ ಕಷ್ಟಪಡುತ್ತಿದ್ದುದರಿಂದ ರಾತ್ರಿಯೆಲ್ಲಾ ಪಹರೆ ಇರಬೇಕಿತ್ತು. ಆದರೆ ಸದ್ಯದ ಪರಿಸ್ಥಿತಿಯಿಂದ ವೈದ್ಯರಾಜರಿಗೆ ಯೋಗ್ಯ ಚಿಕಿತ್ಸೆಮಾಡಲು ಸಾಧ್ಯವಿಲ್ಲದಾಗಿದೆಯೆಂದು ಅವರೇ ಅಭಿಪ್ರಾಯವಿದೆ. ವೈದ್ಯರಾಜರು ರಾತ್ರೆ ಜೈಲಿನೊಳಗೆ ಇರಕೂಡದಾಗಿತ್ತು. ಸರಕಾರವು ಇವರು ಒಳಗಿರಲು ಬಿಹಾರ್ತಿರಲಿಲ್ಲ. ಕಸ್ತೂರ್‌ಬಾಳು ರಾತ್ರೆ ಹಲವಾರು ಬಾರಿ ಕಷ್ಟಕ್ಕೊಳಗಾಗಿ ಡಾಕ್ಟರರ ಸಹಾಯ ಅತ್ಯಗತ್ಯವೇಕಾಗುತ್ತಿತ್ತು. ಆದರೆ ಜೈಲಿನೊಳಗೆ ಡಾಕ್ಟರರಿಲ್ಲ? ಆದರೂ ಸಹ ವೈದ್ಯರಾಜರು ಒಳಗೆ ಇರಲು ಅಪ್ಪದವಿಲ್ಲದ ಕಾರಣ ಜೈಲಿನ ಬಾಗಿಲಿನ ಹೊರಗೆ ನಿಂತ ತನ್ನ ಕಾರಿನೊಳಗೇ ನಿದ್ರೆಮಾಡುತ್ತಿದ್ದರು. ಅನಶ್ಯಬಿದ್ದಾಗ ಜೈಲು ಸುಪರಿಂಟೆಂಡೆಂಟರ ತನಕ ಹೋಗಿ ಕಷ್ಟಪಡಬೇಕಾಗುತ್ತಿತ್ತು. ಆದರೆ ರಾತ್ರೆ ಇದು ಬಹು ಕಷ್ಟದ ಕೆಲಸ. ಜೈಲಿನ ಸರ್ವರನ್ನೂ ಎಚ್ಚರಿಸಬೇಕಾಗುತಿತ್ತು. ನನ್ನ ಜೀವನ ಸಂಗಾತಿಯನ್ನು ಉಳಿಸಲಿಕ್ಕಾದರೂ ಆಗಾಗ ಈ ತೊಂದರೆಯನ್ನು ನಾನು ಬೇರೆಯವರಿಗೆ ಕೊಡಲಾರೆ. ಆದ್ದರಿಂದ ಈ ಮೂರು ಸೂಚನೆಗಳನ್ನು ನಾನು ಮಾಡುತ್ತೇನೆ.

(1) ವೈದ್ಯರಾಜರು ಜೈಲಿನೊಳಗಿದ್ದು ರೋಗಿಯ ವಿಷಯ ಎಚ್ಚರಿಕೆ ತಗೆದುಕೊಳ್ಳುವ ವ್ಯವಸ್ಥೆಮಾಡಬೇಕು.

(2) ಇದು ಸಾಧ್ಯವಿಲ್ಲದಿದ್ದರೆ ರೋಗಿಯನ್ನು ಪೆರೋಲಿನಲ್ಲಿ ಬಿಡುಗಡೆಮಾಡಿ ವೈದ್ಯರ ಪೂರ್ಣ ಸಹಾಯ ಪಡೆಯಲು ಅನುಮಾಡಬೇಕು.

(3) ಇವೆರಡೂ ಸಾಧ್ಯವಿಲ್ಲದಿದ್ದರೆ ರೋಗಿಯನ್ನು ನೋಡುವ ಜವಾಬ್ದಾರಿಯಿಂದ ನನ್ನನ್ನು ಬಿಡುಗಡೆಮಾಡಬೇಕು. ನಾನು ಆಕೆಯ ಪತಿಯಾಗಿ ಆಕೆಯ ಕಷ್ಟ ಕಾಲದಲ್ಲಿ ಆಕೆಗೆ ಬೇಕಾಗುವ ಸಹಾಯವನ್ನು ಮಾಡಲಾರದ ನಿಸ್ಸಹಾಯ ಸ್ಥಿತಿಯಲ್ಲಿರುವುದಾದರೆ ನನ್ನನ್ನು ಸರಕಾರವು ಇಚ್ಛಿಸುವ ಬೇರೊಂದು ಜೈಲಿಗೆ ವರ್ಗಾಯಿಸುವದು ಲೇಸು. ರೋಗಿಯು ಪಡುತ್ತಿರುವ ದುಃಖವನ್ನು ನಿಸ್ಸಹಾಯನಾಗಿ ನೋಡಲಾರೆ.

ಸರಕಾರವು ಈ ಕೇಳಿಕೆಯನ್ನು ಪಲ್ಲಿಸದಿದ್ದರೆ ವೈದ್ಯರಾಜರ ಚಿಕಿತ್ಸೆಯನ್ನು ಸಹ ಮನ್ನೆಮಾಡಬೇಕಾಗುತ್ತದೆ. ಯಾತಕ್ಕಾದರೆ ಅರ್ಧ ಅರ್ಧ ಚಿಕಿತ್ಸೆಮಾಡುವದಕ್ಕಿಂತಾ ಮಾಡದಿರುವದೇ ಹಿತ. ನಾನು ಇದನ್ನು ಬೆಳಿಗ್ಗಿನ 2 ಗಂಟೆಗೆ ರೋಗಿಯ ಹಾಸಿಗೆಯ ಬಳಿ ಕುಳಿತು ಬರೆಯುತ್ತಿದ್ದೇನೆ. ರೋಗಿಯು ಜೀವನ ಮರಣಗಳ ಮಧ್ಯೆ ತೂಗಾಡುತ್ತಿದ್ದಾಳೆ. ಈ ತಾಗದ ವಿಚಾರವನ್ನು ಸಹ ತಿಳಿಯಲಾರದ ಸ್ಥಿತಿ ನಿಶ್ಚಕ್ತಳಾಗಿದ್ದಾಳೆ.'

ಪುನಹ ಫೆಬ್ರವರಿ 18 ರಲ್ಲಿ ಗಾಂಧೀಜಿಯವರು ಒಂದು ಪತ್ರ ಬರೆದು ಹೀಗೆ ಹೇಳುತ್ತಾರೆ 'ವೈದ್ಯರಾಜರು ಕಸ್ತೂರಿಬಾಗಾಗಿ ಬಹು ಪ್ರಯತ್ನಪಟ್ಟರು. ಆದರೆ ಕಡೆಗೆ ನಿರಾಶರಾಗಿ ವ್ಯಸನಪೂರಿತರಾಗಿ ತನ್ನಿಂದ ಗುಣಪಡಿಸಲಾಗದು ಸಾಧ್ಯವಿಲ್ಲವೆಂದಿದ್ದಾರೆ. ಪುನಹ ಡಾ. ಗಿಲ್ಡರ್ ಮತ್ತು ಸುಶೀಲಾನಾಯರ್‌ರವರು ಔಷಧಿ ತೊಡುತ್ತಿದ್ದಾರೆ. ಡಾ. ಮೆಹತಾರವರು ಚಿಕಿತ್ಸೆಯೂ ನಡೆದಿದೆ. ಈ ಸಂದರ್ಭದಲ್ಲಿ ವ್ಯಸನಪೂರ್ವಕವಾಗಿ ನಾನು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ನಾನು ಕೇಳಿದ ಸಮಯಕ್ಕೆ ಸರಿಯಾಗಿ ವೈದ್ಯರಾಜರು ಮತ್ತು ಡಾ. ಮೆಹತಾರವರ ಸಹಾಯವನ್ನು ಸರಕಾರವು ಒದಗಿಸಿದ್ದಿದ್ದರೆ ರೋಗಿಯ ಸ್ಥಿತಿ ಇಂದಿನದಕ್ಕಿಂತಾ ಗಂಭೀರ ಮಟ್ಟಕ್ಕೆ ಬರುತ್ತಿರಲಿಲ್ಲ. ಜಗನ್ನಿಯಾಮಕನ ಆಶಯಕ್ಕೆ ವಿರೋಧವಿಲ್ಲದಿದ್ದರೆ ಪೂನಾದಿಂದ ನೂತನವಾಗಿ ನೂಡಲಾರ ಎಂಬುದರಲ್ಲಿ ನಾನು ಪ್ರಾಮಾಣಿಕ ವಿಶ್ವಾಸವಿದೆ. ಆದರೆ ಮನುಷ್ಯನು ತಾನು ನೋಡಬಹುದಾದ ಫಲದ ದೃಷ್ಟಿಯಿಂದಲ್ಲದೆ ಬೇರೆ ವಿಧದಿಂದ ಜಗನ್ನಿಯಾಮಕನ ಆ ಆಶಯವನ್ನು ತಿಳಿಯಲಾರನು.'

ಈ ಕಾಗದ ಬರೆದ ನಾಲ್ಕು ದಿನಗಳಲ್ಲಿ ಅಂದರೆ ಫೆಬ್ರವರಿ 22 ನೇ ಶಿವರಾತ್ರಿ ದಿನದಲ್ಲಿ ಕಸ್ತೂರ್‌ಬಾರವರು ಇಹಲೋಕವನ್ನು ತ್ಯಜಿಸಿ ಪರಂಧಾಮನೈದಿದರು. ಅವರ ದಹನಕ್ರಿಯೆಯ ವಿಚಾರದಲ್ಲಿ ಗಾಂಧಿಯವರು ಈ ರೀತಿ ಸೂಚಿಸಿದ್ದರು.

(1) ನನ್ನ ಮಕ್ಕಳು ಮತ್ತು ಬಂಧುಗಳಿಗೆ ಶವವನ್ನು ಒಪ್ಪಿಸಬೇಕು. ಸಾರ್ವಜನಿಕವಾದ ಈ ದಹನಕ್ರಿಯೆಯಲ್ಲಿ ಸರಕಾರ ವೈಹಾಕಾರದು.

(2) ಇದು ಸಾಧ್ಯವಿಲ್ಲದಿದ್ದರೆ ಮಹದೇವದೇಸಾಯಿಯು ಸತ್ಯಾಗ್ರಹ ನಡೆಸಿದಂತೆ ಶವಸಂಸ್ಕಾರವಾಗಲಿ. ಕೇವಲ ಬಂಧುಗಳೇ ಈ ಕ್ರಿಯೆಯಲ್ಲಿ ಭಾಗವಹಿಸಬಹುದೆಂದು ಸರಕಾರ ವಿಧಿಸುವದಾದರೆ ಅದಕ್ಕೆ ನಾನೊಪ್ಪಲಾರೆ. ಬಂಧುಗಳಷ್ಟೆ ಹಿತಚಿಂತಕರೂ ಸ್ನೇಹಿತರುಗಳೂ ಬರುವಂತಾಗಬೇಕು.

(3) ಇದೂ ಸಾಧ್ಯವಾಗದಿದ್ದರೆ ಜೈಲಿನೊಳಗೆ ಆಶ್ರಮವನ್ನು ಹೋಡಲು ಬಂದವರನ್ನು ಹೊರಗೆ ಕಳುಹಿಸಿ ನ್ಯಾಸಬದ್ಧತೆಯ ಕೈದಿಗಳಾಗಿರುವ ನಾವೇ ಶವಸಂಸ್ಕಾರ ಮಾಡುವುದು.

ನನ್ನ ಜೀವನ ಸಂಗಾತಿಯ ಈ ದಾರುಣವಾದ ಖಾಯಿಲೆಯ ವಿಚಾರವನ್ನು ರಾಜಕೀಯ ವಿಚಾರಕ್ಕೆ ಉಪಯೋಗಿಸಿಕೊಳ್ಳುವವನು ನಾನಲ್ಲ. ಸರಕಾರವು ನನ್ನೇ ಮಾಡಿದರೂ ಅವನ್ನು ಹಿತನಚಿಗಳಿಂದ, ಯೋಗ್ಯತೆಯಿಂದ ಮಾಡಬೇಕು ಆದರೆ ಇಂಥಾ ನಯಭಾನ, ಹಿತವರ್ತ

ಫ್ರಾನ್ಸಿನಲ್ಲಿ ಯುದ್ಧ ಪ್ರಾರಂಭವಾಗಿ ಇಂದಿಗೆ (29-6-44) ಇಪ್ಪತ್ತಮೂರು ದಿನಗಳಾದವು ಈ ಮೂರು ವಾರಗಳ ಅವಧಿಯಲ್ಲಿ ಏನಾಯಿತು? ಮಿತ್ರರಿಗೆ ಎಷ್ಟು ಲಾಭವಾಯಿತು ಎಂಬುದನ್ನು ಪರಿಶೀಲಿಸಿದರೆ ಈಗ ಬಂದಿರುವ ವಾರ್ತೆಗಳಂತೆ ಪ್ರಥಮ ಊಹಿಸಿದಷ್ಟು ಪ್ರಗತಿಯಾಗಲಿಲ್ಲ. ಮಿತ್ರರು ಹೇಳಿಕೊಳ್ಳಬಹುದಾದ ಒಂದು ವಿಚಾರವೆಂದರೆ ಶೆರ್‌ಬರ್ಗ್‌ನ ಪತನ. ಶೆರ್‌ಬರ್ಗ್ ಈಗ ಮಿತ್ರರ ಕೈಯಲ್ಲಿದೆ. ಈ ವಿಜಯಶ್ರೀಗಾಗಿ ಮಿತ್ರರು ಬಹು ಪ್ರಯತ್ನಮಾಡಿದ್ದಾರೆ. ಇದು ಪ್ರಸಿದ್ಧವಾದ ಬಂದರು. ಈ ಬಂದರು ವಶವಾದ್ದರಿಂದ ಮಿತ್ರರ ಸಾಧನ ಸಾಹಿತ್ಯಗಳ ರವಾನೆಗೆ ಬಹು ಅನುಕೂಲವಾಯಿತು. ಶೆರ್‌ಬರ್ಗ್ ಯುದ್ಧದಲ್ಲಿ ಮೂವತ್ತು ಸಾವಿರ ಜರ್ಮನ್ ಯೋಧರು ರೌದ್ರಾವೇಶದಿಂದ ಹೋರಾಡಿದರು. ಆದರೆ ಮಿತ್ರರು ಜರ್ಮನರು ಪ್ರತಿ ಗುಂಡಿಗೆ ಗುಂಡನ್ನು, ಪ್ರತಿ ಯೋಧನಿಗೆ ಯೋಧನನ್ನು, ಪ್ರತಿ ವಿಮಾನಕ್ಕೆ ವಿಮಾನವನ್ನು ಕಳುಹಿಸಿ ಜಯಪಡೆದಿದ್ದಾರೆ. ಶೆರ್‌ಬರ್ಗ್‌ನ ಕಾಳಗವು ರಷ್ಯಾದ ಸೆಬಸ್ಟಪಲ್ ಕಾಳಗವನ್ನು ಹೋಲುತ್ತದೆ. ಈ ಪ್ರಸಿದ್ಧ ಫ್ರೆಂಚ್ ನಗರವು ಮಿತ್ರರ ವಶವಾದ್ದರಿಂದ ಜರ್ಮನರಿಗೆ ಬಹು ನಷ್ಟವಾಯಿತೆನ್ನಬಹುದು. ಈಗ ಯುದ್ಧವು ಬೆಲ್ಜಿಯಂ ಹತ್ತಿರ ನಡೆಯುತ್ತಿದೆ. ಜರ್ಮನರು ಇಲ್ಲಿ ಅತ್ಯಗ್ರವಾದ ಟ್ಯಾಂಕ್ ಕಾಳಗ ಹೂಡಿದುವರು.

ಸರಕಾರದಲ್ಲಿಲ್ಲವೆಂದು ಹೇಳಬೇಕಾಗಿದೆ. ರೋಗಿಯು ಈಗ ಇಲ್ಲ. ಸರಕಾರ ಈಗಲಾದರೂ ಮಾಡುವ ನಿರ್ಣಯವು ದ್ವೇಷವೂ ತಾತ್ಸಾರರಹಿತವಾಗಿ ಹಿತವಾಗಿರಲೀ ಎಂದು ಆಶಿಸುತ್ತೇನೆ.' ಸರಕಾರವು ಜೈಲಿನೊಳಗೇ ಮಹದೇವದೇಸಾಯಿಯವರ ಶವಸಂಸ್ಕಾರಕ್ಕೆ ಏರ್ಪಡಿಸಿದ್ದಂತೆ ಈ ಸಾರಿಯೂ ಮಾಡಿತು.'

ಗಾಂಧೀಜಿಯವರು ಡಾಕ್ಟರುಗಳ ಸಹಾಯ ಕೇಳಿದ ಆರುವಾರಗಳ ನಂತರ ಡಿನ್ಯಾಮೈಹತಾರವರ ಮತ್ತು 8 ವಾರಗಳ ನಂತರ ವೈದ್ಯರಾಜರ ಚಿಕಿತ್ಸೆಗೆ ಏರ್ಪಡಿಸಿತು. ಆದರೆ ಈ ಸಮಯದೊಳಗೆ ರೋಗಿಯ ಸ್ಥಿತಿ ಚಿಂತಾಜನಕ ಪರಿಸ್ಥಿತಿಗೆ ಮುಟ್ಟಿತ್ತು. ಡಾ. ಗಿಲ್ಡರ್, ಮತ್ತು ಸುಶೀಲಾನಾಯರ್‌ರವರು ಈ ಕಾಯಿಲೆಯ ವಿಚಾರ ಡಾ. ಬಿ ಸಿ. ರಾಯರ ಅಭಿಪ್ರಾಯ ತೆಗೆಯಲು ಅನುಮತಿಕೊಡಬೇಕೆಂದು ಸರಕಾರವನ್ನು ಕೇಳಿದ್ದರು ಆದರೆ ಇದಕ್ಕೆ ಸರಕಾರ ವಿವಿಗೊಡಲಿಲ್ಲ. ಕಾಮನ್ಸ್ ಸಭೆಯಲ್ಲಿ ಮಿ. ಬಟ್ಲರ್‌ರವರು ಕಸ್ತೂರ್‌ಬಾರವರನ್ನು ತಾವು ಬಿಡಲು ತಯಾರಿದ್ದೆವೆಂದೂ ಆಕೆಯೇ ಪತಿಯೊಂದಿಗೆ ಜೈಲಿನಲ್ಲಿರಲು ಇಷ್ಟಪಟ್ಟಳೆಂದೂ ಹೇಳಿದ್ದನ್ನು ಗಾಂಧಿಯವರು ನಿಷ್ಕಳಂಕ ವಜ್ರನಗಳೆಂದು ಖಂಡಿಸಿದ್ದಾರೆ. ಬಿಡುಗಡೆಯ ಯಾವ ಮಾತನ್ನೂ ಸರಕಾರವು ಎತ್ತಲಿಲ್ಲವಂತೆ.

ಶೆರ್ ಬರ್ಗ್

—ಪತನ—

ಲೇ:-'ಗುಪ್ತ'

ಕೇನ್‌ನಗರದ ಪಶ್ಚಿಮದಲ್ಲಿಯೂ ಪ್ರಚಂಡ ಕಾಳಗ ನಡೆಯುತ್ತಿದೆ. ಫ್ರಾನ್ಸ್‌ನಲ್ಲಿಯ ಪ್ರತಿ ನಗರಗಳು ಸ್ವತಂತ್ರವಾಗಿ ರಕ್ಷಿಸಲ್ಪಟ್ಟಿವೆ. ಪ್ರಾಮುಖ್ಯವಾದ ಒಂದು ನಗರದ ಪತನದಿಂದ ಇತರ ಹತ್ತಿರದ ನಗರಗಳು ವಶವಾಗುವಂತಿಲ್ಲ. ಯಾಕೆಂದರೆ ಜರ್ಮನರು ಪ್ರತಿ ನಗರದ ರಕ್ಷಣೆಗೆ ಪ್ರತ್ಯೇಕ ವಿವಾಡು ಮಾಡಿದ್ದಾರೆ. ಆದ್ದರಿಂದ ಪ್ರತಿ ಹೆಜ್ಜೆಗೂ ಮಿತ್ರರು ಅಖಂಡವಾಗಿ ಹೋರಾಡಬೇಕಿದೆ.

ಈ ಯುದ್ಧದಲ್ಲಿ ಮಿತ್ರರಿಗೆ ಬಹು ಕಷ್ಟವಿದೆ. ಯಾಕೆಂದರೆ ತಮ್ಮ ಸೈನಿಕರಿಗೆ ಬೇಕಾದ ಯಾವ ವಸ್ತುವೂ ಅಲ್ಲಿ ದೊರೆಯುವುದಿಲ್ಲ. ಎಲ್ಲವೂ ಇಂಗ್ಲೆಂಡಿನಿಂದ ಹೋಗಬೇಕು. ಈ ಕಷ್ಟದಿಂದಾಗಿಯೇ ಪ್ರಗತಿಯು ಕಡಿಮೆಯಾಗಿರಬೇಕು. ಮಿತ್ರರ ಇಲ್ಲಿಯ ದಂಡಯಾತ್ರೆಯು ಇಟಲಿಯ ಆನ್‌ಜಿಯೋ ಯುದ್ಧವನ್ನು ಜ್ಞಾಪಕಕ್ಕೆ ತರುತ್ತದೆ. ಮಿತ್ರರು ಪ್ರಥಮ ಹೋಗಿ ಯಶಸ್ವಿಯಾಗಿ ಇಳಿದರು. ಆಲ್ಲಿ ಇಳಿದ ನಂತರ ಅವರಿಗೆ ಜರ್ಮನರ ಶಕ್ತಿಯು ಹೆಚ್ಚಿರುವಂತೆ ಭಾಗವಾಗುತ್ತಿದೆ. ಸರ್ವಸಾಹಿತ್ಯಗಳನ್ನೂ ಸಮುದ್ರ ಯಾ ವಿಮಾನ ಮುಖೇನ ಕಳುಹಿಸಿ ವಿಶಾಲವಾದ ಸೇನೆಯು ಯಶಸ್ವಿ ಯುದ್ಧ ಮಾಡುವಂತೆ ಏರ್ಪಡಿಸುವದು ಸುಲಭದ ಕೆಲಸವಲ್ಲ. ಪ್ರತಿ ಯೋಧನನ್ನು ಫ್ರಾನ್ಸಿಗೆ ಕಳುಹಿಸಲು 40 ಟನ್ನು ಭಾರದ ಸಾಹಿತ್ಯ ಬೇಕು ಎಂದು ಅಂದಾಜಿದೆ. ಹಾಗಿರುವಾಗ ಲಕ್ಷ ಗಟ್ಟಲೆ ಜನರನ್ನು ಕಳುಹಿಸುವ ವಿಚಾರ ಯೋಚನೆಗೆ ನಿಲುಕುವಂಥಾದ್ದಲ್ಲ. ಈ ಕಷ್ಟ ಒಂದೆಡೆಯಿದ್ದರೆ ಮತ್ತೊಂದೆಡೆ ಹವಾಗುಣ. ಹವಾಗುಣ ಸರಿಯಿಲ್ಲದಿದ್ದರೆ ಪ್ರಯತ್ನವೆಲ್ಲಾ ನಿಷ್ಫಲವಾಗುವ ಸಂದರ್ಭವಿದೆ. ಇದರೊಂದಿಗೆ ಜರ್ಮನರ ಸಿದ್ಧತೆಯು ಸಾಧಾರಣದ್ದಲ್ಲ. ಸಮುದ್ರದಲ್ಲಿ ಹಡಗಗಳನ್ನು ಮುಳುಗಿಸಲು ಸುರಂಗಗಳನ್ನು ಸಮುದ್ರದಲ್ಲಿ ದೂರದ ವರೆಗೆ ಹಾಕಿದ್ದಾರೆ. ತೀರದ ಉಸುಬಿನಲ್ಲಿ ವೈನುಗಳು. ಅದರೊಂದಿಗೆ ಇಲೆಕ್ಟ್ರಿಕ್ ಗುಪ್ತ ತಂತಿಗಳು, ಇನ್ನೂ ಅನೇಕಾನೇಕ ವಿನಾಶಕಾರಕ ತಂತ್ರಗಳು. ಇಷ್ಟು ಕರಾವಳಿಯ ಸಿದ್ಧತೆಯಾದರೆ ಇವುಗಳ ಹಿನ್ನೆಲೆಯಲ್ಲಿ ತೋಪುಗಳು, ಅವುಗಳ ಹಿಂದೆ ದೊಡ್ಡ ದೊಡ್ಡ ಮಿಷಿನ್‌ಗನ್ನುಗಳು ನಿಲ್ಲಿಸಲ್ಪಟ್ಟಿವೆ. ಈ ಕರಾವಳಿಯ ವ್ಯವಸ್ಥೆಯ ನಂತರ ಹತ್ತರಿಂದ ಮೂವತ್ತು ಮೈಲುಗಳ ವರೆಗೆ ಎಡೆಡನೇ ಸಾಲು! ಇದರಲ್ಲಿ ಮೇಲಿನಂತೆಯೇ ಸಿದ್ಧತೆಗಳು. ಇದರಾಚೆ ನೂರುತ್ತರಿಂದ ಆರುವತ್ತು ಮೈಲುಗಳ ವರೆಗೆ ಮೂರನೆ ವ್ಯೂಹವಿದೆ. ಹೀಗೆ ಅಖಂಡವಾದ ಸೇನಾವ್ಯೂಹ ಜರ್ಮನರದು. ಈ ತೊಂದರೆಗಳನ್ನೆಲ್ಲಾ ನಿವಾರಿಸಿ, ಸೈನ್ಯವ್ಯೂಹವನ್ನು ನುರಿದು ಮುಂದೆ ನುಗ್ಗುವದು ಸಾಮಾನ್ಯಕೆಲಸವಲ್ಲ.

ಶತ್ರುಗಳ ಶಿರುಕುಳ ಇಷ್ಟರಲ್ಲಿ ನಿಲ್ಲಲಿಲ್ಲ. ಜರ್ಮನರ ಗುಪ್ತಾಪ್ತರಗಳ ಸಂಕಲನ ಒಂದು ಬೇರೆಯಿದೆ. ವೈಮಾನಿಕವಲ್ಲದ ರೇಡಿಯೋ ವಿಮಾನಗಳನ್ನು ಎದುರಿಸುವದೊಂದು ತಲೆಬೇನೆಯಾಗಿ ಪರಿಣಮಿಸಿದೆ. ಆದರೊಂದಿಗೆ 'ಹೆನಿಲ್‌ಕಾಪ್ಟರ್' ಮೊದಲಾದುವು. ಇದೇ ಅಲ್ಲ; ಜರ್ಮನರು ಮೃತ್ಯುಕೆರಣ ಒಂದನ್ನು ಶೋಧಿಸುವ ವರಂತೆ. ಅದು ಇನ್ನೂ ಪ್ರಯೋಗದಲ್ಲಿ ಬಂದಿಲ್ಲ. ಈ ಕಿರಣ ಬಿದ್ದ ಜನ, ವಸ್ತುಗಳೆಲ್ಲವೂ ನಾಶವಾಗುವವಂತೆ! ಹಿಟ್ಲರನ ಬತ್ತಳಿಕೆಯಲ್ಲಿ ಇನ್ನು ಯಾವ ಯಾವ ಗುಪ್ತಾಸ್ತ್ರಗಳಿವೆಯೆಂದು ಹೇಳಬರುವದಿಲ್ಲ.

ರಷ್ಯಾಗಡಿಯಲ್ಲಿ ಸ್ಟಾಲಿನನು ಮೃಕೊಡವಿ ಮುಂದೆ ನುಗ್ಗತೊಡಗಿದ್ದಾನೆ 'ವಿಬೋರ್ಗ' ನಗರವು ಆತನ ವಶವಾಗಿದೆ. ಅವರೀಗ ಬಿಟ್ಲಿಕನ್ನು ವಶಪಡಿಸಿ ಮುಂದೆ ಸಾಗತೊಡಗಿದ್ದಾರೆ. ಇಟಲಿಯಲ್ಲಿ ಮಿತ್ರರ ಮುನ್ನಡೆ ಸಾವಧಾನದಿಂದ ನಡೆದಿದೆ. ಜನರಲ್ ಕೆಸರ್‌ಲಿಂಗನ ಪ್ರಯತ್ನಗಳು ನಿಷ್ಫಲವಾಗತೊಡಗಿವೆ. ಇಟಲಿಯ ನೈಸರ್ಗಿಕ ಅನುಕೂಲತೆ ಆತನಿಗಿದೆ. ಆದರೂ ಆತನಿಗೆ ಜಯಶ್ರೀ ಮುನಿದಿರುವಳು.

ಇತ್ತ ಜಪಾನರಿಗೆ ಒಂದೆಡೆ ಗಂಡಾಂತರದ ಚಿಹ್ನೆಗಳು ತೋರತೊಡಗಿವೆ. ಜನರಲ್ ಡೂಲಿಟ್ಲ್‌ರವರು 'ಡೂಲಿಟ್ಲ್' ತನ್ನನ್ನು ಬಿಟ್ಟು ಜಪಾನರ ಮೇಲೆ ಬಾಂಬು ಧಾಳಿ ಪ್ರಾರಂಭಿಸಿದ್ದಾರೆ. ಕ್ಯೂಸು ನಡುಗಡ್ಡೆಯ ಮೇಲಿನ ಧಾಳಿಯಿಂದ ಜಪಾನರಿಗೆ ನಷ್ಟವಾಗಿದೆಯಂತೆ. ಇದರೊಂದಿಗೆ ಮಿತ್ರ ನೌಕಾದಳಗಳು ಮೆರಿನಾಡ್ಡೀಪದಲ್ಲಿ ಜಪಾನ್ ನೌಕಾದಳಗಳನ್ನು ಸಂದಿಸಿ ಹೋರಾಡಿದವು. ಆದರೆ ಜಪಾನ್ ದಳಗಳು ಅಷ್ಟು ಅಶಕ್ತಿಯಿಂದ ಯುದ್ಧ ಮಾಡಿದಂತೆ ಕಂಡುಬರುವದಿಲ್ಲ. ದಿನೇ ದಿನೇ ಗಂಡಾಂತರಗಳು ಹತ್ತಿರ ಬರುತ್ತಿದ್ದರೂ ಪಾಡಾಪಾಡಿ ಯುದ್ಧವನ್ನು ಜಪಾನ್ ನೌಕಾಪಡೆಯು ತಪ್ಪಿಸಿಕೊಳ್ಳುತ್ತಿದೆ. ಇತ್ತ ಮಿತ್ರರು ಇಂಫಾಲಿನಿಂದ ಜಪಾನರನ್ನು ಹಿಮ್ಮೆಟ್ಟಿಸಿದ್ದರೂ ಇಂಫಾಲಿಗೆ ಗಂಡಾಂತರ ತಪ್ಪಿಲ್ಲವೆಂದು ಹೇಳಲಾಗುತ್ತಿದೆ. ಜನರಲ್ ಸ್ಟಿಲ್‌ವೆಲ್ಲರ ಸೇನೆಗಳು ಉತ್ತರ ಬರ್ಮಾವಲ್ಲಿ ಮೊಗಾಂಗನ್ನು ಆಕ್ರಮಿಸಿರುವವು. ಬಶನ್‌ಪುರ ಪರಿಸರದಲ್ಲಿ ಜಪಾನರು ಚಟುವಟಿಕೆಯಿಂದ ಹೋರಾಡುತ್ತಿರುವರು.

ಈ ವಾರದ ಎಲ್ಲಾ ವರದಿಗಳನ್ನು ವಿವೇಚಿಸಿ ನೋಡಿದರೆ ಆಕ್ಸ್‌ರಾಷ್ಟ್ರಗಳಿಗೆ ಎಲ್ಲಿಯೂ ಜಯದೊರೆತಂತೆ ಕಂಡುಬರುವದಿಲ್ಲ. ದ್ವಿತೀಯರಂಗದ ಯುದ್ಧವು ಇನ್ನೂ ರೂಪುಗೊಳ್ಳುವದರಲ್ಲಿದೆ. ಇಟಲಿಯುದ್ಧವು ಜೀವನ್ಮರಣಾವಸ್ಥೆಯಲ್ಲಿದೆ. ಬರ್ಮಾಗಡಿಯ ವಾರ್ತೆಗಳು ಬೇಕಿರುವಷ್ಟು ಬರುತ್ತಿಲ್ಲ. ಮಿತ್ರರು ಹೇಗೂ ಸರ್ವರಂಗಗಳಲ್ಲೂ ಉತ್ಸಾಹದಿಂದ ಮುಂದೊತ್ತುತ್ತಿರುವರು.

ಕೊಡಗು

ಕಾ. ೩೦-೬-೧೯೪೪ನೇ ಶುಕ್ರವಾರ

ಕೊಡಗಿನಲ್ಲಿ ವಿದ್ಯಾಭ್ಯಾಸ.

ಯಾವದೇ ಜನಾಂಗದ ಯಾ ರಾಷ್ಟ್ರದ ಪ್ರಗತಿಗೆ ವಿದ್ಯಾಭ್ಯಾಸವೇ ಆಧಾರಸ್ತಂಭ. ಮಾನವನು ತನ್ನ ಪಶುತ್ವವನ್ನು ಬಿಟ್ಟು ನಿಜವಾದ ಮನುಷ್ಯನಾಗಿ ಬಾಳಬೇಕಾದರೆ, ಜಗತ್ತಿನ ರಾಷ್ಟ್ರಗಳ ನಾಗರೀಕತೆಯು ಏರಾಟದಲ್ಲಿ ಹಿಂದೆ ಬೀಳದೆ ಸಮ ಹೆಜ್ಜೆ ಇಟ್ಟು ನಡೆಯಬೇಕಾದರೆ ವಿದ್ಯೆಯೇ ಮೂಲಾಧಾರ. ನಾಡಿನ ಏಳಿಗೆಗೆ, ನಾಡಿನ ಜನರ ಅಭಿವೃದ್ಧಿಗೆ ವಿದ್ಯೆಯು ಜೀವಾಳ. ಇಂಥಾ ವಿದ್ಯೆಯನ್ನು ಪ್ರೋತ್ಸಾಹಿಸಿ ಜನತೆಗೆ ತನ್ನ ಜವಾಬ್ದಾರಿಯು ಅರಿವಾಗುವಂತೆ ನೋಡುವದು ಜನಹಿತ ಸರಕಾರದ ಕರ್ತವ್ಯ. ನಿಜ, ಇಂದು ಕಲಿಸಲ್ಪಡುತ್ತಿರುವ ವಿದ್ಯೆಯು ನಿಜವಾದ ವಿದ್ಯೆಯಲ್ಲ; ಮಾನವನ ಚೈತನ್ಯವನ್ನು ಹೆಚ್ಚಿಸಿ ಸ್ವತಂತ್ರ ಪಕ್ಷಿಗಳಂತೆ ಸಮೂಹಾಕಾಶದಲ್ಲಿ ವಿಹರಿಸಲು, ಸಮೂಹದ ಹಿತಕ್ಕಾಗಿ ದುಡಿಯಲು ಪ್ರೇರೇಪಿಸುವ ವಿದ್ಯೆಯಲ್ಲ. ರಾಷ್ಟ್ರದ ಅಭಿವೃದ್ಧಿಯೊಗವೇ ಆದರೆ ರಾಷ್ಟ್ರೀಯವಾದ, ಚೈತನ್ಯದಾಯಕವಾದ, ಸ್ವತಂತ್ರ ವ್ಯಕ್ತಿತ್ವಕ್ಕೆ ಪೂರ್ಣವಾದ ಶರಣವಾದ ವಿದ್ಯೆಯು ಜಾರಿಯಲ್ಲಿ ಬರಬೇಕು. ಇಂಥಾ ವಿದ್ಯೆ ಜಾರಿಯಲ್ಲಿ ಬರಬೇಕಾದರೆ ರಾಷ್ಟ್ರೀಯ ಸರಕಾರ ಸ್ಥಾಪನೆಯೊಗಬೇಕೇ ವಿನಹ ಪರಕೀಯರ ಯೂ ಪರಕೀಯರ ಕೈಗೊಂಬೆಗಳ ಆಳಿಕೆ ಇರುವ ವರೆಗೆ ಸಾಧ್ಯವಿಲ್ಲ. ಆದರೆ ಆ ವರೆಗೆ ಜನತೆಯು ವಿದ್ಯಾಭ್ಯಾಸ ಮಾಡದೆ ಕಣ್ಮುಚ್ಚಿ ಕೂರುವದು ಸಾಧ್ಯವಿಲ್ಲ. ಈಗಿರುವ ಅಸಮರ್ಪಕ ವಿದ್ಯೆಯನ್ನಾದರೂ ಅಭ್ಯಸಿಸಲೇ ಬೇಕು. ಇಲ್ಲವೇ ಮಾನವನ ಮನಸ್ಸು ತುಕ್ಕುಹಿಡಿದ ಕಬ್ಬಿಣದಂತೆ ನಿಷ್ಪ್ರಯೋಜಕವಾಗಬಹುದು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಕೊಡಗಿನಲ್ಲಿ ಯಾಂಥಾ ವಿದ್ಯೆಯನ್ನು ಕಲಿಯಲು ಸಹ ಯೋಗ್ಯ ಸಲಕರಣೆಗಳಿಲ್ಲವೆನ್ನಬೇಕು.

ಕೊಡಗಿನ ವಾಸ್ತವಿಕ ವಿದ್ಯಾಭ್ಯಾಸವನ್ನು ತೆಗೆದುಕೊಂಡರೆ ಇದರ ಜವಾಬ್ದಾರಿಯು ಮುಖ್ಯವಾಗಿ ಜಿಲ್ಲಾ ಬೋರ್ಡಿಗಿದೆ. ಆದರೆ ಯೋಗ್ಯ ಕೆಲಸ ಮಾಡಲು ಬೋರ್ಡಿನಲ್ಲಿ ಆರ್ಥಿಕ ತೊಂದರೆ. ಈ ತೊಂದರೆಯಿಂದಾಗಿ ತನ್ನ ಕೈಕೆಳಗಿನ ಉದ್ಯೋಗಿಗಳಿಗೆ ತುಟ್ಟಿಭತ್ಯ ಕೊಡಲು ಕಷ್ಟವಾಗಿ ಸರಕಾರದ ಸಹಾಯ ಪಡೆದಿದೆ. ಜಿಲ್ಲಾ ಬೋರ್ಡು ನೌಕರರಿಗೆ ವೇತನ ಬಹು ಕಡಿಮೆ. ಈ ಕಾರಣದಿಂದಾಗಿಯೇ ಅನೇಕ ಅಧ್ಯಾಪಕರು ಸೈನ್ಯಕ್ಕೆ ಸೇರಿರುವರು. ವಿದ್ಯಾವಂತರೆಲ್ಲರೂ ಈ ರೀತಿ ಶಾಲಾಪಯನ್ನು ಬಿಟ್ಟು ಬಹುತೇಕ ಬೇರೆ ಜಿಲ್ಲೆಯಲ್ಲಿಯೂ ಉದ್ಯೋಗದೊರೆಯುವದರೀ ಈ ಅಧ್ಯಾಪಕ ವೃತ್ತಿಯನ್ನು ಮುಂದೆ ಅವಲಂಬಿಸಬಹುದೇ ಎನ್ನುವ ಪ್ರಸಂಗ ಬರತೊಡಗಿದೆ. ಇದಕ್ಕೆ ಕಾರಣ ಅಧ್ಯಾಪಕರಿಗೆ ಕೊಡುವ ಅಲ್ಪವೇತನವೇ ಆಗಿದೆ. ಅಧ್ಯಾಪಕರ ತರಬೇತು ಶಾಲೆಯೊಂದನ್ನು ಮಡಿಕೇರಿಯಲ್ಲಿ ತೆರೆದಿದ್ದು ಬಹು ಯೋಗ್ಯ ಕೆಲಸ. ಆದರೆ ಅಧ್ಯಾಪಕರಿಗೆ ಯೋಗ್ಯ ವೇತನ ಕೊಡಿಯಿಂದ ಭರವಸೆಯಿದ್ದರೆ ಸೂತ್ರ ಇದೆಲ್ಲವೂ ಯಶಸ್ವಿಯಾಗುವದು. ಈಗ ತರಬೇತಿಗಾಗಿ ಬಂದ ಅಧ್ಯಾಪಕರು ಬಡಲಿಗೆ ಅಧ್ಯಾಪಕರು ಹೊರಟಿದೆ ಅನೇಕ ಶಾಲೆಗಳು ಕಷ್ಟಕ್ಕೆ ಬಿದ್ದಿದೆ. ಎಂಟನೆ ತರಗತಿಯ ವಿದ್ಯಾರ್ಥಿಗಳಿಗೆ ಎಂಟನೆ ತರಗತಿ ಓದಿದ ಅಧ್ಯಾಪಕನೇ ಪಾಠ ಹೇಳುವ ಪ್ರಸಂಗ ಹೇಗೆ! ಈ ರೀತಿಯ ತೊಂದರೆಯಿಂದಾಗಿ ಕೊಡಗಿನ ಪ್ರಾಥಮಿಕ ವಿದ್ಯಾಭ್ಯಾಸದ ಮಟ್ಟವು ಕೆಳತರಂಗಕ್ಕೆ ಇಳಿಯತೊಡಗಿದೆ.

ಮತ್ತೆ ಹೈಸ್ಕೂಲು ವಿದ್ಯಾಭ್ಯಾಸವನ್ನು ನೋಡಿದರೆ ಇದಕ್ಕಾಗಿ ಕೊಡಗಿನ ಜನರು ಹಾತೊರೆಯುತ್ತಿರುವರು. ಎಲ್ಲಲ್ಲಿ ಹೈಸ್ಕೂಲುಗಳಾಗಬೇಕೆಂದು ಪ್ರಯತ್ನ ನಡೆಸಿರುವದೇ ಇದಕ್ಕೆ ನಿದರ್ಶನವಾಗಿದೆ. ಜನರು ಈ ರೀತಿ ಪ್ರಯತ್ನಿಸುತ್ತಿದ್ದರೂ ಸರಕಾರದಿಂದ ಹೇಳಿಕೊಳ್ಳಬಹುದಾದ ಯಾವುದೊಂದು ಸಹಾಯವೂ ಈ ವರೆಗೆ ದೊರೆತಿರುವದಿಲ್ಲ. ಆದ್ದರಿಂದ ಖಾಸಗಿಯಾಗಿ ಮೂರು ಹೈಸ್ಕೂಲುಗಳನ್ನು ಜನರೇ ನಡಿಸುವ ಪ್ರಯತ್ನ ಮಾಡಿದ್ದಾರೆ. ಸರಕಾರವು ಇಂಥಾ ಪ್ರಯತ್ನಕ್ಕೆ ಬೆಂಬಲ ಕೊಡುವದು ಕರ್ತವ್ಯ. ಹೈಸ್ಕೂಲುಗಳಲ್ಲಿ ವಿದ್ಯಾಭ್ಯಾಸ ನಡೆಸುವ ವಿದ್ಯಾರ್ಥಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಮಡಿಕೇರಿ ಹೈಸ್ಕೂಲಿನ ಬೋರ್ಡಿಂಗಿನಲಿ ಹೆಚ್ಚೆಂದರೆ ನೂರು ಇರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಈ ವರ್ಷ 170 ಕ್ಕೆ ತಲಪಿದೆ. ಈ ಹೆಚ್ಚಿನ ವಿದ್ಯಾರ್ಥಿಗಳನ್ನು ಬೋರ್ಡಿಂಗಿಗೆ ಸೇರಿಸಿಕೊಂಡದ್ದು ಸರಿ. ಇದರಿಂದ ಇವರ ಇರುವಿಕೆಗೆ ಹೆಚ್ಚಿನ ವ್ಯವಸ್ಥೆ ಮಾಡಿರುವದಿಲ್ಲ. ಈ ಬಗ್ಗೆ ವ್ಯವಸ್ಥೆ ಜರೂರಾಗಿ ಆಗಬೇಕು. ಈ ವರ್ಷ ತಾತ್ಕಾಲಿಕವಾಗಿ ಇನ್ನೊಮ್ಮೆ ಬರೆಯಲಾಗುವುದು. ಅಧ್ಯಾಪಕರಿಗೆ ತರಬೇತು ತರಗತಿಗಾಗಿ ಕಾಲೆಯನ್ನು ತೆರೆಯಲಾಗಿದೆ. ಆದರೆ ತರಬೇತು ಹೊಂದುವವರು ಇರಲು ಹಾಸ್ಟೆಲುಗಳ ಸಲಕರಣೆ ಕಲ್ಪಿಸಬೇಡವೇ? ತರಬೇತು ಹೊಂದಲು ಬಂದಿರುವ ಅಧ್ಯಾಪಕರು ಮತ್ತು ಅಧ್ಯಾಪಿಕೆಯರು ಯೋಗ್ಯ ಸ್ಥಳಗಳಲ್ಲದೆ ತೊಂದರೆಗೊಳಗಾಗಿರುವರು. ಇದನ್ನು ನಿವಾರಿಸಬೇಕು.

ಕೊಡಗಿನ ಹೈಸ್ಕೂಲುಗಳಿಂದ ಎಷ್ಟು ಕಡಿಮೆಯೆಂದರೂ ಸರಾಸರಿ ಏನಿಲ್ಲವೆಂದರೆ ವಿದ್ಯಾರ್ಥಿಗಳು ವೃತ್ತಿಪರ ವಿದ್ಯಾಭ್ಯಾಸಕ್ಕೆ ಹೋಗುತ್ತಾರೆ. ಆದರೆ ಇವರೆಲ್ಲಾ ಹೊರಗಿನ ಕಾಲೇಜುಗಳಲ್ಲಿ ಸ್ಥಳ ದೊರಕುವದಿಲ್ಲ. ಇದೀಗ ಪರೀಕ್ಷೆ ಕಳೆದ ಸಮಯ. ವಿದ್ಯಾರ್ಥಿಗಳು ಹೊರಗಿನ ಕಾಲೇಜುಗಳಲ್ಲಿ ಸ್ಥಳಕ್ಕಾಗಿ ಪ್ರಯತ್ನಿಸಿ ನಿರಾಶರಾಗಿ ಹಿಂತಿರುಗುವ ದೃಶ್ಯಗಳು ಕಾಣುತ್ತಿವೆ. ಗಣಿತ ಮತ್ತು ಶಾಸ್ತ್ರೀಯ ವಿಷಯಗಳನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡವರಿಗೆ ಸೀಟು ದೊರೆಯುವದೇ ದುರ್ಲಭವಾಗಿದೆ. ಹೀಗಿರುವಾಗ ವೃತ್ತಿಪರ ವಿದ್ಯೆಯನ್ನು ವಯಸ್ಸಮಪರಿಗೆ ಯೋಗ್ಯ ವ್ಯವಸ್ಥೆಯನ್ನು ಕೊಡಗಿನಲ್ಲಿಯೇ ಮಾಡಬೇಕು. ಈ ರೀತಿ ಎಷ್ಟೋ ವರ್ಷಗಳಿಂದ ಕೊಡಗಿನಲ್ಲಿ ಒಂದು ಕಾಲೇಜು ತೆರೆಯಬೇಕೆಂದು ಪ್ರಯತ್ನಿಸುತ್ತಿದ್ದರೂ ಅದು ಫಲಕಾರಿಯಾಗಿರುವದಿಲ್ಲ. ತಮ್ಮ ಮಕ್ಕಳನ್ನು ವೃತ್ತಿಪರ ವಿದ್ಯಾಭ್ಯಾಸಕ್ಕೆ ಕಳುಹಿಸಬೇಕೆನ್ನುವ ತಂದೆ ತಾಯಿಗಳಿಗೆ ಕಾಲೇಜಿನ ಅವಶ್ಯಕತೆಯು ಮನದಟ್ಟಾಗುತ್ತಿದೆ. ಕೊಡಗಿನಲ್ಲಿ ಈಗ ಖಾಸಗಿಯಾಗಿ ತೆರೆದಿರುವ ಮೂರು ಹೈಸ್ಕೂಲುಗಳನ್ನು ಸರಕಾರವು ಪ್ರೋತ್ಸಾಹಿಸಿ ಅವು ಸ್ಥಾಪಿಯಾಗಿ ನಿಲ್ಲುವಂತೆ ಮಾಡಬೇಕು. ಈ ಆಸ್ಥಿಭಾರ ಭದ್ರವಾದರೆ ಕಾಲೇಜನ್ನು ಸ್ಥಾಪಿಸುವದು ಸುಲಭವಾಗುವದು. ಸರಕಾರವು ಮನಸ್ಸಿಟ್ಟರೆ ದೇಶೀಯರ ದೃಷ್ಟಾಪೂರ್ವಕ ಬೆಂಬಲ ದೊರೆಯುವದು. ಅಜಮೀರ್-ಮೀರ್‌ವಾರ್ ಮತ್ತು ಡೆಲ್ಲಿ ಪ್ರಾಂತಗಳು ಕೊಡಗಿಗಿಂತೆ ಚಿಕ್ಕವಾಗಿದ್ದರೂ ಪ್ರತಿಯೊರ್ವರಲ್ಲಿ ಮೂರು ನಾಲ್ಕರಂತೆ ಕಾಲೇಜುಗಳಿವೆ. ಹೀಗಿರುವಾಗ ಕೊಡಗಿಗೆ ಒಂದು ಕಾಲೇಜಿಲ್ಲವೆಂದರೆ ಕೊಡಗು ನಾಡಿಗೆ ಗುಂಡಿಕ, ಕೊಡಗಿನ ಆಡಳಿತಕ್ಕೇ ಅಪವಾದ.

ಮಾತ್ರಾಂತರಂಗ

ಒ ಳ ಪೆ ಟ್ಟಿ.

ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗಮಾಡುತ್ತಿದ್ದ ಶ್ರೀ. ಬೊಳ್ಳರ ಸಿ. ಮಂದಣ್ಣ ಬಿ ಎ. ಯವರು ವಿದ್ಯಾಲಯದ ಕಳೆದ ಬಿ ಎಸ್ ಸಿ (ಇಂಜಿನೀಯರಿಂಗ್ ಮೆಕಾನಿಕಲ್ ಮತ್ತು ಇಲೆಕ್ಟ್ರಿಕಲ್) ಪರೀಕ್ಷೆಯಲ್ಲಿ ಹೇಗ್-ಡೆಯೊಗಿರುವರು.

ಬೊಂಬಾಯಿಯು ಎಂಡನ ಸಂಸ್ಥಾ ಕಾ. 9-6-44 ರಲ್ಲಿ ಸಭೆ ಸೇರಿ ಪೂರ್ಣ ಸಮಸ್ಯರಾಗಿದ್ದ ಶ್ರೀ. ಮಾಕ್ಕಾಟಿರ ಸಿ. ಅಚ್ಚಯ್ಯನವರ ಅಕಾಲ ಮರಣಕ್ಕಾಗಿ ಸಂತಾಪಸೂಚನಾ ತರಾವನ್ನು ಮಂಡಿಸಿ ಅವರ ಗುಣಾಗಾನ ಮಾಡಿ ಅವರು ಸಂಸ್ಥೆಗೆ ಮಾಡಿದ ಸೇವೆಯನ್ನು ಸ್ಮರಿಸಿತು.

ಗಾಂಧೀಜಿಯವರು ಇಚ್ಛಿಸಿದ ಹರಿಜನ ಮತ್ತು ಕಸ್ತೂರಬಾ ನಿಧಿಯ ಕೇಂದ್ರ ಸಮಿತಿಯ ಸೂಚನೆಯಂತೆ ಕೊಡಗಿನಲ್ಲಿ ಈ ವರೆಗೆ ರೂ. 34931/- ಜಮೆಯಾಗಿರುವುದೆಂದು ಕಾ. 29-6-44 ನ್ನು ಎಸ್ ಪ್ರೆಸ್ ಕಂಡಿ ಮೂಲಕ ಅವರಿಗೆ ತಿಳಿಸಲಾಗಿದೆ. ಈ ಮಹತ್ಕಾರ್ಯದ ಹಣದಲ್ಲಿ ರೂ. 2739/-ನ್ನು ಕಾ. 22-6-43 ರಲ್ಲಿ ಬೊಂಬಾಯಿಯ ಕೇಂದ್ರ ಸಮಿತಿಗೆ ರವಾನಿಸಲಾಗಿದೆ. ಬಾಕಿ ಹಣ ಸ್ಥಳೀಯ

ಬ್ಯಾಂಕಿನಲ್ಲಿಡಲಾಗಿದೆ. ಕಸ್ತೂರಬಾ ನಿಧಿಗೆ ಕಾತಾಲಕಟ್ಟಪಿಯವರು 1½ಲಕ್ಷ, ಬಿಲ್ಡರ್ಸಪೋವರರು 1 ಲಕ್ಷ, ಹಿರಿಯಹೊಟೆಲ್ ಇನ್ವೆಸ್ಟಿನ್ಸ್ ಕಂಪೆನಿಯವರು ರೂ.15000, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ರೂ. 10000 ಹೀಗೆ ಸಹಾಯ ಮಾಡಿರುವರು.

ಕೊಡಗಿನ ಪಬ್ಲಿಕ್ ಟ್ರಸ್ಟರಿ ಜಿಲ್ಲಾ ಕಾರಿಗಳಲ್ಲಿರುವ ಶ್ರೀ ಚಿದ್ವಾನಂದ ಪೋಷಯ್ಯನವರು ಬರುವ ಆಗಸ್ಟ್ ತಿಂಗಳಲ್ಲಿ ಕೆಲಪದಿಂದ ನಿವೃತ್ತರಾಗುತ್ತಾರೆ. ಈ ಮೊದಲು ಅವರು ಜುಲೈ 6 ರಿಂದ 26 ದಿನಗಳ ವರೆಗೆ ರಜೆಯಲ್ಲಿ ಹೋಗುವರು.

ಇಲ್ಲಿನ ಬ್ಯಾಹ್ಮಣರ ಕೇರಿಯಲ್ಲೂ, ಚಾಕಿಯ ಹತ್ತಿರ ಅಕ್ಕಿ ಗಿರಣಿಯಲ್ಲಿಯೂ ಪ್ಲೇಗಿನ ಇಲಿಗಳು ಸತ್ತಿವೆಯೆಂದು ತಿಳಿಯಬಂದಿದೆ.

ತಾ. 28 ಮತ್ತು 29 ರಲ್ಲಿ ಇಲ್ಲಿಯ ವೇದಾಂತ ಮಂದಿರದಲ್ಲಿ ಬೆಂಗಳೂರಿನ ವಾನಪ್ರಸ್ಥ ರಾಜಯೋಗಿ ಬ್ರಹ್ಮ ಶ್ರೀ. ಬಿ. ವಿ. ನಾರಾಯಣಶಾಸ್ತ್ರಿಗಳು ಯೋಗಾಸನ ಪ್ರದರ್ಶನ, ಉಪನ್ಯಾಸಗಳನ್ನು ಮಾಡಿದರು.

ಇಲ್ಲಿಯ ಮುನ್ಸಿಫ್ ಕೋರ್ಟ್ ಹೆಡ್ ಗುಮಾಸ್ತರಾಗಿರುವ ಶ್ರೀ. ಪಿ. ಯು. ಸೋಮಯ್ಯನವರು ತಾ. 30-6-44 ರಿಂದ ತಮ್ಮ ಉದ್ಯೋಗದಿಂದ ನಿವೃತ್ತರಾಗುವರೆಂದು ವಾರ್ತೆ.

ತಾ. 11-6-44 ರಲ್ಲಿ ಹಿಂದೀ ಪ್ರಚಾರದ ದೃಷ್ಟಿಯಿಂದ ಇಲ್ಲಿ ಒಂದು 'ಹಿಂದೀ ಪ್ರಚಾರ ಮಂಡಳಿ'ಯು ಕಲೆಯಲ್ಪಟ್ಟಿತು. ಈ ಮಂಡಳಿಯು ಸಾರ್ವಜನಿಕ ರಿಗಾದಿ ವೀರರಾಜಪೇಟೆಯ ಯಂಗ್‌ಮೆನ್ಸ್ ಕ್ಲಬ್ಬಿನಲ್ಲಿ ಜುಲೈ ಒಂದರಿಂದ ಹಿಂದೀ ತರಗತಿಯನ್ನು ತೆರೆಯುವುದು. ಸರ್ವರೂ ಬಂಧು ಭಾಷೆಯಾದ 'ಹಿಂದಿ'ಯನ್ನು ಕಲಿಯುವುದರ ಮೂಲಕ ಪ್ರೋತ್ಸಾಹಿಸಬೇಕಾಗಿ ಹಿಂದೀ ಪ್ರಚಾರ ಮಂಡಳಿಯು ಕೇಳಿಕೊಳ್ಳುತ್ತದೆ. ಈ ತರಗತಿಯಲ್ಲಿ ಕಲಿಯುವವರು ತಿಂಗಳಿಗೊಂದು ರೂಪಾಯಿ ಫೀ ಕೊಡಬೇಕಾಗಿರುವುದು ಮತ್ತು ನಾಲ್ವತ್ತೈದನ್ನು ಕೊಟ್ಟು ಮಂಡಳಿಯ ಸದಸ್ಯರಾಗಬೇಕು.

COORG FOREST DEPARTMENT
Mercara, dated 26-6-'44.

NOTICE.

Applications are invited from candidates who have passed the Secondary School Leaving Certificate examination and are under 25 years of age for appointment as foresters. The applicants should appear before the undersigned in his office at 11 A. M. on Friday the 7th July 1944 with their School Leaving Certificate books. At the same date and time Candidates for Guards post may also appear for personal selection.

C. M. Kushalappa.
Chief Forest Officer, Coorg.

ಕಸ್ತೂರಿಬಾ ನಿಧಿ.

ಡಾ. ಎಸ್. ಪಿ. ಬೇಕಲಾಚಾರ್ಯರು 15
ಶ್ರೀ ಬಿ. ಎಸ್. ಸುಗೂರಿಪ್ಪ (ಶಿರ) ,, 15
,, ಕೆ. ಪುಟ್ಟೇಲಪ್ಪ ,, ,, 15
,, ಮಂದೇಪಂಡ ಎಸ್. ಪೂವಮ್ಮ ,, 10

5 ರೂ. ಕೊಟ್ಟವರು–ಶ್ರೀಮತಿ ಮತ್ತು ಕ್ಯಾಪ್ಟನ್ ಎಂ. ತಿಮ್ಮಯ್ಯ, ಮಿಸ್. ಕೆ. ಎಂ. ಸಿಸ್ಟರ್ ಇನೆಸ್ ಬೌರಿಂಗಸ್ಸ (ಶಿರ), ಚೇಂದಂಡ ಎಸ್. ಪೂಣಚ್ಚ, ಕೊಲ್ಲಿರ ಅಚ್ಚಯ್ಯ, ಮಂದ್ಯಂಡ ಕಂಟೂಂಬದವರು, ಹುದಿಕೇರಿ ರಾಮು ನವಸ ಸೆಟ್ಟಿಂರಿನವರು, ಎ. ಸಿ. ಸೋಮಣ್ಣ, ಮೂದಂಡ ಬೆಳ್ಯಪ್ಪ, ಕೆ. ಪೆನ್ನಬಸವಯ್ಯ ಇವರುಗಳು.

ರೂ. 3ರಂತೆ ಕೊಟ್ಟವರು–ಶ್ರೀ ಗಳಾದ ಎಸ್. ನಾರಾಯಣಸ್ವಾಮಿ, ಬಿದ್ದಂಡ ಬಿ. ದೇವಮ್ಮ, ಪುಲಿಯಂಡ ಎಸ್. ತಂಗಮ್ಮ ಇವರುಗಳು.

ರೂ. 2ರಂತೆ ಕೊಟ್ಟವರು—ಶ್ರೀ ಗಳಾದ ಪಾಟೇರಿರ ಅಪ್ಪಣ್ಣ, ಬೆಪ್ಪಂಡ ಪಿ. ದೇವಕಿ ಅಪ್ಪಣ್ಣ, ಎಂ. ನೂಡಪ್ಪ ಇವರುಗಳು.

ರೂ. 1ರಂತೆ ಕೊಟ್ಟವರು–ಶ್ರೀ ಗಳಾದ ಪಾಟೇರಿರ ಸೋದಪ್ಪ, ಕಾರ್ಯಪ್ಪ, ಮಂದಪ್ಪ, ಅಪ್ಪಚ್ಚ, ಭೀಮಯ್ಯ, ಪೊನ್ನಪ್ಪ, ಸುಬ್ಬಯ್ಯ, ಕುಶಾಲಪ್ಪ, ಜೇಗಪ್ಪ, ದೇವಯ್ಯ, ನೂಚಯ್ಯ, ಪುಲಿಯಂಡ್ಕಶಾಲಪ್ಪ, ಅಚ್ಚಪ್ಪ, ಅಜಪ್ಪ, ಮಂತ್ತಣ್ಣ, ಮಂತ್ತಣ್ಣ, ಐಯ್ಯಪ್ಪ, ಅಪ್ಪಯ್ಯ, ಅಚ್ಚಯ್ಯ, ಪೂವಯ್ಯ, ಕಾರ್ಯಪ್ಪ, ಸುಬ್ಬಯ್ಯ, ಕೊಟ್ಟಿಯಂಡ ಮುತ್ತಣ್ಣ, ಜೋಕಂಡ ಚೀಯಣ್ಣ, ತಿಮ್ಮಯ್ಯ, ಬೆಣ್ಣಪ್ಪ, ಮುದ್ದಪ್ಪ, ಸುಬ್ಬಣ್ಣ, ಕಾರ್ಯಪ್ಪ, ಬಿ. ಕಾರ್ಯಪ್ಪ, ಕಾಪ್ಪಳಿರ ಕಾಳಪ್ಪ, ಮಂಜಯ್ಯ, ಕಾರ್ಯಪ್ಪ ಮೊಣ್ಣಪ್ಪ, ಗಣಪಲಿ, ಬಾಬು, ಚೋನಂಡ ಮುದ್ದಪ್ಪ, ಅಚ್ಚಯ್ಯ, ಐಯ್ಯಮ್ಮ, ಮೇದಪ್ಪ, ಸಂಜಪ್ಪ, ಬೆಕ್ಕೆಲಿಗರ ರಾಮಯ್ಯ, ಶಮ್ಮಯ್ಯ ಬಾಚೆಟ್ಟಿರ ಚಿಣ್ಣಪ್ಪ, ತುಂಬೆರ ಚಂಗಪ್ಪ, ಪಿ. ಕೇಶವಯ್ಯ, ಒಡಿಯಂಡ ಕಾವೇರಪ್ಪ, ಪೂಡ್ರಿನಾಡ ಚಿಣ್ಣಪ್ಪ, ಉದ್ದಂಡ ಕಿಪ್ಪಯ್ಯ, ಕಪೋಮಂಡ ಪೂವಯ್ಯ, ಕೆ. ರಾಮಮೂರ್ತಿ, ಹಾಜಿ ಬ್ಯಾರಿ, ಜಿ ಪೂವಯ್ಯ, ಎಂ. ಬಿ. ಕಾಳಪ್ಪ, ಬಿ. ತಿಮ್ಮಯ್ಯ, ಪಿ. ಸಿದ್ದಪ್ಪ, ಪಿ. ಬಿ. ಮೋದಪ್ಪ, ಬಿ. ಗಂಬ್ರಾಯ ಇವರುಗಳು. ಈ ವರೆಗೆಒಟ್ಟು ರೂ. 3,421 ಜಮೆಯಾಗಿದೆ.

ಸೈತೆಟ್ಟಿದ ಪತ್ರ.

ತಾರೀಕು 14-6-44 ರಲ್ಲಿ ಪಿಳ್ಳೆ ಹೊಂದಿದ ನನ್ನ ಲಘ್ಯಾಂಗಿ ಅಕ್ಕಮ್ಮನವರ ವಿಯೋಗದಿಂದ ನನಗುಂಟಾದ ಅಪಾರ ದುಃಖದಲ್ಲಿ ತಮ್ಮ ಸಂತಾಪ ಪತ್ರಗಳಿಂದಲೂ, ಧೈರ್ಯವಚನಗಳಿಂದಲೂ ಸಂತೈಸಿದ ನನ್ನ ಬಂಧು ಮಿತ್ರರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ನನ್ನ ಧನ್ಯವಾದಗಳನ್ನು ಅರ್ಪಿಸಲು ಅಶಕ್ತನಾದ ಕಾರಣ ಅನೇಕರಿಗೂ, ಈ ಮೂಲಕ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ

ಕಂಬೆಯಂಡ ಕುಶಾಲಪ್ಪ,
ಮಡಿಕೇರಿ.

ನಾಪೋಕ್ಲು ಹೈಸ್ಕೂಲ್ ಫಂಡು.

ಧಾನಧಿಕಾರಿಯಿಂದ ಹೊರಡುವ ಪ್ರಯಾಣಕ್ಕೆನಿಗೆ ದೇಶದ ಎಲ್ಲಾ ದಿಕ್ಕುಗಳಿಗೆ ಹೋಗಲು ದಾರಿಯಿದೆ ಆಂತೆಯೇ ದೇಶಪ್ರೇಮಿಗೆ ದೇಶ ಸೇವೆ ಮಾಡಲು ನಾನಾ ತರದ ಅವಕಾಶಗಳಿವೆ ವಿದ್ಯಾ ಪ್ರಚಾರ ಮಾಡುವುದು ಸಹ ಒಂದು ಉನ್ನತ ಕರವಾದ ಸೇವೆ. ಮುಂದಿನ ಜನಾಂಗದವರಿಗೆ ಕಿಚ್ಚನ ವಿದ್ಯಾಭ್ಯಾಸವನ್ನು ಕೊಟ್ಟು ಅವರುಗಳ ಹೃದಯದಲ್ಲಿ ಕರ್ತವ್ಯ ಜೀವನದ ಹೋರಾಟವನ್ನು ಯಶಸ್ವಿಯಾಗಿ ನಡಿಸಲು ಸನ್ನದ್ಧರನ್ನಾಗಿ ಮಾಡುವುದಕ್ಕೆ ನಮ್ಮ ಕೊಡಗಿನ ವಿದ್ಯಾಭಿಮಾನಿಗಳಲ್ಲಿ ಹೈಸ್ಕೂಲು ಸ್ಥಾಪಿಸಿದ್ದಾಗಿದೆ. ನಾಪೋಕ್ಲುವಿಗೂ ಒಂದು ಹೈಸ್ಕೂಲು ಆವಶ್ಯಕ ಬೇಕೆಂಬುವುದಕ್ಕೆ ಈಗ ನಾಲ್ಕೈದು ವರುಷಗಳಿಂದಲೂ ಪ್ರಯತ್ನ ನಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯೇ ನಿದರ್ಶನ ವಿದ್ಯಾಭಿವೃದ್ಧಿಯು ಸರಕಾರದವರಿಂದಲೇ ಆಗಬೇಕೆಂದು ನಂಬುವುದು ಒಂದು ತರದ ಅಶಾಸ್ತ್ರೀಯ. ನಾವು ನಮ್ಮ ಪಾಲಿನ ಸೇವೆಯನ್ನು ಸಲ್ಲಿಸಬೇಕು ನಮ್ಮ ಅವಾಯದಲ್ಲಿ ಸ್ವಲ್ಪ ಭಾಗವನ್ನು ಈ ಕೆಲಸಕ್ಕಾಗಿ ನಿನಿಯೋಗಿಸಬೇಕು. ಮನಸು ಮತ್ತು ಹೃದಯವನ್ನು ಶುದ್ಧವಾಗಿಡುವುದು ವಿದ್ಯೆ. ಇದಕ್ಕಾಗಿ ನಮ್ಮ ತಿನುಮನ ಧನಗಳನ್ನು ಒಪ್ಪಿಸುವುದೂ ಈ ಕಾಲದ ದೇಶಸಾಧನೆ. ಈ ಧರ್ಮಕ್ಕೆ ಧನ ಮತ್ತು ದವಸ ಸಹಾಯವು ಯೇ ಪಾಲಿನಾಲ್ಕನಾಡಿನ ಶ್ರಮ ಮುನ್ನೇಯಲಿಲ್ಲ ಬರಬೇಕಾದುದು ಸಮಜ ಈ ನಾಡಿನ ನೂರಾರು ಪುತ್ರರು ನಾಡಿನ ಹೊರಗೆ ಸನ್ನ ದೊಡ್ಡ ಉದ್ಯೋಗಗಳಲ್ಲಿರುವರು. ಅವರುಗಳು ನಮ್ಮ ಸಹಾಯಕ್ಕೆ ಬರಬೇಕಾಗಿದೆ ಪ್ರತಿಯೊಬ್ಬರೂ ಸ್ವಲ್ಪ ವೈಕ್ತಿಕ ಬಿರಿಯುವುದು ಅವಾಸ್ಯ ಅನೇಕರು ಪೀಸಾಗಿ ಪೂ ಗೊಡ್ತಿಲ್ಲ. ಅಂಥವರಿಗೆಲ್ಲಾ ಈ ಪತ್ರಿಕೆಯ ಮೂಲಕ ನಮ್ಮ ವಿನಂತಿ. ಪ್ರತಿಯೊಬ್ಬರೂ ಒಮ್ಮೆ ಒಂದು ತಿಂಗಳ ಪಾಟ್ಟನ ವರಮಾನವನ್ನು ಕಂತುವಾರು ಕೊಟ್ಟು ಈ ನಿಧಿಯನ್ನು ಪೋಷಿಸಬೇಕೆಂದು ಸಮಿತಿಯವರ ಪ್ರಾರ್ಥನೆ. ಬೇರೆಲ್ಲಾ ಸಮಿತಿಯವರು ತೊಡ್ತಿರುವ ಈ ಪೂರ್ಣ ಹೈಸ್ಕೂಲು ಸ್ಥಾಪನೆಯ ಹೊಣೆಯು ಒಮ್ಮ ಭಾರವಾದುದ್ದು. ಇದರ ಸಫಲ ಅಮಲುಗೊಳಿವಾದ ಹೊರೆ ಎಲ್ಲರನ್ನೂ ತಲೆ ಜನರ ಪಟ್ಟಿ ಕಡ್ತಿ' ಎಂಬಂತೆ ಹತ್ತಾರು ಜನರ ಸಹಕಾರದಿಂದ ಜಯವಾಗಲಿ ಆಗುವುದೆಂಬ ಬೆ ಕೆಲಸ ಮಂತಿಗೆ ಕೊಡುವ ಎಲ್ಲಾ ಮದ್ದಿಂದ ಸಹಾಯವನ್ನು ಈ ಪತ್ರಿಕೆ ಮೂಲಕ ಆಗಿದ್ದಾಗಿ ಸ್ವಾಗತ ಸುತ್ತಾ ಇರುವೆವು

(ಕಳೆದ ವಾರದಿಂದ ಮುಂದುವರಿದ)

ರೂ 2ರಂತೆ– ದೀವರ ಚಿಣ್ಣಪ್ಪ, ನಿರ್ಮಲೆ ಮುತ್ತಪ್ಪ, ಹೊಡ್ಡಟ್ಟಿ ಸುಬ್ಬಯ್ಯ, ನಾಪೋಕ್ಲು ರಾಘವೇಂದ್ರ, ಅಜ್ಜಮಾಡ ಸೂಬ್ಬ ರೂ 3, ಪದಿಮೂರಾಣೆ ಆಚಾರಿ ಪೆದುಮಾಣಿ ರೂ. 4 ಕೊಟ್ಟಿದ್ದಾರೆ.

ರೂ 5ರಂತೆ ಕೊಟ್ಟವರು—ಶ್ರೀ ಗಳಾದ ಚಿಮ್ಮಣಿವಂಡ ಕಾಳಪ್ಪ, ಬಿದ್ದಪ್ಪ, ನೆರವಂಡ ಗಣಪತಿ, ಮಾಚಯ್ಯ, ಕುಟ್ಟಪ್ಪ ದೇವಪ್ಪ, ಬೆರ್ಚ್ಚ ಮಾಸ್ಟರ್ಸ್, ಮೂಡಪ್ಪ, ಪೊನ್ನಪ್ಪ, ಅಚ್ಚಾಡಿರ ಸಿಸ್ಟರ್ಸ್, ಎಡಕೇರಿ ಮುದ್ದಪ್ಪ, ಪೋಲೇರಂಡ ಕಾರ್ಯಪ್ಪ, ಚೆಪ್ಪುಡಿರ ಚಿಣ್ಣಪ್ಪ, ಬೇಕಲ ಬೆಳ್ಳಿಪ್ಪ, ಉಗ್ಗಪ್ಪ, ಇವರ ಸಂಖ್ಯೆ ರೂ 5– 8—0

ರೂ. 10ರಂತೆ ಕೊಟ್ಟವರು—ಶ್ರೀ ಗಳಾದ ಮಂದಪಂಡ ಚಂಗಪ್ಪ, ಬಿ. ಸೀತಾ ಪೂವಯ್ಯ, ಬೆಳ್ಳಿಯಂಡ ಚಂಗಪ್ಪ, ಕಂಗಣಂಡ ಅಪ್ಪಣ್ಣ, ಕೆ ಲಕ್ಷ್ಮಿ ರ ಮುದ್ದಯ್ಯ, ಸೂದನ ಮೂಸ್ಟ ರೂ. 12, ಪೆರೆ ಪಂಡ ಕಂಗಪ್ಪ, ಸೂದನ ನೆಂಜಪ್ಪ ರೂ. 15ರಂತೆ, ಬಲ್ಲಂಡ ಮುತ್ತಣ್ಣ ರೂ. 20, ಮುಂದನೆರವಂಡ ದೇವಯ್ಯ, ಮೆಯಾಳಂಡ ನಂಜುಂಡ, ಕೋಲ ಸೋಮಯ್ಯ, ಅಪ್ಪನೆರವಂಡ ಮೇದಪ್ಪ, ರೂ. 25ರಂತೆ.

ರೂ. 50ರಂತೆ ಕೊಟ್ಟವರು—ಶ್ರೀ ಗಳಾದ ಅಪ್ಪನೆರವಂಡ ಬಿ. ಮಾಚಯ್ಯ, ಚೇತು ಮುಕ್ಕಾಟಿರ ಕೃಷ್ಣಪ್ಪ, ಕಾಶ್ಯಪ್ಪ, ಮಂಡಿರ ಅಪ್ಪಚ್ಚ.

ರೂ. 100ರಂತೆ ಕೊಟ್ಟವರು—ಶ್ರೀ ಗಳಾದ ಮಂದನೆರವಂಡ ಕರುಂಬಯ್ಯ, ಸೂದನ ಬೆಳ್ಳಿಪ್ಪ, ಎಸ್. ಎಸ್. ನಾರಾಯಣಸ್ವಾಮಿ, ಅಪ್ಪಾರಂಡ ಸೋಮಣ್ಣ.

(ಆಮೂರ್ಣ.

ಪೂನಾದಲ್ಲಿ ಮಹಾತ್ಮರು.

ಪೂನಾದಲ್ಲಿ ಮಹಾತ್ಮರು 'ನೈಸರ್ಗಿಕ ಉಪಚಾರ ಗೃಹ'(ನೇಚರ್ ಕ್ಯೂರ್) ದ ಸಂಚಾಲಕರಾದ ಡಾ. ಮೆಹೆತಾ ಇವರಲ್ಲಿ ಈಗ ವಾಸಿಸುತ್ತಿರುವರು. ಈ ಬಾರಿಯ ಪ್ರಯಾಣವು ಹಿಂದಿನ ಸಾರಿಗಿಂತ ಸುಖಕರವಾಗಿ ನಡೆಯಿತು. ಪ್ರಯಾಣದ ಆಯಾಸದಿಂದ ಆರಂಭದಲ್ಲಿ ರಕ್ತದ ಒತ್ತಡವು ಹೆಚ್ಚಿದ್ದರೂ ಕ್ರಮೇಣ ಅದು ಇಳಿಮುಖವಾಯಿತು. ಈಗ ಅವರ ಆರೋಗ್ಯವು ಪ್ರಗತಿ ಪಥದಲ್ಲಿ ಕಾಲಿಟ್ಟಿದೆ.

ಪ್ರತಿ ದಿನವೂ ಸಂಜೆ 7-45 ಗಂಟೆಗೆ ಸಾರ್ವಜನಿಕ ಪ್ರಾರ್ಥನೆಯು ನಡೆಯುತ್ತಲಿದೆ. ಬೊಂಬಾಯಿ ಅಸೆಂಬ್ಲಿಯ ಸ್ವೀಕರರಾಗಿದ್ದ ಶ್ರೀ ಜಿ. ವಿ. ಮಾವಳಂಕರ್, ಡಾ. ಎಂ. ಆರ್. ಜಯಕರ್, ಶ್ರೀ ಗಳಾದ ಎನ್. ಆರ್. ಸರಕಾರ, ಜಿ. ಡಿ. ಬಿರ್ಲಾ, ಯೂಸುಫ್ ಮೆಹರಾಲಿ, ಭುಲಾಭಾಯಿ ದೇಸಾಯಿ, ಹೆಚ್. ಇ. ಬಿ. ಕ್ಯಾಟ್ಟ್, ವಿಜಯನಗರದ ಮಹಾರಾಜ, ಸ್ವಾಮಿ ಆನಂದ, ಸರ್. ಸಿ. ವಿ. ಮೆಹತಾ ಶ್ರೀಮತಿ ಇಂದಿರಾಗಾಂಧಿ, ಡಾ. ಬಡಕಂಕರ್ ಮೊದಲಾದವರು ಮಹಾತ್ಮರನ್ನು ಕಂಡು ಮಾತಾಡಿದರು.

ತಮ್ಮ ಕೆಲಸದ ಸೂತ್ರಗಳನ್ನು ಪುನಹ ನಿರ್ವಹಿಸುವುದಕ್ಕಾಗಿಯೋ ಏನೋ ಎಂಬಂತೆ ಶ್ರೀಮತಿ ಸರೋಜಿನಿ ನಾಯ್ಡು ಇವರೂ ಪುನಃ ಬಂದು ಮಹಾತ್ಮರೊಂದಿಗಿರುವರು.

ಪರದೇಶೀ ಮತ್ತು ಖನಿಜಜನ್ಯ ಔಷಧಗಳನ್ನು ಸೇವನೆ ಮಾಡಲು ಬಾಪೂಜಿಯವರು ಒಪ್ಪುವದಿಲ್ಲ. ಅನೇಕ ಡಾಕ್ಟರರು ಒತ್ತಾಯಪಡಿಸಿದುದರಿಂದಾಗಿ ಅವರು ಈಗಾಗಲೇ ಎರಡು ಬಾರಿ ಈ ರೀತಿಯ ಔಷಧವನ್ನು ತೆಗೆದುಕೊಂಡಿರುವರು. ಆದರೆ ಈಗ ಪುನಹ ಅವುಗಳನ್ನು ಸೇವಿಸುವುದಿಲ್ಲವೆಂದು ನಿರಾಕರಿಸಿರುವರು. ಕೊಕ್ಕೆ ಹುಳದ ಉಪದ್ರವವನ್ನು ನಾಶಗೊಳಿಸುವುದಕ್ಕಾಗಿ ಆಯುರ್ವೇದ ವೈದ್ಯ ನಿಪುಣರಾದ ಡಾ. ಆರ್. ಎಚ್. ಭಡಕಂಕರ್ ಅವರು ನಿಡಿ ಮೂಲಿಕೆಯ ಒಂದು ಔಷಧವನ್ನು ಗಾಂಧಿಜಿಯವರಿಗೆ ಸೂಚಿಸಿರುವರು.

ಬಾಪೂಜಿಯವರ ದರ್ಶನವನ್ನು ಪಡೆದ ರಾಷ್ಟ್ರೀಯ ಸೇವಾದಳದ 50 ಮಂದಿ ಸ್ವಯಂ ಸೇವಕರಿಗೆ ರಚನಾತ್ಮಕ ಕಾರ್ಯದಲ್ಲಿ ತೊಡಗಬೇಕೆಂದು ಗಾಂಧೀಜಿಯವರು ಹೇಳಿರುವರು.

ಇನ್ನೂ ಸೆರೆಮನೆಗಳಲ್ಲಿರುವ ಮುಖಂಡರನ್ನು ಬಿಡುಗಡೆ ಮಾಡಬೇಕೆಂದು ಇಲ್ಲಿಯ ಮತ್ತು ಪರರಾಷ್ಟ್ರಗಳ ಮುಖಂಡರೂ ಪತ್ರಿಕೆಗಳೂ ಹೇಳುತ್ತಲಿವೆ. ಗಾಂಧೀಜಿ-ವೈಸರಾಯಿ ನಡುವೆ ಆದ ಪತ್ರವ್ಯವಹಾರವು ಪ್ರಸಿದ್ಧವಾದುದರಿಂದ ವೈಸರಾಯರಾದ ಲಾರ್ಡ್ ವೇವೆಲ್ಲರು ಇನ್ನುಳಿದ ರಾಜಕೀಯ ಸೆರೆಯಾಳುಗಳ ಸಾರ್ವತ್ರಿಕ ಬಿಡುಗಡೆ ಬಗ್ಗೆ ಆಸ್ಥೆಯಿಂದ ಪ್ರಯತ್ನ ಮಾಡುತ್ತಿರುವರೆಂದೂ ಸುದ್ದಿ ಇದೆ. ಜುಲೈ ತಿಂಗಳ ಅಂತ್ಯದೊಳಗಾಗಿ ಇನ್ನುಳಿದ ರಾಜಕೀಯ ಸೆರೆಯಾಳುಗಳ ಬಿಡುಗಡೆಯಾಗಬಹುದೆಂದು ಊಹಿಸಲಾಗುತ್ತಿದೆ. ಆದರೂ ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸದಸ್ಯರಲ್ಲೊಬ್ಬರಾದ ಶ್ರೀ ರಾಜೇಂದ್ರ ಪ್ರಸಾದರ ಬಂಧನದ ಅವಧಿಯು ಇನ್ನೂ ಆರು ತಿಂಗಳು ಹೆಚ್ಚಿಗೆ ಬೆಳೆಯಿತು.

ಬರುವ ತಿಂಗಳ ಪ್ರಾರಂಭಕ್ಕೆ ಬಾಪೂಜಿಯವರು ಆರೋಗ್ಯ ಸುಧಾರಣೆಗಾಗಿ ಪಂಚಗಣಿಗೆ ಹೋಗಿ ಅಲ್ಲಿ ಎರಡು ವಾರವಿದ್ದು ನಂತರ ವರ್ಧಾಕ್ಕೆ ಹೋಗುವರು. 'ಹು. ಗ.'

ನವಯೌವನ

ಕೊಟ್ಟು ಧಾತುಪುಷ್ಟಿಯನ್ನುಂಟುಮಾಡಿ, ವಿವಾಹಿತರಿಗೆ ಸಂತೃಪ್ತಿಯನ್ನೂ, ಪರಮಾನಂದವನ್ನೂ ಕೊಡಲು ಮದನಮಂಜರಿ ಮಾತ್ರೆಗಳು ದಿವ್ಯೌಷಧ.

ಡಬ್ಬಿ ಒಂದಕ್ಕೆ 1 ರೂಪಾಯಿ.

ಮದನಮಂಜರಿ ಫಾರ್ಮಸಿ,
184, ಚೈನಾಬಜಾರ್ ರೋಡ್,
ಮದ್ರಾಸ್.

ಮಡಿಕೇರಿ—ಡಾ. ಕೆ. ಜೆ. ಕರುಂಬಯ್ಯ,
ಸೋಮವಾರಪೇಟೆ—ಡಾ. ಜಿ. ಎ. ಪಯ್ಯ,
ವೀರಾಜಪೇಟೆ—ಎ. ಪಿ. ಸುಬ್ಬಪ್ಪಯ್ಯ

"ಟ್ರಾಪಿಕಲ್"

ಕಂಪೆನಿಯಲ್ಲಿ ನಿಮ್ಮ ಮೂಡುವದೇ

ಯೋಗ್ಯವೆಂದು ನಿಮ್ಮ **1944**ರ ತೀರ್ಮಾನವಾಗಲಿ

1943ರಲ್ಲಿ ಮೂಡಿದ ವಿಮಾ ಮೌಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಜೇರಿ:—ಹೊಸ ದಿಲ್ಲಿ.

ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:—

ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟಿ ಬ್ರಾಂಚ್ ಮೇನೇಜರ್, ಮಂಗಳೂರು.

25)

ನಂಬಿಕೆಯನ್ನು ಹುಟ್ಟಿಸತಕ್ಕ ಅಂಕೆ-ಸಂಖ್ಯೆಗಳು.

ಇಪ್ಪತ್ತೆಮೂರನೆಯ ಶ್ರೈವಾರ್ಷಿಕ ಮೌಲ್ಯ ಗಣನೆಯ ವರದಿಯು ಮರಣಸುಧಾರಿತ ಡಾಖಲೆಯನ್ನೂ ಕಡಿಮೆ ಖರ್ಚಿನ ಧಾರಣಶಯವನ್ನೂ ತೋರಿಸುತ್ತದೆ.

ಕಂಪೆನಿಯ ಜವಾಬ್ದಾರಿಕೆಗಳ ಮೇಲೆ ಶೇಕಡ ಮೂರರ ದರದಲ್ಲಿ ಬಡ್ಡಿಯನ್ನು ಗಣಿಸಿ
ಮೂರು ವರ್ಷಗಳ ಜಿಪ್ ಲಾಭ ರೂ 1,50,88,092. ವಿಮೋದಾರರ ಕ್ಷೇಮನಿಧಿಗೆ ರೂ. 54 ಲಕ್ಷ ಸೇರಿಸಿದೆ.

ಹಂಚಲ್ಪಟ್ಟ ಬೋನಸ್ಸುಗಳು. } ಹೋಲ್ ಲೈಫ್ ಪಾಲಿಸಿದಾರರಿಗೆ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ 12½ ರೂಪಾಯಿ.
ಎಂಡೋಮೆಂಟ್ ಪಾಲಿಸಿದಾರರಿಗೆ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ 10 ರೂಪಾಯಿ.

ಓರಿಯಂಟಲ್

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: ಭಾರತದಲ್ಲಿ-1874.] [ಮುಖ್ಯ ಖಜೇರಿ-ಬೊಂಬಾಯಿ.

9 ಬ್ರಾಂಚ್ ಆಫೀಸು-"ಓರಿಯಂಟಲ್ ಬಿಲ್ಡಿಂಗ್ಸ್" ಸೌತ್ ಪೇರೇಡ್, ಬೆಂಗಳೂರು,
ಇನ್ಸ್‌ಪೆಕ್ಟರ ಆಫೀಸು-ಕೆ. ಸದಾಶಿವರಾವ್ ರೋಡ್, ಮಂಗಳೂರು.

ಟೋಟೆನ್‌ಹಾಮ್ ರವರಿಗೆ
ಗಾಂಧೀಜಿಯವರ ಜವಾಬು.

1942-43 ರಲ್ಲಿ ಹಿಂದೂದೇಶದ ಆ ದೃಶ್ಯಕ್ಕೂ ನಡೆದ ಗಲಭೆ, ನಷ್ಟಗಳಿಗೆ ಕಾಂಗ್ರೆಸು ಜವಾಬ್ದಾರವು ಎಂಬುದಾಗಿ ಇಂಡಿಯಾ ಸರಕಾರದವನು ಪ್ರಕಟಿಸಿದ 725 ಪುಟದ ಪುಸ್ತಕಕ್ಕೆ ಮಹಾತ್ಮಗಾಂಧಿಯವರು 78 ಪುಟಗಳಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರವು ಈಗ ಪ್ರಕಟವಾಗಿದೆ. ಸರಕಾರದವನು ಗಾಂಧೀಜಿಯವರು ಜೈಲಿನಲ್ಲಿ ಉಪವಾಸ ವ್ರತಾರಂಭಿಸಿದ ನಾಲ್ಕು ದಿನಗಳಲ್ಲಿ ಅಂದರೆ 1943 ನೇ ಏಪ್ರಿಲ್ 13 ರಲ್ಲಿ ಮೇಲ್ಕಂಡ ಪುಸ್ತಕವನ್ನು ಪ್ರಸಿದ್ಧಿಪಡಿಸಿದರು. ಈ ಕಾರ್ಯದಲ್ಲಿನ ವಿಚಾರ ಮಹಾತ್ಮರು ಹೇಳಬೇಕಾಗಿಲ್ಲ. ಸರಕಾರದವರು ಈ ಉಪವಾಸದಿಂದ ಗಾಂಧಿಯು ಬದುಕಿದರೆ, ದೇಶದಲ್ಲಿ ಆಗಬಹುದಾದ ಗಲಭೆಯ ಮುಂದೃಷ್ಟಿಯಿಂದ ತಮ್ಮ ಕಾರಣಗಳನ್ನು ಕೊಟ್ಟು ಈ ಪುಸ್ತಕವನ್ನು ಆ ಸಂದಿಗ್ಧ ಸಮಯದಲ್ಲಿ ಪ್ರಸಿದ್ಧಿಪಡಿಸಿದರು ಎಂದು ಊಹಿಸುತ್ತಾರೆ. 'ಮಾಂಚೆಸ್ಟರ್ ಸೇಟೆನಲ್' ಪತ್ರಿಕೆಯ ಸಂಪಾದಕರಾದ ಮಿ. ಬಿ. ಜಿ. ಹಾರ್ನಿಮನ್‌ರವರು ಈ ವಿಚಾರ ಹೀಗೆ ಹೇಳಿದ್ದಾರೆ. 'ಗಾಂಧೀಜಿಯವರು ಜೈಲಿನಲ್ಲಿ ಉಪವಾಸವಿದ್ದಾಗ ಉಳಿಯುವದಿಲ್ಲವೆಂದು ಸರಕಾರವು ತಿಳಿದು ಅವಕ್ಕೆ ಬೇಕಾದ ಸಿದ್ಧತೆ ಮಾಡಿಕೊಂಡಿತ್ತು. ಆದರೆ ಗಾಂಧೀಜಿಯವರು ಜೀವಿಸಿ ಹೊರಬಂದ ಮೇಲೆ ಈ ಪುಸ್ತಕವು ಅವರಿಗಿಂತ ಡಾಕ್ಟರುಗಳನ್ನೂ, ಸರಕಾರವನ್ನೂ ದಿಗ್ಭ್ರಮೆಗೊಳಿಸಿದರು. ಸರಕಾರವು ಜಸ್ಟಿಸ್ ಪಕದಲ್ಲಿಹಳಿ; ಎಷ್ಟೇ ಆಸಕ್ತಿಯಿಂದ ಬ್ರಿಟಿಷರು ಭಾರತದ ಹಿಡಿತವನ್ನು ಬಲಪಡಿಸಲು ಯತ್ನಿಸಿದರೂ 'ಕ್ವಿಟ್ ಇಂಡಿಯಾ' ಪ್ರಯತ್ನವು ಫಲವಾಗುವದನ್ನು ಜಗತ್ತು ಕಣ್ಣಾರೆ ಕಂಡು ಮತ್ತೊಮ್ಮೆ ಸರಕಾರವನ್ನು ದಿಗ್ಭ್ರಮೆಗೊಳಿಸಬಹುದು.' ಸರಕಾರದ ಈ ಮಹಾಗ್ರಂಥವಿಲ್ಲಿಯ ವ್ಯಾಪ್ತಿಯು ದೋಷಾರೋಪಗಳನ್ನು ಹೆಕ್ಕಿ ಅಂಥಾ 77 ವಿಷಯಗಳಿಗೆ ಗಾಂಧೀಜಿಯವರು ಉತ್ತರವಿತ್ತಿದ್ದಾರೆ. ಸರಕಾರದ ಈ ಪ್ರಚಾರವು ಪೂರ್ತಿಯಾಗಿ ಜನ್ಮನಾಂತೆ ಆಗಿದೆಯೆಂದರು. ಒಂದೆಡೆ ಕಾಂಗ್ರೆಸಿಗರನ್ನು ಬಂಧಿಸಿ ಅವರ ಬಾಯಿಯನ್ನು ಮುಚ್ಚಿಸಿ ಇಂದರೆ ಪೋಲೀಸು ಬಲದ ಮೂಡಿಮತ್ತೊಂದೆಡೆ ಕೈದಿಯು ಮೇಲೆ ದೋಷಾರೋಪ ಹೊರಿಸಲು ಸರಕಾರವು ಈ ಪುಸ್ತಕದ ಮೂಲಕ ಒಂದು ಸ್ಥಿತಿ ಮಾಡಿಸುತ್ತಿದೆ ಎಂದಿರುವರು. ಕಾಂಗ್ರೆಸು 'ಕ್ವಿಟ್ ಇಂಡಿಯಾ' ಠರಾವನ್ನು ಏರಿಸಿ ಅದು ಬ್ರಿಟಿಷರ ಮೇಲಿನ ದ್ವೇಷದಿಂದಾಗಲೀ, ಯುದ್ಧದ ಈ ಸಂದಿಗ್ಧ ಸಮಯವನ್ನು ಉಪಯೋಗಿಸಿಕೊಳ್ಳಬೇಕೆಂಬ ಕಾರಣದಿಂದಾಗಲೀ ರೂಪಿತವಾದುದಲ್ಲ; ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗದಿದರೆ ಬ್ರಿಟಿಷರ, ಸಂಯುಕ್ತ ರಾಷ್ಟ್ರಗಳ ಮಾತ್ರ ಎಲ್ಲ ಜಿಲ್ಲೆ ಜಗತ್ತಿಗೆ ಅಪಾಯಕಾರಿಯಾಗುವದೆಂದು ಹೇಳಿರುವರು. ಬ್ರಿಟಿಷರು ಹಿಂದೂದೇಶವಲ್ಲಿರುವದರಿಂದಲೇ ಜಪಾನರು ಹಿಂದೂದೇಶಕ್ಕೆ ನುಗ್ಗಲು ಯತ್ನಿಸುತ್ತಿರುವರೆಂದೂ ಬ್ರಿಟಿಷರು ಒಲ್ಲಿಂದ ತೊಲಗಿದ ಪಜಪಾನರು ಒಂದು ವೇಳೆ ಹಿಂದೂದೇಶವನ್ನು ಹಾಗೆಯೆ ಬಿಟ್ಟುಬಿಡಲೂ ಸಾರು ಎಂದೂ ಅಂದಿರುವರು. 'ಕ್ವಿಟ್ ಇಂಡಿಯಾ' ಠರಾವನ್ನು ನೋಡಿ ಜಲಪು ಬ್ರಿಟಿಷರು ಶತ್ರುವೆಂದು ನನ್ನನ್ನು ಬರೆಯರೂ ಭವಿಷ್ಯದಲ್ಲಿ ಈ ಜನರೇ ನನ್ನನ್ನು ಅವರ ಮಿತ್ರರೆಂದು ಹೇಳಬೇಕಾಗುವದು. 'ಕ್ವಿಟ್ ಇಂಡಿಯಾ' ಬ್ರಿಟಿಷರಿಗೆ ಈ ಸಂಪರ್ಕದಲ್ಲಿ ತೊಂದರೆಕೊಟ್ಟು ಹಿಂದೂಸ್ಥಾನ ಸ್ವತಂತ್ರ ಆಗಲೆಂಬ ರೂಪಿತವಾದುದಲ್ಲ. ಆ ಯುದ್ಧದ ಒಂದು ಅವಶ್ಯಕತೆ. ಯುದ್ಧ ಪ್ರಯತ್ನಕಾರ್ಯದಲ್ಲಿ ಅದು ಪ್ರತಿಬಂಧ ಹೆಜ್ಜೆ' ಎಂದಿರುವರು. 'ಬ್ರಿಟಿಷರು ಈ ಯುದ್ಧದಲ್ಲಿ ಸೋಲಬೇಕೆಂದು ನನ್ನ ಆಶೆಯಿಲ್ಲ. ಅವರು ಖಂಡಿತಾ ಸೋಲಲಾರರು. ಅವರಲ್ಲಿ ಸೋಲನ್ನು ಜಯವಾಗಿ ಪರಿವರ್ತಿಸಿಕೊಳ್ಳುವ ಕೆಚ್ಚೆದೆಯಿದೆ. ಒಂದು ವೇಳೆ ಬ್ರಿಟಿಷರು ಮಲಯಾ, ಸಿಂಗಾಪುರಗಳನ್ನು ಬಿಟ್ಟು ಬಂದಂತೆ ಭಾರತವನ್ನು ಬಿಡಬೇಕಾಗಿ ಬಂದಿತೆಂದು ಊಹಿಸೋಣ. ಆಗ ನನ್ನ ಸ್ಥಿತಿಯೇನು? ಜಪಾನರು ಹಿಂದೂದೇಶವನ್ನು ಆಕ್ರಮಿಸುವದೆಂದರೆ ಚೈನಾ, ರಷ್ಯಾಗಳ ಆತ್ಮಹತ್ತಿರ ಬಂದಂತೆ! ಆದ್ದರಿಂದ ನಾನು ಈ ಮಹಾರಾಷ್ಟ್ರಗಳ ಪತನಕ್ಕೆ ಕಾರಣನಾಗಲಾರೆ. ಆದ್ದರಿಂದ ನಮಗೆ ಸ್ವಾತಂತ್ರ್ಯವೇಕು. ಈ ಕ್ಷಣವಲ್ಲಿಬೇಕು.' ಎಂದು ಹೇಳಿದ್ದಾರೆ. ಕಾಂಗ್ರೆಸು ಒಳಗೊಳಗೆ ಹಿಂಸಾಕಾರ್ಯದ ಸಿದ್ಧತೆ ಮಾಡುತ್ತಿತ್ತು ಎಂಬ ಆರೋಪವನ್ನು ಕಟುವಾಗಿ ರೀಕಿಸಿ, 'ಕಾಂಗ್ರೆಸಿನಲ್ಲಿ ಗುಪ್ತವಿನ ಕೆಲಸವಿಲ್ಲ. ಗುಟ್ಟು ಎಂಬುದು ಪಾಪವೆಂದು ಪರಿಗಣಿಸಲ್ಪಟ್ಟಿದೆ. ಕಾಂಗ್ರೆಸಿನವರ ತಾವು ಮಾಡಬೇಕಾದ ಕಾರ್ಯವನ್ನು ಬಹಿರಂಗವಾಗಿ ಪಡೆಯಲು ಎಂತಹ ಪರಿಣಾಮಕ್ಕೂ ಎದುರಾಗಲು ಸಿದ್ಧರಿದ್ದಾರೆ. ನನ್ನ ಅಹಿಂಸೆ ಎಂದಾಗ ಸಂದರ್ಭ ಸಾಧಿಸುವ ಆಕಸ್ಮಿಕ ಬಳಕೆಯೇ ಕೈಬಿಟ್ಟಾಗದ ಹೇಡಿಗಳ ಅಹಿಂಸೆಯಲ್ಲ. ಕೆಚ್ಚೆದೆಯ ಕಟ್ಟಾಳುಗಳ ಅಹಿಂಸೆ. ಹಿಂಸೆಯನ್ನು ಉಪಯೋಗಿಸಿ ನಮಗೆ ಪಡೆಯಿತ ಸ್ವಾತಂತ್ರ್ಯವನ್ನು ಪ್ರಜಾಕಾಲಕ್ಕಾದರೂ ನಮಗೆ ಬೇಕಿಲ್ಲ. ನಮ್ಮ ಅಹಿಂಸ ಶಕ್ತಿಯು ತಪಾದ್ದು. ಇಂದಲ್ಲಿ ಹಿಂಸೆ, ಗುಟ್ಟು ಇದೆಯೆಂದು ಪತ್ರಿಕೆಗಳವರು ತಾವೂಹಿಸಿಕೊಂಡಿರುವದನ್ನು ತಿದ್ದಿ ತಿರಿಬೇಕು. ಅವರಿಗೆ ನೋಡುವದೆಲ್ಲಿ ಅರಿಸಿನ ಬಣ್ಣದಲ್ಲಿ ಕಾಣುವಂತೆ ಈ ಸ್ವಚ್ಛ ಅಹಿಂಸೆಯಲ್ಲೂ ಹಿಂಸೆ ಕಂಡಿರಬೇಕಾ? ಎಂದಿರುವರು. 'ಇಡಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಬಳವಳದ ಸರ್ವ ಜವಾಬ್ದಾರಿಯನ್ನು ನನಗೆ ಕೊಟ್ಟಿದ್ದರೆ, ನಾನು ಚಳವಳವನ್ನು ಪ್ರಾರಂಭಿಸುವ ವಂತರಲಿಲ್ಲ. ಮತ್ತೊಮ್ಮೆ ಸಂಧಾನ ಪ್ರಯತ್ನ ಮಾಡುವ ದೃಷ್ಟಿಯಿಂದಲೇ ವೈಸರಾಯರನ್ನು ಕಾಣಲು ಅಪೇಕ್ಷಿಸಿದೆ. ಹೇಗಾದರೂ ಚಳವಳ ಆಗದಂತೆ ಮಾಡಲು ನನ್ನ ಪ್ರಯತ್ನವಿತ್ತು. ಆದರೆ ಸರಕಾರವು ಈ ಮೊದಲೇ ಕಾಂಗ್ರೆಸ್ ಸರ್ವ ಮುಂದಾಳುಗಳ ದಸ್ತಗಿರಿ ಮಾಡಿತು. ಹೀಗೆ ದಸ್ತಗಿರಿ ಮಾಡಬೇಕೆಂದು ಸರಕಾರವು ಮೊದಲೇ ಏರ್ಪಡಿಸಿತ್ತು. ಆದು ಈ ನಿಶ್ಚಯವನ್ನು ಮಾಡಿಕೊಂಡು ಸಮಯಕಾಯುತಿತ್ತು. ಹಾಗೆ ಆ ನಿಶ್ಚಯದಂತೆ ದಸ್ತಗಿರಿ ಮಾಡಿತು. ಇದರಿಂದ ದೇಶದಲ್ಲಿ ಕ್ಷೋಭೆಯೆದ್ದಿತು ತಮ್ಮ ಪ್ರೀತಿಯ ಮುಂದಾಳುಗಳನ್ನು ಉದ್ಯೋಗದ ಸಮಯದಲ್ಲಿ ಕಳಕೊಂಡ ಜನರು ತೊಚ್ಚಗೆದ್ದು ವಿನಾಶಕಾರಕ ಕಾರ್ಯಗಳನ್ನು ಕೈಕೊಂಡರು. ಈ ಕಾರ್ಯಗಳನ್ನು ಯಾವ ಕಾಂಗ್ರೆಸಿನವನೂ ಮಾಡಿರುವದಿಲ್ಲ. ಕಾಂಗ್ರೆಸಿನ ಬಗ್ಗೆ ಅನುಭೂತಿಯಿರುವವರು ಮೇರೆ ತಪ್ಪಿ ಕಾರ್ಯಮಾಡಿದ್ದಾರೆ. ಸರಕಾರದ್ದು ದರದಿಂದ ಈ ದಸ್ತಗಿರಿಗಳನ್ನು ಮಾಡಿದೆ ಇದ್ದಿದ್ದರೆ ದೇಶದಲ್ಲಿ ಯಾ ಗಲಭೆಯೂ ಆಗುತ್ತಿರಲಿಲ್ಲವೆಂದು ಕಾಂಗ್ರೆಸಿನವರೆಲ್ಲರೂ ಒಕ್ಕೊರಲಿನಿಂದ ಹೇಳಿದ್ದಾರೆ. ಕಾಂಗ್ರೆಸು ಈ ರೀತಿಗೆ ನೂಮಿತ ಚಳವಳಗಳಲ್ಲಿ ಹಿಂಸೆಯು ತಲೆದೋರಿದಾಗ ಚಳವಳವನ್ನೇ ನಿಲ್ಲಿಸಿದ ಉದಾಹರಣೆಗಳಿವೆ. ಚಳವಳದಲ್ಲಾದರೂ ಹಿಂಸೆ ತಲೆದೋರುವ ಸಂಭವ ಇರಲಿಲ್ಲ. ಸರಕಾರದ ಪ್ರಚೋದನೆ ಕೆಲವೇ ಇದಕ್ಕೆಲ್ಲಾ ಕಾರಣವಾಗಿದೆ.

ವ್ಯವಸಾಯಗಾರರಿಗೆ ಸುಸಮಯ.

ಗಟ್ಟಿ ಮತ್ತು ಕಂಪ್ಲೀಟಿಕ್ಕೆ ಬೇಕಾಗುವ ಉತ್ತಮ ದರ್ಜೆಯ ಹಗ್ಗಳು, ಗುಂಡಲಿ, ಮುಳ್ಳಗುಂಡಲಿ, ಪಕಾಸಿ, ಬಿಂತಿ, ಕೆಟ್ಟಿ, ಬಿಸಿ ಜಾಕು, ಕೂವರಿ, ಬೆಳುಬಿನ ಪಟ್ಟು, ಕೂಲಿ ಕಂಬಳಿ, ಸ್ಪೈಮಿರಿನ್ನಿಗೆ ಬೇಕಾದ ಸ್ಯಾಕಿಂಗ್ ಗೋಣಿ ಜಟ್, ಶಬ್ಬರ್‌ಜೋಡಿಸಿ ಮುಂತಾದವೆಲ್ಲಾ (Spar parts) ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತವೆ.

ಪಲ್ಪರ್ ಮಿಷನ್ ಬುತ್ತು ಸ್ಪೈಂಪುಗಳನ್ನು ರಿಪೇರಿ ಸಹ ಮಾಡುತ್ತೇವೆ.

ಧಾರಣೆ ವಗೈರೆ ಹಚ್ಚಿನ ಸಂಗತಿಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ನೀಕಂಠಾರಾಧ್ಯ ಅಂಡ್ ಕೊ.,
12-9 ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ.

EMPIRE OF INDIA

LIFE ASSURANCE COMPANY LIMITED

30) ESTABLISHED 1897

A FEW SALIENT FEATURES OF THE FORTY-SIXTH ANNUAL REPORT.

Total Income Rise da ... ...
Assurances in Force Exceed ....
Assets Exceed ....

Claims paid since the Company was established Exceed Rs. 7,33,00,000,

Head Office:-
Empire of India Life Building, BOMBAY.

APPLICATIONS FOR AGENCIES INVITED.

Branch Office:-
Diesel Loom Buildings, Residency Cross Road, BANGALORE.

BHUVANENDRA PRODUCTS LIMITED,

KATAPADI, (S. Kanara) DEPOT— Maharatha Galli, Hubli.

'ಭುವನೇಂದ್ರ' ಕಸ್ತೂರಿ ಮಿಶ್ರಿತ ಜಲಮಸೂರಿನ್ನು.

ಗರ್ಭಾಶಯದ ದೋಷದಿಂದ ಗರ್ಭಧಾರಣೆಯಾಗದಿರುವುದು, ಶರೀರವು ಅಶಕ್ತವಾಗಿರೋಣ, ಗರ್ಭಾಶಯದ ದೌರ್ಬಲ್ಯದಿಂದ ಗರ್ಭಪಾತವಾಗೋಣ, ಸೂಕಿಕರೋಗ, ಪುಷ್ಪಸ್ರಾವ ಸಂಬಂಧ ಪೀಡೆ ಇತ್ಯಾದಿಗಳು ಜಲಮೂಲಾಂಶವಿಲ್ಲದ ನೆಪ ಇವುಗಳಿಂದ ಗುಣಹೊಂದುವವು. ಗರ್ಭಧಾರಣೆಗೆ ಸಹಾಯ ಮಾಡುವುದು ವೀರ್ಯವೃದ್ಧಿ ಕೂಡಿ ದೇಹಕ್ಕೆ ದೊಡ್ಡ ಚೈತನ್ಯ ಕೊಡುವುದು.

ನಮ್ಮ ಕೊಡಗು ಏಜೆಂಟರು– (1) ಮುಂಗಳೂರು ಸೋರ್ಸ್, ಜನರಲ್ ಮರ್ಚೆಂಟ್ಸ್, ಮಡಿಕೇರಿ. (2) ಮುಂಗಳೂರು ಎಮ್ಯುನಿಕನ್ ಸ್ಟೋರ್ಸ್, ಮಡಿಕೇರಿ. (3) ಹಾ. ಬಿ. ಕೆ. ನಂಜುಂಡೇಶ್ವರ, ಮಡಿಕೇರಿ. (4) ಡಾ. ಪಿ. ಎಸ್. ನಾರಾಯಣಯ್ಯ, ಪೊನ್ನಂಪೇಟೆ. (5) ಡಾ. ಎಂ. ಬಿ. ಕಾರ್ಯಪ್ಪ, ಪೊನ್ನಂಪೇಟೆ. (6) ಎಸ್. ಶ್ರೀನಿವಾಸಯ್ಯ, ಭಾಗಮಂಡಲ. (7) ಕೆ. ಎಸ್. ರಾಜಶೇಖರಪ್ಪ & ಸನ್ಸ್, ಸೋಮವಾರಪೇಟೆ. (8) ಡಾ. ಎ. ಸಿ. ಸುಬ್ಬರಾಮಯ್ಯ, ವೀರಾಜಪೇಟೆ (9) ಡಾ. ಐ. ಆರ್. ಆಸ್ಪಣ್ಣ, L. I. M., ವೀರಾಜಪೇಟೆ. (10) ಡಾ. ಕೆ. ಜಿ. ಕರುಂಬಯ್ಯ, ಮಡಿಕೇರಿ. (11) ಕೂರ್ಗ್ ಪೀಪರ್ ಕೋ-ಆಪರೇಟಿವ್ ಸೊಸೈಟಿ, ವೀರಾಜಪೇಟೆ (12) ಶ್ರೀ ಎ ಎಸ್. ಮೂರ್ತಯ್ಯ, ಕ್ಯಾಶ್ ಮರ್ಚೆಂಟ್, ಶುಂಠಿಕೊಪ್ಪ (13) ಡಾ. ಯಸ್. ವೆಂಕಟರಂಗಾಚಾರ್ಯ, ಯಲ್. ಎ. ಯಂ. ಯಸ್. ಸೋಮವಾರಪೇಟೆ.

[ಭುವನೇಂದ್ರ ಪ್ರೋಡಕ್ಟ್ಸ್, ಲಿಮಿಟೆಡ್, ಕಟಪಾಡಿ, ದ. ಕನ್ನಡ.

J2-13 ಡಿಪೋ:– ಮರಾಠ ಗಲ್ಲಿ, ಹುಬ್ಬಳ್ಳಿ

ನಾಳೆ ಎಂಬುವುದಿಲ್ಲ!

ನಮ್ಮ ಲಜ್ಜ ಮುತ್ತಜ್ಜಂದಿರು ಯಾವಾಗಲೂ "ಶುಭಸ್ಯ ಶೀಘ್ರಂ" ಎಂದು ಹೇಳುತ್ತಿದ್ದರು. ನಿಮ್ಮ ಬಂಧುಗಳ ವರಿಗೂ ಮತ್ತು ಪ್ರೀತಿಗೆ ಪಾತ್ರರಾದವರಿಗಾಗಿ ನೀವು ಮಾಡಬಹುದಾದ ಉತ್ತಮ ಸೇವೆ ವಿಮೆ ಮಾಡುವುದೇ ಆಗಿರುವುದರಿಂದ ಅದನ್ನು ಈಗಲೇ ಮಾಡಬೇಕು. ಬುದ್ಧಿವಂತರು ಹರೆಯದಲ್ಲಿದ್ದು ಸರಿಯೂ ಉತ್ತಮ ಸ್ಥಿತಿಯಲ್ಲಿರುವಾಗಲೇ ವಿಮೆ ಮಾಡಿ ನಿಶ್ಚಿತ ಭವಿಷ್ಯವನ್ನು ಪಡೆಯುತ್ತಾರೆ. ಅವರು ತಮ್ಮ ಭವಿಷ್ಯವನ್ನು ನಾಳೆ ಎನಿಸಿ ನಂತರಿಗೆ ಪ್ರಾರಂಭ ಎಂದು ಕೈಬಿಗಿ ಒಪ್ಪಿಸುತ್ತಾರೆ.

ನಮ್ಮ ೫೦ ವರ್ಷಗಳ ಅನುಭವದಿಂದ ಇಂಡಿಯೂದ ಉತ್ತಮ ಕಂಪೆನಿಗಳಲ್ಲಿ ಒಂದಾಗಿ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿ.

ಇದನ್ನು ನಿಮಗೆ ಸಿಫಾರಸ್ಸು ಮಾಡಿಬಯಸುವು.

ಧಾರಾಳ ಶರತ್ತುಗಳ ಮೇಲೆ ಪ್ರತಿನಿಧಿಗಳಿಲ್ಲದ ಕೊಡಗಿನ ಪ್ರತಿಯೊಂದು ಏಜೆಂಟರು ಬೇಕಾಗಿದ್ದಾರೆ

ಸೊಚ್ಚಿಕಾರ್ ಬ್ರದರ್ಸ್ ಲಿ.—ಕಾರ್ಯಾಲಯ ಮಡಿಕೇರಿ.

ಬ್ರಾಂಚ್ ಇಂಡಿಯೊಳ್ಳೆ, ಹಿಂದಿ ಸಂಸ್ಥಾನಗಳಲ್ಲಿ ಸ್ಥಾಪಿಸಿಕೊಂಡು ಬರುವ ಜಾ. 337. ಕಾಂಟ್ರಾಕ್ಟ್ ಪೂರ್ತಿ ಮಾಡಿ ಕೊಡುವ

31) ಕಚೇರಿಗಳು ಮತ್ತು ಏಜೆನ್ಸಿಗಳು ಬಕ್ಷಿಣ ಇಂಡಿಯಾದಲ್ಲೆಲ್ಲಾ ಇವೆ.

ಕಸ್ತೂರ್‌ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ

ನಿಧಿಗೆ ಧನ ಸಹಾಯ ಮಾಡಿರಿ.

Edited, Printed and Published by P. A. Bellagpa at 'Kodagu' Press Mercara for 'Kodagu' Ltd.

ಕೊಡಗು

ಸಂಪಾದಕರು:—ಶ್ರೀ ಪಿ. ಐ. ಸೆಳ್ಳಪ್ಪ, ವಾರ್ಷಿಕ ಚಂದಾ ರೂ: ೩-೪-೦

ಸಂಪುಟ ೨೪ | ತಾರೀಕು ೨೦-೨—೧೯೪೪ನೇ ಶುಕ್ರವಾರ. | ಸಂಚಿಕೆ ೨

THE CANARA BANKING CORPORATION, Ltd.,

(Incorporated in British India with limited liability)

ESTD: 1906. **Head Office UDIPI**

Authorised Capital	...	₹ 25,00,000
Subscribed Capital	...	,, 16,00,000
Paid up Capital	...	,, 13,72,900
Reserves	...	,, 4,10,000

TOTAL WORKING CAPITAL—EXCEEDS ONE CRORE.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers.

2-6

ಧಾತು ವೃದ್ಧಿ ರಸಾಯನ ಎಂದರೆ ಝುಂಡು ಕಂಪನಿಯ (ZANDU)

"ರ್ಯಾಕ್ಯೋ - ಫಾಸ್‌ಫೋ - ಮಾಲ್ಟ್" ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ರಸಾಯನ | ಈ ಕಾಯಿಲೆಯವರಿಗೆ ಟಾನಿಕ್. ಆರೋಗ್ಯದಿಂದಿರುವವರಿಗೆ ಟಾನಿಕ್. ಧಾತುಕ್ಷೀಣತೆಯುಳ್ಳವರಿಗೆ ಟಾನಿಕ್. ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ – ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ಕಂಪನ್ಸಂಟುವಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನವಜೀವಕಶರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತಕಣಗಳನ್ನು ಹೆಚ್ಚಿಸುವ ಅಮೌಲ್ಯ ಔಷಧಗಳಿವೆ.

ಇದರಲ್ಲಿ ಇಲೆಕ್ಟರ್ ಸಾಸ್‌ಫೋಮಾಲ್ಟ್, ಹೆಮೋಗ್ಲೋಬಿನ್, ಸೋಡಿಯಂ ಗ್ಲಿಸರೊ ಫಾಸ್‌ಫೇಟ್ ಪೆಪ್ಸಿನ್, ಸಾಳ, ಮಾಲ್ಟ್ ಎಕ್ಸ್‌ಟ್ರಾಕ್ಟ್ ದ್ರಾಕ್ಷಾಸವ – ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ.

ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಶಾಪುಗಳಲ್ಲಿವೆ.

44 **ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,** ಗೋಖಲೆ ರೋಡ್ ಬಾಂಬೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿ., ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.] [1921ರಲ್ಲಿ ಸ್ಥಾಪಿತವಾದದ್ದು.

ಷೇರ್ ಬಂಡವಾಳ	1,00,000 0 0	ವಸೂಲಾದ ಕ್ಷೇಮನಿಧಿ	2,07,053	1	7
ವಸೂಲ್ಲಾದ ಶೇರ್ ಮೊಬಲಗು	89,310 6 0	ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	1,27,750	0	4
ಗಮೂಬಂದ ತೇವಣಾತಿ	1,97,957 0 10	ಕ್ರಿಸ್ತ ಡಿಪಾಜಿಟ್ಟು	3,371	12	4

ಈ ಬ್ಯಾಂಕಿನಿಂದ ಈ ದೇಶದ ಸಹಕಾರಿ ಸಂಘಗಳಿಗೇನೇ ಬೆಳ್ಳಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 30% ಕೊಡುವುದು. ನಿಯಮ ತೇವಣಾತಿಗಳಿಗೆ 1ವರ್ಷದಿಂದ 3 ವರ್ಷದವರೆಗೆ 2 ರೂ. 2. 3 ವರ್ಷಗಳಿಂದ 5 ವರ್ಷಗಳವರೆಗೆ 2½. 5 ವರ್ಷಗಳಿಂದ 10 ವರ್ಷಗಳ ವರೆಗೆ 3½. 10 ಮತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟುಗಳಿಗೆ (on dailybalance) ರೂ. 0-8-0. ತ್ರಿಕ್ಷ ಡಿಪಾಜಿಟ್ಟು ಹೊಂದಿಸಿಕೊಳ್ಳುವುದನ್ನು ಶತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟಾರರವರು ಲೆಕ್ಕ ಪರಿಶೋಧನೆ ಮಾಡುವರು.

ಪ್ರೆಸಿಡೆಂಟ್:— ಶ್ರೀ. ಐನಂಡ ಪಿ. ಕಾರ್ಯಪ್ಪನವರು.

ಮ್ಯಾನೇಜರ:— & ಸೆಕ್ರೆಟರಿ:— ಶ್ರೀ ಕೊಂಗೆಟ್ಟಿರ ಪಿ. ಅಪ್ಪಯ್ಯನವರು.

ತಾ. 1-3-1944. [(52-1)

ಗಾಂಧೀಜಿಯ ಭಾಷಣ.

ಗಾಂಧೀಜಿಯು ಅರಿಸಿದ ಸುಮಾರು 50 ಜನ ಮಹಾರಾಷ್ಟ್ರ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಭಾಗವಹಿಸಿ ಅಲ್ಲಿ ಮೂರತ್ತು ನಿಮಿಷಗಳ ಕಾಲ ಮಾತನಾಡಿದರು. ಸಭೆಯು ಡಾ. ದಿನ್ಷಾ ಮೆಹರವರ ಚಿಕಿತ್ಸಾಲಯದಲ್ಲಿ ನಡೆಯಿತು.

'ನಾನು ಬಂಧಿತನಾದ ಕೂಡಲೇ ಗವರ್ನಮೆಂಟಿಗೆ ತಿಳಿದೋದಂತಹ ನನ್ನ ಅಧಿಕಾರವು ಈಗ ನನ್ನ ಈ ಹಠಾತ್ತನೆಯ ಬಿಡುಗಡೆಯಿಂದ ಮೊನಚು ನನಗೆ ದೊರೆಯುವುದಿಲ್ಲ' ಎಂದು ಗಾಂಧೀಜಿ ಹೇಳಿದರು.

ಅವರು ಮುಂದುವರಿಯುತ್ತಾ ಹೀಗೆಂದರು:-'ಆಗಸ್ಟ್ ನಿರ್ಣಯದ ರೀತ್ಯಾ ಕಾನೂನುಭಂಗವನ್ನಾಚರಿಸಲು ನಾನು ನಿಮ್ಮನ್ನು ಇಲ್ಲಿ ಪ್ರತಿನಿಧಿಗಳಾಗಿ ಉದ್ದೇಶಿಸಿ ಭಾಷಣ ಮಾಡುತ್ತಿಲ್ಲ. ಸತ್ಯಾಗ್ರಹದ ಭಾಷೆಯಲ್ಲಿ ಹೇಳಬೇಕಾದರೆ ನಾನು ಬಂಧಿತನಾದ ಕೂಡಲೇ ಆ ಸ್ಥಾನದಿಂದ ಚ್ಯುತಿ ಹೊಂದಿದೆ. ನಾನೀಗ ಹೊರಕ್ಕೆ ಬಂದಿರುವುದು ನಿಮ್ಮ ಅಥವಾ ನನ್ನ ಶಕ್ತಿಯಿಂದಲ್ಲ, ನನ್ನ ಅನಾರೋಗ್ಯದಿಂದಲೇ ಹೊರಕ್ಕೆ ಬಂದಿದ್ದೇನೆ. ಸತ್ಯಾಗ್ರಹದಲ್ಲಿ ಅನಾರೋಗ್ಯವೆಂದರೆ ಅದು ನಾಚಿಕೆಗೇಡಿತನ. ಈಗ ನಾನು ನಿಮ್ಮಲ್ಲಿ ಯಾವೊಬ್ಬ ಸದಸ್ಯರಿಗಿಂತಲೂ ಹೆಚ್ಚಿನ ಸ್ಥಾನವನ್ನು ಕಾಂಗ್ರೆಸಿನಲ್ಲಿ ಹೊಂದಿಲ್ಲ. ಇನ್ನೂ ನ್ಯಾಯಬದ್ಧವಾಗಿ ಮೂತನಾಡುವುದಾದರೆ ನಾನು 4 ಆಣೆ ಕಾಂಗ್ರೆಸ್ ಸದಸ್ಯನಾಗಿಯೂ ಇಲ್ಲ. ಅನೇಕ ವರ್ಷಗಳ ಹಿಂದೆ ರಾಜನಾನೆಯಿತ್ತನಾದರೂ ನಿಮ್ಮ ಹೃದಯಮಂದಿರದಲ್ಲಿ ನನಗೊಂದು ಉನ್ನತ ಸ್ಥಾನವಿದೆ ಎಂದು ನನಗೆ ಗೊತ್ತು. ಆದರ ಮೇಲೆ ನಾನು ಏನು ಹೇಳಿದರೂ ಅದಕ್ಕೆ ಬೆಲೆ ಕೊಡುತ್ತೀರಿ. ನಾನೀಗ ಹೇಳುವುದು ವೈಯಕ್ತಿಕವಾದ ಅಭಿಪ್ರಾಯ. ಅದನ್ನು ನೀವು ಒಪ್ಪಬಹುದು, ಇಲ್ಲ ಬಿಡಬಹುದು.'

ಅಹಿಂಸೆ ಮತ್ತು ಸತ್ಯವು ತಮ್ಮ ಜೀವನಾಳದಲ್ಲಡಗಿರುವುದೆಂದೂ ಅದು ಕೇವಲ ಕಾಲಕ್ಕೆ ತಕ್ಕಂತೆ ಉಪಯೋಗಿಸುವ ಅಸ್ತ್ರವಲ್ಲವೆಂದೂ ಗಾಂಧೀಜಿ ಹೇಳಿ ಇತರ ಕಾಂಗ್ರೆಸಿನವರು ಏನು ಮಾಡಿದರು ಎಂಬುದನ್ನು ಕುರಿತು ಇಲ್ಲಿ ಪರಿಶೀಲಿಸುವ ಹಾಗಿಲ್ಲವೆಂದೂ ತಿಳಿಸಿದರು.

ಕಾಂಗ್ರೆಸಿಗೆ ಪ್ರಜಾಕೋಟಿಯ ಬೆಂಬಲವಿದೆ.

'ನಮ್ಮಲ್ಲಿ ಪ್ರತಿಯೊಬ್ಬರೂ ಈಗ ಏನು ಮಾಡಬೇಕು ಎನ್ನುವುದು ಬಹು ಮುಖ್ಯವಾದ ಅಂಶ. ಈಗಲೂ ಕೂಡ ವೈಯಕ್ತಿಕ ಸತ್ಯಾಗ್ರಹ ನಡೆಸಬಹುದೇ ಎಂದು ನಾನು ಆಲೋಚಿಸಿದರೂ ಕೂಡ ಕಾಂಗ್ರೆಸಿನ ಹೆಸರಿನಲ್ಲಿ ನಾನು ಹಾಗೆ ಮಾಡಲು ಸಮರ್ಥ. 1942 ನೇ ಆಗಸ್ಟ್ 9 ರಲ್ಲಿ ಕಾಂಗ್ರೆಸ್ ಮುಖಂಡರುಗಳ ಬಂಧನವಾದ ಕೂಡಲೇ ಪ್ರತಿಯೊಬ್ಬ ಕಾಂಗ್ರೆಸಿನವನೂ ತಾನೇ ಮುಖಂಡನಾದನು. ಅಹಿಂಸೆ ಮತ್ತು ಸತ್ಯದ ಮಾರ್ಗವನ್ನು ಬಿಡದೆ

ಆಶಾಭಗ್ನತೆಗೆ

ಕಾರಣವಿಲ್ಲ.

ಮತ್ತೇನನ್ನು ಬೇಕಾದರೂ ಮಾಡಲು ಅವನು ಬಾಧ್ಯ. ಕಾಂಗ್ರೆಸಿನ ನೀತಿಯನ್ನನುಸರಿಸುವವರೆಲ್ಲರೂ ಕೂಡ ಅವರು ಕಾಂಗ್ರೆಸಿನ ಸದಸ್ಯರಾಗಿರಲಿ ಅಲ್ಲದಿರಲಿ ಕಾಂಗ್ರೆಸಿನವರೆಂದೇ ತಿಳಿಯಬೇಕು-ಕೇವಲ ಕೆಲವು ಸಾವಿರ ಕಾಂಗ್ರೆಸ್ ಸದಸ್ಯರುಗಳ ಮೇಲೆ ಮಾತ್ರ ಕಾಂಗ್ರೆಸು ನಿಲ್ಲುವುದಾದರೆ ಅದು ಅಷ್ಟು ಬಲವಾದ ಸಂಸ್ಥೆಯಾಗಿರಲಾರದು. ಭಾರತದ ಜನಕೋಟಿ ಸಾಹಾರ್ದದ ಮೇಲೆಯೇ ಕಾಂಗ್ರೆಸು ನಿಂತಿದೆ. ಅಂದ ಮೇಲೆ ನಾವು ನಿರೀಕ್ಷಿಸಿದ ಅವಧಿಯೊಳಗೆ ನಮ್ಮ ಗುರಿ ಮುಟ್ಟಲಿಲ್ಲವೆಂಬ ಆಶಾಭಗ್ನತೆಗೆ ಯಾವ ಕಾರಣವೂ ಇಲ್ಲ. ಆತ್ಯಂತ ಕಷ್ಟ ಸ್ಥಿತಿಯಲ್ಲಿದ್ದರೂ ಕೂಡ ಮನುಷ್ಯನು ಪ್ರಯತ್ನ ಪಡಬೇಕು ಫಲವು ದೇವರ ಕೈಯ್ಯಲ್ಲಿರುವುದು, ನಮ್ಮ ಕೈಯ್ಯಲ್ಲಿಲ್ಲ. ನಮ್ಮಲ್ಲಿ ನಮಗೆ ವಿಶ್ವಾಸವಿದ್ದಲ್ಲಿ, ನಮ್ಮ ಗುರಿಯಲ್ಲಿ ವಿಶ್ವಾಸವಿದ್ದಲ್ಲಿ, ನಮ್ಮ ದಾರಿಯಲ್ಲಿ ವಿಶ್ವಾಸವಿದ್ದಲ್ಲಿ ನಮಗೆ ಆಶಾಭಗ್ನತೆಗೆ ಕಾರಣವೇ ಇಲ್ಲ.

'ಕೋಮುಮುಖರು ಸಮಸ್ಯೆಯೇನೋ ಇದ್ದೇ ಇದೆ. ಆದರೆ ಅವೆಲ್ಲಾ ಸೋದರ ಸೋದರರಲ್ಲಿಯ ಜಗಳವಂತೆ. ನಮ್ಮಲ್ಲಿ ಎಲ್ಲ ಕಡೆಗಳಿಂದಲೂ ದುಷ್ಟ ಶಕ್ತಿಗಳು ಮುತ್ತುತ್ತಿವೆ ಈ ಶಕ್ತಿಗಳು ಹಿಂದೆಂದಿಗಿಂತಲೂ ಈಗ ಬಲವತ್ತರವಾಗಿವೆ. ಆದರೆ ಆ ಕಾರಣದಿಂದಲೇ ನಿರಾಶಾಭಾವನೆಗಾಗಲೀ ಆಶಾಭಗ್ನತೆಗಾಗಲೀ ಕಾರಣವಿಲ್ಲ. ನಾನು ಯಾವಾಗಲೂ ಆಶಾಭಗ್ನ ಮನೋಭಾವ ತೊಂದಿಲ್ಲವೆಂದು ಹೇಳುತ್ತೇನೆ. ನಾವು ನಮ್ಮಲ್ಲಿ ವಿಶ್ವಾಸವನ್ನು ಎಂದಿನ ವರೆಗೆ ಕಳೆದುಕೊಳ್ಳುವುದಿಲ್ಲವೋ ಅಲ್ಲಿಯ ವರೆಗೆ ನಮ್ಮ ದೇಶಕ್ಕೂ ಒಳ್ಳೆಯದು. ಈ ಕುರಿತು ನಾನು ಬಹಿರಂಗ ಸಂದೇಶವನ್ನು ನಿಮಗೆ ಕೊಡುತ್ತಿದ್ದೇನೆ.

'ಇನ್ನು ಕೋಮುವಾರು ಸಮಸ್ಯೆ, ಆಹಾರ ಸಮಸ್ಯೆ, ರಾಜಕೀಯ ಬಿಕ್ಕಟ್ಟು ಇವುಗಳಿಗೆಲ್ಲಾ ಏನು ಹೇಳುವಿರಿ ಎಂದು ನೀವು ಕೇಳಬಹುದು. ಇದಕ್ಕೆಲ್ಲಾ ನಾನು ಉತ್ತರ ಕೊಡಲಾರೆ. ಭಾರತಕ್ಕೆ ನಿಜವಾದ ರಾಜಕೀಯ ಅಧಿಕಾರ ಬಂದ ಹೊರತು ಭಾರತ ಜನಕೋಟಿಯ ಕಷ್ಟ ನಿವಾರಣೆಯಾಗುವುದಿಲ್ಲ ಎಂದು ನಾನು ಹೇಳುತ್ತೇನೆ. ಕೆಲವು ಹಸಿವವರಿಗೆ ಊಟ ಹಾಕಿ ನಾನು ಅವರ ಪರಿಸ್ಥಿತಿ ನಿವಾರಿಸಲಾರೆ. ಬಂಡವಾಳಗಾರರ ಸ್ನೇಹವನ್ನು ನಾನು ಹೊಂದಿದ್ದೇನೆ. ಅವರಿಂದ ನಾನು ಧನದ ಲಾಭ ಪಡೆಯುವುದಕ್ಕಾಗಲೀ ಅಥವಾ ಅವರನ್ನು ಹೊಗಳುವುದಕ್ಕಾಗಲೀ ,ಅವರ ಸ್ನೇಹ ಬೆಳಸಿಲ್ಲ. ಅವರು ತಮ್ಮ ಸಂಪತ್ತಿನಲ್ಲಿ ಕೊಂಚ ಭಾಗವನ್ನಾದರೂ ಬಡವರ ಸಹಾಯಕ್ಕೆ ಉಪಯೋಗಿಸುವಂತೆ ಮಾಡುವುದೇ ನನ್ನ ಈ ಸತ್ಯದ ಉದ್ದೇಶ ಆದರೆ ಅವರ ಹಣವೂ ಕೂಡ ಜನಕೋಟಿಯ ಹಸಿವನ್ನು ತಪ್ಪಿಸಲಾರದು. ಅಖಿಲ ಭಾರತದಲ್ಲಿ ಹಬ್ಬಿರುವ ಈ ಉಪವಾಸಕ್ಕೆಲ್ಲಾ ಕಾರಣ? ಹಸಿವೆಯಿಂದ ನರಳುತ್ತಿದ್ದ ಜನರು ಈ ಯುದ್ಧ ಪರಿಸ್ಥಿತಿಯಲ್ಲಿ ಇನ್ನೂ ಹೆಚ್ಚು ಉಪವಾಸ ಮಾಡಬೇಕಾಗಿದೆ. ಬಂಗಾಳಾ ಕರ್ನಾಟಕ ಮತ್ತು ಇತರ ಕಡೆಗಳಲ್ಲಿ ಹೊಟ್ಟೆಗಿಲ್ಲದವರ ಕಷ್ಟದ ವರದಿಗಳು ಅತ್ಯಂತ ಹೃದಯ ವಿದ್ರಾವಕವಾಗಿವೆ.

'ಈ ಸ್ಥಿತಿಯ ನಿವಾರಣೆಯಾಗಬೇಕಾದರೆ ರಾಷ್ಟ್ರೀಯ ಸರಕಾರವೊಂದರಿಂದ ಸಾಧ್ಯ. ಭಾರತವು ಸ್ವತಂತ್ರವಾಗಿದ್ದರೆ ಜಪಾನಿನ ಮೇಲೆ ಯುದ್ಧ ನಡೆಯುತ್ತಿರಲಿಲ್ಲ. ಒಂದು ಪಕ್ಷ ಯುದ್ಧ ನಡೆದಿದ್ದರೂ ಇಷ್ಟಕ್ಕಿಂತ ಉತ್ತಮ ರೀತಿಯಿಂದ ಯುದ್ಧ ನಡೆಸಬಹುದಿತ್ತು.

'ನಾನು ಒಬ್ಬ ಯಜಮಾನನಿಂದ ಬೇರೊಬ್ಬ ಯಜಮಾನನ ಅಧೀನಕ್ಕೆ ಹೋಗಲು ಆಮೇಕ್ಷಿಸುವುದಿಲ್ಲ. ಎಲ್ಲ ಹೊರಗಿನ ಅಪೇಕ್ಷೆಯೂ ನನಗೆ ಬೇಡ. ಸ್ವಾತಂತ್ರ್ಯ ಬೇಕು.'

ಗಾಂಧೀಜಿಯು ನಂತರ ಗ್ರಾಮಾಂತರದಲ್ಲಿಯ ಕಷ್ಟ ಸ್ಥಿತಿಯನ್ನು ವರ್ಣಿಸಿ ನಗರಗಳ ಸುಖಲೋಲುಪರಿಗೆ ಗ್ರಾಮಾಂತರಗಳ ಶೋಷಣೆಯೂ ಒಂದೆಯೆಂದೂ, ಗ್ರಾಮಗಳ ಆರ್ಥಿಕ ಅಭಿವೃದ್ಧಿ ತನುಗೆ ಗೊತ್ತೆಂದೂ, ಮೇಲಿನ ಹೊರೆಯಿಂದ ಕೆಳಗಿರುವ ಗ್ರಾಮಗಳು ಉಸಿರುಗಟ್ಟುತ್ತಿವೆಯೆಂದೂ, ಮೇಲಿನ ಹೊರೆಯನ್ನು ನಿವಾರಿಸಬೇಕಾದುದು ಅಗತ್ಯವೆಂದೂ ಹೇಳಿದರು.

ಕೊನೆಯಲ್ಲಿ ಗಾಂಧೀಜಿಯು ಅಹಿಂಸೆಯು ಅಪ್ರತಿಮ ಬಲವನ್ನು ತಿಳಿಸಿ ಸತ್ಯಾಗ್ರಹಿಗೆ ಧನದ ಆಶೆಯೂ, ಅಧಿಕಾರದ ಆಶೆಯೂ ಬೇಡವೆಂದೂ ಹೇಳಿ ಬಾಸ್ಯಧರ್ಮತ್ಯಾಗ ಮತ್ತು ಕಳ್ಳ ಸಾಕ್ಷ್ಯದ ಆಶೆಯೂ ಅವನ ಆಧಾರವೆಂದು ಹೇಳಿ 'ನಮ್ಮ ಮಾರ್ಗದಲ್ಲಿ ನಮ್ಮ ನಮ್ಮ ಗುರಿಯಲ್ಲಿ ಪೂರ್ಣ ವಿಶ್ವಾಸವನ್ನಿಡಬೇಕೆಂಬುದೇ ಈ ಭಾಷಣದ ಮುಖಾಂತರ ನಾನು ಕೊಡುವ ಸಂದೇಶ' ಎಂದು ತಿಳಿಸಿದರು.

ನವರತ್ನ ಪೌಡರ್

ಕೂಟ್ಟು ಭಾತಿಪುಸಿಯನ್ನುಂಟು ಮಾಡಿ, ಪರಾಹಿಕ ಸಂತೃಪ್ತಿಯನ್ನೂ ಪ್ರಸನ್ನತೆಯನ್ನೂ ಕೊಡಲು ಮಂಡಿಸಲಾಯಿತು ಮಾತ್ರೆಗಳು ದಿವ್ಯೌಷಧ.

ಪಬ್ಲಿಕ್ ಬಾಟಲಿಗೆ 1 ರೂಪಾಯಿ.

ಮಂಡಿಸಲಾಯಿತು ಫಾರ್ಮಸಿ,
184, ಬೈಗಾಬಜಾರ್ ರೋಡ್,
ಮದ್ರಾಸ್.

ಮಂತ್ರಿಗಳು—ಡಾ. ಕೆ. ಜಿ. ಕರುಂಬಯ್ಯ,
ಸೋಮವಾರಪೇಟೆ—ಡಾ ಜಿ ಎ ಐಯ್ಯ,
ವೀರರಾಜಪೇಟೆ—ಎ ಸಿ. ಬುಬ್ಬಮ್ಮಯ್ಯ

ವೀರರಾಜೇಂದ್ರಪೇಟೆಗೆ
'ಕೊಡಗು' ವಿಜೆಂಟರು,
ಕೆ. ಕೆ. ಯಂ. ಸುಬ್ರಾಯನವರು.

ಯುದ್ಧ ಗದ್ದಿ.

ಲೇ: 'ಗುಪ್ತ'

ಫ್ರಾನ್ಸಿನ ಯುದ್ಧ ಪ್ರಾರಂಭವಾಗಿ ನಾಲ್ಕು ವರ್ಷಗಳು ಸಂದುಹೋದವು. ಈ ಅವಧಿಯಲ್ಲಿ ಮಿತ್ರರು ಫ್ರಾನ್ಸಿನಲ್ಲಿ ಬಾಂಬುಗಳನ್ನು ನಿಂತಿದ್ದಾರೆ. ಸುಮಾರು 125 ಮೈಲುಗಳ ಉದ್ದದ ಸಮುದ್ರ ಕರಾವಳಿ ಅವರ ವಶವಾಗಿದೆ. 22 ಮೈಲುಗಳಷ್ಟು ಒಳಪ್ರದೇಶಕ್ಕೆ ನುಗ್ಗಿದ್ದಾರೆ. ಸುಮಾರು 1100 ಚದರ ಮೈಲುಗಳಷ್ಟು ಪ್ರದೇಶವನ್ನು ಆಕ್ರಮಿಸಿದ್ದಾರೆ. ಈ ವಿಸ್ತೀರ್ಣದಲ್ಲಿ ಅವರಿಗೆ ದೊರೆತ ಪ್ರಧಾನ ನಗರವೆಂದರೆ ಶೆರ್‌ಬರ್ಗ್. ಜರ್ಮನರು ಶೆರ್‌ಬರ್ಗನ್ನು ಬಿಡಬೇಕಾದರೆ ಅದನ್ನು ಸ್ಮಶಾನಸದೃಶವಾಗಿ ಮಾಡಿರುವರಂತೆ. ಈ ನಗರದಿಂದ ಮಿತ್ರರು ಉಪಯೋಗ ಹೊಂದಲಾರದೆಂದು ಜರ್ಮನರು ಹೇಳುತ್ತಾರೆ. ಇದೀಗ ಮಿತ್ರರ ಸೇನಾನಿ ಮಾಂಟಗೋಮರಿಯವರು ಭಯಂಕರ ಧಾಳಿ ಕೈಕೊಂಡಿರುವರು. ಬೆಲ್ಲಿಯ ಹತ್ತಿರ ಘನತರ ಸಂಗ್ರಾಮ ನಡೆಯುತ್ತಿದೆ. ಜರ್ಮನರ ಪ್ರಸಿದ್ಧ ಸೇನಾನಿ ಜನರಲ್ ರೋಮೆಲ್ಲನು ತಾನೇ ಸ್ವತಃ ಮುಖ್ಯ ಸೇನಾನಿಯ ಜವಾಬ್ದಾರಿಯನ್ನು ವಹಿಸಿಕೊಂಡಿರುವನು. ತನ್ನ ವಶವಿರುವ ಹೊಸ ಸೇನೆಗಳನ್ನು ಒಂದೊಂದಾಗಿ ರಣರಂಗಕ್ಕೆ ಬಿಡುತ್ತಿರುವನಂತೆ. ಅತ್ತ ಜರ್ಮನರು ರಷ್ಯಾರಣಾಂಗಣದಿಂದ ಒಂದು ಸೇನೆಯನ್ನು ಹಿಂಬಲ್ಕೆ ತೆಗೆಸಿರುವರೆಂಬ ವರ್ತಮಾನ ಬಂದಿದೆ. ಆದರೆ ಈ ಹೊತ್ತಿಗೆ ಈಗ ನಂಬುವದು ಕಷ್ಟವಿಲ್ಲ. ಫ್ರಾನ್ಸಿನ ರಣರಂಗ ಬಹಳ ವೇಗಭರಿತವಾಗಿದೆ. ಮಿತ್ರರು ಪ್ರತಿ ಹೆಜ್ಜೆ ಮೆಜ್ಜೆಗೂ ಅಸಹನಾ ಕ್ಯಾಗದಿಂದ ಪ್ರಯತ್ನ ಮಾಡಬೇಕಿದೆ. ಮಿತ್ರರು ಫ್ರಾನ್ಸಿನಲ್ಲಿ ಬಂದಿಳಿದಲ್ಲಿಂದ ಈ ವರೆಗೆ 40000 ಜರ್ಮನರನ್ನು ಸೆರೆಹಿಡಿದಿರುವರಂತೆ.

ಈ ಸಂಧ್ಯೆ ರಷ್ಯಾವು ಮುಂದರಿದು ಫಿನ್‌ಲೆಂಡಿನ ಮೇಲೆ ಬಿದ್ದಿದೆ. ಫಿನ್‌ಲೆಂಡು ಜೈರ್ಮನಿಯಿಂದ ರಷ್ಯನನ್ನು ಎದುರಿಸಿದೆ. ತನ್ನ ಸ್ನೇಹಿತನಾದ ಫಿನ್‌ಲೆಂಡಿಗೆ ಸಹಾಯಕ್ಕೆ ಜರ್ಮನಿಯು ನಿಂತಿದೆ. ಇನ್ನೆರಡು ರಾಷ್ಟ್ರಗಳೊಳಗೆ ಒಪ್ಪಂದವಾಗಿರುವುದಿಲ್ಲ. ಫಿನ್‌ಲೆಂಡಿನ ಪಶ್ಚಿಮದ ಆಲ್ಯಾಂಡ್ ದ್ವೀಪಗಳನ್ನು ಆಕ್ರಮಿಸಿದೆ. ರಷ್ಯಾದಲ್ಲಿ ಜರ್ಮನರು ಆಪೋಪ ನಿಲ್ಲತೊಡಗಿದೆ. ಜರ್ಮನರನ್ನು ಹಿನ್ನೆಟ್ಟಿಸಿ ರಷ್ಯಾಗಡಿ ದಾಟಿಸುವದರಲ್ಲಿದ್ದಾರೆ. ಬಿಳಿ ರಷ್ಯಾದಲ್ಲಿ ಈಗ ಅತ್ಯುಗ್ರ ಕದನವಾಗುತ್ತಿದೆ. ಈ ಭಾಗ ಒಂದರಲ್ಲೇ ರಷ್ಯನರು ಸುಮಾರು 200000 ಜರ್ಮನ್ ಸೈನಿಕರನ್ನು ಸುತ್ತುಗಟ್ಟಿ ನಷ್ಟಪಡಿಸಿದ್ದಾರೆ. ರಷ್ಯನರು ಮಿನ್ಸ್ಕ್ ನಗರವನ್ನು ಆಕ್ರಮಿಸಿರುವರು. ಜರ್ಮನರ ಈ ಹಿನ್ನಡೆಗೆ ಕಾರಣವನ್ನು ಕೊಡುತ್ತಾ ಜರ್ಮನ್ ಪ್ರಧಾನ ಮಂತ್ರಿ ಗೇಬಲ್ಸನು ಹೀಗೆ ಹೇಳುತ್ತಿದ್ದಾನೆ. 'ನಾವು ಹಿನ್ನಡೆಯುತ್ತಿರುವದು ನಮ್ಮ ಶಕ್ತಿಕುಂದಿ ಅಲ್ಲ. ನಾವು ಆಕ್ರಮಿಸಿದ ರಷ್ಯನ್ ಪ್ರದೇಶಗಳನ್ನು ವ್ಯವಸಾಯ ಮಾಡುವದು ಬಹು ಪ್ರಯಾಸದ ಕೆಲಸ. ಆದಕ್ಕಾಗಿ ಅಷ್ಟೆನ್ನೂ ರಷ್ಯಾರ್ ರಸ್ತೆಯನ್ನು ಜರ್ಮನರು ಕ್ಷಾರಿಸಿ ಅ ರಸ್ತೆಯ ತಕ್ಕಡೆಗಳಲ್ಲಿ ಚಟುವಟಿಕೆ ವಹಿಸಿದ್ದಾರೆ. ಇತ್ತೀಚೆಗೆ ಮಿತ್ರರು ಮುಂದರಿದು ಉಕ್ರೈಲನ್ನು ವಶಪಡಿಸಿಕೊಂಡಿರುವ ವಾರ್ತೆ ಬಂದಿದೆ. ಉಕ್ರೈಲ್ ಜರ್ಮಾನರ ಶಕ್ತಿಯ ಒಂದುಕೇಂದ್ರವಾಗಿತ್ತು. ಉತ್ತರ ಬರ್ಮಾದಲ್ಲಿ ಜನರಲ್ ಸ್ಟಿಲ್‌ವೆಲ್ಲರ ಸೇನೆಗಳು ಮೊಗಂಗನ್ನು ವಶವಡಿಸಿಕೊಂಡ ಕಾರಣ ಮಿಟ್ಕಿಯೊನಕ್ಕೆ ದಾರಿ ತೆರೆದಂತಾಯಿತು. ಮಿಟ್ಕಿಯೊನವು ಜಪಾನರ ಶಕ್ತಿಯುತವಾದ ಸೇನೆಯಿದೆ. ಇದನ್ನು ಮಿತ್ರರು ವಶಪಡಿಸಿಕೊಂಡರೆ ಉತ್ತರ ಬರ್ಮಾವು ಮಿತ್ರರ ಹಿಡಿತಕ್ಕೆ ಒಳಪಟ್ಟಂತಾಗುವದು.

ಇತ್ತೀಚೆಗೆ ಜರ್ಮನರ ಶ್ವೇತ ವಿಮಾನಗಳು (ವೈಮಾನಿಕರಿಲ್ಲದ) ಇಂಗ್ಲೆಂಡಿನ ಮೇಲೆ ದಿನವಹಿ ಬಾಂಬುಹಾಕಿ ವಿಶೇಷ ನಷ್ಟಪಡಿಸುತ್ತಿರುವವು. ಇದನ್ನು ಯಶಸ್ವಿಯಾಗಿ ಎದುರಿಸುವ ಹೊಸ ಮಾರ್ಗವನ್ನು ಇನ್ನೂ ಕಂಡುಹಿಡಿದಿರುವದಿಲ್ಲ. ಮಿತ್ರರಿಗೆ ಎಲ್ಲಾ ರಣರಂಗದಲ್ಲಿ ಜಯವಾಗುತ್ತಿದ್ದರೂ ಈ ಶ್ವೇತ ವಿಮಾನಗಳ ಕಿರುಕುಳವು ಬಹು ಮಟ್ಟಿನ ತೊಂದರೆಕೊಡುತ್ತಿದೆ. ಈ ವಿಮಾನಗಳು ಜನರಿಗೆ [illegible] ಕೊಡಬಹುದು. ಅವರೆ ಯಾವ ಪ್ರದೇಶವನ್ನೂ ಆಕ್ರಮಿಸಲಾರವೆಂದು ಮಿತ್ರರು ಧೈರ್ಯಹೇಳಿಕೊಳ್ಳುತ್ತಿದ್ದಾರೆ.

ಇಂಡಿಯದಲ್ಲಿಯ 'ವೈಸ್ [illegible] ಪತಿ ಕೆಸರ್‌ಲಿಂಗನ ಪ್ರಯತ್ನವೂ ಫಲಕಾರಿಯಾಗಿದುವಲ್ಲ. ಅವರು ಹಿಮಾಲಯ ಪರ್ವತಶ್ರೇಣಿಯ 'ಗೋಧಿಕ್' ಲೈನ್' ಕಡೆ ಬರುತ್ತಿದ್ದಾರೆ. ಈ ಲೈನು 120 ಮೈಲುಗಳ ಉದ್ದವಿದೆ. [illegible] ಇಟಲಿಯ ಅಧ್ವಾನವಾಗಿ ಈ ಗೋಡೆ ಕಟ್ಟಲಾಗಿದೆ. ಜಪಾನರು ಜೀವ್ಟ ಪ್ರಯತ್ನಗಳಿಂದ ಈ ಗೋಡೆಗೆ ಬಿಂಕೆಗೆಡುಕೊಳ್ಳುತ್ತಿದ್ದಾರೆ. [illegible] ಸೇನೆಗಳು ಇಟಲಿಯ ಪ್ರಾಮುಖ್ಯ ಬಂದರುಗಳಲ್ಲೊಂದಾದ ಸೆನಾಹರ್ಬರ್‌ನಿಂದ 20 ಮೈಲುಗಳ ದೂರದವರೆಗೆ ಬಂದಿದ್ದಾರೆ. [illegible] ಕಾಳಗದ ನಂತರ ಇಟಲಿಯಲ್ಲಿ ಹೆಚ್ಚು ಬಿಡಾಮಾಡಿ ಯುದ್ಧವಾಗಿಲ್ಲ. [illegible] ಇಟಲಿಯಲ್ಲಿ ಭಯಂಕರ ಯುದ್ಧ ನಡೆಯುವ ಗೋಥಿಕ್ ಲೈನಿನಲ್ಲಿ ಜರ್ಮನರು ನಿಂತು ಮಿತ್ರರಿಗೆ ತೀವ್ರ ಪ್ರತಿಘಟನೆಯನ್ನು ಕೊಡುತ್ತಿರುವರು.

ಬರ್ಮಾಗಡಿಯಲ್ಲೂ ಮಿತ್ರರಿಗೆ ಜಯವಿದೆ. ಈ ಭಾಗದ ಯುದ್ಧ ಪ್ರಾರಂಭವಾಗಿ ನಾಲ್ಕು ತಿಂಗಳುಗಳಾದವು. ಕಳೆದ ಮೂರು ತಿಂಗಳುಗಳಿಂದ ಇಂಫಾಲ್ ನಗರವು ಜಪಾನರಿಂದ ಆವರಿಸಲ್ಪಟ್ಟು ನಗರಕ್ಕೆ ಬೇಕಾದ ಸರಬರಾಯಿ ಕಷ್ಟದಿಂದ ಆಕಾಶಮಾರ್ಗವಾಗಿ ವಿಮಾನಗಳ ಮೂಲಕ ಬರಬೇಕಿತ್ತು. ಆದರೆ ಈ ವಾರದಿಂದ ನೆಲಮಾರ್ಗವು ತೆರೆಯಲ್ಪಟ್ಟಿದೆ. ಜಪಾನರು ಹಿಮ್ಮೆಟ್ಟಿಸಲ್ಪಟ್ಟಿದ್ದಾರೆ. ಆದರೂ ಜಪಾನರ ಗಂಡಾಂತರ ತಪ್ಪಿಲ್ಲವೆಂದು ಹೇಳಲಾಗುತ್ತಿದೆ. ಇಂಫಾಲಿನ ದಕ್ಷಿಣದ ಬಿಶನ್‌ಪುರ ಭಾಗದಲ್ಲಿ ಶತ್ರುಗಳು ಬಲವಾಗಿ ತಳವೂರಿದ್ದಾರೆ. ಬಿಶನ್‌ಪುರ-ಸಿ

ಕೊಡವ ವಿದ್ಯಾ ನಿಧಿ.

1944ನೇ ಜೂನ್ ತಿಂಗಳಲ್ಲಿ ಕೊಡವ ದೇಶಾಭಿನಂದನಿಗಳಿಂದ ಸಹಕಾರ ಸಂಘ ಮತ್ತು ಇತರ ಸಂಘಗಳಿಂದ ಕೇಂದ್ರ ಮಂಡಳಿಯ ಖಜಾಂಚಿ [illegible] ವರ್ಷಾನುವಂತಿಗೆ, [illegible] ಸಾಲ ಮರುಪಾವತಿಯ ವಿವರ

ವಾರ್ಷಿಕ ಚಂದ ಒಂದು ರೂಪಾಯಿ.

[illegible] ಉಪಕೇಂದ್ರ ಮಂಡಳಿಯ [illegible] 18 0 0
ಬಿಟ್ಟಂಗಾಲ ಶ್ರೀ ಸಂಘದಿಂದ 10-0-0
ಬಿಟ್ಟಂಗಲ ಗ್ರಾಮಸ್ಥರಿಂದ 7-0-0
ಚೆಂಬೆಬೆಳ್ಳೂರು ಸಹಕಾರಿ ಸಂಘದಿಂದ 10-0-0
[illegible] ಮೈತ್ರಿ ಸಹಕಾರಿ ಬ್ಯಾಂಕ್ 10-0-0
[illegible] ಕೊಡಗು ವಿದ್ಯಾರ್ಥಿ ಸಂಘ (ಶ್ರೀ [illegible] ಮೂಲಕ) [illegible]
[illegible] ಗಳಾದ ಸಿದ್ದೇಶ್ವರ [illegible] 5-0-0 ಶ್ರೀ ಚೆರಿಯಪಂಡ ಚಿಣ್ಣಪ್ಪನವರಿಂದ 5-0-0 ಶ್ರೀ [illegible] ಸುಬ್ಬಯ್ಯನವರಿಂದ 11-0-0 ಶ್ರೀ [illegible] ಕೆ. ಕಾರ್ಯಪ್ಪನವರಿಂದ 2-0-0 [illegible] ಮಂಡಲದವರಿಂದ 5-0-0 ಶ್ರೀ ಚಂಡ ಶಾವೇರಿಯಪ್ಪ (ಕುಟ್ಟ) 5-0-0 ಆರ್ಯಪತ್ರಗಳ ಮೂಲಕದಿಂದ 6 [illegible], ನೆಲ್ಲಿಮಾಕ್ಕಳ ಕರುಂಬಯ್ಯ (ಫ್ರೈಡೇಪೇಟೆ) 3-0-0 ಫ್ರೈಡೇಪೇಟೆ ಗಾರೆಸ್ಟ್ ಸಿಬ್ಬಂದಿಗಳಿಂದ (ಶ್ರೀ ಕರುಂಬಯ್ಯನವರ ಮೂಲಕ) 8-8-0

ಸಾಲ ಮರುಪಾವತಿ- ಶ್ರೀಗಳಾದ ಮನೆಯಪಂಡ ಪೊನ್ನಪ್ಪ (ರೇಂಜರು) 5-0-0 ಪಡಿಕೇರಿಯಂಡ ಕುತಾಲಪ್ಪ (ಮೈಸೂರು) 10-0-0 ಕಂಬೀರಂಡ ಪೊನ್ನಮ್ಮ ಮುತ್ತಣ್ಣ 10-0-0 ಕೊತಂದೇರ ಟಿ. ಸೋಮಯ್ಯ 10-0-0

ಪಟ್ಟಮಾಡ ಎನ್. ಅಪ್ಪಣ್ಣನವರಿಂದ 25-0-0.

ಸಿ. ಎಸ್. ಮಂದಣ್ಣ
ಗೌ. ಕಾರ್ಯದರ್ಶಿ,

ಕೊಡಗು

ತಾ. ೭-೭-೧೯೪೪ ಶುಕ್ರವಾರ

ಕಾಗದ ನಿಯಂತ್ರಣ.

ಕಳೆದ ಜೂನ್ ತಾರೀಕು 12 ರಲ್ಲಿ ಇಂಡಿಯಾ ಸರಕಾರದವರು ಕಾಗದದ ವಿನಿಯೋಗವನ್ನು ಕಡಿಮೆಮಾಡುವ ಮಿತವ್ಯಯ ನಿಯಂತ್ರಣ ಹುಕುಂವೊಂದನ್ನು ಜಾರಿಯಲ್ಲಿ ತಂದಿರುವರು. ಇದರ ಪ್ರಕಾರ 1943-44 ರಲ್ಲಿ ಬಳಸುವ ಕಾಗದದಲ್ಲಿ ನೂರಕ್ಕೆ 70 ರಂತೆ ಕಡಿಮೆ ಮಾಡಬೇಕು. ಉದಾಹರಣೆಗೆ 1943-44 ರಲ್ಲಿ ಒಂದು ಪತ್ರಿಕೆಯು ಹತ್ತು ಪುಠಗಳನ್ನು ಪ್ರಕಟಿಸುತ್ತಿದ್ದರೆ ಜೂನ 12 ರ ನಂತರ ಕೇವಲ 3 ಪುಠಗಳನ್ನು ಮಾತ್ರ ಕೊಡಬೇಕು. ಮುದ್ರಕರಿಗೂ ಇದು ಅನ್ವಯಿಸುತ್ತದೆ. 1943 ರಲ್ಲಿ ಕಳುತ್ತಿದ್ದ ಕಾಗದದ 100 ಕ್ಕೆ 30 ರಷ್ಟು ಮಾತ್ರ ಅವರು ಬಳಸಬಹುದು. ಇಂಡಿಯಾ ಸರಕಾರದ ಈ ಹುಕುಂ ಒಂದೇ ಸಮನೆ ತಡೆದಿಂದ ದೇಶದ ಮುದ್ರಣ, ಪ್ರಕಾಶನ ಮತ್ತು ಪತ್ರಿಕಾವ್ಯವಸಾಯದ ಬೇರನ್ನೇ ಕತ್ತರಿಸಿದೆಯೆಂದರೆ ಉಗ್ರ ಠೀಕೆಯಾಗಲಾರದು. ಪರದೇಶದಿಂದ ಕಾಗದ ಸಮಾರಾಯಿ ಬರುತ್ತಿಲ್ಲ, ದೇಶದೊಳಗೆ ಉತ್ಪತ್ತಿಯಾಗುವ ಕಾಗದವು ಅಂತರಿಕ ಖರ್ಚಿಗೆ ಸಾಕಾಗದ ಕಾರಣ ಈ ಆಜ್ಞೆಯನ್ನು ಹೊರಡಿಸಿರುವದಂತೆ. ಈ ರೀತಿಯ ಆಜ್ಞೆಯಿಂದ ಅನೇಕ ವೃತ್ತಪತ್ರಿಕೆಗಳು, ಮುದ್ರಣಾಲಯಗಳು ಮಣ್ಣುಗೂಡುವವು.

ಕೊಡಗಿನಲ್ಲಿ ಮುದ್ರಣ, ಪ್ರಕಾಶನ, ಪತ್ರಿಕಾವ್ಯವಸಾಯವು ಬಹು ಹಿಂದುಳಿದಿದೆ. ಒಟ್ಟಾಗಿ ದೇಶದಲ್ಲಿ ನಾಲ್ಕೈದು ಮುದ್ರಣಾಲಯಗಳಿವೆ. ಕೇವಲ ಎರಡೇ ವಾರಪತ್ರಿಕೆಗಳಿವೆ. ಇಂಥಾ ಹಿಂದುಳಿದ ನಾಡಿನಲ್ಲೂ ಈ ಆಜ್ಞೆಯನ್ನು ಜಾರಿಯಲ್ಲಿ ತರುವದಾದರೆ ಕೊಡಗಿನ ಪತ್ರಿಕಾ ವ್ಯವಸಾಯಕ್ಕೆ ಧಕ್ಕೆ ಬರುವದರಲ್ಲಿ ಸಂಶಯವಿಲ್ಲ. ಇಲ್ಲಿಯ ಪತ್ರಿಕೆಗಳಿಗೆ ನ್ಯೂಸ್‌ಪ್ರಿಂಟ್ ಕಾಗದದ ಅನುಕೂಲತೆ ದೊರೆಯದೆ ಹಿಡ್ಡೂಪಾದ ಬೆಲೆಯು ಇತರ ಕಾಗದಗಳನ್ನು ಉಪಯೋಗಿಸಿಕೊಂಡು ಈ ವರೆಗೆ ಅವುಡೇಗೂ ಜೀವಿಸಿವೆ. 'ಕೊಡಗು' ಪತ್ರಿಕೆಯನ್ನೇ ಉದಾಹರಣೆಗೆ ತೆಗೆದುಕೊಂಡ ೫1938-39 ರಲ್ಲಿ ಅಂದರೆ ಯುದ್ಧ ಪ್ರಾರಂಭವಾಗುವಾಗ ವಾರಕ್ಕೆ ಡೆಮಿ ಆಕಾರದ 12 ಪುಠಗಳನ್ನು ಕೊಡುತ್ತಿತ್ತು. 1939-40 ರಲ್ಲಿ ಇದು 10 ಪುಠಗಳಿಗಿಳಿಯಿತು. ಹೀಗೆ ಇಳಿಯುತ್ತಾ ಬಂದು 1942-43 ರಲ್ಲಿ 6 ಪುಠಗಳಿಗೆ ಉಳಿತು. ನಂತರ ಡೆಮಿ ಆಕಾರದ ಕಾಗದ ದೊರೆಯದೆ ಫೂಲ್‌ಸ್ಕೇಪ್ ಎಂಬ ಪುಠಕ್ಕೆ ಬಂದಿತು. ಫೂಲ್‌ಸ್ಕೇಪ್ ಎಂಬ ಪುಠವೆಂದರೆ ಸಾಧಾರಣ ಡೆಮಿ ಆಕಾರದ ನಾಲ್ಕು ಪುಠಗಳೆನ್ನಬಹುದು. ಹೀಗೆ ಕಾಗದದ ತೊಂದರೆಯಿಂದ ತನ್ನಷ್ಟಕ್ಕೇ ಪತ್ರಿಕೆಗಳ ಪುಠಸಂಖ್ಯೆ ಕಡಿಮೆಯಾಗುತ್ತಾ ಬಂದಿದೆ. ಇದೇ ಪ್ರಮಾಣದಲ್ಲಿ ಇತರ ಪ್ರಿಂಟಿಂಗ್ ಕೆಲಸಗಳೂ ಕಡಿಮೆಯಾಗಿರುವವೆಂಬುದನ್ನು ಬೇರೆ ಹೇಳಬೇಕಿಲ್ಲ. ಹೀಗಿರುವಾಗ ಇಂಡಿಯಾ ಸರಕಾರದ ಈ ನಿನ ಆಜ್ಞೆಯಂತೆ ಪುಠ ಕಡಿಮೆಮಾಡುವ ದೆಂದರೆ ಪತ್ರಿಕೆಯನ್ನು ಮುಚ್ಚುವದೇ ಲೇಸು. ಸ್ಥಳಾಭಾವದಿಂದ ಪತ್ರಿಕೆಗಳಲ್ಲಿ ಈಗಿರುವ ಪುಠಗಳಲ್ಲಿಯೇ ಪ್ರಾಮುಖ್ಯವಾದ ವಾರ್ತೆಗಳನ್ನು ಕೊಡಲು ಸಾಧ್ಯವಿಲ್ಲ. ಪತ್ರಿಕೆಯ ಚಂದಾದಾರರೂ ವರ್ತಮಾನಗಳು ಸಾಲನು ಎಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಹೀಗಿರುವಾಗ ಮೇಲ್ಕಂಡ ಆಜ್ಞೆಯನ್ನು ಇಲ್ಲಿ ಜಾರಿಗೆ ತರುವದು ಯೋಗ್ಯವಲ್ಲ. ಸ್ಥಳೀಯ ಸರಕಾರದವರು ಇಲ್ಲಿಯ ಪತ್ರಿಕೆಗಳ ಸ್ಥಿತಿಯನ್ನು ತಿಳಿದು ಮೇಲ್ಕಂಡ ಆಜ್ಞೆಯು ಇಲ್ಲಿ ಜಾರಿಗೆ ಬರದಂತೆ ತಕ್ಕ ವಿವರಣೆ ಮಾಡಬೇಕಾಗಿ ಆಗ್ರಹದ ಕೋರಿಕೆ.

ಮಡಿಕೇರಿ ಕೊಡವ ಬೋರ್ಡಿಂಗ್ ಮನೆ.

ಕೊಡವ ಹುಡುಗರು ಇರುವಂಥಾ ತೆಗನಿನ ಬೋರ್ಡಿಂಗ್ ಮನೆಯು ಸ್ಥಿತಿಯು ಬಹು ಶೋಚನೀಯವಾಗಿದೆ. ಈ ಕಟ್ಟಡದಲ್ಲಿ ಇರುವ ಐದು ದೊಡ್ಡ ಕೋಣೆಗಳಲ್ಲಿ ಕೋಣೆಯೊಂದರ 20ರಂತೆಯೂ, ಇನ್ನೆರಡು ಚಿಕ್ಕ ಕೋಣೆಗಳಲ್ಲಿ ಕೋಣೆಯೊಂದರ 10ರಂತೆಯೂ, ಅಂತೂ ಸುಮಾರು 120 ವಿದ್ಯಾರ್ಥಿಗಳನ್ನು ಸೂತ್ರ ಇರಬಹುದಾಗಿದೆ. ಆದರೆ ಇಗ ಈ ಕಟ್ಟಡದಲ್ಲಿ ಸುಮಾರು 170 ಮಕ್ಕಳನ್ನು ಇರಲಾಗಿದೆ. ಕೋಣೆಗಳಲ್ಲಿ ಮಂಚಗಳನ್ನು ಒಂದಕ್ಕೊಂದು ತಾಗುವಂತೆ ಇಟ್ಟಿರುವ ಕಾರಣ ವಿದ್ಯಾರ್ಥಿಗಳಿಗೆ ಅತ್ತಿತ್ತ ತಿರುಗಾಡಲು ಸಹ ಸ್ಥಳವಿಲ್ಲ. ಅಲ್ಲದೆ ಕಿಟಕಿಗಳಿಗೆ ಕಬ್ಬಿಣದ ಯೂ ಮರದ ಸಲಾಕೆಗಳು ಇಲ್ಲದ ಕಾರಣ ರಾತ್ರೆ ಕಿಟಕಿಗಳನ್ನೆಲ್ಲಾ ಮುಚ್ಚಬೇಕಾಗಿದೆ. ಈ ದೆಸೆಯಿಂದ ಆಲ್ಲಿ ಸುಲಗುಣ ಮಕ್ಕಳಿಗೆ ಸಾಕಷ್ಟು ಗಾಳಿ ದೊರೆಯದೆ ಕಷ್ಟಪಡಬೇಕಾಗಿದೆ. ಈ ಕೋಣೆಗಳಲ್ಲಿರುವ ಇಕ್ಕಟ್ಟನ್ನು ನೋಡಿದರೆ ದನಗಳನ್ನು ತುಂಬುವ ಕೊಟ್ಟಿಗೆಗಳಿಗಿಂತಲೂ ಕಡೆಯಾಗಿದೆಯೆಂದು ಹೇಳಿದರೆ ತಪ್ಪಾಗದು. ಈ ಕಟ್ಟಡವು ಸಾಲದೆಂದೇ ಮೇಲಿನ ಬೋರ್ಡಿಂಗ್ ಕಟ್ಟಡವನ್ನು ಸಹ ಸರಕಾರದವರು ಕಟ್ಟಿಸಿದ್ದಾಗಿದೆಯಂತೆ. ಮೇಲಿನ ಕಟ್ಟಡದಲ್ಲಿ ಮೂರು ದೊಡ್ಡ ಕೋಣೆಗಳಿದ್ದು ಸುಮಾರು 75 ವಿದ್ಯಾರ್ಥಿಗಳನ್ನು ಇರಬಹುದು. ಇಗ ಅಲ್ಲಿ ಸುಮಾರು 45 ಹುಡುಗರು ಮಾತ್ರ ಇರುವರು. ಈ ಮೊದಲು ತಳಗಿನ ಕಟ್ಟಡಕ್ಕೇನೇ ಸಾಕಷ್ಟು ವಿದ್ಯಾರ್ಥಿಗಳು ದೊರೆಯದ ಕಾರಣ ಮೇಲಿನ ಕಟ್ಟಡವನ್ನು ಗೌಡುಗರ ವಿದ್ಯಾರ್ಥಿಗಳಿಗೆ ಬಿಟ್ಟು ಕೊಡಲಾಯಿತು. ಇಂತರ ಗೌಡುಗಳ ಸಂಘದವರು ತಮ್ಮ ಸುಳ್ಳಳ ಬೋರ್ಡಿಂಗ್ ಮನೆಯೊಗಿ ಕಟ್ಟಿದ್ದ ಸಮಾಪವಲ್ಲಿರುವ ದೊಡ್ಡ ಕಟ್ಟಡವನ್ನು ಬೇರೆಯವರಿಗೆ ಬಾಡಿಗೆಗೆ ಕೊಟ್ಟಿರುವರು. ಕೆಳಗಿನ ಕಟ್ಟಡದಲ್ಲಿ ಸ್ಥಳವು ಬಹು ಇಕ್ಕಟ್ಟಾಗಿದ್ದರೂ ಕೂಡ ಸುಮಾರು 170 ಮಕ್ಕಳನ್ನು ಸೇರಿಸಿಕೊಂಡಿದ್ದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಾರ್ವಜನಿಕರು ಕೃತಜ್ಞರಾಗಿರಬೇಕು. ಇಲ್ಲವಾದರೆ ಹಲವು ಮಕ್ಕಳು ಸಟ್ಟಪಟ್ಟು ಆಯೋಗ್ಯವಾದ ಸ್ಥಳದಲ್ಲಿ ಉಳಿದುಕೊಂಡು ತಮ್ಮ ನಡತೆ ನೀತಿಗಳನ್ನು ಹಾಗೂ ವಿದ್ಯಾಭ್ಯಾಸವನ್ನು ಕೆಡಿಸಿಕೊಳ್ಳಬೇಕಾಗುತ್ತಿತ್ತು. ಇಲ್ಲವೇ ಉಳಿಕೊಳ್ಳಲು ಸ್ಥಳವಿಲ್ಲದೆ ವಿದ್ಯಾಭ್ಯಾಸವನ್ನೇ ಬಿಡಬೇಕಾಗಿತ್ತು. ಗ್ರಾಮಸ್ಥರ ಮಕ್ಕಳಿಗೆ ವಿದ್ಯಾರ್ಜನೆಯ ನೇಲೆ ಉಂಟಾಗಿರುವ ವಿಶೇಷ ದಾಹವನ್ನು ತೃಪ್ತಿಪಡಿಸಲು ಸರಕಾರದವರು ತಕ್ಕ ವಿವಾರಣೆಯನ್ನು ಮಾಡಬೇಕಾದುದು ಅವರ ಕರ್ತವ್ಯವಾಗಿರುತ್ತದೆ. ಬೋರ್ಡಿಂಗಿನ ಇಕ್ಕಟ್ಟಿನ ಪರಿಸ್ಥಿತಿಯನ್ನು ಹೋಗಲಾಡಿಸಲು ಹೊಸ ಕಟ್ಟಡ ಕಟ್ಟಿಸಲು ತತ್ಕಾಲ ಸಾಧ್ಯವಿಲ್ಲದಿದ್ದರೂ ಬೇರೆ ಕಟ್ಟಡವನ್ನು ಬಾಡಿಗೆಗಾದರೂ ತೆಗೆದು ಒದಗಿಸಿಕೊಡಬೇಕು. ಇದಕ್ಕಾಗಿ ಅನುಕೂಲವಾಗಿರುವ ಕಟ್ಟಡವು ಗೌಡುಗಳ ಸಂಘದ ಕಟ್ಟಡವಾಗಿದೆ. ಇದನ್ನು ಸರಕಾರದವರು ಬಾಡಿಗೆಗೆ ತೆಗೆದು ಗೌಡುಗಳ ವಿದ್ಯಾರ್ಥಿಗಳಿಗೇನೇ ಬಿಟ್ಟುಕೊಟ್ಟು ಮೇಲಿನ ಕಟ್ಟಡವನ್ನು ಜೊಚ್ಚಿಗಿರುವ ಕೊಡವ ವಿದ್ಯಾರ್ಥಿಗಳಿಗೇನೇ ಬಿಟ್ಟುಕೊಡಬಹುದು. ಇಲ್ಲವೇ ಈ ಪಾಪಗಿ ಕಟ್ಟಡವನ್ನು ಕೊಡವ ವಿದ್ಯಾರ್ಥಿಗಳಿಗೆ ಒಬ್ಬಗಿಸಿ ಕೊಡಬಹುದು. ಹೀಗೆ ಮಾಡದಿದ್ದರೆ ವಿದ್ಯಾರ್ಥಿಗಳ ಸ್ಥಿತಿಯು ಒಮ್ಮೆ ಕಷ್ಟಕರವಾಗುವ್ಯದು. ಶೋಚನೀಯವಾರು ಬೋರ್ಡಿಂಗುಗಳಿಂದ ಕೊಡಗಿನಂಥಾರು ವೈಮನಸ್ಯ ಬೆಳೆಸಿ ಜನತೆಯನ್ನು ಅಶಾಂತಿಗೆ ಈಡಾಗಿಸುವದು. ವಿದ್ಯಾರ್ಥಿಗಳು ಜೊತೆಯಲ್ಲಿರುವದಾಗಿದ್ದಲ್ಲಿ ಕೋಮುವಾರು ವೈಮನಸ್ಯಗಳಿಗೂ ಹಾಗೂ ಸ್ಥಳ ಸಂಕೋಚಕ್ಕೆ ಎಡೆ ಇಲ್ಲದಾಗುತ್ತಿತ್ತು.

ಬೋರ್ಡಿಂಗ್ ವಿದ್ಯಾರ್ಥಿಗಳಿಗೆ ನೀರಿನ ತೊಂಗರೆಯು ಬಹಳವಾಗಿದೆ. ಅವರಿಗೆ ಬೈ ತಿಂಗಳು ಮುಂಚಿ ಕೊಳೆಯಲೂ ಕೂಡ ಹಾಕಿಸ್ಸು ನೀರು ದೂರೆಯುವುದಿಲ್ಲವೆಂದು ಮೇಲ್ ಸ್ನಾನಕ್ಕೆ ನೀರು ಸಿಕ್ಕುವದು ತಾನೇ ಹೇಗೆ? ಇದೇ ಮಕ್ಕಳ ಆರೋಗ್ಯವು ಕೆಡಲು ಕಾರಣವಾಗಿದೆ. ಅಲ್ಲದೆ ಅವರಿಗೆ ಮನೆಯ ಪಕ್ಕದಲ್ಲಿರುವ ಬೆರಂಡಿ ವೈರಿ ಬಿಸೇರಿ ಇಲ್ಲದ ಬಹು ಕೊಳೆಯಾಗಿದೆ. ಇವೆಲ್ಲದಕ್ಕೂ ಮೇಲಧಿಕಾರಿಗಳು ತಕ್ಕ ಗಮನವಿಟ್ಟು ಮುಂದಿನ ಜಕಾಂಗದ ವಿದ್ಯಾಭ್ಯಾಸಕ್ಕೆ ತಕ್ಕ ಪ್ರೋತ್ಸಾಹವನ್ನೀಯುವರಾಗಿ ಆಶಿಸುತ್ತೇನೆ.

ವಾರ್ತಾತರಂಗ.

ಒಳಪೇಪೆ.

ಕುತಗಿನ ಹಲವೆಡೆಗಳಲ್ಲಿ ಧನಗಳ ರೋಗವು ಹಬ್ಬಿ ವಿಪರೀತವಾದ ನಷ್ಟವುಂಟಾಗಿದೆ.

ಮದ್ರಾಸು ವಿಶ್ವವಿದ್ಯಾಲಯದ ಇಂಜನೀಯರಿಂಗ್ ಎಫ್. ಇ. ಪರೀಕ್ಷೆಯು ಒಂದನೆ ಮತ್ತು ಎರಡನೇ ಭಾಗಗಳಲ್ಲಿ ಶ್ರೀ ಕೋಡಿರ ಅಪ್ಪಚ್ಚುವರು ತೇರ್ಗಡೆಯಾಗಿರುವರು.

ಈ ವರ್ಷದ ಮಳೆಗಾಲವು ಬಹಳ ಪ್ರಾರಂಭವಾದಂತೆ ಕಂಡುಬರುವದಿಲ್ಲ. ಇನ್ನೂ ಅನೇಕರು ಬೀಜಹಾಕಿರುವದಿಲ್ಲ ಬೀಜಹಾಕಿದ ಹೊಲವೆಡೆಗಳಲ್ಲಿ ಒಣಗಿ ಹೋಗಿದೆ. ಮಡಿಕೇರಿಯಲ್ಲಿ ಎರಡು ದಿನದಿಂದ ಮಳೆ ಬೀಳತೊಡಗಿದೆ. ಆರಂಭ ಮೂಡಲು ಎತ್ತುಗಳು ಇಲ್ಲದ್ದು ಒಂದು, ಉಳುಗಳ ಕೊರತೆ ಇನ್ನೊಂದು ಮಳೆಯ ಅಭಾವ ಮತ್ತೊಂದು ಹೀಗೆ ಕೊಡಗಿನ ವ್ಯವಸಾಯವು ಸುಗಮವಾಗಿ ಆಗುವ ಚಿಹ್ನೆಗಳು ಕಂಡುಬರುತ್ತಿಲ್ಲ.

ಮಡಿಕೇರಿ.

ಪೊಲೀಸು ಸಬ್ ಇನ್ಸ್‌ಪೆಕ್ಟರಾದ ಶ್ರೀ ಚೆಟ್ಟಂಗಡ ಅಪ್ಪಣ್ಣನವರನ್ನು ಮಡಿಕೇರಿಗೂ, ಶ್ರೀ ಕುಂಬೆರ ಪೊನ್ನಪ್ಪನವರನ್ನು ಸೋಮವಾರಪೇಟೆಗೂ, ಶ್ರೀ ಅಬ್ದುಲ್ ಗಫೂರ್ ಬಾನರನ್ನು ವೀರಾಜಪೇಟೆಗೂ ವರ್ಗಾಯಿಸಲಾಗಿದೆ.

ಕೊಡವ ವಿದ್ಯಾಭಿವೃದ್ಧಿನಿಧಿಯ ಮಹಾಸಭೆಯು ತಾ. 23-7-44 ರಲ್ಲಿ ಮಧ್ಯಾಹ್ನ 3 ಗಂಟೆಗೆ ಇಲ್ಲಿಯ ಹೈಸ್ಕೂಲ್ ಹಾಲ್‌ನಲ್ಲಿ ರಾ. ಬ. ಕೆ. ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವದು.

ವೀರಾಜಪೇಟೆ.

ಶ್ರೀ ಮೂಳೇರ ಮೇದಪ್ಪನವರು ತಾ. 1-7-44 ರಿಂದ ಇಲ್ಲಿಯ ಮುನ್ಸಿಫ್ ಕೋರ್ಟಿನ ಹೆಡ್ ಗುಮಾಸ್ತರನ್ನಾಗಿ ನೇಮಿಸಲ್ಪಟ್ಟಿರುವರೆಂದು ವಾರ್ತೆ.

ಇಲ್ಲಿಯ ಕಂಟ್ರೋಲ್ ಇನ್ಸ್‌ಪೆಕ್ಟರಾಗಿದ್ದ ಶ್ರೀ ಕೋಡಿರ ಮಂದಣ್ಣನವರನ್ನು ತಾಲೋಕು ಆಫೀಸಿಗೆ ಶಿರಸ್ತೇದಾರರಾಗಿಯೂ, ಶಿರಸ್ತೇದಾರರಾದ ಶ್ರೀ ಅಮ್ಮಣಿಚಂಡ ಐಯ್ಯಪ್ಪನವರನ್ನು ಹೈಸ್ಕೂಲು ಗುಮಾಸ್ತರಾಗಿಯೂ, ತಾ. 1-7-44 ರಿಂದ ನೇಮಿಸಲಾಗಿದೆ. ಹೈಸ್ಕೂಲು ಗುಮಾಸ್ತರಾಗಿದ್ದ ಶ್ರೀ. ಕೆ. ಆರ್. ಚಂದ್ರಯ್ಯನವರು 2 ತಿಂಗಳು ರಜೆಯಲ್ಲಿರುವದೆಂದು ತಿಳಿಯಬರುತ್ತದೆ.

ಕಸ್ತೂರಿಬಾ ನಿಧಿ.

ಶ್ರೀ ಐನಂಡ ಪಿ. ಕಾರ್ಯಪ್ಪ ರವರು 100
ಶ್ರೀ ಕುಟ್ಟೆಂಡ ಡಿ ಅಚ್ಚಪ್ಪ ,, 100
,, ನೆಲ್ಲಿಮಕ್ಕಡ ಅಚ್ಚಯ್ಯನವರು 25
,, ಎಸ್. ರಾಮಲಿಂಗಯ್ಯನವರು, 25
ಮಿಸ್ಟರ್ & ಮಿಸಸ್ ಕೊಡಂದೆರ ಎ. ಬಂಗಪ್ಪನವರು 25
,, ಜಾನಕಿ ರಾಮಸಿಂಗಾರವರು 20
,, ಮಣಪಟ್ಟೆರ ಅಪ್ಪಯ್ಯನವರು 20
ಮಿಸಸ್. ಕೆ. ಅಪ್ಪಯ್ಯನವರು 15
,, ಉಳ್ಳಿಯಡ ಮುದ್ದಪ್ಪನವರು 15
,, ಪೂದ್ರಿಮಾಡ ಚಂಗಪ್ಪ & ಬ್ರದರ್ಸ್ 15
,, ತೆಕ್ಕಡ ಆನಂದಯ್ಯನವರು 10
,, ಟಿ. ಆರ್. ಸೀತಾರಾಮಯ್ಯ ,,10
,, ಮುಕ್ಕಾಟೀರ ಎ. ಕುಶಾಲಪ್ಪ ,, 10
,, ಚಿಪ್ಪುಡೀರ ಎಸ್. ಪೊನ್ನಪ್ಪ ,, 10
,, ಎ. ಯನ್. ಹುಚ್ಚಯ್ಯನವರು 10
,, ಚೆಟ್ಟಮಾಡ ಚಿಣ್ಣಪ್ಪನವರು 10
,, ಮುಕ್ಕಾಟೀರ ಎಸ್. ಸುಬ್ಬಯ್ಯ ,, 10
,, ಕೊಪ್ಪಿರ ಕುಟ್ಟಪ್ಪನವರು 10
,, ಅಜ್ಜಿಕಂಡ ವಿಯ್ಯಪ್ಪನವರು 10
,, ಬಡುವಮಂಡ ಮಂದಣ್ಣನವರು 10

೫ ರೂ. ಕೊಟ್ಟವರು.

ಶ್ರೀಮತಿಗಳಾದ ಪಟ್ಟೆದ ಕಾಮವ್ವನವರು, ಸಿ. ನೀಲಮ್ಮನವರು, ಕೇಚೆರ ಗಂಗವ್ವನವರು, ಮಿಸಸ್ ಸೊಟ್ಟೇಂಗಡ ನಂಜಪ್ಪನವರು, ಶ್ರೀಮಗಳಾದ ಕುಪ್ಪಂಡ ಬಿ. ಮೇದಪ್ಪನವರು, ಪಿ. ಆರ್. ವೆಂಕಟರಮಣಯ್ಯನವರು, ಗುಮ್ಮಟ್ಟೀರ ಸಿ. ಸುಬ್ಬಯ್ಯನವರು, ಚೋಂದಂಡ ಚಿಣ್ಣಪ್ಪನವರು, ಮಂದ್ರೀರ ಕಾರ್ಯಪ್ಪನವರು, ಬಿ. ಎಲ್. ರಾಮಯ್ಯನವರು, ಬಿ. ಏ. ನಾರ್ಣಯ್ಯನವರು, ಪಿ. ಯಸ್. ಮೇಲಪ್ಪನವರು, ಮಲಚಂಡ ನಾಣಯ್ಯನವರು, ಮಂಡೇಟೀರ ಬಸವಣ್ಣನವರು.

3 ರೂ. ಕೊಟ್ಟವರು.

ಶ್ರೀಮಗಳಾದ ಯಸ್. ನಾರಾಯಣರಾವ್‌ರವರು, ಪಿ. ಏ. ಲಕ್ಷ್ಮೀನಾರಾಯ್ಯನವರು, ಬೇರಂಡ ಪೂನ್ನಪ್ಪನವರು, ಶ್ರೀ ಮುಕಿ ಬಿದ್ದಂಡ ಬಿ. ಮೇಚಮ್ಮನವರು, ಮತ್ತು ಅಂಬಿಬಾಪ್ಪೆಸ್ಸಿನವರು.

2 ರೂ. ಕೊಟ್ಟವರು.

ಶ್ರೀಮಗಳಾದ ಜಿ. ಏ. ಗಂಗಮ್ಮಯ್ಯ ನವರು, ಕೆರೆಯೆಮೂಡ ನಂಜಪ್ಪನವರು, ಬೀರಂದಿರ ಕೆ ಕಾರ್ಯಪ್ಪನವರು, ಮುಚ್ಚಟ್ಟಮಾಡ ಕೆ. ಬಂಗಪ್ಪನವರು, ಬೊಜ್ಜಂಗಡ ಚಿಟ್ಟಿಪ್ಪನವರು, ಒಳ್ಳಟಂಡ ಎಸ್. ಚಂಗಪ್ಪನವರು, ಐಚೆಟ್ಟಿರ ಬಂಗಪ್ಪನವರು, ಕೆ. ಕೆ. ನಾಚಯ್ಯನವರು, ಎಸ್. ಎಂ. ನಂಜಪ್ಪನವರು, ಜಿ. ಪಟ್ಟು. ಗಣಪತ್ತಿಯವರು, ಪಿ. ಯಸ್. ದೇವಯ್ಯನವರು, ಎ. ಎ. ಸುಬ್ಬಯ್ಯನವರು, ಯು. ಆರ್. ಕಾರ್ಯಪ್ಪನವರು, ಎ. ಎ. ಮೇದಯ್ಯನವರು, ಕೆ. ಯಂ. ನಾಣಯ್ಯನವರು, ಜಿ. ಎನ್. ರಾಮಚಂದ್ರಯ್ಯನವರು. ಈ ವರೆಗೆ ಒಟ್ಟು 3,998 ರೂ. ಜಮೆಯಾಗಿದೆ.

ನಾಪೋಕ್ಲು ಹೈಸ್ಕೂಲ್ ಸ್ಥಾಪನೆ.

ಬಹಿರಂಗ ಸಭೆಯು, ನಾಪೋಕ್ಲು.

ಶ್ರೀ ಕೇಲಪ್ಪ ಮುದ್ದಯ್ಯ & ಅಜ್ಜಿಪ್ಪರವರ ಮಪ್ಪೆಸರ ಮೂಲಕ ಆರ್ಥ ಬಿಟ್ಟಿಯಂತೆ ಕೊಟ್ಟವರು—ಶ್ರೀ ಗಣಾದ ಕೇಲಪ್ಪರ ಆಚ್ಚಪ್ಪ, ಚಿಣ್ಣಪ್ಪ, ಕುಂದಯರ ದೇಚವ್ವ, ಉಮ್ಮಪ್ಪ, ಸುಬ್ಬಪ್ಪ ಇವರುಗಳು.

ಒಂದು ಬಿಟ್ಟಿಯಂತೆ ಕೊಟ್ಟವರು—ಶ್ರೀ ಗಣಾದ ಆಚ್ಚಿಪ್ಪರ ಅಕ್ಕಪ್ಪ, ತಿಮ್ಮಯ್ಯ, ಮಾದಪ್ಪ, ಉತ್ತಯ್ಯ, ಮಾಚಯ್ಯ, ಅಪ್ಪಯ್ಯ, ಕೇಲಪ್ಪರ ಮುದ್ದಯ್ಯ, ಕಾವೇರಪ್ಪ, ಕುಶಾಲಪ್ಪ, ದೇವಯ್ಯ, ಕುಟ್ಟಪ್ಪ, ಪೊನ್ನಪ್ಪ, ಕಂಗಣಂಡ ನಂಜಪ್ಪ, ಮುತ್ತಣ್ಣ, ಕುಂದಯರ ಮುತ್ತಣ್ಣ, ಚಂಗಪ್ಪ, ಮಾದಪ್ಪ, ಮಾಣಿರ ಅಕ್ಕಪ್ಪ, ಮಾಳೆಕ್ಕ ಅಬ್ದುಲ್ ರಹಿಮ್, ಅರಿಯಡ ವಿಯ್ಯಮ್ಮ ಇವರುಗಳು.

ಕುಲ್ಲೆಟ್ಟಿರ ಪೊನ್ನಣ್ಣ ಮತ್ತು ಪಾಡಿಯಮ್ಮನ ಕಾಳಮ್ಮ ಇವರ ಮೂಲಕ ಒಂದು ಬಿಟ್ಟಿಯಂತೆ—ಶ್ರೀ ಗಣಾದ ಕಲ್ಲೇಂಗಡ ಜಂಗಪ್ಪ, ಮುತ್ತಣ್ಣ, ಮುತ್ತಪ್ಪ, ಗಣಪತ್ತಿ, ಸೋಮಯ್ಯ, ಬೀಯಕಪೂವಂಡ ಐಯ್ಯಪ್ಪ, ಅಚ್ಚಪ್ಪ, ಪೊನ್ನಪ್ಪ, ದೇವಯ್ಯ, ಐಯ್ಯಮ್ಮ, ಅಪ್ಪಣ್ಣ, ಬಪ್ಪಪ್ಪ, ಬೊಪ್ಪಂಡ ಪೇಮಯ್ಯ, ಸೂದಪ್ಪ ಗಣಪತ್ತಿ, ನಂಜುಂಡ, ಕಾವೇರಿಯಪ್ಪ, ಪಾಡಿಯಮ್ಮನ ಕಾಳಮ್ಮ, ಚಂಗಮ್ಮ, ಮುತ್ತಮ್ಮ, ಮಂದಮಾಡಮ್ಮನ ಗಮುತ್ತಮ್ಮ, ಎಸ್ ಮೇದುಮಮ್ಮ, ಎಸ್ ನೇಮುಮಮ್ಮ, ಎಂ. ನಂಜಮ್ಮ, ಅಚ್ಚುಮಮ್ಮ, ಆರ್ ಕಮ್ಮ, ಕುಂಡಿಂಡ ಕುಶಾಲಪ್ಪ, ಗಣಪತ್ತಿ, ಸಂಗಣ್ಣ, ಕಲ್ಲೆಟ್ಟಿರ ಎಸ್ ಪೊನ್ನಣ್ಣ, ಎ. ಪೊನ್ನಣ್ಣ ಸಾಹುಕಾರ್, ಮಾದಪ್ಪ, ಐಯ್ಯಮ್ಮ, ರಮ್ಮಯ್ಯ, ಭೀಮಯ್ಯ, ಸುಬ್ಬಯ್ಯ, ಕರುಂಬಯ್ಯ, ಕೊಂಡಿಂಡ ಕಾಳಯ್ಯ, ಮಾಣಿಪ್ಪ, ಚಂಗಪ್ಪ, ಕಾಳಪ್ಪ, ಮಂದಣ್ಣ, ಚಿಣ್ಣಪ್ಪ, ಕಿಗ್ಗಾಲ ಪೆಳ್ಳಿ, ಪೆಳ್ಳಿ, ಪೀಲಿಯಂಡ ಸೋಮಣ್ಣ, ಅರಿಯಡ ಮುತ್ತಣ್ಣ, ಮಂಡಿರಂಡಮ್ಮನ ಕಾಳಮ್ಮ ಸಾಹುಕಾರ್ತಿ, ಮಂದಕಾಳಪ್ಪ ಎಂಬವರು ಶ್ರೀ ಕುಲ್ಲೇಟಿರ ಕುಶಾಲಪ್ಪ ಎಂಬವರಿಂದ ಬಿಟ್ಟಿ ಶ್ರೀ ಶಾಂತಮೂರ್ತಿಪ್ಪನವರು ಆರು ಬಿಟ್ಟಿ.

ಧನ ಸಹಾಯ (ಮಿಶ್ರ).

ರೂ ಒಂಭಾರಂತೆ—ಶ್ರೀ ಗಣಾದ ಜಂಗಪ್ಪನವರ ಮಗ [illegible] ಮಾಪೆರ ಅಚ್ಚಪ್ಪ, ಮಾಪೆರ ಅಚ್ಚಯ್ಯ, ಕಿಡಿಯಂಡ ಪೆಳ್ಳಿ, ಕಾಳಂಡ ಸೋಮಪ್ಪ, ಕಲ್ಲಿಪ್ಪ ಮೀಲಂಡ ಸಾಯಿಪ್ಪ, ಕೋವಿಜಂಡ [illegible] ಕಾಳಪ್ಪ, ಸುಬ್ಬಪ್ಪ ಇವರು (1 ರೂ ಗಿಂತ ಮೇಲೆ ಸಲ್ಲಿಸಿರುವವರುಗಳನ್ನು ಪ್ರಕಟಿಸಲಾಗುವುದಿಲ್ಲ)

ರೂ 2ರಂತೆ—ಶ್ರೀ ಗಣಾದ ಬೆಪ್ಪಂಡ [illegible] ಪೊನ್ನಪ್ಪ, ಮಾಚ್ಚಂಡ ಸುಬ್ಬಪ್ಪ, ತಾಪಂಡ ಮುದ್ದಪ್ಪ, ಕೇಶವಮಾದಪ್ಪ, ಬೆಪ್ಪಂಡಂಡ ಮಾದಪ್ಪ, ಕೊಂಬಿಯಂಡಮ್ಮನ ಗಂಗವ್ವ, ಕೇಶವ ಐಯಂಡ ಐಯ್ಯಪ್ಪನವರುಗಳು ಮಾಳ್ಚಿಕಾಳಪ್ಪ, ಪಾಲೆಯಂಡ ಮಂದಣ್ಣ ಎಂಬವರು ಇವರು ರೂ. 3ರಂತೆ. ತೋಲಂಡ ಸಾಬಪ್ಪ, ಪೆಬ್ಬೋಳಂಡ ಅಪ್ಪಚ್ಚ ಇವರು ರೂ 4ರಂತೆ. ಮಂಡಿರಂಡಮ್ಮನ ನಾರಾಯಣಯ್ಯ, ಪೆಬ್ಬೋಳಂಡನಂಜಪ್ಪ, ತಾಪಂಡ ಪೊನ್ನಪ್ಪ, ಮಚ್ಚುಮಾಡ ದೇವಯ್ಯ, ಅಪ್ಪಚ್ಚಿರ ಸಂಪಂಡ, ಓಣಿಪುರಿಯಡ ಬಸಪ್ಪ, ಅಜ್ಜಿಕಂಡ ಸುಬ್ಬಯ್ಯ ಇವರು ರೂ ಗಿಂತೆ ಬಿ [illegible] ಚೋಯಯ್ಯ, ಮೇದಪ್ಪ, ಚಾಳೆರ ಮುದ್ರೀರ, ಚರೋಕಿರ ಪೊನ್ನಪ್ಪ ರೂ. 6ರಂತೆ ಕಲ್ಲೇಂಗಡ ಮಾದಪ್ಪ, ಮೇದಪ್ಪ, ಅರಿಯಡ ತಮ್ಮಯ್ಯ, ಕಂಗಣಂಡ ಐಯ್ಯಪ್ಪ ರೂ 7 ರಂತೆ. ತಾಪಂಡ ವಿಯ್ಯಪ್ಪ, ಮೂಪೆರ ಚಿಟ್ಟಿಪ್ಪ, ತೋಲಂಡ ಕಾರ್ಯಪ್ಪ ರೂ. 8ರಂತೆ. ತೋಲಂಡ ಅಚ್ಚಪ್ಪ, ಕೊಂಡಿಂಜಮ್ಮನ ಕೇತನು, ಪೇರೂರು ಕೃಷ್ಣಯ್ಯ, ಕೊಂಬಂಡ ಕಾಳಯ್ಯ ರೂ. 10ರಂತೆ. ಅರುಜಾಯಂತ ತಮ್ಮಯ್ಯ ರೂ. 25, ಕಾಂಡಂಡ ಕುಟ್ಟಪ್ಪ ರೂ. 50, ಕೋವಿರ ಚಿಣ್ಣಪ್ಪ ರೂ. 501, ಕೊಡಗು ರಿಜಿಮೆಂಟಿನವರು ರೂ. 634—4—0 (ಇದರ ವಿವರಗಳು ಹಿಂದಿನಿಂದ ಪ್ರಕಟಿಸಲ್ಪಟ್ಟಿವೆ).

ಕಸ್ತೂರ್ಬಾ ನಿಧಿ.

ಗಾಂಧಿಯವರ ಸ್ಪಷ್ಟೀಕರಣ

ಕಸ್ತೂರ್ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಯ ನಿರ್ದೇಶಕರ ಮಿಟಿಂಗು ಶಾರೀಸು 1ರಲ್ಲಿ ಪೂನಾದಲ್ಲಿ ನಡೆಯಿತು. ಈ ಸಭೆಯಲ್ಲಿ ಗಾಂಧಿಯವರು ಈ ರೀತಿ ಮಾತಾಡಿದರು–'ನಾನು ನೆರೆನಡೆಯಲ್ಲಿದ್ದಾಗಲೇ ನನ್ನನ್ನು ಈ ನಿಧಿಯ ಅಧ್ಯಕ್ಷನಾಗಿ ಆರಿಸಿದ್ದು ನನಗೆ ಆಶ್ಚರ್ಯವನ್ನು ಟುಮಾಡಿತು. ಈ ನಿಧಿಯ ಮೂಲಕರ್ತೃಗಳು ಶ್ರೀ ನಾರಾಯಣದಾಸ್ ಗಾಂಧಿಯವರು. ಕಾಠೇವಾಡದಲ್ಲಿ ನೂಲುವ ಮತ್ತು ಅದಕ್ಕೆ ಸಂಬಂಧಿಸಿದ ಇತರ ಕೈಗಾರಿಕೆಗಳ ಪ್ರೋತ್ಸಾಹಕ್ಕಾಗಿ ಧನ ಸಂಗ್ರಹಿಸುತ್ತಿದ್ದರು. ಆಶ್ರಮದಲ್ಲಿ ಕಸ್ತೂರ್ ಬಾರವರ ನಿಧನವಾಗಿ ಆ ಬಗೆಗೆ ಒಂದು ಸ್ಮಾರಕ ನಿಧಿಯನ್ನು ಸಂಗ್ರಹಿಸುವ ಅಭಿಪ್ರಾಯವಾಯಿತು. ಆ ಕಾಲಕ್ಕೆ ಶ್ರೀ ನರನ್‌ದಾಸ್ ಗಾಂಧಿಯವರು ತಮ್ಮ ಆ ನಿಧಿಯನ್ನು ಈ ಸ್ಮಾರಕ ನಿಧಿಗೆ ಸೇರಿಸಿ ಈ ನಿಧಿಗೆ ಮೂಲ ಕರ್ತೃವಾದರು.

ಕಸ್ತೂರಿಬಾಯಿಯು ಸರಳ ಸ್ವಭಾವದವಳು. ಗ್ರಾಮ ಜೀವನ ನಡೆಸುತ್ತಿದ್ದವಳು. ಆದ್ದರಿಂದ ಈ ನಿಧಿಯು ಧ್ಯೇಯವು ಗ್ರಾಮೀಣ ಹೆಂಗಸು ಮಕ್ಕಳ ಪುರೋಭಿವೃದ್ಧಿಗಾಗಿ ಆಗಿರುತ್ತೆ. ಈ ನಿಧಿಯನ್ನು ನಗರಗಳಿಗಾಗಲೀ, ವಿಶ್ವ ವಿದ್ಯಾಲಯಗಳಿಗಾಗಲೀ ಖರ್ಚು ಮಾಡಕೂಡದು. 75 ಲಕ್ಷ ರೂಪಾಯಿಗಳು ಒಂದು ಸ್ಮಾರಕಕ್ಕೆ ದೊಡ್ಡದಾಗಿ ಕಂಡರೂ ಇದು ಹೊತ್ತಿರುವ ಧ್ಯೇಯಕ್ಕೆ ತೀರಾ ಸಣ್ಣದು. ಈ ಸ್ಮಾರಕವು ರಾಷ್ಟ್ರೀಯವಾದದ್ದು. ಜಾತಿ, ಮತಗಳನ್ನು ಬಿಟ್ಟು ಸರ್ವರೂ ಇದಕ್ಕೆ ಸಹಾಯ ಮಾಡಬೇಕು. ಇದರಲ್ಲಿ ರಾಜಕೀಯವಿಲ್ಲ. ಈ ಸ್ಮಾರಕಕ್ಕಾಗಿ ಸಂಗ್ರಹಿಸುವ ನಿಧಿಯನ್ನು ರಾಜಕೀಯ ಕಾರಣಗಳಿಗಾಗಿ ಉಪಯೋಗಿಸಲಾಗುವದೇ ಎಂಬ ಸಂಶಯವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಈ ರೀತಿಯ ಅಭಿಪ್ರಾಯಕ್ಕೆ ಇಲ್ಲವೆಂದು ನಿರ್ಧಾರವಾಗಿ ಭರವಸೆ ಕೊಡಬಲ್ಲೆ. ಅಖಿಲ ಭಾರತ ನೂಲುವ ವರ ಸಂಘದಂತೆಯೇ ಇದು ರಾಜಕೀಯದಿಂದ ನಿರ್ದಿಪ್ತವಾಗಿರುವುದು. ಈ ಸ್ಮಾರಕ ನಿಧಿಯು ಕಾಂಗ್ರೆಸಿನವರಿಂದ ರೂಪಿತವಾದುದಲ್ಲ. ಕಾಂಗ್ರೆಸ್ಸೇತರ ಜನರು ಕೇವಲ ಮಾನವ ಸಮೂಹದ ಹಿತ ದೃಷ್ಟಿಯಿಂದ ಇದನ್ನು ಕೈಕೊಂಡಿದ್ದಾರೆ. ಗ್ರಾಮದ ಹೆಂಗಸು ಮಕ್ಕಳ ಹಿತಕ್ಕೆ ಎಂದರೆ ಅಸ್ಪಾಂತರವಾಗಿರುವ ಹಿಂದೂದೇಶದ ಗ್ರಾಮಗಳಲ್ಲಿನ ಹೆಂಗಳೆಯರಿಗೆ–ಪ್ರಸೂತಿ, ಶುಚಿತ್ವ, ವೈದ್ಯಕೀಯ ಮೊದಲಾದ ಸಹಾಯ ಕೊಡುವ ಏರ್ಪಾಡಿಗಾಗಿ ವಿನಿಯೋಗವಾಗುವುದು. ಪ್ರತಿಯೊಬ್ಬರೂ ಈ ನಿಧಿಗೆ ತಮ್ಮ ಕೈಯ್ಯಲ್ಲಾದ ಸಹಾಯ ಮಾಡಿ ಜಾತಿಯ ಮತ್ತು ಜಾತಿಯ ಮುಂದಿನ ಜನಾಂಗದಾದ ಇಂದಿನ ಮಕ್ಕಳ ಪುರೋಭಿವೃದ್ಧಿಗೆ ಸಹಾಯಮಾಡಬೇಕು.'

ಬಾ ತ್ಮಿ.

ಮಹಿಳಾ ಸಮಾಜ.

ಅಮ್ಮಾ ಮಾತೆಯರೇ,

ಕೊಡಗಿನಲ್ಲಿ ಇದು ವರೆಗೆ ಯಾವ ದೊಂದು ಸ್ತ್ರೀ ಕೂಟಗಳೂ ಹೆಚ್ಚು ಕಾಲದ ವರೆಗೆ ಜೀವಿಸಿಲ್ಲವೆಂಬುವುದು ಅನುಭವಸಿದ್ಧವಾದ ಮಾತು. ಇಂಥಾ ಕೂಟಗಳು ಸ್ಥಾಪಿತವಾದ ಕೆಲವು ಸಮಯದಲ್ಲಿಯೇ ಅದರ ಸದಸ್ಯರುಗಳು ತಮ್ಮ ತಮ್ಮೊಳಗೆ ಕಚ್ಚಾಡಿದ ಪ್ರಸಂಗಗಳು ಅದೆಷ್ಟೋ ಇವೆ. ಇದನ್ನು ಹಿಂಜಾಲಿಸಿದೋಷಾದಿಯಲ್ಲಿ ಈಗ ವೀರಾಜಪೇಟೆಯಲ್ಲಿರುವ ಮಹಿಳೆಯರ ಸಹಕಾರ ಸಮಾಜದ ಸದಸ್ಯರುಗಳು ಅತೀ ಅಲ್ಪ ವಿಚಾರಕ್ಕಾಗಿ ತಮ್ಮ ತಮ್ಮೊಳಗೆ ವಿರೋಧವನ್ನು ಬೆಳೆಸಿದ್ದಾರೆಂದು ತಿಳಿಯಬರುತ್ತದೆ. ಇದು ಏನಾದರೂ ಸ್ತ್ರೀ ಸಮಾಜದ ಭವ್ಯ ಭವಿಷ್ಯದ ಬಗ್ಗೆ ಕನಸು ಕಟ್ಟುತ್ತಿದ್ದವರು ಕಳವಳ ಪಡಬೇಕಾಗಿದೆ.

ಕೆಲವು ಕಾಲಕ್ಕೆ ಹಿಂದೆ ಈಗಿರುವ ಸಮಾಜ ಕಟ್ಟಡವನ್ನು ಕಟ್ಟಲೋಸುಗ, ಈ ಸಮಾಜದ ಕೆಲವು ಸದಸ್ಯರುಗಳು ಕೊಡಗಿನ ಅನೇಕ ಭಾಗಗಳಲ್ಲಿ ಮನೆ ಮನೆ ಸುತ್ತಿ ಚಂದಾ ವಸೂಲಾತಿ ಮಾಡಿದರು. ಆಗ ಎಷ್ಟೋ ಆಸ್ಥಿವಂತರು ಇಂಥಾ ಸಮಾಜಗಳು ಜಯ ಪ್ರದವಾಗಿರಲೆಂದು ಮನಃಪೂರ್ವಕವಾಗಿ ಧನವನ್ನು ಕೊಡ, ಈ ಮಾನ್ಯ ಮಹಿಳೆಯರ ಸಮಾಜದ ಭವ್ಯ ಉದ್ದಿಶ್ಯಗಳನ್ನು ಜನರ ಮುಂದಿಟ್ಟು ತಮ್ಮ ಬಲಸವನ್ನು ಜಯಪ್ರದವಾಗಿ ಪಡಿಸಿದರೂ ಈಗ ಅವರ ಕೈಗೂಡಲೇ ಈ ಭಿನ್ನಾಭಿಪ್ರಾಯಗಳು ಕೊಲೆಯೇ?

ಮಾನ್ಯ ಮಾತೆಯರೇ, ಇಷ್ಟಾದರೂ ವಿಳಂಬವಾಗಿಲ್ಲ. ಈ ಸಮಾಜದ ಉದಯ ಆಗಾದ ಪಾವನ ಕೈವಾಗುವುದು? ಇದನ್ನು ಪ್ರಾರಂಭಿಸಿದ ಧ್ಯೇಯವೇನು? ಅದರಲ್ಲಿ ಈಗಾಗಲೇ ಪಡಿಯುತ್ತಿರುವ ಬಂದಿ ಕಾರಗತಿ, ಶಿಕ್ಷು ವಿಹಾರ, ನೂಲುವ ತರಗತಿ ಮುಂತಾದ ಅತ್ಯುಪಯುಕ್ತವಾದ ಕೆಲಸಗಳನ್ನು ಮುಂದುವರಿಸಿಕೊಂಡು ನ್ಯಾಯವಾದ, ವೈಕ್ತಿಗತವಾದ ವಿಚಾರಕ್ಕಾಗಿ ಹೋರಾಟವೇ? ಈ ಸಮಾಜದ ಹಾಗೂ ಕೊಡಗಿನ ಮಹಿಳೆಯರ ಜಾಗ್ರತಿಕ್ಕಾಗಿ ಸರ್ವರೂ ಸರ್ವ ಪ್ರಯತ್ನ ಮಾಡಬೇಕಲ್ಲವೆ ಸದಸ್ಯರುಗಳು ತಮ್ಮ ತಮ್ಮೊಳಗೆ ವಿರೋಧಭಾವವನ್ನು ಬೆಳೆಸಿ ಹೊರಗಿನ ಜನರ ಹಾಸ್ಯಕ್ಕೆಡೆಯೊಗುವಂತೆ ವರ್ತಿಸುವಾರಿದಾಗಿ ಈ ಸಮಾಜದ ಪ್ರತಿ ಸದಸ್ಯರಲ್ಲಿ ನನ್ನ ಅತೀ ವಿನಯದ ಕೋರಿಕೆ.

'ಸಮಾ ಹಿತೈಷಿ'

The Coorg Central Co-operative Bank, Ltd., Mercara, Dated 8-6-1944.

WANTED.

30 candidates (3 or 4 seats reserved for ladies) who are natives of Coorg of S. S. L. C. or equivalent qualification (minimum) for training in Co-operation and allied subjects for 7 months at Mercara from 15th July 1944 under the directions of the Registrar of Co-operative Societies, Coorg. Applications in candidats' own writing together with credentials and certificates in original should be sent so as to reach me not later than 10-7-1944. All candidates should come for an interview as per notice to the Registrar's office on 15-7-1944 at 10 A.M.

Rs. 15 per mensem to candidates will be given as stipend at the rate of Re. 10-per month under certain conditions.

For further particulars apply to the undersigned or the Registrar of Co-operative Societies Coorg.

I. P. CARIAPPA,
President, Central Bank.

"ಪ್ರೇಮಿಕ ಲೈ"

ಕಂಪೆನಿಯಲ್ಲಿ ನಿಮ್ಮ ಮೂಡುಂಯೇ

ಯೋಗ್ಯವೆಂದು ನಿಮ್ಮ **1944**ರ ತೀರ್ಮಾನವಾಗಲಿ

1943ರಲ್ಲಿ ಮಾಡಿದ ವಿಮಾ ಮೌಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಆಫೀಸು:—ಹೊಸ ದಿಲ್ಲಿ.

ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:—

ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟಿ ಬ್ರಾಂಚ್ ಮೇನೇಜರ್, ಮಂಗಳೂರು.

26)

ಗಾಂಧಿ-ವೇವೆಲ್ ಪತ್ರಗಳು

—೦೦—

ಮಹಾತ್ಮಗಾಂಧಿಯವರು ಜೂನ್ ತಾ. 17 ರಲ್ಲಿ ವೈಸರಾಯರಿಗೆ ಒಂದು ಸ ಪ್ರ ಬರೆದು ದೇಶವು ತನ್ನಿಂದ ಬಹುವಾ ವನ್ನು ಅಪೇಕ್ಷಿಸುತ್ತಿದೆಯೆಂದೂ ತನ್ನ ಆರೋಗ್ಯವು ಸುಧಾರಿಸಲು ಇನ್ನೂ ಹಲ ವು ದಿನಗಳನ್ನು ಬೇಕಾಗಬಹುದೆಂದೂ, ಹೇಗೂ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಯ ಸದಸ್ಯರನ್ನು ಕಾಣದೆ ಯಾವ ಅಭಿ ಪ್ರಾಯವನ್ನೂ ತಾನು ಕೊಡಲಾರೆನೆಂ ದೂ, ಈ ನೊದಲು ಜೈದಿಯೂಗಿದ್ದಾಗ ತ ನ್ನನ್ನು ವರ್ಕಿಂಗ್ ಕಮಿಟಿಯವರಿಂದಿಗೆ ಭೇಟಿಮಾಡಲು ಬಿಡಬೇಕೆಂದು ಕೇಳಿ ದ್ದರೂ ನಿರಾಕರಿಸಲಾಗಿತ್ತೆಂದೂ, ಆಗ ಜೈಲಿನಿಂದ ಬಿಡುಗಡೆಯಾಗಿರುವ ಕಾರಣ ಪುನಹ ವರ್ಕಿಂಗ್ ಕಮಿಟಿ ಮೆಂಬರರ ನ್ನು ಕಾಣುವ ಅಪೇಕ್ಷೆಯಿದೆಯೆಂದೂ ಆ ದಕ್ಕೆ ಸರಕಾರವು ಅನುಮೂಡಿಕೊಡಬೇ ಕೆಂದೂ ಕೇಳಿದ್ದರು. ಅಲ್ಲದೆ ಹೀಗೆ ವ ರ್ಕಿಂಗ್ ಕಮಿಟಿಯ ಭೇಟಿಗೆ ಬಿಡುವ ನೊದಲು ತಮ್ಮನ್ನು ಕಂಡು ಮಾತಾಡುವ ದು ಅಗತ್ಯವೆಂದರೆ ತನಗೆ ಗುಣವಾಗೂಡನೆ ಯೇ ಬೇಕಾದಲ್ಲಿಗೆ ಬರಲು ಸಿದ್ಧನಿರುವೆ ನೆಂದೂ ತಿಳಿಸಿದ್ದರು.

ವೈಸರಾಯರು ಈ ಪತ್ರಕ್ಕೆ ಉತ್ತರ ಕೊಡುತ್ತಾ ಗಾಂಧೀಜಿ, ನುತ್ತು ಸರಕಾರ ದೊಳಗೆ ಬಹು ದೊಡ್ಡ ಅಭಿಪ್ರಾಯ ವ್ಯ ತ್ಯಾಸವಿರುವ ಕಾರಣ ಸದ್ಯ ತಮ್ಮ ಭೇಟಿ ಯಿಂದ ಯಾವ ಪ್ರಯೋಜನವಾಗಲಾರ ದೆಂದೂ, ವರ್ಕಿಂಗ್ ಕಮಿಟಿ ಸದಸ್ಯರನ್ನು ಕಾಣುವುದರಿಂದಲಾದರೂ ಹೆಚ್ಚಿನ ಲಾಭ ವೇನೂ ಗಲಾರದೆಂದೂ, ನೀವು 'ಕ್ವಿಟ್ ಇಂಡಿ ' ತರಾವನ್ನು ಪುನಹ ಸಮರ್ಥಿ ಸಿರುವುದರಿಂದ ಯಾವ ಬದಲಾವಣೆಯೂ ಆಗುವುದು ಸಾಧ್ಯವಿಲ್ಲವೆಂದೂ, ನೀವು ಗು ಣಮುಖರಾದಾಗ ನಿಮ್ಮಿಂದ ವಿಧಾಯಕ ವಾದ ಸೂಚನೆಗಳು ಬಂದೆದ್ದೇ ಆದರೆ ಕೆ ವುಗಳನ್ನು ಸಂತೋಷದಿಂದ ಪರ್ಯಾಲೋ ಚಿಸಲಾಗುವುದೆಂದೂ ಆದ್ದರಿಂದ ಸದ್ಯದ ಭೇಟಿಯಾಗಲಿ, ವರ್ಕಿಂಗ್ ಕಮಿಟಿಯ ನ್ನು ಕಾಣುವುದಾಗಲೀ ಪ್ರಯೋಜನಕಾರಿ ಯಾಗದೆಂದೂ ಹೇಳಿರುವರು.

———

'ಇದು ಹೊಸ ಹಿಂದೂಸ್ಥಾನ ಮಿಸ್ಟರ್-'!

—೦೦—

'ಬೊಂಬೇ ಕ್ರಾನಿಕಲ್' ಪತ್ರಿಕೆಯ ಲ್ಲಿ 'ಡಿಮ್ಮ' ಎಂಬವರು ಬರೆದ ಒಂದು ಕ ಥೆ ಸ್ವಾರಸ್ಯಮಯವಾಗಿದೆ. ಓರ್ವ ವ ಯೋವೃದ್ಧ ಹಿಂದೂ ಮಹಾಶಯರು ತ ಮ್ಮ ಕುಟುಂಬದ ನಾಲ್ಕು ಮಂದಿ ಮಹಿ ಳೆಯರೊಡನೆ ರೈಲಿನಲ್ಲಿ ಪ್ರಯಾಣ ಮಾ ಡುತ್ತಿದ್ದರು. ಸ್ತ್ರೀಯರ ಸೌಕರ್ಯದ ಬಗ್ಗೆ ಅವರು ಎಷ್ಟೇ ತರಗತಿಯ ಒಂ ದು ಗಾಡಿಯನ್ನು ರಿಸರ್ವ್ ಮಾಡಿದ್ದರು. ಪೂನಾ ಮತ್ತು ಬೆಳಗಾಂವ ಸ್ಟೇಶನುಗಳ ನಡುವೆ ಒಂದು ಅಪೂರ್ವ ಘಟನೆ ನಡೆ ಯಿತು. ಆಬೊಂದು ಸ್ಟೇಶನಿನಲ್ಲಿ ಹಿಂ ದೂ ಮಹಾಶಯರು ಪಾನೀಯ ಖರೀದಿ ಗಾಗಿ ಕೆಳಗಿಳಿದಾಗ ನಾಲ್ಕು ಮಂದಿ ಹೈ ವ್ಯಷ್ಟಷ್ಟೆ ಟಾಮಿಗಳು (ಸೈನಿಕರು) ಹಿಂ ದೂ ಮಹಾಶಯರು ಈ ಮೊದಲೇ ರಿಸ ರ್ವ್ ಮಾಡಿದ್ದ ಗಾಡಿಯನ್ನೇರಿದರು. ತ ಮ್ಮ ಲಗ್ಗೇಜ್ ಸಹಿತ ನಾಲ್ಕು ಸೀಟುಗಳ ನ್ನು ಆಕ್ರಮಿಸಿಬಿಟ್ಟರು. ಈ ಹೊಸ ಆ ಕ್ರಮಣದಿಂದ ಮಾಪದ ಮಹಿಳೆಯರು ಮೂಲೆ ಸೇರಬೇಕಾಯಿತು.

ಕಂಬುಂಬದ ಯಜಮಾನರು ಪಾನೀ ಯಗಳನ್ನು ಖರೀದಿಮಾಡಿ ತಮ್ಮ ಗಾಡಿಗೆ ಮರಳಿದಾಗ ಒಳಗೆ ಟಾಮಿಗಳು ಆಸನಾ ರೂಢರಾಗಿದ್ದರು; ಉಳಿದೆಯೆರಾದ ಹೆಂಗ ಸರು ಮೂಲೆ ಸೇರಿದ್ದರು ಈ ದೃಶ್ಯ ಕಂ ಡು ಬೇರೆ ಯಾರಾದರೂ ಇದ್ದರೆ ರೇಗಿ ಬೀಳುತ್ತಿದ್ದರು. ಹು ನೆ ತರುಣರಾ ಗಿದ್ದರೆ ಆಂಗಿಯ ಮೇಲಕ್ಕೆತ್ತಿ ಕೈ ಮಾಂದೆ ಮಾಡುತ್ತಿದ್ದರು. ಆದರೆ ಈ ವೃದ್ಧ ಮಹಾಶಯರು ಎಲ್ಲವನ್ನೂ ತಾಳ್ಮೆ ಯಿಂದ ಸಹಿಸಿ, 'ಸಹ್ಯರೇ, ಗಾಡಿ ರಿಜ ರ್ವ್ ಆಗಿದೆ. ಆದುದರಿಂದ ದಯವೂ ಡಿ ಮತ್ತೊಂದು ಗಾಡಿಯನ್ನು ನೋಡಿ' ಎಂದರು. ಆದರೆ ಆ ಟಾಮಿಗಳು ಇವ ರ ಮಾತನ್ನು ಕೇಳಬೇಕಲ್ಲ! ಮುದುಕನ ಮಾತಿಗೆ ಗಮನ ಕೊಡದೆ ಹೊಗೆ ಬತ್ತಿ ಸೇವಿಸಲಾರಂಭಿಸಿದರು. ಇದು ಪ್ರಮುಖ ಕ್ಕೆ ಕಾರಣವಾಗುತ್ತದೆಂದು ಬಗೆದು ಹಿಂ ದೂ ಮಹಾಶಯರು ತಪಾಯ ಕಾಲದಲ್ಲಿ ಎಳೆದ ಸರಪಣಿಯನ್ನು ಎಳೆದುಬಿಟ್ಟರು. ಅಷ್ಟರಲ್ಲಿ ರೈಲು ನಿಂತಿತು. ಸರಪ ಣಿಯನ್ನೆಳೆದವರಿಂದು ನೋಡಲು ಗಾ ರ್ಡನ ಆಗಿರುವನಾಯಿಂ.. ವಿಷಯವೇ ನೆಂದು ವಿಚಾರಿಸಿದಾಗ ಮುದುಕ ಎಲ್ಲವ ನ್ನೂ ಸವಿಸ್ತಾರವಾಗಿ ವಿವರಿಸಿದ. ಆದ ರೆ ಟಾಮಿಗಳ ಎದುರು ಮಾತಾಡುವ ಧೈ ರ್ಯ ಆ ಗಾರ್ಡನಿಗಿಲ್ಲ ಸಹಾಯ ಶೂ ನ್ಯತೆಯನ್ನು ಮುಖದಲ್ಲಿ ವ್ಯಕ್ತಪಡಿಸಿ ಆ ವನು ನೆಟ್ಟಗೆ ನಡೆದು ಬಿಟ್ಟ. ರೈಲು ವು ನಹ ಮುಂದುವರಿಯಿತು. ಕೆಲ ಕ್ಷಣಗ ಳ ನಂತರ ಮುದುಕ ಪುನಹ ಸರಪಣಿಯು ನ್ನೆಳೆದ. ಈ ಬಾರಿ ಸ್ಟೇಶನ್ ಸಮೀಪ ವಂದುದರಿಂದ ಸ್ಟೇಷನಿನಲ್ಲೇ ರೈಲು ನಿಂ ತಿತು.

ಸ್ಟೇಷನ್ ಮಾಸ್ಟರನನ್ನೇ ಈ ವಿಷ ಯ ವಿಚಾರಿಸಲು ಕರೆಯಲಾ ಯಿತು. ಆದರೆ ಪಾಪದ ಸ್ಟೇಶನ್ ಮಾ ಸ್ಟರರು ಟಾಮಿಗಳನ್ನು ನೋಡಿ ಬಾಲಮ ಡಚಿಬಿಟ್ಟರು. 'ನನ್ನಿಂದ ಇದರ ಇತ್ಯ ರ್ಥವಾಗುವಂತಿಲ್ಲ'ವೆಂದುಬಿಟ್ಟರು. ಪು ನಹ ರೈಲು ತನ್ನ ಹಾದಿ ಹಿಡಿದು ಮುಂದೆ ಸಾಗಿತು. ಹಿಂದೂ ಮಹಾಶಯರು ತ ಮ್ಮ ಛಲ ಬಿದಲಿಲ್ಲ. ಮತ್ತೊಮ್ಮೆ ಸರಪ ಣಿಯನ್ನು ಎಳೆದುಬಿಟ್ಟರು. ಈ ಬಾರಿ ಮತ್ತೊಮ್ಮೆ ದೊಡ್ಡ ಅಧಿಕಾರಿಗಳ ಆಗಮ ನವಾಯಿತು. ಅವರು ಟಾಮಿಗಳಿಗೆ ಹೆದ ರುವ ಮಾದರಿಯಲ್ಲ. ನಾಲ್ವರನ್ನೂ ಲ ಗ್ಗೇಜ್ ಸಮೇತ ಕೆಳಗಿಳಿಸಿಬಿಟ್ಟರು.

ಟಾಮಿಗಳು ಗಾಡಿಯಿಂದ ಕೆಳಗಿ ದು ಹೋಗುವಾಗ ಹಿಂದೂ ಮಹಾಶಯ ರು ವಿಜಯೋಪಹರ್ಷದ್ದು ಬೀರುತ್ತಾ, 'ಇದು ಹೊಸ ಹಿಂದೂಸ್ಥಾನ ಮಿಸ್ಟರ್' ಎಂದರು.

'ನ. ಭಾ.'

———

—— ಶೇಲ ಧಾ ——

ಎಂಟೆ ಮಾಲೇರಿಯಾ ಜ್ವರನಿವಾರಿ ಪಿಲ್ಸ್.

ಎಲ್ಲ ತರಹ ಜ್ವರ, ಜ್ವರ ಗಡ್ಡೆ, ತಜ್ಞನೈ ಆಶಕ್ತತೆ ಮೇಲೆ ರಾಮಬಾಣ; ಲಿ ವರ, ಹೊಟ್ಟೆನೋವು, ಮಲಬದ್ಧತೆ, ಸುಧಾರಿಸಿ ಶಕ್ತಿ ಬೆಳೆಸುತ್ತದೆ. ಕ್ವಿ ನೈನ್ ಬದಲು ವೈದ್ಯ ಡಾಕ್ಟರರು ದವಾ ಖಾನೆಗಳಲ್ಲಿ ಉಪಯೋಗಿಸುವರು. 1000 ಗುಳಿಗೆಗಳಿಗೆ ರೂ. 15-0-0, 100ಕ್ಕೆ ರೂ. 1-12-0 ಈ ಔಷಧಿ ಗಳಲ್ಲಿ ಗುಣವಿಲ್ಲವೆಂದು ನಿಮ್ಮ ಮಾಡಿ ಕೊ ಟ್ಟವರಿಗೆ ಒಂದು ಸಾವಿರ ರೂ. ಬಹು ಮಾನ ಕೊಡಲಾಗುವುದು. ಪ್ರತಿ ಊರಿ ನಲ್ಲಿ ಮಾರಾಟಕ್ಕೆ ಏಜೆಂಜರು ಬೇಕು.

ಶೇಲಾ ಕೆಮಿಕಲ್ ಕಂಪೆನಿ,
ಶಿರಸಿ, ಉತ್ತರ ಕನ್ನಡ.

ಸೋಲ್ ಏಜೆಂಟರು—
ಎಸ್. ಎಲ್. (ಅಪ್ಪೂರಾವ್) ಧಾಳಪ್ಪ,
ಬಡವರ ಔಷಧಿ ಸರ್ವಿಸ್,
ಶಿರಸಿ, ಉತ್ತರ ಕನ್ನಡ.

ವ್ಯವಸಾಯಗಾರರಿಗೆ ಸುಸಮಯ.

ಗದ್ದೆ ಮತ್ತು ತೋಟಕ್ಕೆ ಬೇಕಾಗುವ ಉತ್ತಮ ಸರ್ದೆಯ ಗುಳಿ, ಗುದ್ದಲಿ, ಮುಳ್ಳುಗುದ್ದಲಿ, ಪಿಕಾಸಿ, ಪಾವಡಿ, ಕತ್ತಿ, ಕೆಸಿ ಬಾಕಿ, ಕೊಡಲಿ, ಪಳುವಿನ ದಬ್ಬೆ, ಕೂಲಿ ಕಂಬಳಿ, ಸ್ಪ್ರಮಿಶನ್ನಿಗೆ ಬೇಕಾದ ಪ್ಯಾಕಿಂಗ್ ಮತ್ತು ಜಟ್, ರಬ್ಬರ್‌ಹೋಸ್ ಮುಂತಾದವೆಲ್ಲಾ (Spar parts) ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತವೆ.

ಪಲ್ವರ್ ಮಿಷನ್ ಮತ್ತು ಸ್ಪ್ರೆಯಿಂಪುಗಳನ್ನ ರಿಪೇರಿ ಸಹ ಮಾಡಿಕೊಡ್ತೇವೆ.

ಧಾರಣೆ ವಗೈರೆ ಹೆಚ್ಚಿನ ಸಂಗತಿಗಳಿಗೆ ಕೇ ನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಸೀತಾ ರಾಮಯ್ಯ ಅಂಡ್ ಕೊ.,
ವಿಶ್ವೇಶ್ವರಪುರ, ಬೆಂಗಳೂರು ಸಿಟಿ.

12-10

ಎಂಪೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ:—೧೯೭೬.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು

ಒಟ್ಟು ಆದಾಯ .. ೯೭,೩೭,೨೦೦ ರೂಪಾಯಿಗಳನ್ನು ಮೀರಿದೆ
ಚಾಲ್ತಿಯಲ್ಲಿರುವ ವಿಮೆ ೧೩,೪೯,೪೬,೪೦೦ ,,
ಆಸ್ತಿ .... ೩೨,೮೧,೪೬,೧೦೦ ,,

ಕಂಪೆನಿ ಸ್ಥಾಪಿತವಾದಂದಿನಿಂದ ಕೊಟ್ಟ ಕ್ಲೈಮ್ ಮೊಬಲಗು ೮,೩೮,೦೦,೭೦೦ ರೂ. ಗಳನ್ನು ಮೀರಿದೆ.

ಆಂಗ ಕಛೇರಿ: ಡಿಸ್ಪೆನ್ಸರಿ ಬಿಲ್ಡಿಂಗ್ ಕೆಂಪೇಗೌಡ ರಸ್ತೆ, ಬೆಂಗಳೂರು.

(31) ವಿಮೆನ್ನ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

BHUVANENDRA PRODUCTS LIMITED,
KATAPADI, (S. Kanara) DEPOT— Maharatha Galli, Hubli
'ಭುವನೇಂದ್ರ' ಕಸ್ತೂರಿ ಮಿಶ್ರಿತ ದಶಮೂಲರಿಷ್ಟ.

ಗರ್ಭಾಶಯ ದೋಷದಿಂದ ಗರ್ಭಧಾರಣೆಯಾಗದಿರುವುದು, ಶರೀರವು ಅಶಕ್ತವಾಗಿರೋಣ, ಗರ್ಭಾಶಯದಿಂದ ಗರ್ಭಪಾತವಾಗೋಣ, ಸೂತಿಕರೋಗ, ಪುಷ್ಪಸ ಸಂಬಂಧ ಪೀಡೆ ಇತ್ಯಾದಿಗಳು ನಿವಾರಣೆಯಾಗಿ ಸುಖಪ್ರಸವ ಆಗುವ ಗುಣಹೊಂದುವವು. ಗರ್ಭಧಾರಣೆಗೆ ಸಹಾಯ ನೀಡುವುದು. ವೀರ್ಯವೃದ್ಧಿಮಾಡಿ ದೇಹಕ್ಕೆ ಪೂರ್ಣ ಬಲ ಕೊಡುವುದು. ನಮ್ಮ ಔಷಧಿಯನ್ನು ಉಪಯೋಗಿಸಿದವರು— (1) ಮಂಗಳೂರು ಸೋರ್ಸ್, ಜನರಲ್ ಮರ್ಚೆಂಟ್ಸ್, ಮಂಗಳೂರು. (2) ಸಾಂತಪ್ಪ ಎಮ್ಮುನಿಶಿನ್ ಸ್ಟೋರ್ಸ್, ಮಡಿಕೇರಿ (3) ಡಾ. ಬಿ. ಕೆ. ನಂಜುಂಡೇಶ್ವರ, ಮಡಿಕೇರಿ. (4) ಡಾ. ಪಿ ಎಂ ಪಾರ್ಥಸಾರಥಿ, ಪೊನ್ನಂಪೇಟೆ. (5) ಡಾ. ಎಸ್. ಬಿ. ಕಾರ್ಯಪ್ಪ, ಪೊನ್ನಂಪೇಟೆ. (6) ಎಸ್. ಶ್ರೀನಿವಾಸಯ್ಯ, ಭಾಗಮಂಡಲ (7) ಬಿ. ಎಸ್ ರಾಜಶೇಖರಪ್ಪ & ಸನ್ಸ್, ಸೋಮವಾರಪೇಟೆ. (8) ಡಾ. ಎ. ಸಿ. ಸುಬ್ಬರಾಮಯ್ಯ, ವೀರಾಜಪೇಟೆ (9) ಡಾ. ಇ. ಆರ್. ಅಸ್ಸಣ್ಣ, L. I. M., ವೀರಾಜಪೇಟೆ. (10) ಡಾ. ಕೆ. ಜಿ. ಕರುಂಬಯ್ಯ, ಮಡಿಕೇರಿ. (11) ಕೂರ್ಗ್ ಪ್ಲಾಂಟರ್ಸ್ ಕೋ-ಆಪರೇಟಿವ್ ಸೊಸೈಟಿ, ವೀರಾಜಪೇಟೆ. (12) ಶ್ರೀ ಎ. ಎಸ್. ಮೂಡಯ್ಯ, ಕ್ಲಾತ್ ಮರ್ಚೆಂಟ್, ಶಿವಮೊಗ್ಗ (13) ಡಾ. ಯಸ್. ವೆಂಕಟರಂಗಾಚಾರ್ಯ, ಯಲ್. ಎ. ಯಂ. ಯಸ್. ಸೋಮವಾರಪೇಟೆ.

[ಭುವನೇಂದ್ರ ಪ್ರೋಡಕ್ಟ್ಸ್, ಲಿಮಿಟೆಡ್, ಕಟಪಾಡಿ, ದ. ಕನ್ನಡ.

52-14 ಡಿಪೋ:— ಮರಾಠ ಗಲ್ಲಿ, ಹುಬ್ಬಳ್ಳಿ.

ನಾಳೆ ಎಂಬುವುದಿಲ್ಲ!

ನಮ್ಮ ಆಪ್ತ ಮುತ್ತಜ್ಜಂದಿರು ಯಾವಾಗಲೂ "ಶುಭಸ್ಯ ಶೀಘ್ರಂ" ಎಂದು ಹೇಳುತ್ತಿದ್ದರು. ನಿಮ್ಮ ಬಳಗದ ವರಿಗೂ ಮತ್ತು ಪ್ರೀತಿಗೆ ಪಾತ್ರರಾದವರಿಗಾಗಿ ನೀವು ಮಾಡಬಹುದಾದ ಉತ್ತಮ ಸೇವೆ ವಿಮೆ ಮಾಡುವುದೇ ಆದ ಕಾರಣ ಅದನ್ನು ಈಗಲೇ ಮಾಡಬೇಕು. ಬುದ್ಧಿವಂತರು ಹಿರಿಯದಲ್ಲಿದ್ದು ಸರಿಯಾದ ಉತ್ತಮಸ್ಥಿತಿಯಿರುವಾಗಲೇ ವಿಮೆ ಮಾಡಿ ನಿಶ್ಚಿತ ವರಮಾನವನ್ನು ಪಡೆಯುತ್ತಾರೆ. ಅವರು ತಮ್ಮ ಭವಿಷ್ಯವನ್ನು ಸಾರ್ವಜನಿಕ ನಂಬಿಕೆಗೆ ಪಾತ್ರವಾದ ಒಂದು ಕಂಪೆನಿಗೆ ಒಪ್ಪಿಸುತ್ತಾರೆ.

ನಮ್ಮ 33 ವರ್ಷಗಳ ಅನುಭವದಿಂದ ಇಂಡಿಯಾದ ಉತ್ತಮ ಕಂಪೆನಿಗಳಲ್ಲಿ ಒಂದಾದ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿ.

ಇದನ್ನು ನಿಮಗೆ ಸಿಫಾರಸ್ಸು ಮಾಡಬಲ್ಲೆವು.

ಧಾರಾಳ ಕಮಿಷನ್ ಮೇಲೆ ಪ್ರತಿನಿಧಿಗಳಿಲ್ಲದ ಕೊಡಗಿನ ಭಾಗಗಳಿಗೆ ಏಜೆಂಟರು ಬೇಕಾಗಿದ್ದಾರೆ.

ಕೊಚ್ಚಿಕಾರ್ ಬ್ರದರ್ಸ್ ಲಿ.—ಪ್ರಾಮುಖ್ಯ ಏಜೆಂಟರು.

ದಕ್ಷಿಣ ಇಂಡಿಯಾದ, ಹಿಂದಿ ಸಂಸ್ಥಾನಗಳಲ್ಲಿರುವ ಕೊಡಗಿನ ಭಾಗಗಳಿಗೆ ಪೊ. ಬಾ. 337. ಮೌಂಟ್ ರೋಡ್, ಮದ್ರಾಸು.

32) ಕಛೇರಿಗಳು ಮತ್ತು ಏಜೆನ್ಸಿಗಳು ದಕ್ಷಿಣ ಇಂಡಿಯಾದಲ್ಲೆಲ್ಲಾ ಇವೆ.

ಕಸ್ತೂರ್‌ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ಧನ ಸಹಾಯ ಮಾಡಿರಿ.

Edited, Printed and Published by P. I Bellappa at 'Kodagu' Press, Mercara, for 'Kodagu' Ltd,

"KODAGU" MERCARA. (Coorg).

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೪-೦.

ಸಂಪುಟ ೨೪ | ತಾರೀಕು ೧೪—೩—೧೯೪೪ನೇ ಶುಕ್ರವಾರ. | ಸಂಚಿಕೆ ೩

THE CANARA BANKING CORPORATION, Ltd.,

(Incorporated in British India with Limited liability)

ESTD. 1906 **Head Office:-UDIPI.**

Authorised Capital	....	.. Rs. 25,00,000
Subscribed Capital	....	.... ,, 16,00,000
Paid up Capital	....	.... ,, 13,72,900
Reserves	....	.... ,, 4,10,000

52-7

TOTAL WORKING CAPITAL—EXCEEDS ONE CRORE.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers.

ಧಾತು ವೃದ್ಧಿ ರಸಾಯನ ಎಂದರೆ ಝಂಡು ಕಂಪೆನಿಯ (ZANDU)

"ರಾಕ್ಫೋ - ಫಾಸ್ಫೋ - ಮಾಲ್ಟ್" ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ರಸಾಯನ | ಈ ಕಾಯಿಲೆಯವರಿಗೆ ಟಾನಿಕ್. ಆರೋಗ್ಯದಿಂದಿರುವವರಿಗೆ ಟಾನಿಕ್. ಧಾತುಕ್ಷೀಣತೆಯುಳ್ಳವರಿಗೆ ಟಾನಿಕ್. ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ – ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ಕಾಲಿಗೆ ರುಚಿಯಾಗಿರುವುದು. ಇದರಲ್ಲಿ ಪವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಗಳಿವೆ.

ಇದರಲ್ಲಿ ಇಲೆಕ್ಟಿರ್ ಫಾಸ್ಫೋಮಾಲ್ಟ್, ಹೆಪೋಗ್ಲೋಬಿನ್, ಸೋಡಿಗ್ಲಿಸರೊ ಫಾಸ್ಫೇಟ್ ಪೆಪ್ಸಿನ್, ಸಾಲ್, ಮಾಲ್ಟ್ ಎಕ್ಸ್‌ಟ್ರಾಕ್ಟ್ ದ್ರಾಕ್ಷಾಸವ – ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ.

ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಶಾಪುಗಳಲ್ಲಿವೆ.

45 **ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಗೋಖಲೆ ರೋಡ್ ಬಾಂಬೆ.**

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿ., ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.] [1921ರಲ್ಲಿ ಸ್ಥಾಪಿತವಾದದ್ದು.

ಶೇರ್ ಬಂಡವಾಳ	 1,00,000	0 0	ವಸೂಲಾದ ಕ್ಷೇಮನಿಧಿ	 2,07,052	1 7
ವಸೂಲಾದ ಶೇರ್ ಮೊಬಲಗು	 89,310	0 0	ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	 1,27,750	0 4
ಜಮಾಬಂದ ಲೇವಣಾತಿ	 1,97,957	0 10	ಶ್ರಿಪ್ಟ್ ಡಿಪಾಜಿಟ್ಟು	 3,374	14 4

ಈ ಬ್ಯಾಂಕಿನಿಂದ ಈ ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರವ ನೋಲೆ90% ಕೊಡಲಾಗುತ್ತೆ. ನಿರಿಖು ಲೇವಣಾತಿಗಳಿಗೆ 1ವರ್ಷದಿಂದ 3 ವರ್ಷಗಳ ವರೆಗೆ ಶೇಕಡ 2. 3 ವರ್ಷಗಳಿಂದ 5 ವರ್ಷಗಳವರೆಗೆ 2½. 5 ವರ್ಷಗಳಿಂದ10 ವರ್ಷಗಳ ವರೆಗೆ 3½. 10 ಮತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟುಗಳಿಗೆ (on dailybalance) ಶೇ. 0-8-0. ಶ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ಶಕ್ತಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟ್:- ಶ್ರೀ. ಐನಂಡ ಪಿ. ಕಾರ್ಯಪ್ಪನವರು.

ಮ್ಯಾನೇಜರ್:— & ಸೆಕ್ರೆಟರಿ:— ಶ್ರೀ ಕೊಂಗೆಟ್ಟಿರ ಪಿ. ಅಪ್ಪಯ್ಯನವರು.

ತಾ. 1-3-1944. (52-2)

ಕಾಗದ ನಿಯಂತ್ರಣ

ಲೇ:–ಶ್ರೀ ಎಸ್. ಎಸ್. ಕಾರಂತ.

ಹಿಂದುಸ್ಥಾನ ಸರಕಾರವು ಹೊಸದಾಗಿ ಮೊನ್ನೆ ಜೂನ್ ತಿಂಗಳ ಪೂರ್ವಾರ್ಧದಲ್ಲಿ ಕಾಗದ ನಿಯಂತ್ರಣಾಜ್ಞೆಯನ್ನು ಹೊರಡಿಸಿತು. ಈ ಅವ್ಯವಹಾರ್ಯವಾದ ಮತ್ತು ಅಸಂಬದ್ಧವಾದ ಕಾನೂನಿನನ್ನು ಹಿಂತೆಗೆದುಕೊಳ್ಳಬೇಕೆಂದು ಹಿಂದುಸ್ಥಾನದ ಪತ್ರಿಕಾಕರ್ತರು, ಮುದ್ರಕರು, ಪ್ರಕಾಶಕರು, ಕಾಗದವನ್ನು ಬಳಸುವ ಎಲ್ಲರೂವಿಕಮುಖವಾಗಿ ಅಭಿಪ್ರಾಯಪಟ್ಟಿರುತ್ತಾರು ಆದರೆ ಈ ಕಾನೂನಿನಲ್ಲಿ ಸುಧಾರಣೆಯಾಗುವ ಲಕ್ಷಣಗಳು ಇನ್ನೂ ತೋಗುತ್ತಿಲ್ಲ

ಹಿಂದುಸ್ಥಾನ ಸಂರಕ್ಷಣೆ ಕಾಯಿದೆಯ ಪ್ರಕಾರ ಈಗ 2 ವರ್ಷಗಳಿಂದ ಅನೇಕ ಹೊಸ ಕಾನೂನುಗಳು ರೂಢಿಗೆ ಬಂದಿರುವವು. ಅವುಗಳಿಂದಾಗುವ ಬಾಧೆ ಜಾನಿಗಳನ್ನು ವಿವೇಚಿಸುತ್ತ ಹೋದರೆ ಅದೊಂದು ದೊಡ್ಡ ಪುಸ್ತಕವೇ ಆಗುವುದು.

ಈಗ ಹೊಸದಾಗಿ ಸರಕಾರವು ಹೊರಡಿಸಿರ ಈ ಕಾನೂನು ಅನಿವಾರ್ಯವಾಗಿದೆ ಎಂದು ಹೇಳಬಹುದು. ಇಂತೆಂದೆ ಜನತೆಗೆ ಎಷ್ಟರ ಮಟ್ಟಿಗೆ ಹಾನಿ ತಟ್ಟುವುದೆಂಬುದನ್ನು ಸ್ಥೂಲದೃಷ್ಟಿಯಿಂದ ಈ ಕೆಳಗೆ ವಿವೇಚಿಸಲಾಗಿದೆ:

1943 ರಲ್ಲಿ ಬಳಸಿದ ಕಾಗದದ $\frac{1}{3}$ ಅನ್ನು ಮಾತ್ರ ಇನ್ನು ಮುಂದೆ ಉಪಯೋಗಿಸಕ್ಕೆಡ್ಡೆಂದು ಈ ಕಾನೂನಿನ (100 ಪು 30) ಅರ್ಥವಿದೆ. ಇದರಿಂದ ಕಾಗದವನ್ನು ಉಪಯೋಗಿಸುವವರ ಮೇಲೆ ಗದಾ ಪ್ರಹಾರ ಬಿದ್ದಂತಾಯಿತು. ಯುದ್ಧಾರಂಭದಿಂದ ಮೊದಲ್ಗೊಂಡು ಕಾಲಕಾಲಕ್ಕೆ ಕಾಗದವು ಕ್ರಮವಾಗಿ ದೊರೆಯದ್ದರಿಂದ ಆದರೆ ಉದ್ಯೋಗವನ್ನು ಕಡಿಮೆಯೊಗುತ್ತ ಬಂತು. 1943 ರಲ್ಲಿ ಆದ ಕಾಗದದ ಉಪಯೋಗವು ಯುದ್ಧ ಪೂರ್ವದಕ್ಕಿಂತ ಎಷ್ಟೋ ಪಟ್ಟು ಕಡಿಮೆಯೊಗಿದೆ ಎಂಬುದು ನಿರ್ವಿವಾದವಾದ ನೂತು. ಪುನಃ ಅದರ $\frac{1}{3}$ ವನ್ನೇ ಉಪಯೋಗಿಸಬೇಕೆಂಬ ಸರಕಾರದ ಈ ಹೊಸ ನಿಯಂತ್ರಣಾಜ್ಞೆಯಿಂದ ಕಾಗದದ ಉಪಯೋಗವು ಯುದ್ಧ ಪೂರ್ವದಕ್ಕಿಂತ ಎಷ್ಟು ಪಟ್ಟು ಕಡಿಮೆಯೊಗಿರಬಹುದು? 1943 ರಲ್ಲಿ ಒಟ್ಟು ಎಷ್ಟು ತೂಕ ಕಾಗದವನ್ನು ಜನತೆಯ ಉಪಯೋಗಕ್ಕಾಗಿ ಸರಕಾರದವರು ಒದಗಿಸಿಕೊಟ್ಟರುವರು?

ಈಗ ನಮ್ಮೆದುರಿಗಿರುವ ಅಂಕಿ ಸಂಖೆಗಳಂತೆ ಹಿಂದುಸ್ಥಾನದಲ್ಲಿ ಮುದ್ರಕರು ಯುದ್ಧ ಪೂರ್ವದಲ್ಲಿ ಉಪಯೋಗಿಸುತ್ತಿದ್ದ ಕಾಗದದ 100 ಕ್ಕೆ 18 ರಷ್ಟನ್ನು ಮಾತ್ರ 1943 ರಲ್ಲಿ ಉಪಯೋಗಿಸಿದರೆಂದು ತಿಳಿದುಬರುತ್ತದೆ. ಈ ಪ್ರಮಾಣದಲ್ಲಿ ಕಡಿತವೆಂದರೆ ಯುದ್ಧ ಪೂರ್ವದ ಉಪಯೋಗದ 100 ಕ್ಕೆ 6 ರಷ್ಟನ್ನು ಮಾತ್ರ ಇನ್ನು ಮುಂದೆ ಉಪಯೋಗಿಸಬೇಕೆಂದಾಯಿತು.

ಇನ್ನು ಸಾರ್ವಜನಿಕರ ಮಾತು ಬೇರೆಯೇ ಇದೆ ಅವರು ಯುದ್ಧ ಪೂರ್ವದ ಪ್ರಮಾಣದ 100 ಕ್ಕೆ 15 ರಷ್ಟನ್ನು ಮಾತ್ರ 1943 ರಲ್ಲಿ ಬಳಸುತ್ತಿದ್ದರು. ಇದರ $\frac{1}{3}$ ಅಂಶದಷ್ಟನ್ನೇ ಉಪಯೋಗಿಸಬೇಕೆಂದರೆ 100 ಕ್ಕೆ 5 ರಂತಾಯಿತು. ಇಷ್ಟು ಅಲ್ಪ ಪ್ರಮಾಣದ ಕಾಗದದ ಮೇಲೆ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಎಷ್ಟು ಬಾಲಕರಿಗೆ ಹಂಚುವುದು? ಯಾರಿಗೆ ಮಾರುವುದು? ಎಷ್ಟು ಬೆಲೆ ಇಡುವುದು?

ಇನ್ನೊಂದು ನೋಟ. ಪ್ರಾಥಮಿಕ ಪಠ್ಯಪುಸ್ತಕಗಳ ಬೆಲೆಯನ್ನು 100 ಕ್ಕೆ 65 ರಂತೆ ಏರಿಸಲಾಗಿದೆ. ಅವುಗಳಿಗಾಗಿ ಕೊಡುವ ಕಾಗದದ ಪ್ರಮಾಣವನ್ನು 100 ಕ್ಕೆ 50 ರಂತೆ ಕಡಿಮೆ ಮಾಡಿರುವರು. ಅಂದರೆ ಬಾಲಕರ ಪೋಷಕರು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಹೇಗೆ ನಡಿಸಬೇಕು? ನಿರಕ್ಷರತೆಯು ಇದರಿಂದ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಇನ್ನು ಮುದ್ರಣಾಲಯಗಳ ಕೋಡಿರೆಯಂತೂ ಹೇಳತೀರದು. ಅಗಾಗಲೇ ವರ್ಷಕ್ಕೆ 3 ತಿಂಗಳು ಕಾಗದವಿಲ್ಲದೆ ಮುದ್ರಣಾಲಯಗಳನ್ನೆ ಕೂಡುವ ಹಲವಾರು ಮುದ್ರಣಾಲಯಗಳು ನಮ್ಮಲ್ಲಿವೆ. ಈ ಕಾನೂನಿನು ತಾದರೆ 3 ತಿಂಗಳು ಕೆಲಸ ನೂಡಿ ಉಳಿದ 9 ತಿಂಗಳು ಮುದ್ರಣಾಲಯಕ್ಕೆ ಬೀಗ ಹಾಕಿಕೊಂಡು ಹೋಗಬೇಕಾಗುವುದು. ಈ ಮುದ್ರಣಾಲಯಗಳಲ್ಲಿ ಕೆಲಸ ಮಾಡುವ ಕೆಲಸಗಾರರ ಗತಿಯೇನು? ನಿರಕ್ಷರತೆಯೊಂದಿಗೆ ರಾಷ್ಟ್ರದ ನಿರುದ್ಯೋಗಿಗಳ ಸಂಖೆಯು ಬೆಳೆಯುವುದಿಲ್ಲವೇ? ಈ ಕಾನೂನು ನಿಷ್ಠುರತೆಯಿಂದ ರೂಢಿಗೆ ಬಂದದ್ದೇ ಆದರೆ ಹಿಂದುಸ್ಥಾನದ ಮುದ್ರಣ ಕಲೆಯ ಕುತ್ತಿಗೆಯನ್ನು ಹಿಚುಕಿದಂತಾಗುವುದರಲ್ಲಿ ಸಂದೇಹವಿಲ್ಲ.

ಕಾಗದದ ಉತ್ಪಾದನೆಯು ಹಿಂದುಸ್ಥಾನದಲ್ಲಿ ಕಡಿಮೆಯೊಗುತ್ತ ನಡೆದಿದೆ. ಉತ್ಪಾದನೆಗೆ ಬೇಕಾದ ಕಲ್ಲಿದ್ದಲ್ಲಿಯು ಸಾಕಷ್ಟು ಪ್ರಮಾಣದಲ್ಲಿ ಪೂರೈಸಲ್ಪಡುತ್ತಿರುವುದಿಲ್ಲ. ಲಾಭಬಡಕರ ಕಡೆಗೆ ಕಲ್ಲಿದ್ದಲ್ಲಿಯ ವ್ಯಾಪಾರವು ಈಗ ಇರುವುದು. ಅವರನ್ನು ಸರಿದಾರಿಗೆ ತರುವುದು ಸರಕಾರದ ಕರ್ತವ್ಯವಿದೆ. ಹೀಗೆ ಮಾಡುವುದನ್ನು ಬಿಟ್ಟು 'ಫೀವು ಕಡಿಮೆ ಕಾಗದ ಉಪಯೋಗಿಸಿರಿ, ಇನ್ನೂ ಕಡಿಮೆ ಮಾಡಿರಿ, ಮತ್ತೂ ಕಡಿಮೆ ಮಾಡಿರಿ' ಎಂದರೆ ಎಲ್ಲ ವ್ಯವಹಾರಗಳೂ ಕಟ್ಟಾಗಿ ಹೋಗುವುದರಲ್ಲಿ ಸಂಶಯವಿಲ್ಲ. ಸರಕಾರವು ತನಗೆ ಬೇಕಾಗುವಷ್ಟು ಕಾಗದಗಳನ್ನು 'ಏನಕೇನ ಪ್ರಕಾರೇಣ' ಒದಗಿಸಿಕೊಂಡು ಜನತೆಯ ಉಪಯೋಗದ ಮೇಲೆ ಗದಾ ಪ್ರಹಾರ ಮಾಡುವುದು ಯಾವ ನ್ಯಾಯ?

ಬ್ರಿಟನದಿಂದ ಹಿಂದುಸ್ಥಾನಕ್ಕೆ ಕೊಡುವುದಾಗಿ ಆಶ್ವಾಸನೆ ಕೊಟ್ಟರುವ ಎಲ್ಲ ಕಾಗದಗಳು ಇನ್ನೂ ಹಿಂದುಸ್ಥಾನಕ್ಕೆ ಬಂದಿಲ್ಲ. ಏಕೆ ಬಂದಿಲ್ಲವೆಂದರೆ ಹಡಗುಗಳಿಲ್ಲವೆಂಬ ಉತ್ತರವು ದೊರೆಯುವುದು. ಹಡಗುಗಳನ್ನು ಒದಗಿಸಿಕೊಳ್ಳುವುದು ಯಾರ ಕೆಲಸ? ಇದು ದಿಲ್ಲಿಯಲ್ಲಿರುವ ಆಹಾರ ಮುಖ್ಯ ನಿಯಂತ್ರಣಾಧಿಕಾರಿಗಳ ಕೆಲಸವಾಗಿದೆ. ಅವರು ಹಡಗುಗಳನ್ನು ಒದಗಿಸಿಕೊಂಡು ಕಾಗದಗಳನ್ನು ತರಿಸಿಕೊಳ್ಳದ ತಪ್ಪನ್ನು ಮುಚ್ಚಿಕೊಳ್ಳಲು ಈ ಕಾನೂನನ್ನು ಹೊರಡಿಸಿರುವರು ಎಂದರೆ ತಪ್ಪಾಗಬಹುದೇ?

ಜನ ಜೀವನಕ್ಕೆ ಅನ್ನವಸ್ತ್ರಗಳು ಎಷ್ಟು ಉಪಯುಕ್ತವಾಗಿವೆಯೋ ಅಷ್ಟೇ ಕಾಗದವೂ ಉಪಯುಕ್ತವಾಗಿದೆ. ಆದುದರಿಂದ ಇದ್ದುದರಲ್ಲಿ ತಮಗೆ ಬೇಕಾದಷ್ಟು ತೆಗೆದುಕೊಂಡು ಉಳಿದದ್ದರ ಮೇಲೆ ನಿಯಂತ್ರಣಾಜ್ಞೆಯನ್ನು ಹೊರಡಿಸುವ ತಪ್ಪು ದಾರಿಯನ್ನು ಬಿಟ್ಟು ಸರಕಾರವು ಮುದ್ರಣಕ್ಕೆ ಬೇಕಾದ ಕಾಗದಗಳನ್ನು ಒದಗಿಸಿಕೊಡಲು ಮುಂದೆ ಬರಬೇಕು

'ಹು. ಗ'

ಹಾರಾಡುವ ಬಾಂಬುಗಳ ಧಾಳಿಯಿಂದ ಹಾವಳಿ.

ತಾ. 6ರ ಬೆಳಿಗ್ಗೆ 6 ಗಂಟೆಯ ವರೆಗೆ ಇಷ್ಟು ದಿವಸಗಳೂ ಒಟ್ಟು 2754 ಹಾರಾಡುವ ಬಾಂಬುಗಳು (ವೈಮಾನಿಕರಿಲ್ಲದ ಜರ್ಮನ್ ವಿಮಾನಗಳು) ಬ್ರಿಟನಿಗೆ ಬಂದಿದ್ದವು ಎಂದು ಬ್ರಿಟಿಷ್ ಮುಖ್ಯ ಮಂತ್ರಿ ವಿ. ವಿನ್‌ಸ್ಟನ್ ಚರ್ಚಿಲರು ಕಾಮನ್ ಸಭೆಯಲ್ಲಿ ಈ ವಿಷಯ ತಿಳಿಸಿದರು

'ಹೀಗೆ ಬಂದ ಹಾರಾಡುವ ಬಾಂಬುಗಳಲ್ಲಿ ಬಹಳ ಸಂಖೆಯವನ್ನು ದಡದಾಟ ಬರುವುದಕ್ಕೆ ಮುಂಚೆಯೇ ಕಾಲ್ಪಾ ಲುವೆಯಲ್ಲಿಯೇ ಕೆಳಕ್ಕುರುಳಿಸಲಾಯಿತು.

'ಈ ರೀತಿಯ ವಿಮಾನ ಧಾಳಿಗಳಿಂದ 2752 ಜನರು ಮಡಿದರು. 8000 ಜನರು ಗಾಯಗೊಂಡರು. ಸಾವುನೋವುಗಳು ಆದದ್ದೆಲ್ಲಾ ಲಂಡನಿನಲ್ಲಿಯೇ ಬಹುಮಟ್ಟಿಗೆ ಆಗಿದೆ. ಗುರಿಗೆ ಸರಿಯಾಗಿ ಹೊಡೆಯಲಸಮರ್ಥವಾದ ಇಂತಹ ಒಟ್ಟು ಆಯುಧಕ್ಕೆ ಲಂಡನ್ ನಗರವು ಏಕ ಮಾತ್ರ ವಿಶೇಷ ಗುರಿಯಾಗಿದೆ.

'ಒಳದೇಶ ರಕ್ಷಣಾ ಮಂತ್ರಿಯು ತಿಂಗಳು ತಿಂಗಳಿಗೂ ಕೊಡುವ ವರದಿಗಳಲ್ಲಿ ನಾವು ನೋವುಗಳ ಅಂಕಿ 'ಅಂಶಗಳನ್ನು ಕೊಡುವರು. ಹಾರಾಡುವ ಬಾಂಬುಗಳ ವಿಷಯವನ್ನು ಕುರಿತು ಪರಿಶೀಲಿಸುವ ಸಲುವಾಗಿ ಒಂದು ವಿಶೇಷ ಸಮಿತಿ ನೇಮಕವಾಗಿದೆ. ಈ ಸಮಿತಿಯಲ್ಲಿ ವೈಜ್ಞಾನಿಕರೂ ಇಂಜಿನಿಯರುಗಳ ಹಲವರಿದ್ದಾರೆ. ಈ ಸಮಿತಿಯು ಮೊದಲು ನನಗೆ ವರದಿಯನ್ನೀಯುವದು. ಆನಂತರ ಚೀಫ್ ಆಫ್ ಸ್ಟಾಫ್‌ಗಳಿಗೂ ಯುದ್ಧ ಮಂತ್ರಿಮಂಡಲಕ್ಕೂ ವರದಿಯನ್ನೀಯುವದು.

'ಆದರೆ ಈ ಶತ್ರು ಧಾಳಿಗಳಿಂದ ನಮ್ಮ ನಾರ್ಮಂಡಿ ಕಾರ್ಯಾಚರಣೆಗಾಗಲೀ ಜರ್ಮನಿ ಮೇಲೆ ನಮ್ಮ ವಿಮಾನ ಕಾರ್ಯಾಚರಣೆಗಾಗಲೀ ಸ್ವಲ್ಪವೂ ಅಡಚಣೆಯೂಗಿ ಬರದಂತೆ ನಾವು ನೋಡಿಕೊಳ್ಳಬೇಕು;' ಎಂದು ಹೇಳಿದರು.

—೦೦—

ಫ್ರಾನ್ಸಿನ ಭವಿಷ್ಯವು ಭೀಕರವಾಗಿ ಕಾಣಿಸುತ್ತಿದೆ. ಮಿತ್ರರು ಜಯಗಳನ್ನು ಸಂಪಾದಿಸುತ್ತಾ ಬಂದಂತಾಯಿತೊಡಗಿದ್ದಂತೆ ಅವರ ಬಂದರವು ವಶವಾದವನಂತೆ ಬಾಸ್ಪರು ಮುಂತಾದವರು ಕೆಯಿನ್‌ನಗರವನ್ನು ಬಿಟ್ಟು ಓಡಿಬಂದರು. ಕೆಯಿನ್ ನಗರವು ಬ್ರಿಟಿಷ್ ನಗರವೆಂದು ಬಗೆದ ಕೈಯಿದ್ದಂತೆ. ಈ ಕಾರಣದಿಂದಲೇ ಜರ್ಮನರು ಈ ನಗರವನ್ನು ಕಳೆದುಕೊಂಡು ಸರ್ವ ವಿಧಾನಗಳಿಂದ ಕಸ್ಸು ಮಾಡಿ ವೀರಾವೇಶದಿಂದ ಹೋರಾಡಿದ್ದರು. ಆದರೂ ಸಹ ಈ ನಗರವನ್ನು ಜರ್ಮನರು ಬಿಟ್ಟುಕೊಡಬೇಕಾಯಿತು. ಮಿತ್ರರು ಅದನ್ನು ಹಿಡಿದು ಮುಂದೆ ಸಾಗತೊಡಗಿದ್ದಾರೆ. ಜೋಸೆಫ್ಫನು ತನ್ನ ರಣತಂತ್ರಕೌಶಲವನ್ನು ನಾನಾರೀತಿಯಿಂದ ಉಪಯೋಗಿಸಿ ನೋಡುತ್ತಿದ್ದಾನೆ. ಅವರೂ ಮಿತ್ರರ ಮುನ್ನಡೆಗೆ ಈ ವರೆಗೆ ತಡೆ ಬಿದ್ದಿರುವದಿಲ್ಲ. ಈ ಮಧ್ಯೆ ಜರ್ಮನ್ ದಳಪತಿ ರಂಡ್‌ಸ್ಟೆಡ್‌ನನ್ನು ತೆಗೆದುಹಾಕಿ ಹಿಟ್ಲರನು ಅವನ ಬದಲು ವಾನ್ ಕ್ಲೂಸ್ ಎಂಬವನನ್ನು ನೇಮಿಸಿರುವನು. ರಂಡ್‌ಸ್ಟೆಡ್‌ನು ಈ ವರೆಗೆ ಫ್ರಿಟ್ಸೀಮ ಸೇನಾನಾಯಕನೆಂದು ಮನ್ನಣೆಗೊಂಡಿದ್ದನು. ಇವನನ್ನು ಮನೆಗೆ ಕಳುಹಿಸಲು ಕಾರಣವೇನೆಂದು ಪರಿಶೀಲಿಸಿದರೆ ವಿಷದವಾಗಿ ಯಾವುದೂ ತಿಳಿದುಬರುವಂತಿಲ್ಲ. ರಂಡ್‌ಸ್ಟೆಡ್‌ನು ಶತ್ರುವಿನ ಚಲನವಲನವನ್ನು ಶಕ್ತಿ ಸಾಮರ್ಥ್ಯವನ್ನು ತಿಳಿದು ತನ್ನ ಸೇನೆಗಳನ್ನು ತಕ್ಕಂತೆ ಸಜ್ಜುಗೊಳಿಸಿ ಯೋಧಾಡುವವನು. ಆದರೆ ಇವನು ಈ ಕೈ ತಪ್ಪಿದುದು ಯುದ್ಧ ಮಾಡುವ ನೀತಿ ಹಿಟ್ಲರನಿಗೆ ಸರಿಬಂದಂತೆ ಕಂಡ ಬಗೆಯಿಲ್ಲ. ಯಾಕಾಲದಲ್ಲಿ ವಿಸ್ತೃತವಾದ ದಿನಕ್ಕೆಯ್ದಂದ ಕೆ ಸಂಗಳನ್ನು ಅಕ್ಷರಸುಸ್ಥಾ ಬರುತ್ತಿರುವಾಗ ಜರ್ಮನಿಗೆ ತಡೆಗು ಸಿಲ್ಲುವದು ಅನುಮಿಳಿಸಿಂದು ಅವರಿಗೆ ಕೂರಿರಬೇಕು. ರಷ್ಯನ ಮೇಲೆ ನಿಜೆಯುವದು ಒಳಿತೆಂದು ಹಿಟ್ಲರನೆ ನಂಬಿರಬೇಕು. ಯಾಕೆಂದರೆ ಮುನ್ನಡೆದು ಧಾಳಿ ನಾಡುವದೇ ಉತ್ತಮ ವಾಪಸು ಸಂರಕ್ಷಣಾ. (offensive is the best defensive) ಯುದ್ಧವೆಂಬ ಪ್ರಸಿದ್ಧವಾದ ಹಿರಿಯರನ್ನು. ಆದ್ದರಿಂದ ರಂಡ್‌ಸ್ಟೆಡ್‌ನನ್ನು ಹಂಡಿ ಕರಿಸಿ ಕ್ಲೂಸರವನ್ನು ನೇಮಿಸಿರಬಹುದು ಕ್ಲೂಜರನು ಪೋಲೆಂಡಿನ ಮೇಲೆ ಧಾಳಿ ನಡೆಸಿ ಅದನ್ನು ಜಯಿಸಿದವನು. ಸಾಕಷ್ಟು ಸೈನಿಕರ ಕೈ ತಪ್ಪಿದ ಕೈ. ತನ್ನ ಈ ವೈಶಾಚಿಕ ನೀತಿಯಿಂದಲೇ ಹಿಟ್ಲರನ ಹುಸ್ಸಣಿಗೆ ಪಾತ್ರನಾಗಿದ್ದಾನೆ. ಯೂರೋಪಿನ ಈ ಯುದ್ಧವು ಇನ್ನೂ ಉಗ್ರರೂಪನ್ನು ತಾಳಲಿದೆ.

ಈ ಮಧ್ಯೆ ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ಭಾಷಣಮಾಡುತ್ತಾ ಜರ್ಮನಿಯ ವೈಮಾನಿಕರಲ್ಲಿನ ವಿಮಾನಗಳ ಹಾವಳಿಯನ್ನು ವಿವರಿಸಿದರು. ಅವರ ಭಾಷಣದಿಂದ ಜರ್ಮನರ ಈ ವೈಶಾಚಿಕ ವಿಮಾನಗಳು ಬಹುತರವಾದ **ಕೊಂದರೆಯನ್ನು ಬ್ರಿಟಿಷರಿಗೆ ಕೊಡುತ್ತಿರುವವೆಂದು ಗೊತ್ತಾಗುತ್ತದೆ. ಈ ವಿಮಾನಗಳನ್ನು**

ಮಿತ್ರರಿಗೆ ಸಾಮಯಿಕ ಜಯ.

—೦—

ಉಪಯೋಗಿಸದಂತೆ ಪೋಪ್‌ಗುರುಗಳ ಮೂಲಕ ಜರ್ಮನಿಗೆ ಹೇಳಿಸಬೇಕೆಂದು ಪಾರ್ಲಿಮೆಂಟಿನ ಸದಸ್ಯರು ಹೇಳಬೇಕಾದ ಕಿವಿಯ ಹಾಳೆ ಎಷ್ಟಿರಬೇಕೆಂಬ ಊಹಿಸುವದು ಉತ್ತಮ. ಇಟಲಿಯು ರಣರಂಗವಲ್ಲಿ ಜೆಚ್ಚಿನ ಚಟುವಟಿಕೆಗಳು ಕಂಡುಬರುವದಿಲ್ಲ

ರಷ್ಯಾದಲ್ಲಿ ಕತ್ಯುಗ್ರವಾದ ಕದನವಾಗಿದೆ. ರಷ್ಯನರು ಮಿನ್ಸ್ಕ್ ಮೊದಲಾದ ನಗರಗಳನ್ನು ವಶಪಡಿಸಿಕೊಂಡಿರುವದೂ ಲಿಥುವೇನಿಯೂ ಲಿಥುವೇನಿಯಾದಲ್ಲಿ ಬಂಗು ನಿಂತಿದ್ದಾರೆ. ಕಳೆದ ಹತ್ತು ದಿನಗಳಿಂದ ಇಲ್ಲಿ ನಡೆದ ಯುದ್ಧವು ಚರಿತ್ರಾರ್ಹವಾದುದು. ರಷ್ಯನರು ಕೇವಲ ಹತ್ತು ದಿನಗಳಲ್ಲಿ 30,000 ಚದರ ಮೈಲುಗಳಷ್ಟು ಸ್ಥಳವನ್ನು ಆಕ್ರಮಿಸಿ ಒಂದು ಲಕ್ಷಕ್ಕೆ ಮೇಲ್ಪಟ್ಟು ಜರ್ಮನರನ್ನು ಕೈದಿಗೆ ಹಿಡಿದಿದ್ದಾರೆ, ಮಿನ್ಸ್ಕ್ ನಗರವನ್ನು ಹಿಡಿದ ನಂತರ ರಷ್ಯನರ ಯುದ್ಧವು ಹೊಸರೂಪವನ್ನು ತಾಳಿದೆಯೆನ್ನಬಹುದು. ಮುಂದೆ ಅವರು ನುಗ್ಗಿ ಜರ್ಮನಿಗೆ ಬರುವರೋ ಎಂಬುವನ್ನು ನಿರೀಕ್ಷಿಸಬೇಕಿದೆ.

ಈ ಮಧ್ಯೆ ಜೆನ್ಯಾಕ್ಕಿನ 400000 ಜನ ಕೆಲಸಗಾರರು ಮುಷ್ಕರ ಹಿಡಿದಿದ್ದಾರೆ. ಜರ್ಮನ್ ಚಕ್ರಮಿತ ಪ್ರದೇಶದಲ್ಲಿ ಒಟ್ಟು ದೊಡ್ಡ ಮುಷ್ಕರವು ಈ ವರೆಗೆ ಆಗಿಲ್ಲ. ವೆಸ್ಟ್‌ಫಲಿಯಾದಲ್ಲಿನ 'ಸ್ಟಾಲ್‌ಬರ್ಗ್ ಎಸ್ಟ್' (ಡೊನಿಸಿ ನಿಲ್ಲಿಸು ಸಂಸ್ಥೆ) ನ್ಯಾ ತೆಗೆಯಹಾಕಲೇಬೇಕೆಂಬುದೇ ಇವರ ಧ್ಯೇಯವಂತೆ. ನಾಜಿಗಳು ಇವರನ್ನು ಕರ್ತವ್ಯಚ್ಯುತಿಯನ್ನಿಡುವ ಪ್ರಯತ್ನ ಮಾಡಿದ್ದಾರೆ. ಮುಷ್ಕರವು ಇನ್ನೂ ನಿಂತಿಲ್ಲ. ಇದಿಷ್ಟೂ ಜರ್ಮನರಿಗೆ ದೊಡ್ಡ ಸೂಚಕ ಚಿಹ್ನೆಗಳಲ್ಲವೆನ್ನಬಹುದು ಜರ್ಮನಿಗೆ ನಾನಾ ಕಾರಣಗಳಲ್ಲಿ ಸೋಲಾಗಿರೊಡಗಿದೆ ಜರ್ಮನ್ ಪ್ರಚಾರ ಮಂತ್ರಿ ಗೇಬಲ್ಲರು 'ಇದು ನನ್ನ ಜೀವನ ಸಂಗ್ರಾಮ; ವೈಯಲ್ಲಿ ಏನು ಕೊಟ್ಟು ರಕ್ಷವಿರುವ ವರೆಗೆ ಹೋರಾಡುವದೇ ನನ್ನ ಧರ್ಮ'ವೆಂದು ನಾರುತ್ತಿದ್ದಾನೆ. ಜರ್ಮನರು ರಷ್ಯಾ ವರೆಗೆ ವೀರಾವೇಶದಿಂದ ಹೋರಾಡಬಲ್ಲರು. ಇನ್ನೂ ಅವರಲ್ಲಿ ಒಂದನೆ ತರಗತಿಯ ಸೇನೆಗಳಿವೆ. ಆಂದ ಮೇಲೆ ಇಷ್ಟರಲ್ಲಿಯೇ ಜರ್ಮನಿಯು ಮುಗ್ಗರಿಸಿದೆಯೆಂದು ತೃಪ್ತರಾಗಬಾರದು.

ಇತ್ತ ಜಪಾನಿನ ಹಸ್ತದಿಂದ ಉಕ್ಕುಲ್ ಬಿಡುಗಡೆಯಾದ ಕಾರಣ ಜಪಾನಿಗೆ ದೊಡ್ಡ ಪೆಟ್ಟು ಬಿದ್ದಂತಾಯಿತು. ಕಳೆದ ಪೂರ್ವ ತಿಂಗಳಿಂದ ಈ ಪೂರ್ವಗಡಿಯಲ್ಲಿ ಮಿತ್ರರು 11,000 ಜಪಾನರನ್ನು ಕೊಂದುಹಾಕಿರುವರು. ಇಂಫಾಲು ಜಪಾನ್ ಗುಡ್ಡಾಂತರದಿಂದ ಪಾರಾದಂತಾಗಿದೆ. ಉತ್ತರ ಬರ್ಮಾದ ಮಿಟ್ಕಿಯೂನಾ ಕ್ಕಾಗಿ ಉಗ್ರಕದನವಾಗುತ್ತಿದೆ. ಜಪಾನರ ಹಿಂದೂದೇಶದ ಧಾಳಿ ನಿಷ್ಪ್ರಯೋಜನವಾದಂತಾಯಿತು. ಇಂಫಾಲಿನ ದಕ್ಷಿಣಕ್ಕಿರುವ ಬಿಶನ್‌ಪುರದಲ್ಲಿ ಉಗ್ರಕದನ ವಾಗುತ್ತಿದೆ. ಜಲ್ಲಿ ಕತ್ತುಗಳಿಗೆ ಇನ್ನೂ ಮೇಲೆ ಬಿದ್ದು ಹೊಡೆಯುವ ಶಕ್ತಿಯಿರುವಂತೆ ಕಂಡುಬರುತ್ತದೆ.

ವಿನಯೌವ್ವನ

ಕೊಟ್ಟು ಧಾತುಪುಷ್ಟಿಯನ್ನುಂಟುಮಾಳ್ಪ, ವಿವಾಹಿತರಿಗೆ ಸಂತೃಪ್ತಿಯನ್ನು, ಪರಮಾನಂದವನ್ನೂ ಕೊಡಲು **ಮಂಡಪಮಂಜರಿ ಮಾಲ್ರೆ**ಗಳು ದಿವ್ಯೌಷಧ.

ಡಬ್ಬಿ ಒಂದಕ್ಕೆ 1 ರೂಪಾಯಿ.

ಮಂಡಪಮಂಜರಿ ಫಾರ್ಮಸಿ,
184, ಜೈನಾಬಜಾರ್ ರೋಡ್,
ಮದ್ರಾಸ್.

ಮಡಿಕೇರಿ—ಡಾ. ಕೆ. ಬಿ. ಕರುಂಬಯ್ಯ,
ಸೋಮವಾರಪೇಟೆ—ಡಾ. ಜಿ. ಎ. ಐಯ್ಯ,
ವೀರಾಜಪೇಟೆ—ಎ. ಸಿ. ಸುಬ್ಬಮ್ಮಯ್ಯ.

ಗಾಂಧೀಜಿ.

ಮಂಚಗನಿಯ ಹವಾವು ಮಹಾತ್ಮಾ ಗಾಂಧಿಯವರಿಗೆ ಅನುಕೂಲವಾಗಿದೆ. ಅವರು ಇಲ್ಲಿ ಒಂದು ತಿಂಗಳು ಮಟ್ಟಿಗೆ ಇರುವರೆಂದು ಗೊತ್ತಾಗಿದೆ.

ಮಹಾತ್ಮರು ಸೇವಾ ಗ್ರಾಮಕ್ಕೆ ಹೋಗಬೇಕೆಂದು ಆತುರರಾಗಿದ್ದಾರೆ. ಆದರೆ ಅವರ ಆರೋಗ್ಯವು ಉತ್ತಮಗೊಳ್ಳುವುದಕ್ಕೂ, ಅವರ ಶಕ್ತಿ ಬರುವುದಕ್ಕೂ ಬೆಟ್ಟ ಪ್ರದೇಶವೊಂದರಲ್ಲಿ ಆರುವಾರ ಇರಬೇಕೆಂದು ಡಾ. ಬಿ. ಸಿ. ರಾಯ್‌ರು ಗಾಂಧೀಜಿಗೆ ಈ ಮೊದಲೇ ಸೂಚಿಸಿದ್ದರು. ಈ ವಿಚಾರ ಚರ್ಚೆಯಾಗಿ ಮಂಚಗನಿ ಹವಾವು ಅನುಕೂಲವಾದ್ದರಿಂದ ಗಾಂಧೀಜಿ ಅಲ್ಲಿ ಒಂದು ತಿಂಗಳು ಕಾಲ ಇರುವುದಾಗಿ ಒಪ್ಪಿರುವರು.

WANTED.

An Estate writer with the knowledge of Accountancy and type writing on a salary of Rs. 50/- with dearness allowanee of Rs. 15/- per month. An increment of Rs. 5/- per year will be given on the merits of the work turned out. Free accomodation will be given.

For further particulars please apply to:—

P. Kunhi Kannan,
Perumbubetta Estate,
8-1 POLLIBETTA

ಕೊಡಗು

ತಾ. ೧೪-೭-೧೯೪೪ನೇ ಶುಕ್ರವಾರ

ಪತ್ರಿಕೆಗಳ ವಿಷತ್ತು.

ಇಂಡಿಯಾ ಸರಕಾರದವರ ಈಗಿನ ಕಾಗದ ನಿಯಂತ್ರಣ ಶಾಸನದ ಪ್ರಕಾರ ಪತ್ರಿಕೆಗಳು ಹಲವು ಮುಚ್ಚಲ್ಪಡುವುದರಲ್ಲಿ ಸಂಶಯವಿಲ್ಲ. ಈ ವರೆಗೆ ಪ್ರಕಟಿಸುತ್ತಿದ್ದ ಪುಟಗಳ ಶೇಕಡ 30ರಷ್ಟೇ ಮುಂದೆ ಪ್ರಕಟಿಸಬೇಕೆನ್ನುವ ಈ ಆಜ್ಞೆಯು ದೇಶದ ಪತ್ರಿಕಾಧಿರುಚಿಯುಳ್ಳ ಜನರಿಗೆ ತುಂಬಾ ವ್ಯಥೆಯನ್ನುಂಟು ಮಾಡದಿರದು. ಈ ಆಜ್ಞೆ ಪ್ರಕಾರ ಮುಂದಿನ ವಾರದಿಂದ 'ಕೊಡಗು' ಪತ್ರಿಕೆಯು ತನ್ನ ಪುಟ ಸಂಖ್ಯೆಯನ್ನು ನಾಲ್ಕಕ್ಕೆ ಇಳಿಸಬೇಕಾಗಿದೆ. ನಮ್ಮ ವಾಚಕರಿಗೆ ಈ ವರೆಗೆ ಇದ್ದ ಎಂಟು ಪುಟಗಳಿಂದ ಯೋಗ್ಯವಾಗಿ ವಾರ್ತೆಗಳನ್ನು ಕೊಡಲಾಗುತ್ತಿಲ್ಲವೆಂದು ಕರಬಹುದಿದ್ದರೂ, ಈಗಿನ ಪರಿಸ್ಥಿತಿಯಲ್ಲಿ ಎಷ್ಟೇ ಜಾಗ ತಂದು ಹೇಗೂ ವಾಚಕರಿಗೆ ತೃಪ್ತಿಕರವಾಗುವ ರೀತಿ ಪ್ರಯತ್ನಿಸುತ್ತಿದ್ದ ನಮ್ಮ ಮೇಲೆ ಈ ಆಜ್ಞೆಯಿಂದ ಸಹಿಸಲಾರದ ಗಧಾ ಪ್ರಹಾರವಾಗಿದೆ. ಕೊಡಗು ನಾಡಿಗೆ ನಾವು ಈ ಕಳೆದ 23 ವರ್ಷಗಳಿಂದ ಪಲ್ಲಿಸಿದ ಸೇವೆ, 1940ರ ವರೆಗೆ ನಾವು ಕೊಡುತ್ತಿದ್ದ 12 ಪುಟಗಳ ವಿಷಯ, ಕೊಡಗಿನಲ್ಲಿ ಬೇರೆ ಪತ್ರಿಕೆಗಳ ಅಭಾವ ಇರದ್ದನ್ನೆಲ್ಲ ವಿಚಾರಿಸಿ ನಮ್ಮ ಪತ್ರಿಕೆಯು ಪುನ ಸಂಖ್ಯೆಯನ್ನು ಎಂದೂ ಕಡಿಮೆ ಮಾಡಕೂಡದೆಂದು ಇಂಡಿಯಾ ಸರಕಾರಕ್ಕೆ ಮನವಿ ಮಾಡಿಕೊಂಡಿರುವೆವು. ಅವರಿಂದ ಅಪ್ಪಣೆ ಬರುವ ವರೆಗೆ ಈಗ ಜಾರಿಯಲ್ಲಿ ಬಂದಿರುವ ಆಜ್ಞೆಯಂತೆ ಪುಟ ಸಂಖ್ಯೆಯನ್ನು ನಾಲ್ಕಕ್ಕೆ ಇಳಿಸಬೇಕಾಗಿದೆ. ಈ ಮೊದಲೇ ಎಂಟು ಪುಟಗಳಿಂದು ಕೊಡಗುತ್ತಿದ್ದ ನಮ್ಮ ಆಸಂಖ್ಯಪ್ತ ಮನೆಕ್ಕೆ ಈ ಆಜ್ಞೆಯಿಂದ ಆಳಿಸಿ ಹೋಗದಂಥಾ ಪೆಟ್ಟು ಬಿದ್ದಂತಾಗಿದೆ.

'ಕೊಡಗು' ಪತ್ರಿಕೆಯನ್ನು ಕೊಡಗು ನಾಡಿನ ಮಾನ್ಯ ಮಹನೀಯರು, ನಿಖಿಲ ಕನ್ನಡ ನಾಡಿನ ಪ್ರೋತ್ಸಾಹಕರು ಹರಸಿ ಈ ವರೆಗೆ ಉಳಿಸಿದ್ದಾರೆ. ಈ ಬೆಂಬಲದಿಂದ ಅದು ತನ್ನ ಕೈಯ್ಯಲ್ಲಾದ ಕಿಂಚಿತ್ ಸೇವೆಯನ್ನು ಮಾನ್ಯ ಮಹನೀಯರ ಅಡಿದಾವರೆಗಳಲ್ಲಿ ಪಲ್ಲಿಸಿದೆ. ಇದೀಗ ಪತ್ರಿಕೆಗಳ ಪೋಷಕರಾಗಬೇಕಿದ್ದ ಸರಕಾರದಿಂದ ಗಧಾಪ್ರಹಾರ ಬಂದಿದೆ. ಈ ಪೆಟ್ಟಿನಿಂದ ಉಳಿಯಬೇಕಾದರೆ ವಾಚಕರಾದ, ಪೋತ್ಸಾಹಕರಾದ ನಿಮ್ಮ ಸಕ್ರಾಯ ಸಹಾನುಭೂತಿ ಇಲ್ಲದೆ ಸಾಧ್ಯವಾಗಲಾರದು. ಸರಕಾರದಿಂದ ಹೆಚ್ಚಿನ ಪುಟಗಳನ್ನು ಕೊಡಬಹುದೆಂಬ ಅಪ್ಪಣೆ ಬರುವ ವರೆಗೆ ಮಾನ್ಯ ವಾಚಕರು ಶೇವಲ ನಾಲ್ಕು ಪುಟದಿಂದ ಹೊರಬರುವ 'ಕೊಡಗು' ಪತ್ರಿಕೆಯನ್ನು ಎಂದಿನಂತೆ ಸ್ವಾಗತಿಸಿ, ಬೆಂಬಲಕೊಟ್ಟು ಹರಸಬೇಕಾಗಿ ನಮ್ಮ ವಿನಂತಿ. ಈಗ ಜಾರಿಯಲ್ಲಿ ಬಂದಿರುವ ಆಜ್ಞೆಯನ್ನು ಹಿಂತೆಗೆಯುವ ಮನಸನ್ನು ದೇವರು ಸರಕಾರಕ್ಕೆ ಕೊಡಲಿ, ವಾಚಕ ಮಹಾಶಯರುಗಳಿಗೆ ಹೆಚ್ಚಿನ ಪುಟಗಳನ್ನು ಕೊಡುವ ಅನುವಾಗಲಿ ಎಂಬುದು ದೇ ನಮ್ಮ ಪ್ರಾರ್ಥನೆ.

ವಾರ್ತಾತರಂಗ.

ಒಳ ದೇಶ.

ಮುಡಿಕೇರಿ.

ಕೊಡಗಿನವ್ಯವಸಾಯ ಇಲಾಖೆಯಧಿಕಾರಿಗಳಾದ ಶ್ರೀ ಕೆ. ಸುಬ್ರಮಣ್ಯಂರವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವ ದಾಗಿಯೂ, ಅದರ ತೀರ್ಮಾನವು ಸರ್ಕಾರದ ಅಲೋಚನೆಯಲ್ಲಿದೆಯೆಂದಿಯೂ ವರ್ತಮಾನ

ಸೋಮವಾರಪೇಟೆಯ ಕಾಳಚಾರಿ ಎಂಬವನನ್ನು ಅಕ್ಕಸಾಲಿ ಕರಿಯಾಚಾರಿ ಎಂಬವನು ಕೊಂದನೆಂಬ ಕೇಸು ಸೆಷನ್ಸ್ ಕೋರ್ಟಿನಲ್ಲಿ ವಿಚಾರವಾಗಿ ಕರಿಯಾಚಾರಿಗೆ ಜೀವಾವಧಿ ಶಿಕ್ಷೆ ವಿಧಿಸಲ್ಪಟ್ಟಿದೆ.

ಸರಕಾರಕ್ಕೆ ಬರಬೇಕಿರುವ 3 ಜೋನುಜೋಳವಿನ ಮಕ್ಕು 7 ಒಂಟೆ ಕೊಳವಿನ ಕೇಪು ಕೋವಿಗಳು ಮತ್ತು ಒಂದು ಒಂಟಿ ಜೋಳವಿನ ಕೋಟಿದ ಕೋವಿ ಸುತ್ತು 37 ತೋಟಗಳೂ ಜಲ್ಲಾ ಮೇಜಿಸ್ಟ್ರೇಟರ ಕಚೇರಿಯ ಮುಂದೆ ತಾ. 25-8-44 ರಲ್ಲಿ ಹರಾಜು ಮೂಲಕ ಮಾರಲ್ಪಡುವುದು.

ಕೊಡಗಿನ ಮುಖ್ಯ ವೆಟರಿನರಿ ಅಧಿಕಾರಿಗಳಾಗಿದ್ದ ಶ್ರೀ ಅಜ್ಜಮಾಡ ಬೋಪಣ್ಣನವರು ನಿವೃತ್ತರಾಗುವ ನುನ್ನ 26 ದಿನಗಳ ರಜೆಯಲ್ಲಿ ಹೋಗಿರುವದರಿಂದ ಅವರ ಬದಲಿಗೆ ಶ್ರೀ ಕುಪ್ಪಂಡ ಕಾಳಪ್ಪನವರನ್ನು ಜಲ್ಲಾ ವೆಟರಿನರಿ ಅಧೀಕ್ಷಕರಾಗಿ ತಾ. 5-7-44ರಿಂದ ನೇಮಿಸಲಾಗಿದೆ.

ಬರುವ ವರ್ಷ ನಡೆಯಲಿಕ್ಕಿರುವ ಕೌನ್ಸಿಲ್ ಚುನಾವಣೆಗೆ ಓಟರುಗಳ ಕರಡು ಪಟ್ಟಿಯನ್ನು ಈ ತಿಂಗಳಲ್ಲಿ ತಯಾರಿಸಬೇಕೆಂದೂ, ಆ ಪಟ್ಟಿಯಲ್ಲಿ ಹೆಸರನ್ನು ಸೇರಿಸಿಲ್ಲವೆಂದಾಗಲೀ ಅಥವಾ ಅಕ್ರಮವಾಗಿ ಯಾರದರೂ ಹೆಸರನ್ನು ಸೇರಿಸಿದೆಯೆಂದಾಗಲೀ ಆಕ್ಷೇಪಣೆಗಳನ್ನು ರಿವೈಸಿಂಗ್ ಆಫೀಸರಿಗೆ (ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು) 15-8-44ರ ಒಳಗೆ ಖರವಣಿಗೆಯಲ್ಲಿ ತಿಳಿಸಬೇಕೆಂದೂ, ರಿವೈಸಿಂಗ್ ಆಫೀಸರು ಆಕ್ಷೇಪಗಳನ್ನು 30-8-44ರ ಒಳಗೆ ವಿಚಾರಿಸಿ ಪರಿಷ್ಕರಿಸಬೇಕೆಂದೂ, ತಿದ್ದುಪಡಿಯಾದ ಓಟರುಗಳ ಪಟ್ಟಿಯನ್ನು ತಾ. 31-12-44ರಲ್ಲು ಅಥವಾ ಆದರೊಳಗೆ ಪ್ರಕಟಿಸಬೇಕೆಂದೂ ಜಾಹಿರಾತು ಹೊರಟಿದೆ.

ಸೋಮವಾರಪೇಟೆ.

ಶ್ರೀ ಪಿ. ಸಿದ್ದಣ್ಣನವರು ಇಲ್ಲಿ ಬಹಳ ತೊಂದರೆ ಕೊಡುತ್ತಿದ್ದ 'ಅಲೂರು ಪುಂಡಾನೆ' ಯನ್ನು ಗುಂಡು ಹೊಡೆದು ಕೊಂದು ಹಾಕಿರುವನು. ಆದರೂ ಈ ಭಾಗದಲ್ಲಿ ಪುಂಡಾನೆಗಳ ಕಾಟ ಇನ್ನೂ ಬಹಳವಾಗಿದೆ. ಗದ್ದೆ, ತೋಟಗಳ ಬೂಟಿ ಬಹುವಾಗಿ ನಡೆಯುತ್ತಿದೆಯಂತೆ.

ಹಿಂದೂ ಮುಸ್ಲಿಂ ಐಕ್ಯತೆಗೆ.

ರಾಜಾಜಿಯವರ ಸೂಚನೆಗಳು.

(1) ಕಾಂಗ್ರೆಸು ಕೇಳುತ್ತಿರುವ ಭಾರತೀಯ ಸ್ವಾತಂತ್ರ್ಯವನ್ನು ಒಪ್ಪಿ ತಾತ್ಕಾಲಿಕವಾಗಿ ಸ್ಥಾಪಿತವಾಗುವ ಸರಕಾರದಲ್ಲಿ ಮುಸ್ಲಿಂರೀಗು ಸಹಕರಿಸಬೇಕು.

(2) ಯುದ್ಧದ ನಂತರ ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ಪ್ರಾಂತಗಳಲ್ಲಿ ಮುಸ್ಲಿಂ ಪ್ರಾಂತದ ಗಡಿ ನಿಶ್ಚಯಿಸಲು ಒಂದು ಸಮಿತಿಯನ್ನು ಫೇಮಿಸಬೇಕು ಹೀಗೆ ನಿಶ್ಚಯಿಸಲ್ಪಟ್ಟ ಭಾಗಗಳಲ್ಲಿ ಸರ್ವರಮತತೆಗೆದು ಪಾಕಿಸ್ತಾನದ ನಿರ್ಣಯ ಮಾಡಬೇಕು. ಇವರು ಹಿಂದೂಸ್ಥಾನದಿಂದ ಬೇರೆ ಒಂದು ಭಾಗವಾಗಿರಬೇಕೆಂದು ತೀರ್ಮಾನಿಸುವ ದಾದರೆ ಈ ಪ್ರಾಂತಗಳ ಗಡಿಯಲ್ಲಿರುವ ಪ್ರಾಂತಗಳ ಮನದಂತೆ ಅವರಿಗೆ ಇಷ್ಟಬರುವ ಸರಕಾರಕ್ಕೆ ಸೇರಿಕೊಳ್ಳುವ ಅನುಕೂಲತೆ ಕೊಟ್ಟು ಅದನ್ನು ಜಾರಿಯಲ್ಲಿ ತರಬೇಕು.

(3) ಮತದಾನವಾಗುವ ಮೊದಲು ಸ್ವತಂತ್ರ ಪಕ್ಷದವರು ಅವರವರ ಅಭಿಪ್ರಾಯವನ್ನು ಪ್ರಚಾರ ಮಾಡಲು ಅನುವಿರಬೇಕು.

(4) ಜನರನ್ನು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ವರ್ಗಾಯಿಸುವ ಕಾರ್ಯವು ಅವರ ಇಚ್ಛೆಯಂತಾಗಬೇಕು.

(5) ಪ್ರತ್ಯೇಕ ಪ್ರಾಂತಗಳಾದರೆ ತಮ್ಮ ವ್ಯಾಪಾರ, ಸಂರಕ್ಷಣೆ, ವಾಹನ ಪೌಕರ್ಯ ಮುಂತ್ತಿರ ಅವಶ್ಯ ವಿಚಾರಗಳ ಬಗ್ಗೆ ಪರಸ್ಪರ ಒಪ್ಪಂದವಿರಬೇಕು.

(6) ಈ ಶರತ್ತುಗಳು—ಬ್ರಿಟನು ಹಿಂದೂಸ್ಥಾನದ ಸರ್ವ ಆಡಳಿತ ಜವಾಬ್ದಾರಿಯನ್ನು ಭಾರತೀಯರಿಗೆ ವಹಿಸುಕೊಡುವ ದಾದರೆ ಮಾತ್ರ ಕಾರ್ಯರೂಪಕ್ಕೆ ಬರಬೇಕು.

—೦೦—

ಹಿಂದೂ ದೇಶದ ಬಿಕ್ಕಟ್ಟಿನ ಪರಿಹಾರಕ್ಕೆ

ಸರ್ ತೇಜ್‌ಬಹದ್ದೂರ್ ಸಪ್ರೂರವರ ಸೂಚನೆ.

(1) ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರನ್ನು ಬಿಡಬೇಕು, ಇಲ್ಲವೇ ಮಹಾತ್ಮಗಾಂಧಿಯವರಿಗೆ ಅವರ ಭೇಟಿ ಮಾಡಲು ಅನುಮತಿಯಿರಬೇಕು.

(2) ವೈಸರಾಯರನ್ನು ಕಾಣಲು ಮಹಾತ್ಮರನ್ನು ಬಿಡಬೇಕು.

(3) ದೇಶದ ಹಲವು ಮುಂದಾಳುಗಳ ಭೇಟಿ ಮಾಡಿದ ಮಹಾತ್ಮರು ಜಿನ್ನಾರವರು ಒಪ್ಪುವದಾದರೆ ಅವರೊಡನೆ ಮೊಖತಃ ಮಾತಾಡಬೇಕು.

(4) ಅಲ್ಪ ಪಕ್ಷೀಯರ ಹಿತದೃಷ್ಟಿಯಿಂದ ಮಹಾತ್ಮರೇ ಶರತ್ತುಗಳನ್ನು ಮಾಡಿ, ಎಲ್ಲಾ ಪಕ್ಷಗಳೂ ಪಕ್ಷ ಪಂಗಡತೊರೆದು ದೇಶದ ಹಿತಕ್ಕಾಗಿ ಶ್ರಮಿಸುವಂತೆ ಆಹ್ವಾನಿಸಬೇಕು.

(5) ಬಹು ಪಕ್ಷತ ಮುಂದಾಳುಗಳನ್ನು ಒತ್ತಾಯಪಡಿಸಿ ಯೋಗ್ಯ ವಿಧಾನಗಳು ಪರಿಣಾಮಕಾರಿ ತಾತ್ಕಾಲಿಕವಾಗಿ ಸಮ್ಮಿಶ್ರ ಮಂತ್ರಿಮಂಡಳಗಳು ಪ್ರಾಂತಗಳಲ್ಲಿ ಸ್ಥಾಪಿಸಲಾಗುವಂತೆ ವಿಧಿಸಬೇಕು.

(6) ತನ್ನ ಪಕ್ಷವೊಂದಲ್ಲಿ, ಹಿಂದೂ ಧರ್ಮ ಎಲ್ಲ ಪಕ್ಷಗಳ ಸಹಾನುಭೂತಿಯನ್ನು ಪಡೆದ ಒಂದು ಮಾನವಿಯನ್ನು ತಯಾರಿಸಿ ವೈಸರಾಯರಿಗೆ ಕೊಟ್ಟು, ವೈಸರಾಯರುಗಳೇ, ಮಿತ್ರಪಕ್ಷದವರಾಗಲಿ, ಯುದ್ಧದ ಬಗ್ಗೆಯ ಭಾರತೀಯರ ನೀತಿಯಿಂದ ಗಾಬರಿಪಡಬೇಕಾಗಿಲ್ಲವೆಂಬುದನ್ನು ತಿಳಿಸಬೇಕು.

(7) ಮಹಾತ್ಮರು ಸಾರ್ವಜನಿಕರಿಗೂ, ಪತ್ರಿಕೆಗಳಿಗೂ ಅಪೀಲುಮಾಡಿ ದೇಶದ ವಿವಿಧ ಪಕ್ಷಗಳು ಸೇರಿ ಮುಂದಿನ ಸಮಸ್ಯೆಯನ್ನು ಬಗಹರಿಸುವ ಯೋಗ್ಯ ವಾತಾವರಣ ಮಾಡಲು ತಕ್ಕ ಸನ್ನಿವೇಶವನ್ನು ಕಲ್ಪಿಸುವ ಪ್ರಯತ್ನಮಾಡಬೇಕು

—೦೦—

ಹಿಂದೂದೇಶದ ಬಿಕ್ಕಟ್ಟು ಪರಿಹಾರಕ್ಕೆ

ಮಹಾತ್ಮರ ಪರಿತಾಪಗಳು.

'ಯುದ್ಧ ಅವಧಿಯ' ಸರಿಗೆ ಬಿಟಿಶ್ ಆಡಳಿತದ ಪೂರ್ಣ ಅಧಿಕಾರವಿರುವ ರಾಷ್ಟ್ರೀಯ ಸರ್ಕಾರವನ್ನು ತಾನು ಒಪ್ಪುವ ದಲ್ಲದೆ ಕಾಂಗ್ರೆಸ್‌ನವರು ಒಪ್ಪುವಂತೆ ಸೂಚಿಸುತ್ತೇನೆ ಈ ಸಂದರ್ಭದಲ್ಲಿ ಯುದ್ಧದ ನಂತರ ಹಿಂದೂದೇಶಕ್ಕೆ ಪೂರ್ಣ ಸ್ವರಾಜ್ಯಕೊಡುವೆನೆಂಬ ಭರವಸೆಯನ್ನು ಬ್ರಿಟಿಷ್ ಸರಕಾರವು ಕೊಡಬೇಕು. ಈ ಹೊಸ ರಾಷ್ಟ್ರೀಯ ಸರಕಾರವು ಶೀಘ್ರ, ಬಂದರು, ಯುದ್ಧಾಂಟಿನ ಸರ್ವ ಸಾಕಾರ್ಯವನ್ನು ಮಿಲಿಟರಿಗೆ ಕೊಡುವದು ಇಂದು ನಡೆಯುತ್ತಿರುವ ಶತ್ರುಗಳ ಆಡಳಿತವ ಕೊನೆಗೊಂಡು ಜವಾಬ್ದಾರಿ ಮಂತ್ರಿಗಳ ಆಡಳಿತ ಒದಗಬೇಕು ವೈಸರಾಯರಿಗೆ ಹಿಂದೂ ಸೈನ್ಯದ ಮುಖ್ಯ ಸೇನಾನಾಯಕತ್ವವಿರಬೇಕು ಎಲ್ಲಾ ಬ್ರಿಟಿಷ್ ಮತ್ತು ಹಿಂದೀ ಸೇನೆಗಳ ಅಧಿಕಾರವಿರುವದು ವೈಸರಾಯರು ಇಂಗ್ಲೆಂಡಿನ ಅರಸರಂತೆ ಜವಾಬ್ದಾರಿ ಮಂತ್ರಿಗಳ ಸೂಚನೆಯಂತೆ ವರ್ತಿಸುವಂತಾಗಬೇಕು ಪ್ರಾಂತಗಳಲ್ಲಿ ಜವಾಬ್ದಾರಿ ಪ್ರಾಂತೀಕ ಸರಕಾರಗಳು ಸ್ಥಾಪಿತವಾಗಿ ಭಾರತ ಸಂರಕ್ಷಣಾ ಜವಾಬ್ದಾರಿ ರಾಷ್ಟ್ರೀಯ ಸರಕಾರವ ಕೇಂದ್ರದಲ್ಲಿ ರೂಪುಗೊಂಡರೆ ಭಾರತ ರಕ್ಷಣೆಯ ಬಗ್ಗೆ ಹಿಂದೀಯರಲ್ಲಿ ನವಚೇತನವು ಬಾರದಿರದು'

ಕಾಂಗ್ರೆಸ್ ವರ್ಕಿಂಗ್ ಸಮಿತಿಯವರನ್ನು ಬಿಟ್ಟು, ಹಿಂದೂ ದೇಶೀಯರ ಕೇಳಿಕೆಯನ್ನು ಸರಕಾರವು ಸಲ್ಲಿಸದಿದ್ದಕ್ಕೆ ಪುನಹ ಕಾಯಿದೆಭಂಗ ಚಳವಳವನ್ನು ಗಾಂಧಿಯವರು ಪ್ರಾರಂಭಿಸುವರೇ ಎಂಬ ಪ್ರಶ್ನೆಗೆ '1942 ನೇ ವರ್ಷಕ್ಕೆ ದೇಶವನ್ನು ಹಿಂದೊಯ್ಯಲಾರೆ. ಚರಿತ್ರೆಯು ಪುನರಾವೃತ್ತಿ ಕೂಡದು' ಎಂದರು ಇದು 'ನ್ಯೂಸ್ ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಯೊಡನೆ ಮಹಾತ್ಮರು ಆಡಿದ ಮಾತುಗಳು

—೦೦—

ಕಸ್ತೂರಿಬಾ ನಿಧಿ.

ಶ್ರೀ ಚೀರಂಡ ಸೋಮಯ್ಯನವರು 15
,, ಕೊಂಗೆಟ್ಟಿರ ಮುಂದಣ್ಣ ,, 15
,, ಕರ್ತಮ್ಮಿರ ಮಾದಪ್ಪ ,, 10
,, ಮೂತಂಡ ಕುಟ್ಟಪ್ಪ ,, 10
,, ಮಲ್ಕಾಟಿರ ಬೋಪಯ್ಯ(ಜೀಲಗಿ)10
,, ವಂ ಟಿ ರಿರ ಬೆಳ್ಯಪ್ಪನವರು 10
ಮಿಸಸ್ ಕೊಂಗೆಟ್ಟಿರ ಮಂದಣ್ಣ ,, 10
,, ಚೀರಂಡ ಸೋಮಯ್ಯ ,, 10

ರೂ ೮ರಂತೆ ಕೊಟ್ಟವರು–ಶ್ರೀ ಗಳಾದ ಡಿ ಎಸ್ ಶಾಂತಪ್ಪ, ಪಟೇಲ್ ಶಾಂತಯ್ಯ, ವಿ ಟಿ ಚಾರಪ್ಪ, ನಾಯಿಡ ಬೆಳ್ಯಪ್ಪ ಇವರುಗಳು

ರೂ ೫ರಂತೆ ಕೊಟ್ಟವರು–ಶ್ರೀಂ ಗಳಾದ ಎ ಸುಬ್ಬಯ್ಯ, ಜಿ ಎನ್ ಪಂಕಪ್ಪ, ಮಿಸೆಸ್ ಬಿಟ್ಟಿಯಂಡ ಉತ್ತಯ್ಯ ಇಕ್ಕೆಪ್ಪ ಇವರುಗಳು.

ರೂ 2ರಂತೆ ಕೊಟ್ಟವರು–ಶ್ರೀಂಗಳಾದ ವಿ ಬಿ ಪುಚ್ಚಪ್ಪ, ಮಂಡೇಟಿರ ತಿಮ್ಮಯ್ಯ, ಎ ಜಿ ನಂಜಪ್ಪ, ಮಿಸೆಸ್ ಎಂ ಸೀತಮ್ಮ ಇವರುಗಳು.

ರೂ 1ರಂತೆ ಕೊಟ್ಟವರು–ಶ್ರೀ ಗಳಾದ ಬಿ ಎಂ ಕುಶಾಲಪ್ಪ, ಪಿ ಕೆ ಚಿಣ್ಣಪ್ಪ ಐ ಪಿ ಐಯ್ಯಪ್ಪ, ಕೇತಿಯಂಡ ಕುಟ್ಟಪ್ಪ, ಪಿ ಎ ರಾಮರತ್ನ, ಎಂ ಪಿ ಪೊನ್ನಣ್ಣ, ಬಿ ಕರ್ತಮ್ಮಯ್ಯ, ಪುಲಿಯಂಡ ಬೋಪಯ್ಯ, ಕೆ ಶಂಕರನ್, ಹೆಚ್ ಎ ತಿಮ್ಮಯ್ಯ, ಎ ಸಿ ಸುಬ್ಬಮ್ಮಯ್ಯ, ಕೆ ಯಸ್ ವರಮೇಶ್ವರಯ್ಯ ಮನ್ನೆಕಮನೆ ಅಪ್ಪಣಮ್ಮಯ್ಯ, ಕೋಳೇರ ಎ ಸುಬ್ಬಯ್ಯ, ದೇಯಂಡ ಬಿದ್ದಪ್ಪ, ಮಲ್ಲಂಗಡ ಪೂಣಚ್ಚ, ಕಳ್ಳಿಚಂಡ ಬಿದ್ದಪ್ಪ, ಕುಪ್ಪುಡಿರ ಮೂಗಯ್ಯ, ಅಜ್ಜಿಕುಟ್ಟಿರ ದೇವಯ್ಯ, ಕಾಯಿಪಂಡ ಕಾಳಿಂಬಯ್ಯ, ಹೊಟ್ಟೇಂಗಡ ಕುಶಾಲಪ್ಪ, ಎಲ್ಲೇಂಗಡ ಐಯ್ಯಪ್ಪ, ಚೋಡಂಡ ದೇವಯ್ಯ, ಮಲ್ಲಾಜಿರ ಐಯ್ಯಮ್ಮ, ಮುಂಡೆಯಂಡಿರ ಕಾರ್ಯಪ್ಪ, ಪಿ ಎನ್ ಐಯ್ಯಪ್ಪ, ಎನ್ ಪಿ ಪುಟ್ಟಸಾಮಿ, ಕೆ ಎಸ್ ಸಿದ್ದಪ್ಪ, ಕೆ ಶಿವಪ್ಪ, ಕೆ ಬಿ ಕಾರ್ಯಪ್ಪ, ಎಸ್ ಯಂ ಚೆನ್ನಬಸಪ್ಪ, ಸಿ ಮೊದಯ್ಯ, ಎಸ್ ಎನ್ ತಮ್ಮಯ್ಯ, ಟಿ ಕೆ ಮುತ್ತಪ್ಪ, ಯಂ ಎ ಜೋಯಪ್ಪ, ಎ ಎನ್ ಗಣಪತ್ತಿ, ಬಿ ಡಬ್ಲ್ಯು ಮಂದಣ್ಣ, ಪಾಂಡಂಡ ನಂಜಪ್ಪ, ಕುಂ ಇರಾಮು, ಎ ಕೆ ರಾಮಣ್ಣೆ, ಎಸ್ ಎ ಸಾರಿ, ಹಕೇರಪ್ಪಜಾರಿ, ಬಿ ಪಿ ಪೂವಪ್ಪ, ಎಸ್ ಎನ್ ಈಶ್ವರಯ್ಯ, ಬಲ್ಲಚಂಡ ಮಾಚಯ್ಯ, ಶ್ರೀಮತಿಗಳಾದ ಕಾಡ್ಯನೂಡ ಕೆ ಪೂವಮ್ಮ, ಪಿ ಎಸ್ ದೇಚಮ್ಮ, ಸಿ ಟಿ ಕಾವೇರಮ್ಮ, ಯಂ ಡಬ್ಲ್ಯು ದೇವಕಿ, ಶ್ರೀ ಸಿ ಕಾಳಯ್ಯ ಎಸ್. ಎಂ ಬೆಳ್ಯಪ್ಪ–ಇವರುಗಳು

ರೂ 3ರಂತೆ ಕೊಟ್ಟ ಶ್ರೀ ಗಳಾದ ಎಸ್ ನಾರಾಯಣ ರಾವ್ ಮತ್ತು ಬಿ ದ್ದಂಡ ಬಿ ದೇಚಮ್ಮ ಇವರುಗಳ ಹೆಸರು ಎರಡು ವಾರ ತಪ್ಪಿ ಅಚ್ಚಾಗಿದೆ ಇವರ ಬಾಬ್ತು ಹೆಚ್ಚಾಗಿ ಪ್ರಕಟಿಸಿದ ರೂ. 6 ಕಡಿಮೆ ಮಾಡಿದರೆ ಈ ವರೆಗೆ ಒಟ್ಟು ರೂ. 4,172 ಜಮೆಯಾದಂತಾಯಿತು.

ನಾಪೋಕ್ಲು ಹೈಸ್ಕೂಲ್ ಫಂಡು.

ದಯಪದ ಸಹಾಯ, ಪಂಲೂರು

ಚೆರುವಾಳಂಡ ಸಂಜುಂಡ ಮತ್ತು ಸೂದನ ತಮ್ಮಯ್ಯನವರುಗಳ ಮೂಲಕ—1/4 ಬಟ್ಟಿಯ ಶ್ರೀಗಳಾದ ಮಂದನೆರವಂಡ ಐಯ್ಯಪ್ಪ, ಪುದಿಯನೆರವಂಡ ಚಂಗಪ್ಪ, ಕುಶ್ಯಪ್ಪ, 1/2 ಬಟ್ಟಿಯಂತೆ ಮಂದನೆರವಂಡ ಬೆಳ್ಯಪ್ಪ, ಪೈಕೇರ ಮುತ್ತಣ್ಣ, ಪಾಪ್ಯಮ್ಮ, ಸೂದನ ರಾಮಯ್ಯ, ಸೋಮಯ್ಯ, ಪುದಿಯನೆರವಂಡ ಪೂನಯ್ಯ, ಐಯ್ಯಣ್ಣ ಕಾಳಪ್ಪ ಪಗ್ಗೆರೆನೆರವಂಡ ವಾಯವ್ವ ಅಚ್ಚುಡ ಸಂಜಪ್ಪ ಕಾರ್ಯಪ್ಪ ವಕ್ಕಲಿಗರ ಶೀತವ್ವ, ಹೊಡ್ಡಯ್ಯ, ಪೆಮಿಯಂಡ ಬೆಳ್ಯಪ್ಪ ಗಣಪತ್ತಿ ಮತ್ತು ಕುಶಾಲಪ್ಪ, ಮೇಕಾಡಂಡ ತಿಂಗಪ್ಪ ಗಂಗವ್ವ ನಂಬಂಡ ನಾಪೋಳಂಡ ಗಣಪತ್ತಿ 3/4 ಬಟ್ಟಿಯಂತೆ ಸೂದನ ಅಣ್ಣಯ್ಯ ಮಂದನೆರವಂಡ ಪೂಣಚ್ಚ ವಕ್ಕಲಿಗರ 30 ಸೇರಿನಂತೆ ಒಂದು ಬಟ್ಟಿಯಂತೆ, ಚೆರುವಾಳಂಗಡ ಬಿದ್ದಪ್ಪ, ಮಂಜಂಡ ಚಿಂಗಪ್ಪ ಪೊನ್ನಪ್ಪ, ಮಣ್ಣಣ್ಣ, ಪೊನ್ನಣ್ಣ, ಬೈರಪ್ಪ ಗುಪ್ಪಿಯಮ್ಮ, ಸೂದನ ತಮ್ಮಯ್ಯ, ಕೆತ್ತಯ್ಯ ಸಂಪ್ಪ ಪೈಕೇರ ನೀಲವ್ವ ದೇಚಪ್ಪ, ಎಸುಮಯ್ಯ ಕುಂಞಪ್ಪ ನೆರವಂಡ ವಾಣಿಯಮ್ಮ, ಗಣಪತ್ತಿ, ಮಂದಪ್ಪ ತಂಗವ್ವ ಮತ್ತು ಕಾಯಪ್ಪ ಬೆಳ್ಯಪ್ಪ ಚಿಟ್ಟಿಚ್ಚ ಮುಕ್ಕಾಟ್ಟಿರ ಬೈತಮ್ಮ ಮಂದ್ಯಪ್ಪ ಚಂಗಪ್ಪ ಪುದಿಯನೆರವಂಡ ಬೆಳ್ಳಿಯ್ಯ, ಅಪ್ಪಯ್ಯ ಕಾಂಡ ಸಂಪ್ಪ ಮಾಚ್ಚಾಪ್ಪ ಚಿಟ್ಟಿಯರ ಸೀತಾ ಮಂಜಪ್ಪ ಮಿಜಿ ಸುಬ್ರಾಯ

ಪಿ ಬಟ್ಟಿಯಂತೆ—ಶ್ರೀಗಳಾದ ಚೆರುವಾಳಂಡ ಸಂಜ ಗಣಪತ್ತಿ ಕುಶಾಲಪ್ಪ ಮಂದನೆರವಂಡ ಬೆಳ್ಯಪ್ಪ, ಜೈತಮ್ಮ ಐಯ್ಯಪ್ಪ ಬುಮ್ಮು 4" ಬಿ 30 ಸೇರು

ಪೇರೂರು

ಪೇರೂರು ಕೃಷ್ಣಯ್ಯನವರ ಮೂಲಕ—1/4 ಬಟ್ಟಿಯಂತೆ—ಶ್ರೀಗಳಾದ ತಾಪಂಡ ಸೋಮಪ್ಪ ತಾನೆರೆ ಗಣಪತ್ತಿ, ಐಯ್ಯಮ್ಮ, ಚಂಗಪ್ಪ ಕುಟ್ಟಪ್ಪ, ಅಪ್ಪುಚ್ಚಿರ ಸೋಮಪ್ಪ 30 ಸೇರಿನಂತೆ—ಮಚ್ಚಂಡ ಗಣಪತ್ತಿ ಬೆಟ್ಟಿಚ್ಚಂಡ ಪಾಚ್ಚಿಯ್ಯ, ಚಿಪ್ಪು ಚ್ಚಿರ ಚಂಗಪ್ಪ, ಪೊನ್ನಪ್ಪ, ತಂಗೇಟಿರ ನಂಜಪ್ಪ, 1½ ಬಟ್ಟಿಯಂತೆ—ಮಾನೆರ ಕೇಚಪ್ಪ, ಕಾಂಡಿಂ ಮುನ್ನಾ ಪಾನಮಯ್ಯ ಕಾಳಮ್ಮ, ಚಂಗೇಟಿರ ಮಾಚಪ್ಪ, ಬೆಪ್ಪಚ್ಚಂಡ ಪೊನ್ನಪ್ಪ, ಮಾನೆರ ಉತ್ತಯ್ಯ, ಕೋಡಿಯಂಡ ಪಾಚ್ಚಿಯ್ಯ, ಮಚ್ಚುಡ ಸುವ್ವನ, ಮಾಡಿವಾಣಂಡ ಮತ್ತು ಪೋಟ ಬೆಪ್ಪೋಳಂಡ ಗಣಪತ್ತಿ ಕೇಡಿಯಂಡ ಐಯ್ಯಪ್ಪ, ಮತ್ತು, ಚೀಜಂಗಡ ಚೀಯಣ್ಣ 60 ಸೇರಿನಂತೆ ವರೆಗಟ್ಟಿ ಅಕ್ಕಪ್ಪ, ಮೇಲುಮನೆಯಂಡ ಸೂಪಾಪ್ಪ, ಅಪ್ಪುಚ್ಚಿರ ನಂಜುಂಡ ಮಂಗ್ಯುಡ ಪೊನ್ನಪ್ಪ 70 ಸೇರು

1 ಬಟ್ಟಿಯಂತೆ—ಶ್ರೀಗಳಾದ ತಾಪಂಡ ಪಮ್ಮು ಪ್ಪ, ಕುಟ್ಟಾಂದಿರ ವಿಷ್ಣಪ್ಪ, ಪೂನಯ್ಯ ಮೊಣೆರ ಚಿಟ್ಟಿಚ್ಚ, ಕೋಣಂಡ ಅಯ್ಯಪ್ಪ ನಾಣ್ಯು ಕಾರ್ಯಪ್ಪ, ಉತ್ತಯ್ಯ ಅಪ್ಪುಚ್ಚಿರ ಮಾದಣ್ಣ ಬಿಟ್ಟುವಾಣಂಡ ಅಕ್ಕಮ್ಮ, ಮೇಕಾಮಣೆಯಂಡ ಅಯ್ಯಮ್ಮ, ಮೇಚಪ್ಪ ತಿಮ್ಮಯ್ಯ ಮತ್ತು ಕುಶಾಲಪ್ಪ ಕಾಳಪ್ಪ ಕೆತ್ತಿಡ ಮಾದಪ್ಪ ಪಂಡೇರಂಡ ಮಾದಣ್ಣ

ಒಂದುವರೆ ಬಟ್ಟಿಯಂತೆ—ಶ್ರೀಗಳಾದ ಮತ್ತುಡ ನಂದಣ್ಣ ತಾಂಡೇರ ಗಣಪತ್ತಿ, ತೆಕ್ಕಡ ಮೋಪಯ್ಯ, ಕಾರ್ಯಪ್ಪ, ಬೋಜಪ್ಪ ಕರುಂಬೆಯ್ಯ ಒಂದು ಬಟ್ಟಿ ಹತ್ತು ಸೇರು ಒಟ್ಟು ಜುಮ್ಮು 32 ಬಟ್ಟಿ 10 ಸೇರು

ಕುಲ್ಲೆಟ್ಟಿರ ಅಚ್ಚುಪ್ಪನವರಿಂದ ಸುಂಟಿಕೊಪ್ಪ ವಸೂಲಿ ರೂ ೫೩೦ —ರೂ 1 ರಂತೆ ಶ್ರೀಗಳಾದ ಎಸ್ ಬಸಪ್ಪ ಯುಂ ಸಿ ಎಸುವಪ್ಪ ರಮಣಿರೈ, ಚಕ್ಕಂತ ಚಿಂಗಪ್ಪ, ಸೂಸಿಲೈ ಕಮಲೆ ಕಾವೇರಪ್ಪಗೆ ತಿಮ್ಮಪ್ಪಯ್ಯ ಕೆ ಕಂಡಾಬಸ, ಟಿ ಬಿ ಮಂದಣ್ಣ, ಕೊಡಪಂಡ ತಿಮ್ಮಯ್ಯ, ಕೂಪಂಕೆರಿಲ್ಲ ಶಂಚಿತರು, ಎಸ್ ಏ ಮಾಪುಜಾನ್, ಬೈಕ್ಯಂಡ ಕುಂಞಪ್ಪ, ಕೋನಂಡ ಉತ್ತಯ್ಯ, ನಡಿಮಟ್ಟ ವಿದ್ಯಪ್ಪ, ಬಟ್ಟಿರ ತಿಮಪ್ಪ, ಬಾಬುಪೂಜಾರಿ (ಸಶೇಷ

THE COORG ORANGE GROWERS' CO-OPERATIVE SOCIETY LTD.

Head office--POLLIBETTA, POLLIBETTA P. O.

Wanted immediately a Manager for our Mysore Branch. on a salary of Rs. 30/-plus a dearness allowance of Rs. 10 per mensum, with selling commision etc. which will at present work out to an average of about Rs. 20/- a month, with ample scope to earn more. After the probationary period the salary is likely to be increased.

Cash security of Rs. 200/- and personal surety of Rs. 1000/- essential. The candidate should have studied up to S. S. L. C. Preference will be given to one who has got business experience. Apply immediately to:

THE PRESIDENT,
THE COORG ORANGE GROWERS'
Co-operative Society Ltd.,
Dated 10-7-44. POLLIBETTA.

WANTED

influential and capable Salesman on salary and travelling allowance to push our products in the Estates of Coorg and Mysore. For terms apply in person to:

MANAGING DIRECTOR,
3-1 The Metal Industries, Ltd.,
Shoranur, South Malabar.

"ಟ್ರೈಬಿಕಲ್"

ಕಂಪೆನಿಯಲ್ಲಿ ವಿಮೆ ಮಾಡುವದೇ

ಯೋಗ್ಯವೆಂದು ನಿಮ್ಮ **1944**ರ ತೀರ್ಮಾನವಾಗಲಿ

1943ರಲ್ಲಿ ನಮಗಿನ ವಿಮಾ ಸಂಖ್ಯೆ ಸು. 91,99,107.

ಹಿಂದೂಸ್ಥಾನದ ಹಿರಿದಾದ ದೇಶೀಯ ಕಂಪೆನಿ.

ಮುಖ್ಯ ಖಜೇದಾರ:—ಜೋಳ ಡಿಲ್ಲಿ.

ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:—

ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟಿ ಬ್ರಾಂಚ್ ಮೇನೇಜರ್, ಮಂಗಳೂರು.

27)

ಜರ್ಮನಿ
ಶರಣಾಗತವಾಗಲಿ.

ಹರ್ ಹಿಟ್ಲರ್‌ರವರು ಜರ್ಮನ್ ಸಾಮ್ರಾಜ್ಯ ತಮ್ಮಲ್ಲಿರುವ ಮುಖ್ಯಾಧಿಕಾರಿಗಳೊಡನೆ ಹೊಸ ಕ್ವಾರ್ಟರ್ಸಿನಲ್ಲಿ ಬಹು ಮುಖ್ಯವಾದ ಸಮ್ಮೇಳನ ನಡಿಸಿದರೆಂದು ಈ 5ರ ನ್ಯೂಸ್ ವಿಜಿಸ್ತಿ ತಿಳಿಸಿದೆ.

ಸಮ್ಮೇಳನಾನಂತರ ಹಿಟ್ಲರನ ಒಂದು ಭಾಷಣವೂಡಿ ದಿನ ದಿನದ ಕದನದ ಫಲವನ್ನು ನೋಡಿಕೊಂಡು ಯುದ್ಧ ಪರಿಸ್ಥಿತಿಯನ್ನು ಆಳಿಯಕೂಡದೆಂದು ಎಚ್ಚರಿಕೆಯಿತ್ತರು. ಇಂಥಾ ಆಗಾಧ ಯುದ್ಧದಲ್ಲಿ ಅಲ್ಲಲ್ಲಿ ಆಗುವ ಜಯಗಳೂ, ಸೋಲುಗಳೂ ಅಷ್ಟು ಮುಖ್ಯವಲ್ಲ. ಪ್ರತಿಯೊಬ್ಬ ಜರ್ಮನನೂ ಈಗ ಸ್ವಲ್ಪವೂ ನಿಲ್ಲಿಸದೆ ಕದನ ಮಾಡಬೇಕು ಮತ್ತು ಯುದ್ಧಕ್ಕಾಗಿ ಕೆಲಸ ಮಾಡಬೇಕು.

ಜರ್ಮನಿಯು ಶರಣಾಗತವಾಗಲೂ ಸಿದ್ಧವು. ಈ ಸಂಬಂಧದಲ್ಲಿ ಜರ್ಮನಿಗಿರುವ ಕಷ್ಟಗಳನ್ನೆಲ್ಲಾ ನಿವಾರಿಸುವುದೇ ಸರ್ವ ಕಾರ್ಯಗಳಲ್ಲೂ ನಮ್ಮ ಶ್ರದ್ಧೆಯಾಗಿದೆ. ನಾಲ್ಕು ವರ್ಷಗಳ ಕಾಲ ಒಂಟಿಯಾಗಿ ಸವನೆ ಜಯಗಳನ್ನೇ ಹೊಂದಿದ ನಾವು ಈಗ ಪರಾಜಯ ಹೊಂದುವೆವೆಂದು ಹೇಳಿದರೆ ಯಾರಾದರೂ ನಂಬುವುದಕ್ಕಾಗುವುದೇ? ಇಲ್ಲ. ಎಂದೇ ಸ್ಪಷ್ಟ ಉತ್ತರ. ನಾವು ಈಗಿನ ಕಷ್ಟಗಳನ್ನೆಲ್ಲಾ ನೀಗಿಸಿಕೊಳ್ಳುವೆವು. ಕೊನೆಗೆ ನಮಗೇ ಜಯ.

ನಮ್ಮ ಶತ್ರುಗಳು ಸಖ್ಯಕ್ಕೆ ಭೂ ಕಾರ್ಯಾಚರಣೆಯಲ್ಲೂ, ವಾಯುಸೇನಾ ಕಾರ್ಯಾಚರಣೆಯಲ್ಲಾ ನಮ್ಮ ಮೇಲೆ ಬಿದ್ದಿದ್ದಾರೆ. ನಾವು ನಮ್ಮ ತಯಾರಿಯಾ ಶಕ್ತಿಯನ್ನು ಚೆನ್ನಾಗಿಸಿಕೊಳ್ಳಬೇಕು. ಇದರಿಂದ ನಾವೆಲ್ಲ ವನ್ನೂ ಬದಲುಗೊಳಿಸಬಲ್ಲೆವು.

ವೀರರಾಜೇಂದ್ರಪೇಟೆಗೆ
'ಕೊಡಗು' ನಿಜೆಂಟರು,
ಟಿ. ಕೆ. ಯಂ. ಸುಬ್ರಾಯನವರು.

ನಂಬಿಕೆಯನ್ನು ಹುಟ್ಟಿಸತಕ್ಕ ಲಂಕೆ-ಸಂಖ್ಯೆಗಳು.

ಇಪ್ಪತ್ತಮೂರನೆಯ ಶ್ರೈವಾರ್ಷಿಕ ಸಾಲ್ಯ ಗಣನೆಯು ಪರಿಪಾಲನೆಯು ಪಾರಣಸುಧಾರಿತ ಪಾಲಿಸಿಯನ್ನೂ ಕಡಿಮೆ ಖರ್ಚಿನ ಪಾಲಸೂತಯನ್ನೂ ತೋರಿಸುತ್ತದೆ.

ಕಂಪೆನಿಯು ಜವಾಬ್ದಾರಿಕೆಗಳ ಮೇಲೆ ತೀಕಡ ಮೂರರ ದರದಲ್ಲಿ ಬದ್ಧಿಯನ್ನು ಗಣಿಸಿ ಮೂರು ವರ್ಷಗಳ ಖರ್ ಲಾಭ ರೂ 1,50,88,092. ವಿಮೋದಾರರಿಗೆ ಕ್ಷೇಮನಿಧಿಗೆ ರೂ. 54 ಲಕ್ಷ ಸೇರಿಸಿದೆ.

ಹಂಚಲ್ಪಟ್ಟ ಬೋನಸುಗಳು. } ಹೋಲ್ ಲೈಫ್ ಪಾಲಿಸಿದಾರರಿಗೆ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ 12½ ರೂಪಾಯಿ. ಎಂಡೋಮೆಂಟ್ ಪಾಲಿಸಿದಾರರಿಗೆ-ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ 10 ರೂಪಾಯಿ.

ಓರಿಯಂಟಲ್

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: ಭಾರತದಲ್ಲಿ-1874.] [ಮುಖ್ಯ ಖಜೇ-ಬೊಂಬಾಯಿ.

10 ಬ್ರಾಂಚ್ ಆಫೀಸು-"ಓರಿಯಂಟಲ್ ಬಿಲ್ಡಿಂಗ್ಸ್" ಸೌತ್ ಪೇರೇಡ್, ಬೆಂಗಳೂರು,
ಇನ್ಸ್‌ಪೆಕ್ಟರರ ಆಫೀಸು-ಕೆ. ಸದಾಶಿವರಾವ್ ರೋಡ್, ಮಂಗಳೂರು.

ಪತಭಾಗ್ಯ

ವಿಕ್ರಮಪುರ!

ಮೂಲ ಲೇಖಕರು—ಶ್ರೀ ಸುಜಾತ್ ಮುಖರ್ಜಿ

• •

ಡಾಕ್ಕಾ ಸಮೀಪವಿರುವ ವಿಕ್ರಮಪುರ ಗ್ರಾಮಗಳು ಸಾಮಾನ್ಯ ಗ್ರಾಮಗಳಲ್ಲ. ಹಿಂದೊಂದು ಕಾಲದಲ್ಲಿ ಸಂಪತ್ಸಮೃದ್ಧವಾಗಿ ಮೆರೆಯುತ್ತಿದ್ದುವು. ಗ್ರಾಮಕೂಟಕ್ಕೆ ಸೇರಿದ ಪ್ರತಿಯೊಂದು ಗ್ರಾಮವು ಸ್ವಯಂಪೂರ್ಣವಾಗಿತ್ತು. ಗ್ರಾಮಸ್ಥರು ಸುಸಂಸ್ಕೃತರಾಗಿದ್ದರು. ಆಧುನಿಕ ಭಾರತ ರಚಿಸಿದ ಮೂವರು ಅಗ್ರಗಣ್ಯರಿಗೆ ಜನ್ಮ ಕೊಟ್ಟ ಗ್ರಾಮಗಳವು. ದೇಶಬಂಧು ಸಿ. ಆರ್. ದಾಸ್, ಶ್ರೀಮತಿ ಸರೋಜಿನಿನಾಯ್ಡು ಮತ್ತು ಪ್ರಸಿದ್ಧ ವಿಜ್ಞಾನಿ ಜೆ. ಸಿ. ಬೋಸ್, ಈ ಮೂವರು ಭಾರತದ ಅಭ್ಯುದಯಕ್ಕೆ ಸಲ್ಲಿಸಿದ ಸೇವೆ ಎಷ್ಟೆಂಬುದನ್ನು ಜಗತ್ತೇ ಮೆಚ್ಚಿದೆ.

ಈ ಗ್ರಾಮಗಳನ್ನು ಪ್ರತ್ಯಕ್ಷ ನೋಡಬೇಕೆಂಬುದು ನನಗೆ ಆಸೆಯಾಯಿತು. ಮೂರು ಮಂದಿ ಸ್ವಸಿದ್ಧ ಭಾರತೀಯರಿಗೆ ಜನ್ಮವಿತ್ತ ಕುಟುಂಬಗಳ ಗತಿ ಏನಾಗಿದೆ ನೋಡಲು ನನಗೆ ಕುತೂಹಲವುಂಟಾಯಿತು.

ನನಗೆ ಮುಂಚಾಗಿ ದೊರೆತ ವಾರ್ತೆ ಹೀನಾಯಕವಾಗಿದ್ದಿಲ್ಲ. 1941ರ ಜನಗಣತಿಯ ವಿಕ್ರಮಪುರದ 9 ಲಕ್ಷ ಪ್ರಜೆಗಳಲ್ಲಿ 80 ಸಾವಿರ ಮಂದಿಯನ್ನು ಆಹುತಿ ಪಡೆಯಿತೆಂಬುದನ್ನು ನಾನು ಕೇಳಿದೆ. ಅಳಿದುಳಿದವರ ಪಾಡು ಇನ್ನಷ್ಟು ಭೀಕರವಾಗಿ ಪರಿಣಮಿಸಿತ್ತು. ಆ ಹೆಣವರನ್ನು ಸ್ಮಶಾನಭೂಮಿಗೊಯ್ಯುವ ಶಕ್ತಿ ಅವರಲ್ಲಿ ಉಳಿದಿರಲಿಲ್ಲ. ಮುಸ್ಲಿಮರ ಮನೆ ಎದುರಿನ ಅಂಗಳಗಳು ಘೋರಿಗಳಾಗಿ ಮಾರ್ಪಟ್ಟಿದ್ದುವು. ಮನೆಯಂಗಳದಲ್ಲೇ ಮನೆ ಮಂದಿಯ ಶವ ಸತ್ಕಾರವಾಗುತಿತ್ತು. ಹಿಂದುಗಳು ನದಿಗಳ ಕಾಲುವೆಗಳಲ್ಲಿ ತಮ್ಮ ಶವಗಳನ್ನು ತೇಲಬಿಡುತ್ತಿದ್ದರು. ಹಾಗೆ ತೇಲಬಿಟ್ಟ ಶವಗಳು ರಣಹದ್ದುಗಳ, ಕಾಗೆಗಳ, ನರಿ ನಾಯಿಗಳ ಹೊಟ್ಟೆಯನ್ನು ತೃಪ್ತಿಪಡಿಸುದ್ದುವು. ಕೆಲವು ಪ್ರದೇಶಗಳಲ್ಲಿ ನಡೆಯುವುದೇ ಅಸಾಧ್ಯವಾಗಿತ್ತು. ಕಾರಣ, ಹೆಣದ ರಾಶಿಗಳು ರಸ್ತೆಯಲ್ಲಿ ಬಿದ್ದು ನಾರುತ್ತಿದ್ದುವು. ಅವುಗಳನ್ನು ಬೇರೆ ಕಡೆ ಸಾಗಿಸುವವರಿಗೆ ಬರಗಾಲ ಬಂದಿತ್ತು.

ತಬ್ಬಲಿಗಳ ಕಥೆ.

ದಾರಿಯಲ್ಲಿ ಮುಂದೆ ನೋಡಲಿಕ್ಕಿರುವ ಭಯಾನಕ ನೋಟದ ತುಸು ಪರಿಚಯವಾಯಿತು ನನಗೆ. ಇಬ್ಬರು ಮೂವರು ಸ್ತ್ರೀ ಪುರುಷರು ನಮ್ಮನ್ನು ಹಾದು ಹೋದರು. ಅವರನ್ನು ಕಾಣುವಾಗ ಮಹಷ್ಯ ವರ್ಗಕ್ಕೆ ಸೇರಿದವರೆಂದು ತೋರುತ್ತಿದ್ದಿಲ್ಲ; ಪ್ರತಿಯೊಬ್ಬರೂ ಸುಟ್ಟ ಮರದ ಕೊರಡುಗಳಿಗೆ ಹೋಲುತ್ತಿದ್ದರು.

ವಿಕ್ರಮಪುರ ಗ್ರಾಮವನ್ನು ಸೇರಿದೊಡನೆ ಮೊದಲು ರಾಣಿಂಗಾಂವ್‌ದಲ್ಲಿರುವ ಶಿಶು ಅನಾಥಾಲಯದ ಕಡೆಗೆ ತೆರಳಿದೆ. ಅಲ್ಲಿಯ ತಬ್ಬಲಿಗಳೊಡನೆ ಸಂಭಾಷಣೆ ನಡೆಸಿದಾಗ ಗ್ರಾಮದ ಕರ್ಣ ಕಠೋರ ಕಥೆಯ ಕೆಲವಂಶಗಳು ನನಗೆ ತಿಳಿದವು.

ಮಾಧವನು ಕಜೀರ್ ಪಗ್ಲಾ ಗ್ರಾಮ. ಕೈಲಾಸಿರಿಯ ಬಳಿಕ ಅವನ ಕಣ್ಣಿಗೆ ಕಾಳಿಚರಣನು ಬಡಿಗನಾಗಿದ್ದ. ಮಳೆಗಾಲಕ್ಕೆ ಕೆಲ ಸಮಯವಿರುವಾಗಲೇ ಕಾಳಿಚರಣನು ತನ್ನ ಮನೆ ಮೂರುಗಳ ಸ್ಥಿತಿ ಸುರಿ ಉದ್ಯೋಗ ಹುಡುಕಿ ಕಲ್ಕತ್ತೆಗೆ ಹೊರಟ. ಕಲ್ಕತ್ತೆಗೆ ಹೋದ ಕೆಲವೇ ದಿನಗಳಲ್ಲಿ ಅವ ಮಡಿವನೆಂಬ ವಾರ್ತೆ ಕೇಳಿಸಿತು. ಮಾಧವನ ಅಜ್ಜ (ಕಾಳಿಚರಣನ ತಂದೆ) ಮಾಧವನ ತಾಯಿ ಮತ್ತು ಅವಳ ಇಬ್ಬರು ಗೃಹಿಣಿಯರಿಗೆ ಕಳುಹಿಸಿ ತಾನು ಮಾಧವನ ಅದೃಷ್ಟವನ್ನು ಭಾರ ಹಾಕಿಸಿಕೊಂಡ. ಕೆಲಕಾಲದಲ್ಲಿ ಮಾಧವನ ಅಜ್ಜನೂ ಕಣ್ಮುಚ್ಚಿದ. ಅಜ್ಜನಳಿದೊಡನೆ ಮಾಧವನನ್ನು ಒಂಟಿ ನಿರಾಶ್ರಿತ ಉಪವಾಸಗೃಹಕ್ಕೆ ಕಳಿಸಿಕೊಡಲಾಯಿತು. ಅಲ್ಲಿಂದ ಅವನು ಶಿಶು ಅನಾಥಾಲಯಕ್ಕೆ ಬಂದ!

ನಾನು ಮಾಧವನನ್ನು ಭೇಟಿಯಾಗುವ ಕೆಲವು ದಿನಗಳ ಮುಂಚೆ ಮಾಧವನ ತಾಯಿ ಮಗನನ್ನು ಕಾಣಲು ಬೇಕಾಗಿ ಅನಾಥಾಲಯಕ್ಕೆ ಬಂದಿದ್ದಳಂತೆ. ಆಗಿನ ಅವಳ ರೂಪ ತೀರಾ ವಿಕಾರವಾಗಿತ್ತು. ಭಯಂಕರ ರೋಗವು ಅವಳ ಅಂದ ಕೆಡಿಸಿತ್ತು. ವೈಭವಾರಭ್ಧ ಗೃಹಿಣಿಯಲ್ಲೂ ಅಂತಸ್ಥೆಗೆ ಸ್ನಾನವಿರಲಿಲ್ಲ. ಮಾಧವನನ್ನು ಕೊನೆಯಬಾರಿ ಕಣ್ತುಂಬಾ ನೋಡಿ ತೆರಳಿದವಳಾಕೆ. ಮತ್ತೆ ಮರಳಲಿಲ್ಲ. ಅನಂತರ ನಾನು ಅಜಿಮುನಿಸ್ಸಳೊಡನೆ ಮಾತನಾಡಿದೆ. ಅವಳ ಮುಖದಲ್ಲಿ ಸುಟ್ಟ ಗಾಯಗಳು ಕಾಣುತ್ತಿದ್ದವು ಕಾರಣ?

ಆಕೆಯು ಹುಟ್ಟೂರು ಕುಮೂರಭಾಗ ಗ್ರಾಮ. ಅವಳ ತಂದೆ ಹಸಿವಿನ ಬೇಗೆಗೆ ಕರಗಿಹೋದನು. ಆಹಾರಕ್ಕಾಗಿ ತಾಯಿ ಎರಡನೇ ವಿವಾಹವಾದಳು. ಅಜಿ ಮನಿಸ್ಸಳ ತಾಯಿಯ ಹೊಸ ಗಂಡ ಅವಳನ್ನೂ, ಅವಳ ತಂಗಿಯನ್ನೂ ಮನೆಯಿಂದ ಹೊರದೂಡಿದ. ನೆರೆಹೊರೆಯವರೊಬ್ಬನು ಆ ಪುಟ್ಟ ಜೀವಿತಂತುಗಳಿಗೆ ಆಶ್ರಯ ಕೊಟ್ಟ. ಅದರೆ ಕೆಲ ದಿನಗಳಲ್ಲಿ ಹಸಿವು ಅವನ ಮನೋಸ್ವಾಸ್ಥ್ಯವನ್ನೂ ಕೆಡಿಸಿತು. ಚಿತ್ತಭ್ರಮಣದಿಂದ ಅವನು ಬಡ ಮಕ್ಕಳನ್ನು ಪೀಡಿಸತೊಡಗಿದ. ಒಂದು ದಿನ ಅಜಿ ಮನಿಸ್ಸಳ ಮುಖವನ್ನು ಒಲೆಯಲ್ಲಿ ತೂರಿಬಿಟ್ಟ. ಅದರ ಪರಿಣಾಮವಾಗಿ ಆ ಸುಟ್ಟ ಗುರುತುಗಳಿದ್ದುವು. ಪಾಪದ ಹುಡುಗಿ ಬೇಕೆಯ ಉರಿ ಸಹಿಸಲಾಗದೆ ಬೊಬ್ಬಿಟ್ಟಳು. ನೆರೆ ಹೊರೆಯವರು ಅಲ್ಲಿಗೆ ಬಂದು ಮಕ್ಕಳಿಬ್ಬರನ್ನೂ ಶಿಶು ಅನಾಥಾಲಯಕ್ಕೆ ಸೇರಿಸಿದರು.

ಅನಾಥಾಲಯಲ್ಲಿದ್ದ ಪ್ರತಿಯೊಬ್ಬ ಮಗುವೂ ಇಂತಹದೇ ಒಂದೊಂದು ಕಥೆ ಹೇಳತೊಡಗಿತು. ಈ ಕಥೆಗಳನ್ನೆಲ್ಲಾ ಕೇಳುವಾಗ, 'ಈ ಗ್ರಾಮಗಳಿಂದ ನಾಗರಿಕತೆಯ ಬೀಜಾಕ್ಷರಗಳು ಮಾಯವಾಗಲು ಇನ್ನು ಹೆಚ್ಚು ಕಾಲವಿಲ್ಲ' ಎಂಬುದು ವಿದಿತವಾಯಿತು ನನಗೆ

ಇದಿಷ್ಟು ನಾನು ಕರ್ಣಾರ ಕಂಡ ಕಿವಿಯಾರೆ ಕೇಳಿದ ಕರುಣ ಕಥೆ ಯಾವ ಗ್ರಾಮಗಳಲ್ಲಿ ದೇಶಬಂಧು ಚಿತ್ತರಂಜನ ದಾಸ್, ಸರೋಜಿನಿದೇವಿ, ಜಗದೀಶ ಚಂದ್ರ ಬೋಸ್ ಇವರೇ ಮೊದಲಾದ ಮೇಧಾವಿಗಳು ಹುಟ್ಟಿದ್ದರೋ, ಯಾವ ಗ್ರಾಮಗಳಲ್ಲಿ ಅವರ ಸಂಬಂಧಿಕರು ಈಗ ವಾಸಿಸುತ್ತಿರುವರೋ ಆ ಪವಿತ್ರ ಗ್ರಾಮಗಳ ಇಂದಿನ ಪಾಡು ಇಷ್ಟು ಭಯಾನಕವಾಗಿ ಪರಿಣಮಿಸಿದೆ.

ನಿಜವಾದ ಕಥೆ ಹೀಗಿದೆ. ಕಳೆದ ವರ್ಷ ವಿಕ್ರಮಪುರದಲ್ಲಿ ಮಡಿದವರ ಇಲ್ಲವೆ ಮನೆಮಾರು ತೊರೆದು ಹೋದವರ ಸಂಖ್ಯೆ 1 ಲಕ್ಷ ಆಗಿತ್ತು. ಈ ವರ್ಷ ಉಳಿದ ಎಂಟು ಲಕ್ಷ ಮಂದಿಯಲ್ಲಿ 2 ಲಕ್ಷ ಮಂದಿ ನಿರಾಶ್ರಿತ ಸ್ಥಿತಿಯಲ್ಲಿದ್ದಾರೆ. ಈ ಗಾಗಲೇ ಅವರು ಉಪವಾಸಕ್ಕೆ ಬಲಿಯಾಗಿದ್ದಾರೆ ಆಹಾರ ಸಾಮಗ್ರಿಗಳ ಬೆಲೆ ಕೆಲವು ಕಡೆಗಳಲ್ಲಿ ಮಣಕ್ಕೆ 26 ರೂಪಾಯಿಯಷ್ಟೇರಿದೆ

ತ್ವಾಮ ಪರಿಹಾರ ಯತ್ನಗಳು ವೇಗನೆ ನಡೆಯದಿದ್ದಲ್ಲಿ ಆ ಉಳಿದ ಎಂಟು ಲಕ್ಷ ಮಂದಿಯು ಕೆಲ ಕಾಲದೊಳಗೇನೆ ಹಸಿವಿನ ಭೂತಕ್ಕೆ ಬಲಿತೆಯಾಗಬಹುದು. ಪತಭಾಗ್ಯ ವಿಕ್ರಮಪುರವನ್ನು ಉಳಿಸಲು ಭಾರತೀಯರು ಮುಂದಾಗಬೇಡವೇ?

'ನ. ಭಾ.'

ವ್ಯವಸಾಯಗಾರರಿಗೆ ಸುಸಮಯ.

ಗದ್ದೆ ಮತ್ತು ಕಾಫಿತೋಟಕ್ಕೆ ಬೇಕಾಗುವ ಉತ್ತಮ ದರ್ಜೆಯ **ಗುಳಿ, ಗುದ್ದಲಿ, ಮುಳ್ಳುಗುದ್ದಲಿ, ಪಿಕಾಸಿ, ಹಾತಿ, ಕತ್ತಿ, ಕಸಿ ಚಾಕು, ಕೊಡಲಿ,** ಪಳುವಿನ ದೆಬ್ಬೆ ತೆಗೆಯಲಿ ಕಂಬಳಿ, ಸ್ಪ್ರೆಮಿಶನ್ನಿಗೆ ಬೇಕಾದ ವ್ಯಾಕಿಂಗ್ ಮತ್ತು ಜಬ್, ರಬ್ಬರ್‌ಹೋಸ್ ಮುಂತಾದವೆಲ್ಲಾ (Spar parts) ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತವೆ.

ಪಲ್ವರ್ ಮಿಷನ್ ಮತ್ತು ಸ್ಪ್ರೆಯಿಂಗುಗಳನ್ನ ರಿಪೇರಿ ಸಹ ಮಾಡುತ್ತೇವೆ.

ಧಾರಣೆ ವಗೈರೆ ಹೆಚ್ಚಿನ ಸಂಗತಿಗಳಿಗೆ ಈ ನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಸೀತಾರಾಮಯ್ಯ ಅಂಡ್ ಕೊ.,
ವಿಶ್ವೇಶ್ವರಪುರ, ಬೆಂಗಳೂರು ಸಿಟಿ.

12-11

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು

ಒಟ್ಟು ಆದಾಯ .... ೯೭,೩೭,೦೦೦ ರೂಗಳನ್ನು ವಿೂರಿದೆ.
ಜಾಲ್ತಿಯಲ್ಲಿರುವ ವಿಮೆ ೧೩,೪೯,೪೮,೦೦೦ ,,
ಆಸ್ತಿ ... . ೨,೩೦,೪೩,೦೦೦ ,,

ಕಂಪೆನಿ ಸ್ಥಾಪಿತವಾದಂದಿನಿಂದ ಕೊಟ್ಟ ಕ್ಲೈಮ್ ನೊಬಲಗು ೨.೩೮,೦೦,೦೦೦ ರೂ. ಗಳನ್ನು ವಿೂರಿದೆ.

ಅಂಗ ಕಛೇರಿ: ಡಿಸ್ಪೆನ್ಸರಿ ಬಿಲ್ಡಿಂಗ್ ಕೆಂಪೇಗೌಡ ರಸ್ತೆ, ಬೆಂಗಳೂರು.

(32)

ಏಜೆನ್ಸಿ ಆರ್ಡರ್‌ಗಳನ್ನು ಸ್ವಾಗತಿಸಿದೆ

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

BHUVANENDRA PRODUCTS LIMITED,

KATAPADI, (S. Kanara). DEPOT— Maharatha Galli, Hubli.

'ಭುವನೇಂದ್ರ' ಕಸ್ತೂರಿ ಮಿಶ್ರಿತ ದಶಮೂಲರಿಷ್ಟ.

ಗರ್ಭಾಶಯ ದೋಷದಿಂದ ಗರ್ಭಧಾರಣೆಯಾಗದಿರುವುದು, ಶರೀರವು ಅಶಕ್ತವಾಗಿರೋಣ, ಗರ್ಭಾಶಯದ ಅಶಕ್ತತೆಯಿಂದ ಗರ್ಭಪಾತವಾಗೋಣ, ಸೂಡಿಕಳೋಗ, ಪುಷ್ಪಸ ಸಂಬಂಧ ಸೀಡೆ ಇತ್ಯಾದಿಗಳು ದಶಮೂಲಾರಿಷ್ಟದ ಸೇವನೆಯಿಂದ ಗುಣಹೊಂದುವವು. ಗರ್ಭಧಾರಣೆಗೆ ಸಹಾಯ ಮಾಡುವುದು. ವೀರ್ಯವೃದ್ಧಿಮಾಡಿ ದೇಹಕ್ಕೆ ಹೊಸ ಚೈತನ್ಯ ಕೊಡುವುದು. ನಮ್ಮ ಕೊಡಗು ಏಜೆಂಟರು– (1) ಮಂಗಳೂರು ಸೋರ್ಸ್, ಜನರಲ್ ಮರ್ಚೆಂಟ್ಸ್, ಮಡಿಕೇರಿ (2) ಮಂಗಳೂರು ಎಮ್ಯುನಿಶನ್ ಸ್ಟೋರ್ಸ್, ಮಡಿಕೇರಿ (3) ಡಾ. ಬಿ. ಕೆ. ನಂಜುಂಡೇಶ್ವರ, ಮಡಿಕೇರಿ. (4) ಡಾ. ಪಿ. ಎಂ. ಕಾಣಮ್ಮಯ್ಯ, ಪೊನ್ನಂಪೇಟೆ. (5) ಡಾ. ಎಂ. ಬಿ. ಕಾರ್ಯಪ್ಪ, ಪೊನ್ನಂಪೇಟೆ. (6) ಎಸ್. ಶ್ರೀನಿವಾಸಯ್ಯ, ಭಾಗಮಂಡ್ಲ. (7) ಕೆ. ಎಸ್ ರಾಜಶೇಖರಪ್ಪ & ಸನ್ಸ್, ಸೋಮವಾರಪೇಟೆ. (8) ಡಾ. ಎ. ಸಿ. ಸುಬ್ಬರಾಮಯ್ಯ, ವೀರಾಜಪೇಟೆ. (9) ಡಾ. ಐ. ಆರ್. ಅಪ್ಪಣ್ಣ, L. I. M., ವೀರಾಜಪೇಟೆ. (10) ಡಾ. ಕೆ. ಜಿ. ಕರುಂಬಯ್ಯ, ಮಡಿಕೇರಿ. (11) ಕೂರ್ಗ್ ಟೀಚರ್ ಕೋ-ಆಪರೇಟಿವ್ ಸೊಸೈಟಿ, ವೀರಾಜಪೇಟೆ. (12) ಶ್ರೀ ಎ. ಎಸ್. ಮೂಡಯ್ಯ, ಕ್ಲಾತ್ ಮರ್ಚೆಂಟ್, ಶಾಂತಿಕೊಪ (13) ಡಾ. ಯಸ್. ವೆಂಕಟರಂಗಾಚಾರ್ಯ, ಯಲ್. ಎ. ಯಂ. ಯಸ್. ಸೋಮವಾರಪೇಟೆ.

ಭುವನೇಂದ್ರ ಪ್ರೋಡಕ್ಟ್ಸ್, ಲಿಮಿಟೆಡ್, ಕಟಪಾಡಿ, ದ. ಕನ್ನಡ.

52-15 ಡಿಪೋ:– ಮರಾಠ ಗಲ್ಲಿ, ಹುಬ್ಬಳ್ಳಿ.

ನಾಳೆ ಎಂಬುವದಿಲ್ಲ!

ನಮ್ಮ ಅಜ್ಜ ನುತ್ತಜ್ಜಂದಿರು ಯಾವಾಗಲೂ "ಶುಭಸ್ಯ ಶೀಘ್ರಂ" ಎಂದು ಹೇಳುತ್ತಿದ್ದರು. ನಿಮ್ಮ ಬಳಗದ ವತಿಗೂ ಮತ್ತು ಪ್ರೀತಿಗೆ ಪಾತ್ರರಾದವರಿಗಾಗಿ ನೀವು ಮಾಡಬಹುದಾದ ಉತ್ತಮ ಸೇವೆ ವಿಮೆ ಮಾಡುವುದೇ ಆದ ಕಾರಣ ಅದನ್ನು ಈಗಲೇ ಮಾಡಬೇಕು. ಬುದ್ಧಿವಂತರು ಹರೆಯದಲ್ಲಿದ್ದು ಸರಿಯಾದ ಉತ್ತೇಜಿಯಿರುವಾಗಲೇ ವಿಮೆ ಮಾಡಿ ನಿಶ್ಚಿತ ವರಮಾನವನ್ನು ಪಡೆಯುತ್ತಾರೆ. ಅವರು ತಮ್ಮ ಭವಿಷ್ಯವನ್ನು ಸಾರ್ವಜನಿಕ ನಂಬಿಕೆಗೆ ಪಾತ್ರವಾದ ಒಂದು ಕಂಪೆನಿಗೆ ಒಪ್ಪಿಸುತ್ತಾರೆ.

ತಮ್ಮ 33 ವರ್ಷಗಳಅನುಭವದಿಂದ ಇಂದಿಯೊದಉತ್ತಮ ಕಂಪೆನಿಗಳಲ್ಲಿ ಒಂದಾದ

ದಿ ಬೋಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿ.

ಇದನ್ನು ನಿಮಗೆ ಸಿಫಾರಸ್ಸು ಮಾಡಬಲ್ಲೆವು.

ಫಾರಾಳ ಶರತ್ತುಗಳ ಮೇಲೆ ಪ್ರತಿನಿಧಿಗಳಿಲ್ಲದ ಕೊಡಗಿನ ಭಾಗಗಳಿಗೆ ಏಜೆಂಟರು ಬೇಕಾಗಿದ್ದಾರೆ.

ಕೊಚ್ಚಿಕಾರ್ ಬ್ರದರ್ಸ್ ಲಿ.—ಪ್ರಾಮುಖ್ಯ ಏಜೆಂಟರು.

ಪಶ್ಚಿಮ ಇಂಡಿಯಾಕ್ಕೆ, ಇಂದಿ ಸಂಸ್ಥಾನಗಳನ್ನೊಳಗೊಂಡು ಪೊ. ಚಾ. 337. ಮೌಂಟ್ ರೋಡ್, ಮದ್ರಾಸು.
33) ಕಛೇರಿಗಳು ಮತ್ತು ಏಜೆನ್ಸಿಗಳು ದಕ್ಷಿಣ ಇಂಡಿಯಾದಲ್ಲೆಲ್ಲಾ ಇವೆ.

ಕಸ್ತೂರ್‌ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ಧನ ಸಹಾಯ ಮಾಡಿರಿ.

KODAGU MERCARA, (Coorg)

ಕೊಡಗು

ಸಂಪಾದಕರು:—ಶ್ರೀ ಪಿ. ಪಿ. ಬೆಳ್ಯಪ್ಪ, ಪಾಪ್ಯುಲರ್ ಪ್ರಿಂಟಿಂಗ್ ವರ್ಕ್ಸ್, ಮಡಿಕೇರಿ

ಸಂಪುಟ ೨೪ | ಕಾರ್ತೀಕ ೨೧—೭—೧೯೬೪ನೇ ಇಸ್ವಾನ. | ಸಂಚಿಕೆ ೭

An Estate writer with the knowledge of Accountancy and type writing on a salary of Rs. 50/- with dearness allowance of Rs. 15/- per month. An increment of Rs. 5/- per year will be given on the merits of the work turned out. Free accomodation will be given.

For further particulars please apply to:—

F. Kunti Kannan,
Perumbubetta Estate,
8-1 POLLIBETTA.

ಹಿಂದೀ ರಾಜ್ಯಭಾಷೆಯಾ?

ಶ್ರೀ ರಾಜಗೋಪಾಲಾಚಾರಿಯವರು ಹಿಂದೂ ಮುಸ್ಲಿಂ ಐಕ್ಯತೆಗೆ ಮುಂಚಿನ ಪರಿಸ್ಥಿತಿಯ ಶತಮಾನಗಳ ಬಗ್ಗೆ ಮೇಲಕ್ಕೆ ಪದ್ಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಮುಸ್ಲಿಮರು ಅನೇಕರು ಅದನ್ನು ಹೊಗಳಿದ್ದಾರೆ. ಜಬಲಪುರ ಅದನ್ನು ಖಂಡಿಸಿದ್ದಾರೆ. ಹಿಂದೂ ಮಹಾಸಭಾಧುರೀಣರು ಇದನ್ನು ಅತಾವಾಗಿ ಖಂಡಿಸಿದ್ದಾರೆ. ಮುಖ್ಯವಾಗಿ ಧರ್ಮದ ವಿಷಯದಲ್ಲಿ ಅಭಿಪ್ರಾಯ ವ್ಯತ್ಯಾಸವಿರುವುದಕ್ಕೆ ಅಕ್ಬರ್ ವ್ಯತ್ಯಾಸವಿಡಿದ್ದಾರೆ. ಬಲವಾದ ಸಂಘಾಕ್ಷರ ಒಂದಕ್ಕೊಂದು ಈ ರೀತಿ ಅಡಕ್ಕೆ-ಒಲ್ಲೆಗೆಯಿತ್ತರೆಂದು ಹೇಳಿದ್ದಾರೆ. ಆದರೆ ಕಳ್ಳ್ಯಾಗಿ ಆದರೋಕೆಯಿದರೆ ಈ ಸಹಜನೆಗಳು ಹೊಸ್ಯದಾಗಿವೆ. ರಾಷ್ಟ್ರೀಯ ಸಂಘಟನೆಯ ಸಭೆಯಲ್ಲಿ ಮುಸಲ್ಮಾನರು ಪಾಲ್ಗೊಂಡರೆ ಮಾತ್ರ ಇದು ಜಾರಿಯಲ್ಲಿ ಬರಲಕ್ಕಿದ್ದಿದೆ. ಈಗಿನ ಅಭ್ಯಂತರಗಳಿಗೆ ಅವರೆಲ್ಲ ಪಾಲ್ಗೊಂಡಂತೆ ಏಗಿರುವುದರಿಂದ ಅವು ಯೋಗ್ಯ ಪರಿಹಾರಗಳು. ಪ್ರತ್ಯೇಕ ರಾಷ್ಟ್ರವನ್ನು ಬಯಸುವ ಸಾಧಕಬಾಧಕಗಳನ್ನು ಮಹಾಸಭಾ ಪುನರಾಲೋಚನೆಯಿಂದ ನಿರ್ಧರಿಸುವ ಮೂಲಕ ಇದರ ಪ್ರಯತ್ನವಾಗಿದೆ. ಅವರಲ್ಲಿ ಬಲಾಢ್ಯರಲ್ಲಿ ಗಲಿಬಿಲಿಯು ಚಿಕ್ಕವರಿಗೆ ಯೋಗ್ಯವಲ್ಲಿದ ಫಲಗಳನ್ನು ಸೇವಿಸಬಹುದು. ಮಹಾಸಭೆಯ ಬೆಂಬಲ ಪಡೆದ ರಾಜಾಜಿಯವರ ಈ ಸೂಚನೆಗಳನ್ನು ಬಗ್ಗೆ ಜಿಜ್ಞಾಸೆಯು ಪ್ರಸ್ತುತವಾಗಿ ಆಯಾ ಪಕ್ಷಗಳಲ್ಲಿ ಇದರ ಬಗ್ಗೆ ಪರಿಶೀಲನೆಯಾಗಿದೆ. ಮುಸ್ಲಿಂ ಲೀಗಿನವರು ಈ ಯೋಜನೆ ಪರಿಶೀಲನೆಗಳನ್ನು ಒಪ್ಪಿ ಇದಂಡೆ ಬರಬೇಕು. ಆ ಪ್ರಾಜೆಕ್ಟಿನವರು ಸೃಷ್ಟಿ ಪಡಿಸಿದಂತೆ ಮುಸ್ಲಿಮರಿಗೆ ಇರಕ್ಕಿಂತಲೂ ಶಾಶ್ವತ ಪರಿಹಾರಗಳು ಎಂದು ಹೊರಬರಬಾರದು. ಆ ಯೋಚನೆಗಳನ್ನು ಉಪಯೋಗಿಸಿಕೊಂಡರೆ ಮುಸ್ಲಿಮರೂ ಹಿಂದೂ ಧರ್ಮಕ್ಕೆ ಸೇರಿ.

ಮಹಾತ್ಮಗಾಂಧಿಯವರು ಹಿಂದೂದೇಶದ ಬಿಳ್ಳಿಟ್ಟನ್ನು ಬಗೆಹರಿಸುವ ಬಗ್ಗೆ ಅವರು ಸೂಚಿಸಿದ ಸಹಜನೆಗಳನ್ನು ಬಹುಮಟ್ಟಿಗೆ ಅಳ್ಳಗಳುವುದಕ್ಕೆ ತೀರ್ಮಾನಿಸಿದ್ದಾರೆ. 1942ನೆ ಕೆಳಗೆಯನ್ನೇ ಇಂಗಲು ಮಾಡಲಾಗಲೆಂದು ಅವರು ಸ್ಪಷ್ಟಪಡಿಸಿದ್ದಾರೆ. ರಾಷ್ಟ್ರೀಯ ಸರಕಾರವು ಪ್ರಾಪ್ತವಯಸ್ಕರಿಗೆಲ್ಲ ಸಂಪೂರ್ಣ ಅಧಿಕಾರ ನೆಲಸಾಮ್ಯ ಮತ್ತು ಸ್ವಾಮ್ಯ ಸ್ವಾತಂತ್ರ್ಯಗಳನ್ನು ಇರಲಿ. ಜೀಗೂರು ಮೊದಲ ಅವರ ಜಾಜ್ಞಾ ಜನತೆಗೆ ಇಂಬಲೇಕೆಂದುವರು. ಬಳಿ, ಸ್ವಾತಂತ್ರ್ಯಕ್ಕೆಪ್ಪರ ಕೊಡುವುದೂ ಗಾಂಧಿಯವರು ಇಂದು ಬೇಡುತ್ತಿರುವುದನ್ನು ಯಾವ ವೈಚಿತ್ರ್ಯವೂ ಇಲ್ಲವೆಂದೆನ್ನುವ ಧೈರ್ಯ ಪ್ರಾಜೆಕ್ಟಿಗೆ ಇಲ್ಲ. ಪ್ರಾಜೆಕ್ಟಿಗೆ ಸಮಗ್ರ ಇವ್ಯವಹಾರದ ಪ್ರತ್ಯೇಕ ವಿಭಾಗವಿದೆಯಷ್ಟೆ. ಅಲ್ಪಸಂಖ್ಯಾತರ ಸಮಸ್ಯೆಯನ್ನು ಗಾಂಧೀಜಿಯವರು ಬಿಟ್ಟಿದ್ದಾರೆ. ಪ್ರತ್ಯೇಕ ಹೊಸರಾಷ್ಟ್ರಕ್ಕೆ ಗಾಂಧಿಯವರು ಇಂದು ಕೇಳುತ್ತಿರುವುದೂ ಧಾರಣೆ ಸರಕಾರವು ನಗುವುದುಮಾದಿಂದು ಅದನ್ನು ಕೊಡುವುದಿದ್ದಿವೇ? ಗಾಂಧಿಯ ಪರ ಸಮಸ್ಯೆ ಯೋಜನೆಯನ್ನು ಹಿಂದೀ ಮಂತ್ರಿಗಳ ಕೈಗೆ ಸಂಪೂರ್ಣ ಅಧಿಕಾರ ಬರುವುದು. ಪ್ರಿಪರಾಯರು ಬ್ರಿಟಿಷ ಚಾರಿತಂತೆ ವರ್ತಿಸಬೇಕಾಗುವುದು. ಅದು ತಾತ್ಪರ್ಯವಿಲ್ಲ ವಿಷಯವು. ಯುದ್ಧಾನಂತರ ಪೂರ್ಣ ಸ್ವಾತಂತ್ರ್ಯ ಕೊಡಬೇಕೆಂಬ ಮನವಿಯನ್ನು ಗಾಂಧಿಯವರು ಸ್ಪಷ್ಟಪಡಿಸಿದ್ದಾರೆ. ಗಾಂಧಿಯವರು ಮಾಡಿದ ಈ ಸಹಜನೆಗಳು ಅತ್ಯಪಮಿತಿ. ಇದು ಮುಸ್ಲಿಮರ ವೈಯಕ್ತಿಕ ಅಭಿಪ್ರಾಯ. ಬ್ರಿಟಿಷರಲ್ಲಿರುವ ಮನುಷ್ಯ ಬಿಟ್ಟು ಯೋಚನೆಗಳನ್ನು ಅವರು ಹಾಗೂ ಲೋಭಿಸುವ ಅನುಮಾನವಿದರೆ ಹಿಂದೂದೇಶದ ಬಿಳ್ಳಿಟ್ಟು ಪರಿಹಾರವಾಗುವುದರಲ್ಲಿ ಸಂದೇಹವಿಲ್ಲ. ಆದರೆ ನಾವೆಲ್ಲ ಬ್ರಿಟಿಷರೀ ಐಡೀಯಲಿಸ್ಟರು ಇದನ್ನು ನಿರಾಕ್ಷಪಾತ ಅವಸ್ಥೆಗಳು ಕೇಳಿಬರುತ್ತಿವೆ. ಹಿಂದೂ ಮಹಾಸಭಾ ಮುಖಂಡರು ಇದನ್ನು ಏನುಉತ್ತರಿಸುವರು ಇದು ಜನತೆಗೆ ಈ ಅಭಿಪ್ರಾಯಗಳಿಗೆ ಕೊಂಡಿಯೇನು? ಈ ಪ್ರಶ್ನೆಗಳಿಗೆ ಉತ್ತರವಾಗಿಯೇ ಪೈನರಾಯರು ಉತ್ತರಿಸಬೇಕಲ್ಲವೇ?

ಮುಂಬೇನು?

ಗಾಂಧೀಜಿಯವರ ಈ ಸಹಜನೆಗಳನ್ನು ಸರಕಾರವು ನಿರಾಕರಿಸಿದರೆ ಹಿಂದೂಮೆಂ ಮೇಲಕ್ಕೆ ಪಕ್ಷಗಳಿಂದಿರೆಯ, ಅಧಿಕಾರವನ್ನು ಭಾರತೀಯರಿಗೆ ಬಿಟ್ಟು ಕೊಡುವ ಮನಸ್ಸು ಬ್ರಿಟಿಷರಿಗೆ ಇಲ್ಲವೆಂಬುದೇ ಸ್ಪಷ್ಟವಾಗುವುದು. ಮುಸ್ಲಿಲೀಗಿನವರು ರಾಷ್ಟ್ರಾಮಯವು ಪ ಸಂಜ್ಞೆಗಳನ್ನು ಅಂಗೀಕರಿಸಿ ಮುಂದೆ ಬಾರದಿದ್ದರೆ ಅವರೂ ಹಿಂದೂದೇಶ ಪ ಬಂಧನಾಗಲೇಕೆಂಬ ಇಚ್ಛೆಯಿಟ್ಟುಕೊಳ್ಳಬೇಕಾಗುವುದು. ಗಾಂಧೀಜಿಯವರು ಪ್ರಿ ಪರ ಮುಂದಾಲೋಚನೆಯಿಂದ ನಮ್ಮ ಮೂತುಲಕ್ಷೆ ಪ್ರಾರಂಭಿಸಿದ್ದಾರೆ. ರಾಜಾಜಿ ಭಾಷಾ, ಧರ್ಮಾತ್ಮಪ್ರಭಾ, ಸಪ್ರೂ-ಜಯಕರ್, ಮುಂತ್ತ ಮೊದಲಾದವರು ಸಂಪೂ ಗವಾಗಿ ಯೂಕ್ಲಿ ನಿರೀಸಿದ್ದಾರೆ. ಗಾಂಧೀಜಿಯವರು ಭಿಕ್ಷೆಪ್ರಿಸ ಕರಿಸಾ ಪರಕ್ಕಾಗಿ ಮುಂ ದೆ ಪೀಡಿಸಿದ ಸೂಚನೆಗಳು ಪೂರ್ಣ ಜೀವಂತವಾಗಿವೆ. ಈ ಸೂಚನೆಗಳನ್ನು ಪರಕ್ಷಾಪರ್ಧಿಸಿ ಪರಕ್ಷಾಪರ ಮಂತ್ರಿಮಂಡಲವನ್ನು ಯೋಗ್ಯ ರೀತಿ ನಿರ್ಣಯಿಸಿದರೆ ಅದೊಂದು ದೂರಂತ ವೆನ್ನಲಿಲ್ಲವಿಲ್ಲ. ಮಹಾತ್ಮಗಾಂಧೀಯವರಂದಂತೆ ಮಿಲ್ಟರು ಪಾಲಿಸೀತಿಯನ್ನೇ ಪ ಯಿಸಿದರೆ ಜಯವಾದಿಯಾಗುವುದು. ಇದು ಕೇವಲ ರಾಜಕೀಯ ಜಯವಾಗಿ ಇರಬಾರದು ಮಾನವೀಯತೆಯ ಜಯವಾಗಿ ಪರಿಣಮಿಸಿದರೆ ಮಾತ್ರ ಯಾವುದೇ ಜಯವಾಗಿರುವುದು. ಬ್ರಿಟಿಷ್ ಸರಕಾರ ಪ್ರಿ ಹಿಂದೀಯರು ಭಾಗ್ಯೋದಯವನ್ನು ಸೃಷ್ಟಿಸಿದರೆ ಅದರ ನೈತಿಕ ಬಲ ಜಿಜ್ಞಾಸವಿಲ್ಲದೆ ವಿಶ್ವ ಪಕ್ಷಕ್ಕೆಲ್ಲ ಪರಿಪೂರ್ಣವಾಗಿ ಮುಂದಿನ ಕಾಲಕ್ಕೆ ಪರಿಹಾರ ಪ್ರಭವಾಗಿರುವುದು.

ಕೆ.ಜೆ.ಸಿ.

ಯೂರೋಪಿನ ಪ್ರೆಸಿಡೆನ್ಸಿಯ ಎಂಬಲ್ಲಿ ಜಾಗತಿಕ ಶಾಂತಿಯ ಸಂಸ್ಥೆಯ ಸಭೆ

ಇದಕ್ಕೆ 44 ದೇಶಗಳ ಪ್ರತಿನಿಧಿಗಳು ಬಂದಿದ್ದರು. ಹಿಂದೂದೇಶದ ಪ್ರತಿನಿಧಿಗಳೂ ಹೋಗಿದ್ದರು. ಈ ಪರಿಷತ್ತಿನಲ್ಲಿ ಅಂತರರಾಷ್ಟ್ರೀಯ ಬ್ಯಾಂಕನ್ನು ಕುರಿತ ಸಮಸ್ಯೆಯ ಮೊದಲಾದ ವಿಷಯವನ್ನು ಸಂಗ್ರಹಿಸಿ ಯೂರೋಪಿನಲ್ಲಿ ಸಾರಿಸುಗೆಂದು ನಾವಿದಾದ ದೇಶಗಳಿಗೂ ಅಭಿಷ್ಟ ವೃದ್ಧಿಯಾದ ಹಿಂದುಳಿದ ಜನಾಂಗ, ಹಿಂದೂದೇಶಕ್ಕೆ ಗಳಿಗೂ ಜೊತೆ ಪರಾಮರ್ಶ ನೀಡಿದ ಅಭಿಪ್ರಾಯ ನೆಡೆಯಿತು. ಹಿಂದೂಸ್ಥಾನದ ಗಿನ ಯುದ್ಧ ಪಲ್ಲಿ ಇಂಗ್ಲೆಂಡ್, ಅಮೇರಿಕಾಗಳಿಗೆ ಯುದ್ಧ. ಅಪಾರ ಸಾಮಗ್ರಿ ನ್ನು ಒದಗಿಸುತ್ತಿದೆ. ಈ ಸಾಮಗ್ರಿಗಳ ಬಗೆಲು ಅಪೇಕ್ಷಗಳಂದ ಸಾಲಗಳನ್ನು ಸುತ್ತಿದ್ದು. ಅವರು ಇದಕ್ಕೆ ಪರಿಹಾರವಾಗಿ ದುಡ್ಡು ಕೊಡುವ ಬದಲು ಕಚ್ಚಾ ಪದಾರ್ಥಗಳನ್ನು ಕೊಡಬೇಕಾದ ಸಹಜ ಪರಿಹಾರವನ್ನು ಸೂಚಿಸಿದರು. ಅಮೇರಿಕಾದ ಪ್ರತಿನಿಧಿಯು ಇದಕ್ಕೆ ಒಪ್ಪಲಿಲ್ಲ. ಅಮೇರಿಕಾದಲ್ಲಿ ಸಾಲಗಳನ್ನು ಕೊಡುವ ಸಂಸ್ಥೆಗಳಿಗೆ ಅಮೇರಿಕಾ ಸರಕಾರವು ಬೆಂಬಲ ಕೊಡುವುದಿಲ್ಲವೆಂದು ಹೇಳಿತು. ಅಮೇರಿಕಾದ ಪ್ರತಿನಿಧಿಯು ಹೇಳಿದ ಪ್ರಕಾರ ಅ

ಕೊಡಗು.

ತಾರೀಕು ೨೧—೭—೪೧ನೇ ಶುಕ್ರವಾರ.

ರೈತರ ತೊಂದರೆ.

ಕೊಡಗಿನಲ್ಲಿ ಜನಜೀವನ ಬಹಳ ಕಷ್ಟವಾಗುತ್ತಾ ಬರುತ್ತಿದೆ. ಬಡವರು ತೀರಾ ದರಿದ್ರರಾಗಿಯೂ, ಧನವಂತರು ಇನ್ನೂ ಶ್ರೀಮಂತರಾಗಿಯೂ ಆಗುತ್ತಿದ್ದಾರೆ. ರೈತರ ನಾಡಾದ ಕೊಡಗಿನಲ್ಲಿ ಸಾಲವಿಲ್ಲದ ಸ್ವಂತಸಾಯ ರೈತರು ಅಪರೂಪ. ಅನೇಕರು ಸಹಕಾರ ಸಂಘಗಳಿಂದ, ಅನೇಕರು ಇತರ ಪ್ರಾಯಿ ಜನರಿಂದ ಸಾಲ ಪಡೆದಿದ್ದಾರೆ. ಈಗಿನ ಬತ್ತದ ಧಾರಣೆಯ ದೃಷ್ಟಿಯಿಂದ ರೈತರಿಗೆ ತಮ್ಮ ಸಾಲಗಳನ್ನು ತೀರಿಸಲು ಇದು ಸುಸಮಯವೇ. ಆದರೆ ತಮಗೆ ಬೇಕಾದ ಇತರ ಜೀವನಾವಶ್ಯಕ ವಸ್ತುಗಳ ಬೆಲೆಯು ಬತ್ತದ ಧಾರಣೆಗಿಂತ ಹೆಚ್ಚು ವಿರುವ ಕಾರಣ ಸಾಲ ತೀರಿಸುವದು ದುಸ್ತರವಾಗಿದೆ. ಜೊತೆಗೆ ಎತ್ತುಗಳ ಕೊಂದರೆ, ಅಕಾಲಿಕವಾದ ಮಳೆ, ಬಿಳುಗಳ ಅಭಾವ ಇವೆಂದ ಬಹಳ ಕಷ್ಟವಾಗಿದೆ. ಕೃಷ್ಣಭೈರ ಬಾಡವಾಳವಿರುವ ರೈತರು ಹೇಗೂ ಈ ಕಷ್ಟಗಳನ್ನು ನಿಭಾಯಿಸಿಕೊಂಡು ಮುಂದೆ ಸಾಗಬಹುದು. ಆದರೆ ಕೊಡಗಿನಲ್ಲಿ ಇಂಥಾ ಬಂಡವಾಳವಿರುವವರು ಕಡಿಮೆ. ತಾವು ಬೆಳೆಯುವದು ನಾರ್ಮಿಕ ಜೀವನಕ್ಕೆ ಸರಿಯೊಗುವವರೇ ಹೆಚ್ಚು. ಇಂಥಾವರಿಗೆ ಈ ಕಾಲ ಬಹು ಬಿಡಾಬಟ್ಟ ಕಾಲವಾಗಿ ಪರಿಣಮಿಸಿದೆ. ಸಾಲವಿರುವ ರೈತನ ಸ್ಥಿತಿ ಬಹು ಶೋಚನೀಯವಾಗಿದೆ. ಇವರ ಕಷ್ಟವನ್ನು ನಿವಾರಿಸಲು ಸರಕಾರವು ಕಳ್ಳ ವಿಚಾರಿಸು ಮಾಡಬೇಕು.

'ಹೆಚ್ಚು ಬೆಳೆಯಿರಿ' ಎಂಬ ಪ್ರಚಾರದ ಆಶ್ರಯದಲ್ಲಿ ಕೊಡುತ್ತಿರುವ ಅಲ್ಪ ಸ್ವಲ್ಪ ಸಹಾಯ ಸಾಲದು. ರೈತನ ಜೀವನದಲ್ಲಿ ಕವಿದಿರುವ ಅಂಧಕಾರಕ್ಕೆ ಕಾರ್ಮೋಡವು ಹಣತೆಯ ಬೆಳಕಿನಂಥಾ ಈ ಸಹಾಯಗಳಿಂದ ದೂರವಾಗುವದಿಲ್ಲ. ಸರಕಾರವು ಕಣ್ಣು ತೆರೆದು ಯೋಗ್ಯ ಯೋಜನೆ ಮಾಡಬೇಕು. ಬಡ ರೈತರಿಗೆ ಬಡ್ಡಿ ಇಲ್ಲದ ಸಾಲ ಒದಗಿಸಿಕೊಡಬೇಕು. ಧನ ಕಳುಗಳ ಆಳುಗಳ ವ್ಯವಸ್ಥೆ ಯೋಗ್ಯ ರೀತಿಯಿಂದ ಮಾಡಬೇಕು.

ಕೊಡಗಿನವರಾದ ನಾವು ಧನ ಕರುಗಳಿಗೆ ವಿಶೇಷವಾಗಿ ಸೈಸೂರನ್ನೇ ನಂಬಿರುವೆವು. ನಾವು ನಮ್ಮ ಉಳುವರಿ ಬತ್ತವನ್ನು ಸೈಸೂರಿಗೆ ನ್ಯಾಯವಾದ ಬೆಲೆಗೆ ಸರಬರಾಯಿ ಮಾಡುತ್ತಿರುವೆವು. ಇದಕ್ಕೆ ಪ್ರತಿಫಲವಾಗಿ ಸೈಸೂರಿನಿಂದ ಬೇಕಾದಷ್ಟು ಧನಗಳೇ ದೊರೆಯದಾಗಿವೆ. ದೊರೆತರೂ ಬಡವರ ಕೈಗೆ ಸಿಲುಕದ ಬೆಲೆ. ಸಾಧಾರಣ ಹೂಡುವ ಎತ್ತುಗಳ ಜೊತೆಗೆ ರೂ. 200ರಿಂದ 300 ಕೊಡಬೇಕೆಂದು ಇರುವಾಗ ಬಡ ರೈತನ ಜೀವನ ಹೇಗೆ ನಡೆಯಬೇಕು? ಮೇಲಾಗಿ ಈ ವರ್ಷದ ತೃಗಳ ಪಾಯಿಲೆಯಿಂದ ಎಂದೂ ಇಲ್ಲದಷ್ಟು ನಷ್ಟ ಜನರಿಗೆ ಆಗಿದೆ. ಕೊಡಗು ವೆಟರ್ನರಿ ಇಲಾಖೆಯವರು ಟೊಂಕ ಕಟ್ಟಿ ಶ್ರಮಿಸುತ್ತಿದ್ದರೂ ಧನಗಳು ಸಾಯುವುದು ನಿಂತಿಲ್ಲ. ನಮ್ಮಲ್ಲಿಯ ವ್ಯವಸಾಯಕ್ಕೆ ಬೇಕಾದ ಕೂಲಿಗಳಿಗೆ ನಾವು ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ನಂಬಿರುವದಾಗಿದೆ. ಈಗ ಕೂಲಿಗಳ ಸಂಬಳವು ಕಳೆದ ವರ್ಷಕ್ಕಿಂತಲೂ ಇಮ್ಮಡಿಯಾಗಿದೆ. ಈ ವರಿದ ಸಂಬಳದ ಕೂಲಿಗಳು ದೊರೆಯುವದು ಬಹು ಕಷ್ಟವಾಗಿದೆ. ಈ ರೀತಿ ಧನಗಳ ಹೆಚ್ಚುವರಿಯ ಬೆಲೆ, ಕೂಲಿ ದರದ ಏರುವಿಳೆಯೂಗಿದೆ. ಆದರೆ ಅದರಂತೆ ರೈತನ ಉತ್ಪಾದನೆಯಲ್ಲಿ ಏರುವಿಳೆ ಇದೆಯೇ? ಆತನ ಬತ್ತ ಗಾಡಿಗೆ ನಿಶ್ಚಿತವಾದ ರೂ. 15 ಬೆಲೆಯೇ! ಅಂದ ಮೇಲೆ ರೈತನು ವ್ಯವಸಾಯ ಹೇಗೆ ಮಾಡಬೇಕು? ಸರಕಾರವು ಇದನ್ನೆಲ್ಲಾ ಪರಿತೀಲಿಸಿ ಸೂಕ್ತವಾದ ಮಾರ್ಗ ಕೈಕೊಳ್ಳಲು ಒಬ್ಬ ಅಧಿಕಾರಿಯನ್ನಾಗಲೀ, ಇಲ್ಲವೇ ಒಂದು ಸಮಿತಿಯನ್ನಾಗಲೀ ನೇಮಿಸಬೇಕು. ಇವರು ಸಲಹೆಯಂತೆ ಕೊಡಗಿನ ಜೀವನ ಸಮಸ್ಯೆಯೂದೆ ಇದನ್ನು ಬಗೆಹರಿಸಲೆತ್ನಿಸಬೇಕು. ಈ ವರ್ಷಕ್ಕೆ ಕಾಲ ಮಿಂಚಿದರೂ ಬರುವ ವರ್ಷವಾದರೂ ರೈತರಿಗೆ ತಕ್ಕ ಸಹಾಯ ದೊರೆಯುವಂತಾಗಬೇಕು. ಇಲ್ಲದಿದ್ದರೆ ಕೊಡಗಿನಲ್ಲೂ ಬರಗಾಲವು ತನ್ನ ರುದ್ರ ನಾಟಕವನ್ನು ನಟಿಸದೆ ಇರದು.

ಒಳದೇಶ ವರ್ತಮಾನ.

ವೀರಾಜಪೇಟೆಯಲ್ಲಿ ಅಲ್ಲಲ್ಲಿ ಈಗ ಮನೆ ನುಗ್ಗುವ ಚಿಕ್ಕ ಚಿಕ್ಕ ಕಳ್ಳತನಗಳು ನಡೆಯುತ್ತಿರುವಂತೆ ವಾರ್ತೆ.

ಕಳೆದ ವಾರ ಬಳಗುಂದ ಗ್ರಾಮದ ಒಬ್ಬ ಪಣಿಕರ ಮನೆ ನುಗ್ಗಿ ಯಾರೋ ಕಳ್ಳತನ ಮಾಡಿರುವರೆಂದೂ, ಪೊಲೀಸರು ವಿಚಾರಿಸುತ್ತಿರುವರೆಂದೂ ವರ್ತಮಾನ.

ಬೋಯಿಕೇರಿಯಲ್ಲಿ ನಡೆಯುವ ಅಖಿಲಭಾರತ ಸಹಕಾರ ಪರಿಷತ್ತಿಗೆ ಸೇರಿದ ಬ್ಯಾಂಕಿನ ಪ್ರತಿನಿಧಿಯಾಗಿ ಶ್ರೀ ಕಂಜಿತಂಡ ಶುಕಾಲಪ್ಪನವರು ಆಯಿಲಭಾರತ ರಿಜಿಸ್ಟ್ರಾರವರ ಸನ್ಮಾನಕ್ಕೆ ಹೊಗಳಿಕೆ ಪತ್ರಕಾರ ಸಂಘಗಳ ರಿಜಿಸ್ಟ್ರಾರರಾದ ಶ್ರೀ ಪಿ. ಎಂ. ಚಂಗಪ್ಪನವರು ತಾ. ೧೫ರಂದು ಹೋಗಲಿರುವರು.

ಸಹಕಾರ ಸಂಘಗಳ ಸುಪರ್‌ವೈಜರುಗಳ ಕಛೇರಿ ಕೂರ್ಗ ಶಾಖೆಯು ಕೆಂಪ್ಟಲ ಬ್ಯಾಂಕಿನ ಆಶ್ರಯದಲ್ಲಿ ಸಹಕಾರ ಸಂಸ್ಥೆಗಳ ಕೋರ್ಟು ರೂಮುಸನ್ನಿ ಕಾರ್ಯಕ್ಕೆ 24-7-41ರಿಂದ ತೆರೆಯಲ್ಪಡುವದು.

ಪೊನ್ನಂಪೇಟೆ ಭಾಗಕ್ಕೆ ಇಳೆಪ ಸಾರಿ ಒಂದೇ ದಿನ 7 ಇಂಚುಗಳಷ್ಟು ಮಳೆ ಹೊಡೆದು ಭೂವ್ಯವಸಾಯಗಾರರಿಗೆ ಸಂತೋಷ ಸುದ್ದಿ ಸಂಭವಿಸಿದೆಯಂತೆ.

ಪಳಂಗಿಂದ ಒಬ್ಬ ಹೆಂಗಸು ನೆಂಟರ ಮನೆಗೆ ಹೋಗಿದ್ದವಳು ಊರ ರೋಯಿಂದ ರಾತ್ರಿ ಹೊರಕಡೆ ಹೋದವಳು ಬಾರದೆ ಕಾಣೆಯಾಗಿದ್ದು ಪೊಲೀಸರು ಹುಡುಕಿದಾಗ ಆಕೆಯು ಶವವು ಕಳ್ಳಬೆ ಹೊಳೆಯಲ್ಲಿ ದೊರೆತಿರುವದಾಗಿ ವರ್ತಮಾನ.

ಸೋಮವಾರಪೇಟೆ ಪೈಸ್ಕೂಲಿಗೆ ಶ್ರೀ ಪೆಂಯಂಡ ಜೀವದಯ್ಯನವರನ್ನು ಮುಖ್ಯೋಪಾಧ್ಯಾಯರಾಗಿ ನೇಮಿಸಲಾಗಿದೆ.

ತಾಲೂ ಬುಪಾಧ್ಯಾಯರ ತರಬೇತಿ ತಾಲೆಯೆ ಅಧ್ಯಾಪರವಾಗಿರುವ ಶ್ರೀ ಚೆಲಪಂಡ ಕಾರ್ಯಪ್ಪನವರನ್ನು ವಿರಾಜಪೇಟೆ ಪೈಸ್ಕೂಲಿಗೂ, ಶ್ರೀ ಡಿ ಎನ್. ಕೃಷ್ಣಯ್ಯನವರನ್ನು ಉಪಾಧ್ಯಾಯರ ತರಬೇತಿಯ ತಾರೆಗೂ ವರ್ಗಾಯಿಸಲಾಗಿದೆಯಂತೆ.

ಮಡಿಕೇರಿ ಸೆಂಟ್ರಲ್ ಪೈಸ್ಕೂಲು ಮಳೆಗಾಲ ರಜೆಗಾಗಿ ತಾ. 24-7-41ರಿಂದ 21-8-41ರ ವರೆಗೂ, ಹೆಣ್ಣುಮಗುವರ ಪೈಸ್ಕೂಲು ತಾ. 1-8-41ರಿಂದ 15 ದಿನಗಳ ವರೆಗೂ ಮುಚ್ಚಲ್ಪಡುವದು.

ಪಂಡಿತ ಪಮೋದರವರ ಅನ್ನ ಸತ್ಯಾಗ್ರಹ ನಿಂತಿತು.

ಜಯಪುರ ಸಂಸ್ಥಾನದ ಬೇಡಿಕೆಗೆ ಬೆಂಬಲ ಕೊಟ್ಟು, ಜೈ ತಾ 18ರಿಂದ ಉಪವಾಸ ವ್ರತ ಹಿಡಿದ ಪಂಡಿತ ರಾಮಚಂದ್ರ ದೆಮೋದರರು ಕಳೆದ ಸೋಮವಾರ ಸಾಯಂಕಾಲ ಅಂದರೆ ಉಪವಾಸದ 54ನೇ ದಿನ ನಿಲ್ಲಿಸಿದರೆಂದು ಸುದ್ದಿ. ಈ ದೀಕ್ಷೆಯಿಂದಾಗಿ ಅವರ ಮೈ ಭಾರವು 64 ರಾತಲು ಇಳಿದಿತ್ತೆಂದೂ ಅವರು ನಿರ್ಬಲರಾಗಿ ಕಂಡಿದ್ದರೂ, ಬಳಲಿದವರಂತೆ ತೋರಲಿಲ್ಲವೆಂದೂ ತಿಳಿದು ಬರುತ್ತದೆ. ಶ್ರೀ ಶರ್ಮರು ಸಲ್ಲಿಸಿದ ಸೇವೆಯ ಬಗ್ಗೆ ಜಾ. ಮಾಂಜೆ ಗ್ರಾಮ್ಯ ಪಾರ್ಷದೆಯವರು ಅವರನ್ನು ಅಭಿನಂದಿಸಿ ಸಂದೇಶ ಕಳುಹಿಸಿದ್ದಾರೆ.

ಕಸ್ತೂರಿ ಬಾ ಸ್ಮಾರಕ ನಿಧಿ.

ಶ್ರೀಯುತ ಕಂಜಿತಂಡ ಕುಶಾಲಪ್ಪನವರು	ರೂ.	100
,, ಬೊಳ್ಳಚಿಟ್ಟಿರ ಮಂದಣ್ಣನವರು	,,	15
,, ಮುಕ್ಕಾಟಿರ ಪೊನ್ನಪ್ಪನವರು	,,	10

ಶ್ರೀ ಗಳಾದ ಏನಂಡ ಮಾದಪ್ಪನವರು ರೂ. 3. ಪುಗ್ಗೇರ ಪುಗ್ಗಪ್ಪನವರು ರೂ. 2. ರೂ. 1ರಂತೆ ಕೊಟ್ಟವರು—ಶ್ರೀ ಗಳಾದ ಏನಂಡ ಗಣಪತಿ, ಮೂಕೊಂಡ ಕುಶಾಲಪ್ಪ, ಏನಂಡ ಮಂದಣ್ಣ, ಮುಕ್ಕಾಟಿರ ಎನ್. ಚಂಗಪ್ಪ, ಬಿದ್ದಪ್ಪ, ಉಪ್ಪಂಗಳ ಕುಶಾಲಪ್ಪ, ಮಂಡೇಪಂಡ ಐಯ್ಯಪ್ಪ, ಶ್ರೀಮತಿ ಏನಂಡ ಕಾಮವ್ವ ಆಲ್ಲಾರಂಡ ಮೋದಪ್ಪ, ಶ್ರೀಮತಿ ಆಲ್ಲಾರಂಡ ಕಾಪವ್ವ ಇವರುಗಳು. ಈ ವರೆಗೆ ಒಟ್ಟು ರೂ. 4,312 ಜಮೆಯಾದಂತಾಯಿತು.

ನೋಟೀಸು.

ಅಮ್ಮತ್ತಿನಾಡು ಕಣ್ಣಂಗಾಲ ಗ್ರಾಮದ ನಂಚ್ಚಂಡ ಚಂಗಪ್ಪನು ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಬೈರಂಬಾಡ ಗ್ರಾಮದಲ್ಲಿ ವಾಸವಿರುವ ಕಂಡ್ರುತಂಡ ಚಿಣ್ಣಪ್ಪನವರ ಹೆಸರಿನಲ್ಲಿ ಜಮೂಬಂದಿ ನಡೆದು ಉರುವ ಸಾಗಿನ ಸೊತ್ತುಗಳೆಲ್ಲಾ, ನಾನು ಪಬ್ಲಿಕ್ ಹರಾಜಿನಲ್ಲಿ ಪಡೆದು ನನ್ನ ಬಾಸ ಬಾವನಾದ ಕಾರಣ, ಕಾರಣಾಂತರಗಳಿಂದ ಅವರ ಹೆಸರಿನಲ್ಲಿ ಜಮೂಬಂದಿ ಮಾಡಿಸಿದ್ದಾಗಿದೆ. ಅಲ್ಲದೆ ಅನೇಕ ಭಾಗಗಳು ನನ್ನ ಅನುಭವ ಸ್ವಾಧೀನದಲ್ಲಿರುವದು. ಕೆವಿನ್ಯೂ ಇಲಾಖೆಯವರ ಆಧಾರದಲ್ಲಿರುತ್ತೆ. ಈಗ ನನಗೆ ಮೋಸ ಮಾಡುವ ಇರಾದೆಯಿಂದ ವಿಕ್ರಯಿಸಲಿಕ್ಕೆ ಪ್ರಯತ್ನಿಸುತ್ತಿದ್ದಾರೆ ಇವರಿಗೆ ಪರಾಧೀನ ಮಾಡುವಂಥಾ ಹಕ್ಕಿರುವದಿಲ್ಲ. ಹಾಗೆ ಪಡೆದವರು ನನ್ನ ಸರ್ವ ವಿಷ್ಟ ಕಷ್ಟಕ್ಕೆ ಗುರಿಯಾಗುವದಲ್ಲದೆ ಸೊತ್ತಿನ ಹಕ್ಕು ಬಾಧ್ಯತೆಯನ್ನು ಸಹ ಕಳಕೊಳ್ಳುವರಾಗಿ ಈ ಮೂಲಕ ತಿಳಿಸುತ್ತೇನೆ.

ಎಂ. ಪಿ. ಚಂಗಪ್ಪ,
ಕಣ್ಣಂಗಾಲ.

ತಾ. 18-7-41.

ರಣಭೇರಿ.

ಚೀನಾ–"ಮುಖ್ಯಸ್ಥಾನಂತರಂ ಸುಖಂ" ಎಂಬ ವಚನಗಳ ನೀತಿ ಭರವಸೆ ಬಟ್ಟು ಚೀನಾವು ಹೋರಾಡುತ್ತಿದೆ. 1937 ನೇ ಇಸವಿಯಲ್ಲಿ 7 ರಿಂದ ಪ್ರಾರಂಭವಾದ ಚೀನಾ ಜಪಾನ್ ಯುದ್ಧವು ಇನ್ನೂ ಮುಗಿದಿಲ್ಲ. ಈ ಏಳು ವರ್ಷಗಳ ಅವಧಿಯಲ್ಲಿ ಚೀನಾದ ಹಲವು ಭಾಗಗಳು ಜಪಾನರ ವಶವಾಗಿವೆ. ಹಲವು ಪ್ರದೇಶ ಚೀನೀಯರ ವಶಕ್ಕೆ ಬಂದಿವೆ. ಚೀನೀಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಹರಿಸಿದ ರಕ್ತದ ಕಾಲುವೆ, ತೆತ್ತ ಜನ ಧನ, ಜಗತ್ತಿನ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದಷ್ಟಿದೆ. ಅತ್ಯುಗ್ರಶಕ್ತಿಯಾದ ಜಪಾನನ್ನು ಜಯಪ್ರದವಾಗಿ ಚೀನವು ಎದುರಿಸುತ್ತಿದ್ದರೆ ಅದು ಅವರ ಸ್ವಾತಂತ್ರ್ಯಬಲಾಪೇಕ್ಷೆಯ ಬಲದಿಂದ. ತೀರಾ ಅಸಹಾಯವಾದ ತನ್ನ ರಾಷ್ಟ್ರದ ಭವ್ಯಭವಿಷ್ಯದ ಕಾಂಕ್ಷೆಯಿಂದ. ಅವಾಹಕವಾಗಿ ಯುದ್ಧ ಇನ್ನೂ ನಡೆಯುತ್ತಿದೆ. ಪಾಶವೀಶಕ್ತಿಯಿಂದ, ತನ್ನ ಬಾಹುಬಲದಿಂದ ಗೆದ್ದುಬಿಡಿಯುವೆನೆಂದು ತೋಳಕುರಿಮರಿ ನ್ಯಾಯವನ್ನು ಮುಂದುಮಾಡಿ ಚೀನಾದ ಮೇಲೆ ಬಂದ ಜಪಾನಿಗೆ ಸರಿಯಾದ ಸಾಸವನ್ನು ಚೀನಾ ಕಲಿಸಿದೆ. ಚೀನಾವು ತನ್ನ ದೇಶದಲ್ಲಿ ಎಂದೂ ಕಂಡು ಕೇಳರಿಯದ ಕ್ಷಾಮಬಂದರೂ, ಸಾಂಕ್ರಮಿಕ ರೋಗಗಳು ತಾಂಡವನೃತ್ಯವಾಡಿದರೂ, ಹಿಂಜರಿಯದೆ ಬಿಕ್ಕ ಮಕ್ಕಳು ತಂದೆ ತಾಯಿಯರನ್ನೂ, ಮೊತಾಪಿತೃಗಳು ಪುತ್ರಪುತ್ರಿಯರನ್ನೂ, ಸ್ವಾತಂತ್ರ್ಯದ ಹೊಸಿಲಲ್ಲಿ ಬಲಿ ಕೊಟ್ಟಿದ್ದಾರೆ. ಹಿಮ್ಮೆಟ್ಟಿದರೆ ಯುರೋಪಿನಲ್ಲಿ ಬಿಟ್ಟದಕ್ಕಿಂತಲೂ ಮಿಕ್ಕಿ ಇಲ್ಲಿ ನರಮೇಧವಾಗಿದೆ ಚೀನಾವು ಹಿಂದೂದೇಶದಂತೆ ಒಕ್ಕಲಿಗರ ನಾಡು, ಈ ನಾಡಿನ ಒಕ್ಕಲಿಗರು ತಮ್ಮ ಸರ್ವಸ್ವವನ್ನೂ ರಾಷ್ಟ್ರಕ್ಕಾಗಿ ಧಾರೆಯೆರೆದಿದ್ದಾರೆ. ಅವರ ಗತ್ರಗಾತ್ರವೆಯ 'ಗೊರಿಲ್ಲಾ' ಕದನವು ಜಗದ್ವಿಖ್ಯಾತವಾಗಿದೆ. ಸರಿಯೂಪ ಯುದ್ಧ ಸಾಹಿತ್ಯಗಳು ಇಲ್ಲದಿದ್ದರೂ ದಧೀಚಿಯುನಿಯ ಬೆನ್ನೆಲುಬನ್ನು ಆಯುಧವಾಗಿ ಹಿಡಿದು ನಿರಂತರ ದೇವತೆಗಳಂತೆ ಚೀನೀಯರು ತಮ್ಮ ಪ್ರಾಣವನ್ನು ಕೈಯಲ್ಲಿ ಹಿಡಿದು ಸ್ವಾತಂತ್ರ್ಯಯಜ್ಞ ಕುಂಡದಲ್ಲಿ ಧುಮುಕಿದ್ದಾರೆ. ಇಂಥಾ ಜನತೆಗೆ ಸ್ವಾತಂತ್ರ್ಯ ಸಿಗದೆ ಇರುತ್ತಾರಿಗೆ? ಚೀನಾವು ಜಪಾನರ ತೊಂದರೆಯನ್ನು ನೀಗಿ ಸ್ವತಂತ್ರ ವಿಶ್ವದ ತಳಗಟ್ಟಾಗಿ ಕನ್ನ ಆರ್ಯೆಯ ಕೀರ್ತಿಪತಾಕೆಗಳಿಂದ ಬೆಳಗಲಿ.

ಬ್ರಿಟನ್–ಜರ್ಮನರ ವೈಮಾನಿಕ ದಾಳಿಯು ಕಡಿಮೆಯಾಗಿಲ್ಲ. 1940ನಲ್ಲಿ ಜರ್ಮನ ವಿಮಾನ ಧಾಳಿಯಿಂದಾಗಿ 12686 ಜನರು ಸತ್ತರು. ಈಗ ಈ ವರ್ಷ ವಿಮಾನಗಳಿಂದಾಗಿ 2752 ಜನರು ಸತ್ತಿರುವರು. ಪ್ರೇತವಿಮಾನಗಳಿನ್ನು ಹಾರುವ ತೂರ್ಗ ಇನ್ನೂ ತಿಳಿದುಬಂದಿರುವದಿಲ್ಲ. ಈ ತೊಂದರೆ ಒಂತೆಯಿದ್ದರೆ ಬ್ರಿಟನ್ನಿಯ ಜೀವನವೂ ತೊಂದರೆಯದ್ದೇ ಆಗಿದೆ. ಲಂಡನ್ ನಗರದ ಮೇಲೆ ಆಗುತ್ತಿರುವ ಈ ವಿಮಾನ ಧಾಳಿಯಿಂದ ರಕ್ಷಿಸಲು 1,70,000 ಜನರನ್ನು ಸುರಕ್ಷಿತ ದೇಶಗಳಿಗೆ ಕಳುಹಿಸಲಾಗಿದೆ. ಅಮೇರಿಕನ್ ಸೈನಿಕರಿಂದಾಗಿ ಸಹ ಬಹು ಕಷ್ಟಬಂದಿದೆಯಂತೆ. ಬ್ರಿಟಿಷರಿಗೆ ಕ್ವಾರಿಕರು ಸಿಕ್ಕುವದಿಲ್ಲ, ಕ್ಷೌರಕ್ಕೆ ಸಾಮಾನುಗಳು ದೊರೆಯುವದಿಲ್ಲ. ಅಮೇರಿಕನ್ ಸಿವಾಯಿಗಳಿಗೆ ಬ್ರಿಟಿಷ್ ಯೋಧರ ನಾಲ್ಕು ಪಟ್ಟು ಸಂಬಳ. ಆದ್ದರಿಂದ ಅತಿಸು ಹೆಚ್ಚು ಹಣ ಖರ್ಚು ಮಾಡುತ್ತಾನೆ. ಬ್ರಿಟಿಷರು ಕೊಡುವ ಹಣದ ನಾಲ್ಕರಷ್ಟು ಅವರು ಅಲ್ಲೇ ಸಾಮಾನಿಗೆ ಕೊಡುತ್ತಾರೆ. ಆದ್ದರಿಂದ ಬ್ರಿಟಿಷರಿಗೆ ತೊಂದರೆ ಇದೆ. ಹಿಂದೂದೇಶದಲ್ಲಿ ಬ್ರಿಟಿಷರಿಂದಾಗಿ ಬಾರತೀಯರು ಹಣ ಹುಟ್ಟಿದುವಂಥಾ ಕನ್ನಡವನ್ನೇ ಅವರು ಅಲ್ಲಿ ಅಭವಿಸಬೇಕಾಗಿದೆ. ಅದರೆ ಹಿಂದೂದೇಶದಂತೆ ಅಲ್ಲಿ ಜೀವನಾವಶ್ಯಕ ವಸ್ತುಗಳ ಯ ವಿರಿರುವದಿಲ್ಲ

ಮುಂದಿನ ಯುದ್ಧದ ಬೀಜ–ಯುದ್ಧದ ಫಲಿತಾಂಶ ಇನ್ನೂ ತಿಕ್ಕಡಿಯಲ್ಲಿ ಗುತ್ತಿರುವಾಗಲೇ ಮುಂದೆ ಹಿಟ್ಲರನನ್ನು ಏನು ಮಾಡಬೇಕು? ಯಾವ ಶಿಕ್ಷೆ ಕೊಡಬೇಕು? ಎಂದು ಮಾತುಕತೆ ನಡೆದಿದೆ. ಹಲವರು 'ಜರ್ಮನಿ, ಜಪಾನುಗಳನ್ನು ನಾಶಮಾಡಿರಿ' ಎಂಬ ಉದ್ಗಾರ ತೆದಿದ್ದಾರೆ. ಈ ಬಗ್ಗೆ ಪ್ರಸಿದ್ಧ ಲೇಖಕರಾದ ಲೂಯಿ ಫಿಶರ್ ರವರು ಮದು ಲೇಖನ ಬರೆದು ಜರ್ಮನಿ ನಾಶವಾಗಬೇಕಸ್ಸವವದು ಮತ್ತೊಂದು ಯುದ್ಧದ ಬೀಜವನ್ನು ಈಗಲೇ ಬಿತ್ತುತ್ತಿರುವರೆಂದು ಸಾರಿರುವರು. ಈ ಯುದ್ಧಕ್ಕೆ ಜರ್ಮನಿಯೊಂದೇ ಕಾರಣವಲ್ಲವೆಂದೂ ಹೇಳಿದ್ದಾರೆ. ಜರ್ಮನರಲ್ಲಿ ಶೇಕಡ 25 ರಷ್ಟು ಒಳ್ಳೆಯ ಜನರಿದ್ದಾರೆಂಬ ಜರ್ಮನ್ ವಿರೋಧಿ ಲಾರ್ಡ್ ವಾನ್ಸಿಟಾರ್ಟರ ಮಾತು 'ನಾವು ಬ್ರಿಟಿಷರು ಕೊಡ ಹೆಚ್ಚು ಪಾಲು ಜರ್ಮನ್ ಟ್ಯೂಟಾನಿಕ್ ಕುಲದ ಸಾಮ್ರಾಜ್ಯಕ್ಕೇ ಆಗಿರುವೆವು' ಎಂಬ ಪ್ರಸಿದ್ಧ ಇತಿಹಾಸಜ್ಞ ಜಿ. ಪಿ ಹೊರ್ಟರವರ ಅಭಿಪ್ರಾಯವನ್ನು ಸಮರ್ಥಿಸಿ, ಜರ್ಮನಿ ಜಪಾನನ್ನು ಸೂತ್ರ ದೂರುವದು ಬೇರೆ ಸ್ಥಳಗಳಲ್ಲೂ ನಿಗಳಿದರಾಧಿಗಳಲ್ಲವೆಂದು ತಿಳಿಯುವದು, ಅಕ್ಷರಾಷ್ಟ್ರಗಳನ್ನು ದಂಡಿಸಿದರೆ ಮಾತ್ರ ಸರಾಗವಾಗಿ ನಡೆಯುವವೆಂದೂ ತಿಳಿಯುವದು ತಪ್ಪೆಂದೂ ಜರ್ಮನಿ, ಜಪಾನ್‌ಗಳನ್ನು ನಾಮವಶೇಷಮಾಡಿ ಉಳಿದ ಜಗತ್ತನ್ನು ಹಾಗೆ ಇರಿಸಿದರೆ ಮೂರನೆಯ ಯುದ್ಧಕ್ಕೆ ಬೇಗ ಸಿದ ತೆಗಳನ್ನು ಮಾಡಿಕೊಳ್ಳುವದು ಮೇಲು ಎಂದೂ ಹೇಳಿರುವರು.

ರಣಕ್ಷೇತ್ರ–ರಷ್ಯಾರಣರಂಗದಲ್ಲಿ ಯುದ್ಧವು ಜೋರಿನಿಂದ ನಡೆಯುತ್ತಿದೆ. ರಷ್ಯನರೇ ಮುಂದೆ ಮುಂದೆ ನಾಗತೊಡಗಿದ್ದಾರೆ. ಪೋಲೆಂಡ್, ಲೆಟ್ವೀಯಾ, ಲಿಥುವೇನಿಯನಗಳಲ್ಲಿ ಕದನವಾಗುತ್ತಿದೆ, ಸ್ಮಾರ್ಲನ್ಸ್‌ಕೆಂಬ ಜರ್ಮನ್ ಪ್ರದೇಶದಿಂದ ರಷ್ಯನರು ಕೇವಲ 30 ಮೈಲುಗಳ ದೂರದಲ್ಲಿರುವರಂತೆ. ವಾರ್ಸಾಕ್ಕೆ ತೀರಾ ಹತ್ತಿರಗ ಮೂರ್ಗದಲ್ಲಿ ಮುಂದರಿಯುತ್ತಿರುವ ರಷ್ಯಾಸೇನೆಯೊಂದು ಕೇಂದ್ರ ಪೋಲೆಂಡಿನ ಬೀಗದ ಕೈಯಂತಿರುವ ಬೆಸ್ಟಲಿಟೋಸ್ಕ್ ನಗರವನ್ನು ವಶಪಡಿಸಿಕೊಂತಾಗಿದೆ. ಮಿನ್ಸ್ಕ್ ನಗರದ ಮತ್ತು ಅದರ ಸುತ್ತಮುತ್ತಲಿನ ಕದನದಿಂದ 22000 ಜರ್ಮನರು ಶರಣಾಗಿರುವರಂತೆ. ರಷ್ಯನರ ಮುನ್ನಡೆ ಅತಂಕವಿಲ್ಲದೆ ಸಾಗಿದೆ. ಜರ್ಮನರು ಪ್ರತಿಭಟಿಸುತ್ತಿಲ್ಲವೆಂದಲ್ಲ. ಅದು ನಿಷ್ಫಲಯೋಜನವಾಗುತ್ತಿದೆ.

ಇತ್ತಲಡೆಯಲ್ಲಿ ಆಂಗರೆ ಫ್ರಾನ್ಸ್ ರಣರಂಗಗಳಲ್ಲಿ ಖಾಡಾಖಾಡಿ ಯುದ್ಧವಾಗುತ್ತಿದೆ. ಮಿತ್ರರು ಪ್ರತಿ ಇಂಚು ನೆಲಕ್ಕೂ ಅಸೂರ್ವತ್ಯಾಗನಡಿ ಮುಂದರಿಯುತ್ತಿದ್ದಾರೆ. ಅಕ್ಷಯೋಯಿಂದ ಕೆಲವು ಸರಿಗಿನ 100 ಮೈಲುಗಳ ಗಡಿಯಲ್ಲಿ ಜರ್ಮನರು ತಮ್ಮ 11 ವಿಭಾಗವನ್ನು ಸೇನೆಗಳನ್ನು ನಿಲ್ಲಿಸಿದ್ದಾರೆ ಅದರೆ ಕೆಯೆನ್ ನಗರವು ಮಿತ್ರರ ವಶವಾಗಿ ಬೋರಿರುವದರಿಂದ ಅವರಿಗೆ ಒಂದು ಹುಡುಸವಿದೆ. ಪಟ್ಟಣದ ಭಾಗದಲ್ಲಿ ಅಮೇರಿಕನ್ ಪಡೆಗಳು ಸೈರ್‌ನದಿ ದಡದಲ್ಲಿ ತಳವೂರಿದ್ದಾರೆ. ಜರ್ಮನರು ಬಾಸೇ ನಗರವನ್ನು ಎಗಡುಸಾರಿ ಮಿತ್ರರಿಂದ ಪುನರಾಕ್ರಮಿಸಿದ್ದರೆ. ಆದರೆ ಪುನಹ ಮಿತ್ರರಿಗೆ ಅವನ್ನು ಬಿಡಬೇಕಾಯಿತು.

ಇಟೆಲಿಯಲ್ಲಿ ಮಿತ್ರರ ಐನೆದಿಳವು ಲೆಗ್‌ಹಾರ್ನ್ ಬಂದರಿದ ಕಡೆ ಸಾಗಿದೆ. ಜರ್ಮನರು ಇವನ್ನು ರಕ್ಷಿಸಲು ಪ್ರಯತ್ನ ಬಹಳ ಮಾಡಿದ್ದಾರೆ. ಜರ್ಮನರು ಇಟಲಿಯನ್ನು ಪೂರ್ಣವಾಗಿ ಮಿತ್ರರ ವಶಕ್ಕೆ ಬಿಟ್ಟು ಹಿಂತೆರಳುವದೇ ಎಂದು ಕೆಲವರು ಹೇಳುತ್ತಿದ್ದಾರೆ. ಇಲ್ಲಿಯ ರಣರಂಗದಲ್ಲಿ ಫ್ರೆಂಚ್ ಜನರಲ್ ಎಸೆನ್‌ಹವರ್ ಕಣಿವೆಯಿಂದ ಬವೇರಿಯಾದ ವರೆಗೆ 500 ಕೋಟೆಗಳನ್ನು ಕಟ್ಟಿಬೇಕೆಂದು ಹಿಟ್ಲರನೇ ಆಜ್ಞಾಪಿಸಿರುವನೆಂದೂ ವಾರ್ತೆಗಳಿವೆ. ಹೇಗೂ ಈ ವಾರ ಇಟೆಲಿಯಲ್ಲೂ ಜರ್ಮನಿಗೆ ಜಯವಿಲ್ಲ.

ಬರ್ಮಾರಂಗದಲ್ಲಿ ಜಪಾನರು ಇಂಫಾಲ–ಕೋಹಿಮಾ ರಸ್ತೆಯಿಂದ ಹಿಂತೆಗೆದುಕೊಂಡಿರುವರು. ಉಕ್ಕ್ರುಲನ್ನೂ ತಿರುಪುಮೊಡಿ ಹಿಂದೆ ಬಂದರು. ಇದರಿಂದ ಜಪಾನರ ಶಕ್ತಿ ಕ್ಷಯಿಸಿತೆಂದು ತಿಳಿದ್ದಾಬಾರದು. ಅವರು ಹಿಂದೆ ಸರಿದಿದ್ದರೂ ಇಂಫಾಲ್ ಕದನ ಕೊನೆಗೊಂಡಿತು, ಇದಕ್ಕೆ ಗುಡಾಂತರವಿಲ್ಲವೆಂದು ತಿಳಿಯುವಾರವು. ಜಪಾನ್ ಸೇನೆಗಳ ಮುಮ್ಮಿ ಸೇನಾನಿಯಾದ ಮಟ್ಸಗಾಜಿಯವರ ಮಾತುಗಳು ಹೀಗಿವೆ. "ಕಣ್ಣಳ್ಳಿ ಉಕ್ಕಿ ಬರುತ್ತಿರುವ ನೀರನ್ನು ಕಡೆದು ಈಗ ಕೋಹಿಮಾದಿಂದ ಹಿಂತೆಗೆದುಕೊಳ್ಳಬೇಕಿದೆ. ಸೇನೆಯನ್ನು ಸಂಘಟಿಸಿಕೊಂಡು ವಿಮ್ಯೂಹ್ಯೋಗದಿಂದ ಇಂಫಾಲನ್ನು ಆಕ್ರಮಿಸುವದೇ ನನ್ನ ಧ್ಯೇಯ." ಜಪಾನರು ಇಂಫಾಲಿನಿಂದ 16 ಮೈಲುಗಳ ದೂರದಲ್ಲಿರುವ ಬಿಶನ್‌ಪುರದಲ್ಲಿ ರಾಣೆಹಾಕಿದ್ದಾರೆ. ತಕ್ಕಾಲಿಕವಾಗಿ ಜಪಾನರು ಹಿಂದೆ ಸರಿದಿದ್ದರೂ ಈ ಮಾರ್ಗವಾಗಿ ಅವರು ಪುನಹ ಇಂಫಾಲಿನ ಮೇಲೆ ಬೀಳಬಹುದು. ಜಪಾನರು ಹೊಸ ಸೇನೆ, ಸಾಹಿತ್ಯಗಳನ್ನು ತರಿಸಿಕೊಳ್ಳುತ್ತಿರುವರು. ಉತ್ತರದಲ್ಲಿ ಮಿಟ್ಕಿಯೂನವು ಇನ್ನೂ ಮಿತ್ರರ ವಶವಾಗಿಲ್ಲ. ಭೀಕರ ರಣರಂಗ ಯುದ್ಧವು ಇಲ್ಲಿ ನಡೆಯುತ್ತಿದೆ. ಒಟ್ಟಾಗಿ ಹೇಳುವದಾದರೆ ಉತ್ತರ ಬರ್ಮಾದಲ್ಲಿ ಜಪಾನರ ಹಿಡಿತ ಸಡಲಿರುವದಿಲ್ಲ ಇಂಫಾಲಿನ ದಕ್ಷಿಣಕ್ಕಾಗಿ ಇವರು ಮತ್ತೆನ್ದೊಂದು ಧಾಳಿಯು ವಿಫಾರಿದು ನೂಡುತ್ತಿದ್ದಾರೆ. ಈ ಧಾಳಿಯು ಜಯಪ್ರದವಾದರೆ ದೊಡ್ಡ ಗಂಡಾಂತರವಿದೆ. ಮಿತ್ರರು ಇದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.

ಪೊಲೀಸರಿಗೆ ಬೇಡಿ!

ಜಬ್ಬಲ್ಪುರ ಡಿಸ್ಟ್ರಿಕ್ಟಿನಲ್ಲಿ ನಡೆದ ಕಥೆಯಿದು. ಅಲ್ಲಿಯ ನಾಲ್ಕು ಮಂದಿ ಪೊಲೀಸರು ಕಾಮೋದ್ರೇಕರಾಗಿ ಒರ್ವ 15 ವರ್ಷ ಪ್ರಾಯದ ಹುಡುಗಿಯ ಮೇಲೆ ಅತ್ಯಾಚಾರ ನಡೆದ ವಿಷಯ ಬಯಲಾಯಿತು. ಒಡನೆ ಈ ಕಳ್ಳ ಪೊಲೀಸರನ್ನು ದಸ್ತಗಿರಿ ಮಾಡಲು ಸೊಬಗ ಪೊಲೀಸರನ್ನು ಕಳಿಸಲಾಯಿತು. ನಾಲ್ವರ ಕೈಗೂ ಬೇಡಿ ತೊಡಿಸಿ ಸೆರೆಮನೆಗೆ ಕರೆದೊಯ್ದರು. ಬೇಡಿ ತೊಡಿಸುವ ಕೈಗೆ ಬೇಡಿ ಪ್ರಾಪ್ತವಾಯಿತು! ಬೇಲಿ ಹೊಲವನೇಯ್ದಂತೆಯೇ ಇದೆ ಈ ಕಥೆ.

—೦೦—

ತಿಗಣೆ ಆಹಾರ.

ತಿಗಣೆಯನ್ನು ಸಹ ಆಹಾರವಾಗಿ ಉಪಯೋಗಿಸಬಹುದಂತೆ! ಆಸ್ಟ್ರೇಲಿಯದ 'ಮೆಡಿಕಲ್ ಜರ್ನಲ್' ಹಾಗೆ ಬರೆದಿದೆ. ಸೈನಿಕರು ಯುದ್ಧ ಮಾಡುತ್ತ ಮುಂದೆ ನುಗ್ಗಿದಾಗ ಆರಣ್ಯಗಳಲ್ಲಿ ದಾರಿಕಾಣದೆ ಹೋಗಿಬಿಡುವದಷ್ಟೆ ಅಲ್ಲ ಸಕ್ಕಾವ ಆಹಾರವೂ ಸಿಗದೇ ಇದ್ದಾಗ ಗೆದ್ದಲು ಹುಳ, ಕುದುರೆ ಹುಳ, ಇರುವೆ ಮೊಟ್ಟೆ ಇವುಗಳನ್ನು ತಿನ್ನಬಹುದೆಂದು ಅಮೇರಿಕದ ಸೈನ್ಯತಾಪತ್ರ 'ಮ್ಯೂಮ್ಯಯಲ್' ತಿಳಿಸುತ್ತದೆ. ಯುದ್ಧದ ದೆಸೆಯಿಂದ ಕ್ರಿವಿಕೇಟಗಳಿಗೂ ಬಂತು ವಕ್ರ!

—೦೦—

ಸುಖ ಜೀವನ---ಯುದ್ಧ ಕಾಲದಲ್ಲಿ ಸಂಪಾದನೆಗೆ ಬಾಧ್ಯ.

ಪ್ರಾಣ ಹಾನಿಗಳನ್ನೆ. ಅಂದಲ್ಲಿ ಸೈನ್ಯ ಮುಂದಿನ ಕಾಲದ ಮೂಡುವೆ, ಒಂದು ಅರ್ಥ. ಮುಂದು ಭವಿಷ್ಯತ್ತಿನ ಇಷ್ಟಗಳಿದ್ದೇ ಸಂಪಾದನೆ ಮಾಡುವ ಅತೀ ಸುಲಭದ ಹಾದಿಯೊಂ ಅದು, ಮಾಡಬಾರದ ಭಿನ್ನಮೊರ್ಖಳೇಂ ಎಂಬಲ್ಲಿಯ ನಿ. ಇನ್ನು ಎಂಬಾತನೂ ಕೆಂದು ಬಿಡಿಸಿತು. ಇಷ್ಟನು ಬಸೂರಸಲಾಸ್ಪತ್ರೆಯನ್ನುತ್ತ, ಲಕ್ಷ್ಮೀಪಲಕ್ಷ್ಮ ನಿಂದಿ ನಿಂದು ಸಿಂಪಲಿಯಲ್ಲಿ ಬಂದನು. ಇವನಲ್ಲಿ ಅಷ್ಟಲಂಗಿ ಕೆಲಸ ಮಾಡಿಯು ಬಿಲ್ಲು. ಇಂಥಾವಲಿಗೆ ಹೀಗೆಯ ನಿಜಾಂಷ ಜೀಗೆ? ಸರ್ಕಾರಿಯವರು ಒಂದು ನಿಯಮ ಮಾಡಿ ಕಾಲಕ್ಕೆ ಇವರಿಗೆ ಹಿಡಿದ ಬಿಕ್ಕಿ ಕೊಡುವುದಕ್ಕೂ ಸಾಕಾದರು. ಬಾರ್ಯಾದಿಂದ ಬಂಧುಗಳು, ಅವಶ್ಯಕರುವ ಜಾಲಿಗಳನ್ನು ಕೊಟ್ಟು ಅಲ್ಪಸ್ವಲ್ಪ ಪಡೆದುಬಾರಂಥಿನಿ ಬರು. ಇಂಥಾ ಭಕ್ಷ ಪಡೆದವರಲ್ಲಿ ಮೇಲಿನ ಜ. ನಿ. ಇನ್ನೂ ಒಬ್ಬನು. ಪು ಆತ್ಮಸ್ಥೈರ್ಯ ಬಸೂರಾದಿಂದ ಬಂದವನೂ ಜಲ್ಲಿ, ಊರಲ್ಲೇ ಇದ್ದವನು. ಮುಳ್ಳು ದಾ ಮುಟ್ಟಿ ಕೊಟ್ಟು ಹಲ ಪಡೆಯುತ್ತಿದ್ದನು. ಆಪಾರಾಧ ರುಜುವಾತಾಯಿತು. ಒಂ ಒಂದೊಂದಕ್ಕೆ ಪರ್ಷದ ಶಿಕ್ಷೆ ಕೊಟ್ಟನು.

ಪಿಚಿಪ್ಪ---ಪ್ಲೇಗ್ ಕಾಲದಲ್ಲಿ ಬೆಲ್ಲು ಬಿಂಗಾಣದವಾಗು

ಸ್ಟ್ರೈಯ ಸರ್ಕಗಳಲ್ಲಿ ಕೇಲು ಕ್ರಿಯುವೆವು. ಇಗಲೂ ಅಂಥಾ ಅಮ್ಮಗಳಿಗೆ ಕಡಿ ನೆ ಇಲ್ಲ ಭೇದಮಿಸ್ಟೆ: ಕಲ್ಲು ಬಂಗಾರವಾಗುವ ಬದಲು ಬಂಗಾರವು ಕಲ್ಲಾಗುತ್ತಿದೆ. ಮೊಬಾಯಿಯಿಂದ ಮಂದಲಾಸಿಗೆ ಕಳುಹಿಸಿದ ಒಂದು ಪಾರ್ಸೆಲ್ ಬಿಲ್ ಪಾಪಿಂ ರಿ. ಸೆಳ್ಳಿಯ ಬಂಗಾರದ್ದು-! ಇಗ ಅದು ಹೋಗಿ ಮುನ್ನ ಕೆಲ್ಲಿನ ಪಾರ್ಸೆಲು ಬಂಳಿದೆ. ಆ ಪಟ್ಟಿಯ ಪಾರ್ಸೆಲ್ ನೋಲೆ, ಬಾರ್ಜ್ ಬೈಜನ್ನು ಒಕ್ಕೆ ವೆಗಪದು ಮೂಡಿಯುತ್ತ ಬಿಡಿಸಿ ನೋಡಿದ. ಆ ಅಮ್ಮ ತಪ್ಪೇನೆಂದು ಪೊಲೀಸರು ಪತ್ತೆಗೆ ಹೊರಟಿದ್ದಾರೆ.

ಅಮ್ಮನ್ನೆಪಾರಿ ಅಂಜೆಪೋಬೆ---ಅಮೀರಿಕದ ಮೆಸ್ಟೆಜಿಂನಿ

ಬ್ಬ ಸಂಸ್ಥಾಪಕ ಸ್ಥಿಂಗ್ ಫೀಲ್ಡ್ ನಲ್ಲಿರುವ ಒಬ್ಬ ಅಂಜೆಪೋರಿಗೆ ಇಮುಖ್ಯವಾಗಿ ಮೂಂಡ ಪಾರ್ಸೆಲ್ ಸಾಮಾನ್ಯ ಸುಮ್ಮನೆ ಎಂಬ ಸೈನಿಕನು ಊಗೆ ಬರೆದಿದ್ದಾನೆ. ಕೆಲ್ಲ ಮಂದಿಗೆ ಕಾಫಿ ಬೆರೆಸ ಪತ್ರಗಳನ್ನು ಕಲಿಸುವಾಗ ಅಕೆ ಕೆಲಸ ನಪ್ಪಿಂದ ಕೆಲಸ ಪ್ರತಿಯೊಂದು ಪತ್ರಕ್ಕೂ ಒಂಗೊಂದು ಮುಂತ್ರ (ಜಂಬರ) ಕೊಡುವಲೆಂದು ಸಲಹೆಯನ್ನೆ ಕೊಟ್ಟಿದ್ದ. ನೋಡು ಪೂರಾಯ, ನನ್ನ ಮನೆಹಾಳ್ತಿಗೆ ಹೋಗುವೇ ನಿಂದು.....

"ಮೂತಿಯಿಲೆ! ಜಿಕ್ಕು ಸಂಕಟ ಮಲೆಯಿರಿ"---ರಷ್ಯಾ

ಪ್ರಾಂತ ಪಲೆಯುತ್ತಿರುವ ಪ್ರಜಾತಂತ್ರವು. ಯುದ್ಧಾರಂಭದಲ್ಲಿ ಅಲ್ಲಿನ ಜಗತ್ಪಂಪ್ರಿ ಯು ಅಂತಾ ಗಾಸಿಗೊಂಡಿದೆ ಯುದ್ಧಾನಂತರದ ಪುನರ್ನಾಚಿತಿಯು ಹೊಸ ರೀತಿ ಜಕ್ಷಿಗಳಿಗಾಗಿಯೂ ಅವರಿಗೆ ಅನುಮತಿ ಇಸಬಾರು ಬೇಕು. ರಾಜಪ ಜಾಲಿಯ್ಯಾ ಗಂಜ ಕಿ ಮಂದಿಯನ್ನವನ್ನು ಪ್ರಜಾರಿ ಮಾಡುವ ರಿಷ್ಟ್ರಿಕ್ಷ್ಯವಲ್ಲ.

ಇಗ ಜಾರು ತಮ್ಮ ಪ್ರಜೆತಂತ್ರಿಕ್ಯವನ್ನು ಸ್ಥಿರಗೊಳಿಸುವ ಹೊಸ ರೀತಿಯ ಪಿಸೆಂಬರನ್ನು ಕೈಕೊಂಡಿದ್ದಾರೆ. ಕಾರ್ಮಿಕರಕ್ಕೆ, ಅವರು ಬಹುಸಂಖ್ಯಾತ್ಮಕವನ್ನು ಕೊಟ್ಟಿದ್ದಾರೆ. ಮಂತ್ರಿ ಪಿಂಕ್ಷಕ ಕಾರ್ಯನಿರ್ವಾಹಕರಿಗೆ ಅಧಿಕ ವಿಶೇಷ ಭತ್ತ ಮುಕ್ಕು ಕೊಡಬೇಕಾಗುತ್ತದೆ. ಹೊರಗಿನ ಕಾಲುವ ರಾಜಿಯನ್ನೂ ಅಗಿನ ಜಹಾರಂಶ ಪಡೆಯಲು ಪ್ರಯತ್ನಿಸಬಹುದು. ಬಿಡು ಪಾಶ್ಚಿಕರನ್ನು ಸಂ ಪಡೆಯುವುದಕ್ಕೆ ವಿಶೇಷವಾದ ಪದವಿಯನ್ನು ಹೊಡಲಾಗಿದ್ದನ್ನು. 7 ರಿಂದ 9 ಮಕ್ಕ ಕಲ್ಲು ಪಡೆದ ತಾಯಿಗೆ ಇನ್ನೂ ವಿಶೇಷವಾದ ಪದಕಗಳನ್ನೂ, 10 ಮಕ್ಕಳನ್ನು ಆ ನಿಂದ ಅಧಿಕ್ಕಾಗಿ ಹೆಚ್ಚು ಸಂತತಿಯನ್ನು ಪಡೆದ ಮೂತಿಯಂಗೆ ಪದಕದ ಜತೆಗೆ "ಮೂ ತಿಯ ನಾಯಿಕೆ" ಎಂಬ ಬಿರುದನ್ನೂ ಕೊಡಲಾಗುವುದು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿ., ಮಡಿಕೇರಿ

ಸಂಸ್ಥಾಪಿತ ಸೆಪ್ಟೆಂಬರ್ ೧೯೨೦ (1920ರ ಸೆಪ್ಟೆಂಬರ್)

ಪತ್ರಾಲಾದ ಶೇರ್ ಬೊಬಲಗಳು 95,000, ಪಾಸುಬಂದ ಠೇವಣಿಗಳು 2,02,765, ಪತ್ರಾಲಾದ ಸ್ಟೇಮನಿಧಿ 2,16,200, ಸೇವಿಂಗ್ಸ್ ಬ್ಯಾಂಕ್ ಉಳಿತಾಯ 2,02,025.

ಈ ಬ್ಯಾಂಕಿನಿಂದ ಸಹಕಾರ ಸಂಪರ್ಕಗಳೇನೇ ತೆಗ್ಗಾಗಿ ಸಾಲ ಕೊಡುವ ಸ್ಥಿತಿ ತಿಳಿಸಿಟ್ಟಿದ್ದಾರಿಗೆ ಅವರ ಪಿಜಾಜಿಟ್ಟು ಉಳಿಯ ಮೇಲೆ 90% ಸಾಲ ಬಿಡುವುದು. ಏರಿಯ ಠೇವಣಾತಿಗಳಿಗೆ 1 ವರ್ಷದಿಂದ 5 ವರ್ಷಗಳ ಮಧ್ಯಿಕ ಠೇ ನ 2, 3 ವರ್ಷಗಳಿಂದ 6 ವರ್ಷಗಳವರೆಗೆ 2½, 6 ವರ್ಷಗಳಿಂದ 10 ವರ್ಷಗಳ ವರೆಗೆ 3½, 10 ವರ್ಷ ಅದಕ್ಕಿಂತ ಮೇಲ್ಪಟ್ಟ ವರ್ಷಗಳಿಗೆ 4½ ಸೇವಿಂಗ್ಸ್ ಬ್ಯಾಂಕ್ (ಗ್ರಾಹಿಯ ಖಾತೆಯಲ್ಲಿ ಕಿಡಿಕಾಲು ಮೊತ್ತಕ್ಕೆ ಬಡ್ಡಿ 2½%. ವಿವರಗಳಿಗೆ ಬ್ಯಾಂಕ್ ಕಛೇರಿಯನ್ನು ನೋಡಿರಿ.

ಎಂ. ಕಾರ್ಯಪ್ಪ, ಮ್ಯಾನೇಜರ್.

ವೀರರಾಜಪೇಟೆಯಲ್ಲಿ ಮುಸಿಳಾ ಪರಿಷತ್ತಿನ ಸಭೆ.

ಶಾ. 7-7-44ರ 'ಕೊಡಗು' ಪತ್ರಿಕೆಯಲ್ಲಿ ಬರೆದ 'ಸಮೂಹದ ಒಕ್ಕಿಸಿಯ ಲೇಖನವನ್ನು ನೋಡಿದಲ್ಲಿ ವೀರರಾಜಪೇಟೆಯ ಮುಸಿಳಾ ಸಹಕಾರ ಸಮಾಜ ಸ್ಥಾಂಬರೆಂ ಅತೀ ಅಲ್ಪ ಕಾಲದಲ್ಲಿ ಗಿತ್ತಮ್ಮ ತರ್ಕಾಲಿಗೆ ಬಿಡೋಕ್ಷ ಬೆಳೆಸಿದ್ದಾರೆ ಎಂದು ಬರಿಯಲಾಗುವುದು. ಧಾರ್ಮಿಕ ದೃಷ್ಟಿಯಿಂದಲೂ ಪಮ್ಮ ಹಿರಿಯರು ಬಿ ಕಾರ್ಯ ಯೋಜನೆಯನು ತಿಳಿಸಿರುವ ಬಗ್ಗೆ ಪಕ್ಷಗೆ ತಿಳಿದ ಸಂಗತಿ ಇಲ್ಲ. ಇಂಥಾ ಸೂಚನೆಯಿಂದ ನಾವಾಗ ಮಹಾತಪಯಿಂದಿಗೆ ತಿಳಿಯಪಡಿಸಲಾಗಿದ್ದೇನೆ.

ಪಮ್ಮ ಸಮೂಹಕ್ಕೆ ಸರ್ವ ಸಹಾಯವಪಡೆಸ್ಸೂ, ಧೈರ್ಯ ಚಿತ್ತವನ್ನೂ ಕೊಡುತ್ತಿರುವ ಹಿರಿಯ ಮಹನೀಯರ ಹೆಸರನ್ನು ಬಾಷ್ಪ ಕಲ್ಲಿನಲ್ಲಿ ಕೆತ್ತಿಸಿ ಸಮಾಜದಲ್ಲಿ ಸಾ ಸಿಸುವ ಪದವು ಒಬ್ಬ ಸಹಕಾರ ಅಧಿಕಾರಿಗಳೂ, ಪ್ರಾಲ್ಯ ಸಮಾಜದ ಮುಂ ಮುಖರೂ ಸೇರಿ ಅಭಿಪ್ರಾಯಪಟ್ಟಿದ್ದರು. ಈ ವಿಷಯವನ್ನು ಸಮಾಜದ ಸಮಿತಿಯು ಯೂ ಪಾಲ್ಗೊಳ್ಳಲಿರುವ ಮುಂದಿನದಿನ ಅವರ ಅನುಮತಿಯನ್ನು ಪೊಂದಿ ಕೆಳ ಪ್ರಾಂಗೊಡನೆ ಎಲ್ಲಾ ಪಾಲಸಿಸಿಗೂ ವಿರೋಧವಾಗಿ ಈ ಕಲ್ಲಿನ್ನೂ ನಮ್ಮ ಸಮೂಹ ದಿಂಪಿಸ್ಥಳದ ಎಲ್ಲಾ ಪಾಲಸಿಸಿಗೂ ಕೆತ್ತಿಸಿದಂಗಾಗಿ ಈ ಸಮಾರಂಭವು ಕೆಳಗಿನ ಒಳ್ಳೆಯ ಮಾತುಗಳಿಂದ ಪ್ರಾರಂಭವಾಯಿತು. ಇದೂ ಸಾಲದಕ್ಕೆ ಯೂರಿಂದ ತೆಗೆದ ಒಳ್ಳೆಯ ಮಾತುಗಳನ್ನು ಆದೇ ಕಲ್ಲಿನಲ್ಲಿ ಕೆತ್ತಿಸಿ ಸಿಂದ. ಈ ವಿಷಯವನ್ನು ತಿಳಿದ ಒಂದೇ ಕೆಲಸದಿ ಮೊಬಾಯಿ ಈ ಕೆಲಸವನ್ನು ಸ್ವಾಮಿ ಭಾಷಿಕರನ್ನು ಸೇರಿಸಿ ಸಮಾಜದ ಸಭೆಯನ್ನು ಕರೆದು ಸಮಿತಿಯವರಿಗೂ ಸಾಮಾನ್ಯ ಸಭಾಸದರಿಗೂ ಸಾಮಾನ್ಯ ಸಭೆಯಲ್ಲಿ ಸಮಾಜದ

ಕೊಡಗು

ಸಂಪಾದಕರು:–ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩–೮–೦.

ಸಂಪುಟ ೨೪ | ಸಂಚಿಕೆ ೪ | ತಾರೀಕು ೩೦—೩—೧೯೪೪ನೇ ಗುರುವಾರ.

ಹಿಟ್ಲರನ ಕೊಲೆಯ ಯತ್ನ.

ಈಗಾಗಲೇ ಕೊಡಗು ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ನವರು ಭತ್ತದ ಕ್ರಯ ಗಾಡಿ ಒಂದಕ್ಕೆ ರೂ. 150 ಕ್ಕೆ ಏರಿಸಬೇಕೆಂದು ಚೀಫ್ ಕಮಿಷನರಿಗೆ ಡೆಪ್ಯುಟೇಶನ್ ಹೋಗಿರುವರು. ಕೊಡಗು ಜಿಲ್ಲಾ ಬೋರ್ಡಿನವರೂ ಇವೇ ರೀತಿಯ ಠರಾವನ್ನು ಪಾಸುಮಾಡಿರುವರು. ದೇಶದ ಕೆಲವು ಕಡೆಗಳಲ್ಲಿ ಸಾರ್ವಜನಿಕ ಸಭೆಗಳು ನಡೆದು ಇದೇ ಕೇಳಿಕೆಯನ್ನು ಸರಕಾರದ ಮುಂದಿಡುತ್ತಿದ್ದಾರೆ. ದೇಶದವರೆಲ್ಲರೂ ಒಗ್ಗಟ್ಟಾಗಿ ಈ ವಿಚಾರದಲ್ಲಿ ಸ್ಥಳೀಯ ಸರಕಾರವನ್ನೂ, ಅವಶ್ಯವಿದ್ದರೆ ಇಂಡಿಯಾ ಸರಕಾರವನ್ನೂ ಒತ್ತಾಯಪಡಿಸಬೇಕಾಗಿದೆ. ಸ್ಥಳೀಯ ಸರಕಾರದವರು ಈ ಮೇಲಿನ ಕಾರಣಗಳನ್ನೆಲ್ಲಾ ಮಂದಟ್ಟಾಗುವ ರೀತಿ ಇಂಡಿಯಾ ಸರಕಾರದ ಮುಂದಿಟ್ಟು ಜನರ ಕೋರಿಕೆಯಂತೆ ಭತ್ತದ ಬೆಲೆಯನ್ನು ಏರಿಸಬೇಕಾದ್ದು ಜನರ ಮತ್ತು ಸರಕಾರದ ಹಿತ ದೃಷ್ಟಿಯಿಂದ ಅವಶ್ಯವಾಗಿದೆ. ಇಲ್ಲವಾದರೆ ದೇಶದ ಮುಂದಿನ ಸ್ಥಿತಿಯು ಬಹು ಭಯಾನಕವಾಗುವದರಲ್ಲಿ ಸಂಶಯವಿಲ್ಲ.

ಒಳ್ಳೆ ದೇಶ.

ಕೊಡವ ವಿದ್ಯಾಭಿವೃದ್ಧಿ ನಿಧಿಗೆ ರೂ. 500 ಕೊಟ್ಟು ಶ್ರೀ ನಡಿಕೇರಿಯಂಡ ಸೋಮಯ್ಯನವರು ಜೀವಾವಧಿ ಸದಸ್ಯರಾಗಿರುವರು.

ಮಡಿಕೇರಿಯಲ್ಲಿ ಹೊಸದಾಗಿ ಇಬ್ಬರಿಗೆ ಪ್ಲೇಗುತಗಲಿದೆಯೆಂದೂ, ಇಲಿಗಳು ಸಾಯುವದು ಜೋರಾಗಿದೆಯೆಂದೂ ತಿಳಿಯಬಂದಿದೆ.

ಶಿರಂಗಾಲದಲ್ಲಿ ಪ್ಲೇಗು ಪ್ರಾರಂಭವಾಗಿದೆಯೆಂಬ ವರ್ತಮಾನವಿದೆ.

ಶ್ರೀ. ಶೇಲಪಂಡ ಕಾರ್ಯಪ್ಪನವರನ್ನು ವೀರಾಜಪೇಟೆ ಹೈಸ್ಕೂಲಿಗೂ, ಶ್ರೀ. ಎಸ್. ಸಿ ಸುಬ್ಬಯ್ಯನವರನ್ನು ಮಡಿಕೇರಿ ಉಪಧ್ಯಾಯರ ತರಬೇತು ಶಾಲೆಗೂ, ಶ್ರೀ. ಡಿ. ಎನ್. ಕೃಷ್ಣಯ್ಯನವರನ್ನು, ಜಿ. ವಿದ್ಯಾರ್ಥಿಕಾರಿಗಳಾಗಿಯೂ ನೇಮಕಮಾಡಲಾಗಿದೆ.

ಶ್ರೀ. ಜಿ. ಡಿ. ಪರಮೇಶ್ವರರವರ ಬದಲು ಶ್ರೀ. ಕೊರಪಂಡ ಸುಬ್ಬಯ್ಯನವರನ್ನು ಸಿವಿಲ್ ಸರ್ಜನರ ಆಫೀಸಿನ ಪ್ರಮುಖ್ಯ ಗುಮಾಸ್ತರಾಗಿ ನೇಮಿಸಲಾಗಿದೆ.

ಟ್ರಾವಂಕೂರ್ ಸಂಸ್ಥಾನದ ಪಹಿವಾಟುಯೋಜನೆ ಮತ್ತು ಅದಕ್ಕೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ಅಭ್ಯಸಿಸಿ 20 ದಿನಗಳೊಳಗೆ ಬರಲು ವೀರಾಜಪೇಟೆ ಪೊಲೀಸು ಸರ್ಕಲ್ ಇನ್ಸ್‌ಪೆಕ್ಟರಾದ ಶ್ರೀ ಮಲ್ಲೇಂಗಡ ಮುತ್ತಣ್ಣನವರನ್ನು ಆರಿಸಿ ಅವರು ತಾ. 15-9-44 ರಲ್ಲಿ ಟ್ರಾವಂಕೂರಿಗೆ ಹೋಗಲಿರುವರು.

ಕೊಡಗಿನಲ್ಲಿ ಜುಲೈ ತಿಂಗಳಲ್ಲಿ 321 ಜನನಗಳೂ 373 ಮರಣಗಳೂ ಸಂಭವಿಸಿವೆಯೆಂದು ಪ್ರಕಟನವಾಗಿದೆ.

ಸೋಮವಾರಪೇಟೆ ನೋಟಿಫೈಡ್ ಏರ್ಯಾದ ಸದಸ್ಯರಾಗಿ ಶ್ರೀಗಳಾದ ಜಿ. ಎಸ್. ಬಸಪ್ಪ, ಎಚ್. ಎಂ. ಬಸಪ್ಪ, ಜಿ. ಬಸವಲಿಂಗಯ್ಯ, ಬಿ. ಟಿ. ಚಿನ್ನಯ್ಯ, ಡಿ. ಎಚ್. ದಾಸಪ್ಪ, ಕೆ. ಮೊಗಪ್ಪ ಮತ್ತು ಎಚ್. ಸಿ. ರಾಜಾರಾಯರನ್ನು ಆರಿಸಲಾಗಿದೆ.

ಫ್ರೇಜರ್‌ಪೇಟೆಯ ನೋಟಿಫೈಡ್ ಏರ್ಯಾದ ಸದಸ್ಯರಾಗಿ ಶ್ರೀಗಳಾದ ಅಬ್ದುಲ್ ಅಜೀಸ್, ಶ್ರೀ. ಚಿನ್ನವೀರೇಗೌಡ, ಎಸ್. ಎನ್. ಲಕ್ಷ್ಮಣಶೆಟ್ಟಿ, ಮಾದುರಶೆಟ್ಟಿ, ಮಹಮ್ಮದಯೂಸಿನ್ ಮತ್ತು ಸರವ್ ಸುಬ್ಬಶೆಟ್ಟರನ್ನು ಆರಿಸಲಾಗಿದೆ.

ಕೊಡ್ಲಿಪೇಟೆಯ ನೋಟಿಫೈಡ್ ಏರ್ಯಾದ ಸದಸ್ಯರಾಗಿ ಶ್ರೀಗಳಾದ ಕೆ. ಎ ಗನ್ನಿಸಾಹೇಬ್, ಕೆ. ಎಸ್. ಗುರುಲಿಂಗಪ್ಪ, ಕೆ. ಎಂ. ಎಸ್. ಗೌಸ್ ಸಾಜೇಬ್, ಎಂ. ಎಂ ಕರಿಬಸಪ್ಪ, ಮೂವಿನಳ್ಳಿ ಸಿದ್ದಬಸಪ್ಪ, ಕೆ. ಎಸ್. ವೆಂಕಪ್ಪ ಮಣಶೆಟ್ಟಿ ಇವರುಗಳನ್ನು ಆರಿಸಲಾಗಿದೆ.

ತಾ. 5-9-44ರಲ್ಲಿ ಪೆರಿಯರಿ ಸಂಘದ ವಿಶೇಷ ಸಭೆಯು ತಿಮ್ಮಯ್ಯನಲ್ಲಿ ನಡೆಯಿತು. ಚೀಫ್ ಕಮಿಶನರು ಹಾಜರಿದ್ದರು.

ಬೆಣಾವರ, ಶನಿವಾರಸಂತೆ, ಸೋಣೆಮೊರೂರು, ನಿಡ್ಯ ಮೊದಲಾದೆಡೆ ಸುಶ್ರಿ ತೊಂದರೆ ಕೊಡುತ್ತಿದ್ದ ಪುಂಡಾನೆಯನ್ನು ಚೀಫ್ ಕಮಿಶನರು ಗುಂಡಿಕ್ಕಿ ಕೊಂದಿನುವರು. ಅದರೂ ಈ ಕಡೆಗಳಲ್ಲಿ ಇನ್ನೂ ಆನೆಗಳ ಹಿಂಡು ಇವೆಯೆಂದೂ, ಶನಿವಾರಸಂತೆ ಪೇಟೆಗಾಗಿ ಆನೆಗಳು ಹೋದದ್ದು ದಿಟವೆಂತಲೂ, ಆನೆಗಳ ಕಾಟದಿಂದ ಈ ಭಾಗದ ಜನರಿಗೆ ತುಂಬಾ ತೊಂದರೆಯಾಗಿದೆಯೆಂದೂ, ಇವುಗಳನ್ನು ಇಲ್ಲಿಂದ ಓಡಿಸುವ ಏರ್ಪಾಡು ಮಾಡುವದು ಅಗತ್ಯವಾಗಿದೆಯೆಂದೂ ಕಂಡು ಬಂದಿದೆ.

ಮಡಿಕೇರಿ ವೇದಾಂತ ಮಂದಿರದಲ್ಲಿ ತಾ. 9-9-44ರ ಸಾಯಂಕಾಲ 7 ಗಂಟೆಗೆ 'ಸತ್ಸಂಗ ಫಲ' ಎಂಬುದರ ಬಗ್ಗೆ ಭಾರತದ ಮಹಾ ಕಥೆಯ ಉದಾಹರಣೆ ಕೊಟ್ಟು ಶ್ರೀ ಬಿ. ಕೆ. ಸುಬ್ಬಾಯರು ವಾಚನ ಮಾಡುವರು.

ಜೀವನಾವಶ್ಯಕ ಇತರ ವಸ್ತುಗಳ ಕ್ರಯವು ಬಹು ಮಟ್ಟಿಗೆ ಏರಿರುವುದರಿಂದ ಭತ್ತದ ಕ್ರಯವನ್ನು ಕಡಿಮೆ ಪಕ್ಷ ರೂ. 150ಕ್ಕೆ ಏರಿಸಬೇಕೆಂದು ಶ್ರೀ ಎಸ್. ಮೊದಪ್ಪನವರ ಅಧ್ಯಕ್ಷತೆಯಲ್ಲಿ ತಾ. 4ರಲ್ಲಿ ಸೋಮವಾರಪೇಟೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಚೀಫ್ ಕಮಿಶನರನ್ನು ಕೇಳಿಕೊಳ್ಳಲಿಕ್ಕೆ ಡೆಪ್ಯುಟೇಶನ್ ಹೋಗಲು ಶ್ರೀ ಕೆ. ಎಂ. ಕುಶಾಲಪ್ಪನವರನ್ನು ಚುನಾಯಿಸಲಾಯಿತು.

ಕಸ್ತೂರಿ ಬಾ ಸ್ಮಾರಕ ನಿಧಿ

ಶ್ರೀ ಡಿ. ಬಸಪ್ಪನವರು	20
,, ಡಿ. ಚಿಕ್ಕಣ್ಣನವರು	10
,, ಡಿ. ಶಿವಪ್ಪನವರು	10
,, ಎಸ್. ಬಸಪ್ಪನವರು	10
,, ವಿ. ಜಿ. ನಾರಾಯಣಸ್ವಾಮಿ ಮೊದಲಿಯರವರು	10
,, ಮನೆಯವಂಡ ಎಂ ಚಿಮ್ಮಯ್ಯನವರು	1
,, ಸತ್ಯನಾರಾಯಣ ಹಾಲ್(ವೀರಾಜಪೇಟೆ)	1
,, ಬೇಲೂರುಮಠದ ಜಯಾನಂದಸ್ವಾಮಿಯವರು	
,, ಬಿ ಎಂ ಸಿದ್ದಪ್ಪ ಶೆಟ್ಟಿಯವರು	
,, ಪಾಲೇಕಂಡ ಭೀಮಯ್ಯನವರು	
,, ಅಲಮೇಲಮ್ಮನವರು(ಕೇಸಗಿನ ತೋಟ)	
,, ಡಿ. ಎಚ್ ದಾಸಪ್ಪನವರು	
,, ಪಾಪ್ಪೆರಂಡ ಪೂನಯ್ಯನವರು	
,, ಒಕ್ಕಲಿಗರ ಕಾಳಯ್ಯನವರು	
,, ಡಿ. ನಾರಾಯಣ ಶೆಟ್ಟಿಯವರು	
,, ಪಿ. ಚಿನ್ನಾರಪ್ಪನವರು	
ಮಿಸೆಸ್ ಕೊಂಗೆರ ಪಂಜಪ್ಪನವರು	
,, ನೆಲ್ಲೀರಿಮಂತ ಸೋಮಯ್ಯನವರು	
,, ಕೆ ಎಂ. ಚಂಗಪ್ಪನವರು	
ಶ್ರೀ ಎಂ. ಸಿದ್ದಿಂಗಪ್ಪನವರು	
,, ಎಂ. ಪಿ. ಚಿನ್ನಬಸಪ್ಪನವರು	
,, ತಂಡ್ರಮಂಡ ಎ. ಚಂಗಪ್ಪನವರು	

ರಣಭೇರಿ.

೮ ೦

ಯುದ್ಧವು ಪ್ರಾರಂಭವಾಗಿ ಐದು ವರ್ಷಗಳು ಮುಗಿದವು. ಈ ಐದು ವರ್ಷಗಳ ಅವಧಿಯಲ್ಲಿ ನಡೆದ ನರಮೇಧವು ಜಗತ್ತಿನ ಇತಿಹಾಸದಲ್ಲಿ ಹಿರಿದಾದುದು. ಈ ಐದು ವರ್ಷಗಳಿಂದ ಯುದ್ಧಾಪೇಕ್ಷವಾದ ಇಕ್ಕಡೆಯವರೂ ನಾನಾರೀತಿಯ ಕಷ್ಟಗಳನ್ನು ಅನುಭವಿಸಿದರು. ಹಿಟ್ಲರನು ಯುದ್ಧವು ಪ್ರಾರಂಭವಾದ ವರ್ಷಗಳ ತನ್ನ ದಿಗ್ವಿಜಯದುಂದುಭಿಯನ್ನು ಸಾರಿ ಸಿಡೀ ಜಗತ್ತನ್ನು ಅಲ್ಲೋಲಕಲ್ಲೋಲವಾಗಿ ಮಾಡಿದನು. ಜರ್ಮನಿಯು ಸರ್ವರಾಷ್ಟ್ರಗಳನ್ನೂ ಬಗ್ಗುಬಡಿದು ವಿಜಯಿಯಾಗಿ ಜಗತ್ತಿನ ಸಾರ್ವಭೌಮನು ಪದೆಂದು ಹಲವರು ನುಡಿದುತೊಡಗಿದ್ದರು. ಹೀಗೆ ಜರ್ಮನಿಯ ಕೇರ್ತಿ ಪತಾಕೆಯು ಮೇಲೇರಿದಂತೆ ತಮ್ಮ ತಮ್ಮ ಹಿತಸಾಧನೆಗಾಗಿ ಹಲವಾರು ಅಲಿರಾಷ್ಟ್ರಗಳು ಜರ್ಮನಿಯ ಬಾಲಹಿಡಿಯುವುದೆಂತೊಡಗಿದವು ಫ್ರಾನ್ಸಿನ ಪಿಟೆನ್ ಮತ್ತು ಲಾವಲರು, ಯುಗೊಸ್ಲೋವಿಯಾದ ಪ್ರೀಮಂತ ಜಮೀನ್ದಾರರು, ಹಂಗೆರಿಯ ಹಾರ್ತಿಯವರು, ರೊಮೇನಿಯಾದ ಎಂಟೊನಿಸ್ಕ್ಯರು ಹೀಗೆ ಬೆಬ್ಬಾಬ್ಬರಾಗಿ ಹಿಟ್ಲರನ ಕೈಗೊಂಬೆಗಳಾದರು. ಹಿಟ್ಲರನ ಅತ್ಯಾಂತ ತೀಜಸ್ಸಿಯೂದ ವಿಜಯಯಾರ್ಜನೆಯ ಪ್ರಭೆಯಿಂದ ಅಂಜಿದವರಾಗಿ ಓಡಿ ನಡೆದವರು ಆವರೆ 1939-1944 ಅಲ್ಲ. ಯುದ್ಧದ ಪ್ರಥಮ ವರ್ಷಗಳಲ್ಲಿ ಹಿಟ್ಲರನ ಕೋಳ್ಬಲದಿಂದ ಬೆಳೆಗಿದ ವಿಜಯಜ್ಯೋತಿಯು ಎನ್ನೆ ತೀರಿದ ದೀಪದಂತೆ ದಿನೇ ದಿನೇ ಕಳೆಗೆಡತೊಡಗಿದೆ. ಹಿಂದೆ ತನ್ನ ವಿಜಯಾಭಿಲಾಷೆಗೆ ವಿರುದ್ಧವಾಗಿ ಬೆಂಬತಿಸಿದ ರಾಷ್ಟ್ರಗಳು ಒಂದೊಂದಾಗಿ ಹಿಟ್ಲರನನ್ನು ಬಿಡತೊಡಗಿದುವು. ತನ್ನ ಹಿತಕ್ಕಾಗಿ ಸಂಘರ್ಷಾಭಿಲಾಷೆಗೆ ಎಳೆದ ಪಂಡಿಯವು ತಮ್ಮ ರಾಷ್ಟ್ರಗಳು ಮಿತ್ರಕಡೆ ಸೇರತೊಡಗಿವೆ. ರೊಮೇನಿಯಾ, ಪಂಗೇರಿ, ಬಲ್ಗೇರಿಯಾ, ಹೀಗೆ ಈ ಸಂಧಿಸಾಧುರ ಪ್ರಯಾಣವು ಮಿತ್ರ ಪಿಯಿಚಿತ್ತನ ಪಡೆದಿದೆ. ಫಿನ್ಲೆಂಡೂ ಕೂ ಯೂಗೊಸ್ಲೇವಿಯಕ್ಕೆ ಚಿಕಿತ್ಸೆ ನೀಡಲಿದೆ. 'In times of prosperity friends will be in plenty But in times of adversity not one in twenty' 'ಉತ್ಕರ್ಷದ, ತಭ್ಯರ್ದ್ಧಿಯ ಕಾಲದಲ್ಲಿ ಸ್ನೇಹಿತರು ಸೋಲೋರಿಬಾರದು. ಆವರೆ ಸಂಕಷ್ಟ, ಜೀವನ ಕಾಲದಲ್ಲಿ ಯೂ ಇರರು' ಎಂಬ ನಾಣ್ನುಡಿ ನಿರಿಯಾಗಿದೆ.

ರಣಕ್ಷೇತ್ರವನ್ನು ಪರೀಕ್ಷಿಸಿದರೆ ಅಚ್ಚರಿಪಡಿಸುವ ಸಂಗತಿಗಳು ಯಾವ ಭಾಗದಲ್ಲೂ ಜರ್ಮನಿಗೆ ಜಯಕಂಠ ಬರುವಂತಿಲ್ಲ. ಫ್ರಾನ್ಸಿನಲ್ಲಿ ಮಿತ್ರಸೇನೆಗಳು ಸಮುದ್ರವನ್ನು ಸಂಪಾದಿಸಿ ಮುಂದುವರಿಯುತ್ತಿವೆ: ಪ್ಯಾರಿಸನ್ನು ವಶಪಡಿಸಿ ಮುಂದೆ ಸಾಗಿದ ದಳಗಳು ಬೆಲ್ಜಿಯಮ್ ಪ್ರಾಂತ್ಯಕ್ಕೆ ಪುಗ್ಗಿ ಎಂಟ್ವರ್ಪನ್ನು ವಶಪಡಿಸಿಕೊಂಡು ನಿಂತಿವೆ ಸಾಗಿವೆ. ಮಿತ್ರವಳಗಳು ಜರ್ಮನಿಯ ಗಡಿಗೆ ಬಂದಿರುವವೆಂದು ಹೇಳಲಾಗುತ್ತಿದೆ. ಈ ಹಿನ್ನಡೆಯ ಬಗ್ಗೆ ಜರ್ಮನ್ ಪ್ರಚಾರ ಮಂತ್ರಿ ಗೇ ಬಲ್ಸನು ಹೀಗೆ ಹೇಳುತ್ತಾನೆ. 'It is the Fuehrer's plan now to withdraw his faithful and glorious armies behind the unbreakable barrier of the western wall' 'ತನ್ನ ನಂಬುಗೆಗರ್ಹವಾದ ಮತ್ತು ಭ್ರಾಕ್ಷಿತೆತ್ತ ಸೇನೆಗಳನ್ನು ಅಭೇದ್ಯವಾದ ಪಶ್ಚಿಮಗೋಡೆಯ ವರೆಗೆ ಹಿಂತೆಗೆಯುವುದು ಹಿಟ್ಲರನ ಯೋಜನೆಯಾಗಿದೆ.' ಇದರ ಪ್ರಕಾರ ಜರ್ಮನಿಯು ಹಿಂತೆಗೆದುಕೊಳ್ಳುವುದು ಅವರ ಯುದ್ಧ ಯೋಜನೆಯಾಗಿದೆಯಂದು ಎಂದಂತಾಯಿತು. ನಿಜ, ಯುದ್ಧ ಸ್ವರೂಪದ ಒಂದು ಮೂಲೆಯಿಂದು. ಯಾವುದೇ ಸೈನ್ಯವು ಸೋಲು ಹೀಗೆಯೆಂದು ವರೆಗೆ ಈ ವರೆಗೆ ಬಂದಿಲ್ಲ ಮಿತ್ರರೇ ಆಗಲೀ ಶತ್ರುಗಳೇ ಆಗಲೀ ಹಿಂದೆ ಬರುವುದು ತಪ್ಪಿ ಯೋಜನೆಗೆ ಅನುಸಾರವಾಗಿ! ಫ್ರಾನ್ಸಿನಲ್ಲಿಯ ನಾಜಿಗಳ ಯುದ್ಧ ಪ್ರಯತ್ನವನ್ನು ನೋಡಿದರೆ ಲೇವಲು ಮಿತ್ರರ ಸಂಖ್ಯೆಯನ್ನು ಸಾಧ್ಯವಿದ್ದಷ್ಟು ತತೆದು ಸಣುಯ ಒದಗಿಸಿಕೊಳ್ಳುವಂತೆ ಕಂಡುಬರುತ್ತಿದೆ. ಆದ್ದರಿಂದಲೇ ತಮ್ಮ ಸೈನ್ಯಬಲ ಸ್ವಲ್ಪ ಕುನ್ನಿಗಿರುವಲ್ಲಿ ಪ್ರಾರಾಜಿ ಯೋರಾಡುತ್ತಾರೆ. ಇನ್ನು ಕೆಲವೆಡೆ ಜರ್ಮನ್ ಗಡಿಯಲ್ಲಿ ಹಿಂದೆ ಕರಿಯ ಜರ್ಮನ್ ಗಡಿ ಯಲ್ಲಿ ಸ್ವಿಸ್ ದಿಕ್ಕಿಗೆ ಸರಿಯುತ್ತಿದ್ದಾರೆ.

ಶತ್ರುರಾಷ್ಟ್ರವು ಸಹಜವಾಗಿ ಒತ್ತು ದಬ್ಬಿದ ಜರ್ಮನಿಯು ಮೇಲೆ ಸಾಗಿದೆ. ಇತ್ತ ಪೋಲೆಂಡಿನಲ್ಲಿ ರಷ್ಯಾ ಬ್ರಿಟನ್ನುಗಳು ಭೀಷಣ ಬಂಡಿದೆ. ಬ್ರಿಟಿಷ್ ಮತ್ತು ಅಮೇರಿಕಾ ಅಧಿಕಾರಿಗಳು ರಷ್ಯಾಕ್ಕೆ ಪತ್ರ ಬರೆದು 'ನಾವು ಬಿಮೂಲಗಳ ಸೂಚಿಕ ವಾರ್ತಾಗಳ ಪ್ರೋಲೆಂಡಿನ ಮುಂಬೃಜ್ಞೆ ಜನರಿಗೆ ಆಯುಧ ಪಶ್ಚಾತ್ತಾಗಳನ್ನೂ, ಮದ್ದುಗುಂಡುಗಳನ್ನು ಒದಗಿಸುತ್ತೇವೆ ನಮ್ಮ ವಿಮಾನಗಳು ಬಂದು ಸ್ಥಳಾಂತರಿಸಲು ಅವಕಾಶ ಕೊಡಿ' ಎಂದು ಕೇಳಿದ್ದರು. ರಷ್ಯಾ ವು ಇದನ್ನು ಲೆಕ್ಕಿಸಿದೆ. ಬ್ರಿಟನ್ನಿನ ಲ್ಲರು ಪೋಲೆಂಡಿನ ಸಮಿಲಿಲ್ಲಿ ರಷ್ಯಾದ ಸೈನ್ಯದ ಮುಷ್ಠಿಯಲ್ಲಿ ರಷ್ಯಾದ ಪ್ರಭುತ್ವವೂ ಪೋಲೆಂಡಿನ ಸಮಿತಿಯೊಂದಿದೆ. ಮಿತ್ರರು ಇಂಗ್ಲೆಂಡಿನಲ್ಲಿರುವ ಪೂಲಿಸಾ ಸಮಿತಿಯ ಸೂಚನೆಯಂತೆ ಪೋಲೆಂಡಿನಲ್ಲಿ ಕಾರ್ಯಾಚರಣೆಯಮಾಡಿಕೊಡುತ್ತಾದೆ ರಷ್ಯಾದವರಿಗೆ ಮಿತಿಯ ಬೇಕೆಂದು ರಷ್ಯನರು ಹೇಳುತ್ತಿದ್ದಾರೆ. ಈ ಗಮನಸ್ಥಿಯು ಉಗ್ರರೂಪ ತಾಳಿದೆ. ಈ ಮಧ್ಯೆ ಜರ್ಮನಿ, ರಷ್ಯಾಗಳೊಳಗೆ ಒಪ್ಪಂದ ಮಾಡಿಸಲು ಜಪಾನು ಒಂದು ಪ್ರಯತ್ನ ಮಾಡುತ್ತಿದೆಯೆಂದು ಪತ್ರಿಕೆಗಳು ಬಂದಿದೆ. ಇದು ಜಯಪ್ರದವಾಗದೆ ಜರ್ಮನಿಯ ಭಾಗ್ಯಭಾನು ಉದಯಿಸಿದಂತೆ.

ಜರ್ಮನಿಯು ಈ ರೀತಿ ಆಪಜಯವನ್ನು ಹೊಂದುತ್ತಿರುವ ವರದಿಗಳು ನೋಲಿಂದ ನೋಲೆ ಬರುತ್ತಿದ್ದರೂ ಅವರೊಂದಿಗೆ ಬಂಡಾಸಿನ ನೋಲೆ ಅವರು ಮಾಡುತ್ತಿರುವ ಧಾಳಿಯ ವರದಿಗಳೂ ಆಗಾಗ ಬರುತ್ತಿವೆ. ಜರ್ಮನರ ವ್ಹೀವಿಮಾನಗಳ ಹಾವಳಿ ಎಂದಿನಂತೆ ಇದೆ. ಆವರೆ ಕಳೆದ 60 ಗಂಟೆಗಳಿಂದ ಇಂಗ್ಲೆಂಡಿನ ಮೇಲೆ ಈ ವ್ಹೀವಿಮಾನಗಳ ಧಾಳಿಯು ನಡೆಯಲಿಲ್ಲವೆಂದು ಕಾ. ರರ ವರದಿಯೊಂದು ತಿಳಿಸುತ್ತದೆ. ಕಾ. 3 ಮತ್ತು 4ರಲ್ಲಿ ಫ್ರಾನ್ಸ್ ಕರಾವಳಿಯ ಜರ್ಮನ್ ಮಹಾಕೋಪುಗಳು ಇಂಗ್ಲೆಂಡಿನ ಮೇಲೆ ಗುಂಡು ಹಾರಿಸಿರುವುದು ವರದಿ ಬಂದಿದೆ.

ಜರ್ಮನಿಯು ವ್ಯತಿರಿಕ್ತವಾದ ಹಿಂತೆಗೆದುಕೊಳ್ಳುತ್ತಿರುವದನ್ನು ಕಂಡು ಜಪಾನಿನಲ್ಲೂ ಸ್ವಲ್ಪ ಶೀತಗಾಳಿ ಬೀಸತೊಡಗಿದೆ. ಮಿತ್ರರು ಒಪಾನಿನ ಮೇಲೆರಗಿ ಧಾಳಿಯಿಡೂತ್ತೆ ಕೈತೊಳೆಯಬಹುದೆಂದು ಗಾಬರಿಗೊಂಡು ತಪ್ಪಕ್ಕೆ ಸರಿದಾರಿ ಹಿಡಿಯತೊಡಗಿದ್ದಾರೆ. ಜಪಾನರು ಹೀಗೆಯೇ ಜಾಗ್ರತೆ ಸಹಿಸುತ್ತಿರುವ ಪಕ್ಷದಲ್ಲಿ ಅವರ ಶತ್ರು ಅವರ ಶತ್ರು ಸಾಮಾನ್ಯವಾಗಿ ತುರ್ತಿನಿಂದ ಉಪೇಕ್ಷಿಸದ ಎರೀಜಿಲ್ ಎಂಬ ರಾಜನೀತಿ ವಿಶಾರದರು ಜಪಾನನ್ನು ಸೋಲಿಸಲು ಮಿತ್ರರಾಷ್ಟ್ರ

ಗಳಿಗೆ ಕಡಿಮೆ ಮೂರು ವರ್ಷಗಳಾದರೂ ಹಿಡಿದೀತು ಎಂದಿರುವರು. ಹೇಗೂ ಜಪಾನು ತನ್ನ ಸರ್ವ ಕ್ಷೇತ್ರಗಳನ್ನು ಸುರಕ್ಷಿತಪಡಿಸಿಕೊಂಡು ರಣರಂಗಕ್ಕಿಳಿಯಲು ಭುಜ ತಟ್ಟಿ ನಿಲ್ಲಲು ಸಿದ್ಧವಾಗುತ್ತಿದೆ.

ಸೇವಾಗ್ರಾಮದಲ್ಲಿ ಪಿಕೆಟಿಂಗ್.

ಪಾಕಿಸ್ತಾನ್ ಎಜೆಂಡಾ ಪ್ರಚಾರಕ್ಕೆ ಸೇರಿದ ಸುರಿಯಂತೆ(ಸಾರಾಗಾಂ) ಕಾರ್ಯದರ್ಶಿಯೂ ಸಿಮಾಗ್ರಾಮದ ಅಧ್ಯಮದಲ್ಲಿ ಗಾಂಧೀಜಿಯು ನಡೆಯುತ್ತಿರುವ ಮಾಂಸಾಹಾರವನ್ನು ಪಿಕೆಟಿಂಗ್ ಮಾಡಿ ಮಾಂಸಾಹಾರವನ್ನು ಗಾಂಧೀಜಿಯು ಬಿಟ್ಟಿನ ಪಕ್ಷಾದಿಯಂತೆ ಮಾಡಿಸಿದ್ದಾರೆ ಕೊನೆಗೆ ಕಾಂಗ್ರೆಸ್ ಸರಕಾರಿ ಬೆಂಬಲಿಸಿಕೊಂಡಿದ್ದಾರೆ ಅವರು ಪಿಕೆಟಿಂಗ್ ನಡೆಸಿದ್ದಾರೆ.

(1ನೇ ಪುಟದಿಂದ ಸಾಗಿದ್ದು)

ಲು ಮುಸ್ಲಿಮರಿಗೆ ಸ್ವಾತಂತ್ರ್ಯವನ್ನು ಕೊಡುವ ತನ್ನ ಯೋಜನೆಗೆ ಗಾಂಧೀಜಿಯವರ ಬೆಂಬಲ ಪಡೆದು ಬೆರದ ಮುಂದಿಟ್ಟರು. ಈ ಬಗ್ಗೆ ಗಾಂಧೀಜಿ ಮತ್ತು ಜಿನ್ನಾರವರೊಳಗೆ ಈ ತಾ. 9ರಲ್ಲಿ ನೂತುಕಕೆಯೂಗಲಿದೆ.

ಈ ಬಂದೋಲನವಲ್ಲಿ ಶತ್ರು ಕಟ್ಟವರಿಗೆ ಕಡಿಮೆ ಇಲ್ಲ. ಮಹದೇವ ದೇಸಾಯಿ, ಕಸ್ತೂರ್ ಬಾ ಇವರು ಕಾರಾಗೃಹದಲ್ಲಿರುವಾಗಲೇ ಮಡಿದವರಲ್ಲಿ ಮುಖ್ಯರು. ಕಾರಾಗೃಹದಿಂದಂಟಾದ ಆಶಕ್ತತೆಯಿಂದ ಮಡಿದವರಲ್ಲಿ ಆರ್. ಎಸ್. ಪಂಡಿತ್, ಸತ್ಯಮೂರ್ತಿ ಇವರು ಪ್ರಮುಖರು.

—• ಶೇಲ ಧ್ರಾ —•

ಎಂಟಿ ಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರ ಗಡ್ಡೆ, ಕಜ್ಜಾನ್ನ ಆರಕ್ಕೆತೆ ಮೇಲೆ ರಾಮಬಾಣ; ಲಿವರ್, ಪೊಟ್ಟಿನೋವು, ಪುಲಬಲ್ಲತೆ, ಸುಧಾರಿಸಿ ಕಕ್ಕಿ ಬೆಳೆಸುತ್ತದೆ. ಕ್ವಿನೈನ್ ಬದಲು ವೈದ್ಯ ಡಾಕ್ಟರರು ದನಾಲಾನೆಗಳಲ್ಲಿ ಉಪಯೋಗಿಸುವರು. 1000 ಗುಳಿಗೆಗಳಿಗೆ ರೂ. 15-0-0, 100ಕ್ಕೆ ರೂ. 1-12-0. ಈ ಔಷಧಿಗಳಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿ ಕೊಟ್ಟವರಿಗೆ ಒಂದು ನಾವಿರ ರೂ. ಬಹುಮಾನ ಕೊಡಲಾಗುವುದು. ಪ್ರತಿ ಊರಿನಲ್ಲಿ ಮಾರಾಟಕ್ಕೆ ಏಜೆಂಟರು ಬೇಕು.

ಶೇಲಡಾ ಕೆಮಿಕಲ್ ಕಂಪೆನಿ,
ಶಿರಸಿ, ಉತ್ತರ ಕನ್ನಡ.

ಸೋಲ್ ಏಜೆಂಟರು—

ಎಸ್. ಎಲ್. (ಅಪ್ಪಾರಾವ್) ಫಾಕೆಪ್ಪ,
ಖಡವರ ಔಷಧಿ ಸರ್ವಿಸ್,
ಶಿರಸಿ, ಉತ್ತರ ಕನ್ನಡ.

ಶ್ರೀ ಜಾರೀಕ ಮಂದಣ್ಣನವರು	15
,, ಕೆ. ಮುದ್ದಪ್ಪನವರು	15
,, ಆಲ್ಬಿಮಂಡ ಪುಟ್ಟಪ್ಪನವರು	15
,, ಪೇಪಲಬ್ಬಿ ರಕಿಮಯ್ಯನವರು	10
,, ಕೆ ಚಂಪಾಲೇಕರಯ್ಯನವರು	10
,, ಮಂಜಿರ ಐಯ್ಯಣ್ಣನವರು	10
ಸುಕನ್ ಸಿ. ಬಿ. ಕಾರ್ಯಪ್ಪನವರು	10
,, ಐಚ್ಚರ ಐಯ್ಯಮ್ಮನವರು	10
,, ಪಾಲೇಕಂಡ ಬಿ ಚಂಗಪ್ಪನವರು	10
ಶ್ರೀಮತಿ ಬಾಗಕ್ಕನವರು	10
ಶ್ರೀ ಸಿ. ವಿ. ನಾರಾಯಣಸ್ವಾಮಿಯವರು	10
,, ಮೂರ್ನಾಡು ಮಂಜಪ್ಪನವರು	10
,, ಕ್ಷೀರಂಡ ಪೆಮ್ಮಯ್ಯನವರು	5
,, ಸೆಪುರು ಉಟ್ಟೇರಪಾಯರು (ನಿಷ್ಟೂರು)	5
ಸುಬಸ್ ಡಿ. ನಾರಾಯಣಚೆಟ್ಟಿಯವರು	5
ಶ್ರೀ ಕಾಕಮಾಡ ನಾಣಯ್ಯನವರು	4
ಶ್ರೀಗಳಾದ ಆರ್ ಡಿ ಫೆರ್ನಾಂಡಿಸ್ ಮತ್ತು ಎನ್ ಕೆ ಪೂರ್ಣಿ ಇವರಿಗಳು ರೂ ಶರಂತೆ	

1 ರೂ. ಕೊಟ್ಟವರು.

ಶ್ರೀ ಗಣಾದ ಎಂ. ಕೆ. ಪದ್ಮನಾಭ, ಕಾಯು ಸಂಪ ಜೋಳಯ್ಯ, ಕೆ. ಎಲ್. ವೇದಾದ್ರಿ, ಜಿ. ವಿ. ಸುಬ್ಬಪ್ಪಯ್ಯ, ಸುಬಸ್ ಆದೇಂಗಡ ಪೆಣಿ, ಅಚಮಂಗಮೊಡ ಬೆಳ್ಯಪ್ಪ, ಮುಪ್ಪು, ರಾಮಚಂಪ್ಪ ಶರ್ಮ, & ಜಿ. ಆರ್. ಜೋಸೆಫ್ ಇವರುಗಳು. ಈ ವರೆಗೆ ಒಟ್ಟು 3,079 ರೂ. ಜಮೆಯಾಗಿದೆ.

ಧಾತುವೃದ್ಧಿ ರಸಾಯನ [ZANDU]

"ರ್ಯಾಕ್ಸೋ—ಫಾಸ್ಫೋ—ಮೊಲ್ಫ"

ಎಂದು ಪ್ರಸಿದ್ಧವಾದ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣಿಸುಳ್ಳವರಿಗೆ, ಹಾಗೂ ಶೋಗ ನಿವೃತ್ತಿಯಾಗಿ ಸುಖಶಾಂತಿಯಿಂದಿರುವವರಿಗೆ, ಆಸ್ಪತ್ರೆಗಳಿಗೆ ಬಹಳ ಉಪಯೋಗಿಸುವುದು.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ರೈತರು ಜೀವನಗಳಿಗೆ, ರೋಗಿಗಳಿಗೆ, ನರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜರಾವಸ್ಥೆಯನ್ನು ಸಂಪೂರ್ಣವಾಗಿ ತಡೆಯುವುದು ಮೆದುಳಿಗೆ ತಂಪನ್ನು ಉಂಟುಮಾಡುವುದು, ನರಗಳಿಗೆ ರುಚಿಯೂಗಿರುವುದು. ಇದರಲ್ಲಿ ನನಜೀವನಕರವಾದ ಎಲ್ಲಾ ಸತ್ವ ಮಿನ್ನುಗಳು ಕೆಂಪುಕಬ್ಬಿಣ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋಮೊಲ್ಫ್, ಹೆಮೋಗ್ಲೋಬಿನ್, ಸೋಡಿಗ್ಲಿಸರೊ ಫಾಸ್ಫೇಟ್ ಪೆಪ್ಟೋನ್, ಸಾಲ್, ಮೊಲ್ಫ ಎಕ್ಸ್‌ಟ್ರಾಕ್ಟ್, ಡಾಕ್ಟ್ರಾಸವೆ ಮೊದಲಾದ ಪ್ರಸಿದ್ಧ ಔಷಧಿಗಳಿಂತ ವಿದೆ. ಇಂದಿನಿಂದಲೇ ಸೇವಿಸಿ ಆನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಿ ಅಂಗಡಿಗಳಲ್ಲಿದೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
ಗೋಖಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

39) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕದ ವರದಿಯಲ್ಲಿನ ಕೆಲವು ಸ್ವಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂ. ಮೀರಿದೆ
	ಚಾಲ್ತಿಯಿರುವ ವಿಮೆಗಳ ಮೊತ್ತ	೩೪,೪೮,೮೮,೦೦೦ ,, ,,
	ಆಸ್ತಿ	೬,೫೦,೪೬,೦೦೦ ,, ,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು		೮,೫೮,೦೦,೦೦೦ ,, ,,

ಅಂಗ ಕಛೇರಿ: ಡಿಸ್ಪೆನ್ಸರಿ ಬೋರ್ಡಿಂಗ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೊಂಬಾಯಿ

"ಟ್ರೂ ಪಿಕ್ಚರ್"

ಕಂಪೆನಿಯಲ್ಲಿ ವಿಮೆ ಮಾಡುವದೇ ಯೋಗ್ಯವೆಂದು ನಿಮ್ಮ 1944 ರ ತೀರ್ಮಾನವಾಗಲಿ

1943ರಲ್ಲಿ ನೂಡಿದ ವಿಮೂ ಮೌಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಜೀರ: ಹೊಸ ದಿಲ್ಲಿ] [ಹೆಚ್ಚಿನ ಸೂಹಿತಿಗೆ ಈ ಪತ್ರಿಕೆಗೆ ಬರೆಯಿರಿ:-

ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟಿ ಬ್ರಾಂಚ್ ಮೇನೇಜರ್, ಮಂಗಳೂರು.

34)

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿ., ಮಡಿಕೇರಿ

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು 95,060, ಜನೂಬಂದ ಠೇವಣಾತಿ 2,24,755, ವಸೂಲಾದ ಕ್ಷೇಮನಿಧಿ 2,10,209, ಸೇವಿಂಗ್ಸ್ ಬ್ಯಾಂಕ್ ಡಿವಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವ ದಲ್ಲದೆ ಡಿವಾಜಿಟ್ಟುದಾರರಿಗೆ ಅವರ ಡಿವಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಮು ಠೇವಣಾತಿಗಳಿಗೆ 1 ವರ್ಷದಿಂದ 3 ವರ್ಷಗಳ ವರೆಗೆ ಶೇ ಕಡ 2. 3 ವರ್ಷಗಳಿಂದ 5 ವರ್ಷಗಳ ವರೆಗೆ 2½. 5 ವರ್ಷಗಳಿಂದ 10 ವರ್ಷಗಳ ವರೆಗೆ 3½ 10 ಮತ್ತು ಅಷಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿವಾಜಿಟ್ಟುಗಳಿಗೆ ಶೇ 0-8-0.

ವರ್ಷಕ್ಕೊಂ[illegible] ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಬಂಗಾಳ ಬರಗಾಲ.

ಬಂಗಾಳದಲ್ಲಾಪ್ಪಿದ ತತ್ಕಂತ ಭೀಕರವಾದ ಬರಗಾಲದ ಸಹಾಯಾರ್ಥವಾಗಿ ಹಿಂದೂದೇಶದ ಉದ್ದಗಲಕ್ಕೂ ಧನ, ಧಾನ್ಯ ಸಂಗ್ರಹಿಸಿ ಬರಗಾಲ ಪೀಡಿತರಿಗೆ ಸಹಾಯಮಾಡಲಾಯಿತು. ಕೊಡಗು ನಾಡಿನ ಮಾನ್ಯಮಹಾಜನಯೂ ಸಹ ಸುಮಾರು 1000 ದ ಪಗಿ ಭವ ರೂಪಾಯಿ ಹಾಗೂ ಬರಗಾಲ ಪೀಡಿತರಿಗೆ ಸಹಾಯವಾಗಲು ನೇಮಕವಾದ ಸಮಿತಿಯವರು ಅವರ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಕಳುಹಿಸಿರುವರು. ವಾಚಕರ ಅನುಕೂಲಕ್ಕೆ ಅದರ ಕೆಲವು ಪ್ರಾಮುಖ್ಯ ಭಾಗಗಳನ್ನು ಇದರಡಿ ಕೊಡಲಾಗಿದೆ

"ಇಡೀ ಹಿಂದೂದೇಶದವರ ಹೃದಯವನ್ನು ತಳಮಳಗೊಳಿಸಿ, ಮಿಲಿಯಂತರ ಜನರನ್ನು ಸೂರೆಗೊಂಡ ಬಂಗಾಳ ಬರಗಾಲವು ಹಿಂದೂದೇಶದ ಚರಿತ್ರೆಯಲ್ಲಿ ಹಿರಿದಾದುದು. ಜನರು ನಿರ್ಗತಿಕರಾಗಿ, ನಿರ್ವೀರ್ಯರಾಗಿ, ನಿರ್ವೀರ್ಯರಾಗಿ, ಮಾನವತೆಯನ್ನು ಕಳಕೊಂಡು, ನೈತಿಕ, ಬಲ ಕುಗ್ಗಿ ದವರಾಗಿ, ಬಳಲಿ ಕಂಗೆಟ್ಟರು. ತುತ್ತು ಅನ್ನ ಕ್ಕಾಗಿ ಬೀದಿ ಬೀದಿ ಅಲೆದು ಪ್ರಾಣಬಿಟ್ಟರು ನಾಯಿನರಿಗಳೊಡನೆ ಸೆಣಸಿ ಜೀವತ್ಯಾಗಮಾಡಿದರು. ಮಕ್ಕಳು ಮಡದಿಗಳನ್ನು, ಹೆಂಡತಿ, ಬಳಗದವರನ್ನು ಸೂರಿದರು, ತಮ್ಮ ಸರ್ವಸ್ವವನ್ನೂ ಬರಗಾಲಕ್ಕ ಬಲಿಕೊಟ್ಟರು. ಸರಿಯೂದ ಆಹಾರವಿಲ್ಲದೆ ಜನರು ನಾನಾರೀತಿಯ ರೋಗಗಳಿಗೆ ತುತ್ತಾಗಿ ಕ್ಷೇಮ ಪವರಿಲ್ಲದೆ ನೊಣಗಳಂತೆ ಸತ್ತರು. ಈ ಬರಗಾಲದಿಂದ ೧,೭೩,೦೦೦ ಜನರು ಸತ್ತರೆಂದು ಭಾರತ ಸರ್ಕಾರಿಗಳಾದ ಎಮರಿಯವರು ಹೇಳಿದರು. ಆದರೆ ಇದು ತಪ್ಪು ಸಂಖ್ಯೆ ಇನ್ನೂ ಸರಿಯಾದ ಸಂಖ್ಯೆಯು ತಿಳಿದು ಬರಬಿದ್ದಾರೂ ಕಲ್ಕತ್ತ ವಿಶ್ವವಿದ್ಯಾಲಯದವರು ಜನಸಂಖ್ಯೆಯಂತೆ ೨೬,೦೦,೦೦೦ ಜನರು ಸತ್ತಿರುವರೆಂತ್ಮಬಹುದು.

ಬರಗಾಲದ ನಂತರ ಬಂಗಾಳದಲ್ಲಿ ಉಳಿದಿರುವ ಜನರ ಸ್ಥಿತಿ ಇನ್ನೂ ಶೋಚನೀಯವಾಗಿದೆ ತಮಗೆ ಬೇಕಾದ ಆಹಾರವನ್ನು ಕೊಂಡುಕೊಳ್ಳಲು ಶಕ್ತಿಯಿಲ್ಲ. ಪೇಟೆಯಲ್ಲಿ ಎಷ್ಟೇ ಅಗ್ಗವಾಗಿ ಧಾನ್ಯವಿದ್ದರೂ ಬಡಿಕಾಸಿಲ್ಲದ ಈ ಜನರು ನೂಡುವದೇನು? ಅನರಿಗೆ ಸಂಪಾದನೆಯ ಮಾರ್ಗ ಶೋರಿಸಿ ಜೀವನ ನಡೆಸುವಂತೆ ಮಾಡುವದು ಸಾರ್ವಜನಿಕರ ಮೇಲೆ ಬಿದ್ದ ದೊಡ್ಡ ಜವಾಬ್ದಾರಿ. ಈ ಬರಗಾಲ ಸಹಾಯಕ ಸಮಿತಿಯ ಅಧ್ಯಕ್ಷರಾಗಿ ಸರ್. ಬದ್ರಿದಾಸ್‌ಗೋಯಂಕರವರಿದ್ದಾರು. ಶ್ರೀ ಶ್ಯಾಮಸುಂದರ ಮಾರ್ವಾಡಿಯವರು ಉಪಾಧ್ಯಕ್ಷರಾಗಿದ್ದಾರೆ. ಈ ಸಮಿತಿಯಲ್ಲಿ 17 ಜನ ಸದಸ್ಯರಿದ್ದಾರೆ ಈ ಸಮಿತಿಯು ಬರಗಾಲಪೀಡಿತರಿಗಾಗಿ ಹಲವು ರೀತಿಯ ಸಹಾಯನೂಡುತು. ಹೀಗೆ ಸಹಾಯಮಾಡಲು ಸಾರ್ವಜನಿಕರು ಕೊಡುಗೈಯಿಂದ ಕೊಟ್ಟ ಧನ, ಧಾನ್ಯ ಸಹಾಯದೇ ಕಾರಣ. ಈ ಸಮಿತಿಗೆ ಸಾರ್ವಜನಿಕರಿಂದ ಧನದ ರೂಪವಾಗಿ ರೂ. ೩೭,೫೪,೫೦೩—೩—೭ ಬಂತು. ಸುಮಾರು 10 ಲಕ್ಷ ರೂಪಾಯಿಗಳ ಬೆಲೆಯ ಧಾನ್ಯಗಳು ಬಂದವು. ಹೀಗೆ ಒಟ್ಟು ರೂ. ೩೭,೬೦,೦೦೦ ರೂಪಾಯಿಗಳನ್ನು ಹಣ ಈ ಸಮಿತಿಯ ವಶಕ್ಕೆ ಬಂತು. ಈ ಹಣದಿಂದ ಈ ಸಮಿತಿಯು 92 ಭೃತ್ಯಗಳನ್ನಿಟ್ಟು 37,850 ಜನರಿಗೆ ಅನ್ನದಾನ ನೂಡಿದರು. 305 ಧರ್ಮಛತ್ರ ಧಾನ್ಯಕೊಡುವ ಅಂಗಡಿಗಳನ್ನು ತೆರೆದು 79796 ಜನರಿಗೆ ಸಹಾಯಮಾಡಿತು. ಕಮ್ಮಿ ಶ್ರಮದಲ್ಲಿ ಸಾಮಾನು ಬದಿಗಾಸುವ 398 ಅಂಗಡಿಗಳನ್ನು ತೆರೆದು 307696 ಜನರಿಗೆ ಸಹಾಯಮಾಡಿತು. ಒಟ್ಟಾರೆ ಈ ಸಮಿತಿಯ 4,30,345 ಜನರ ಸೇವೆ ಮಾಡಿದೆ. ಇದು ದಿನಸಹ ಈ ಸಮಿತಿಯಿಂದ ಸಹಾಯಪಡೆಯುತ್ತಿದ್ದ ಜನರ ಸಂಖ್ಯೆ.

ವೈದ್ಯಕೀಯ ಸಹಾಯಕ್ಕಾಗಿ 1,45,441.13.0 ಖರ್ಚು ಮಾಡಲಾಯಿತು. ಪ್ರತಿ ಡಿಗೆ ರೂ. 37 ರಂತೆ ರೂ. ೫೫,೦೦೦ ಯ ಕ್ಷಿನಿನ್ನನ್ನು ಬಂಗಾಳ ಸರಕಾರದಿಂದ ಪಡೆಯಿತು. ಡಾ. ಬಿ. ಸಿ. ರಾಯ್‌ರವರು ಈ ಕ್ವಿನಿನ್ನಿನಿಂದ ಬಂದು ರೀಪದು ಮಲ್ಲೇರಿಯೋ ಗುಳಿಗೆಗಳನ್ನು ನೂರು ರುಂದ 3 ಲಕ್ಷ ಜನರ ಮಲ್ಲೇರಿಯೋ ಪರೀಕ್ಷೆ ಮಾಡುವದು ಸಾಧ್ಯವಾಯಿತು. ಈ ಸಂಸ್ಥೆಯು ೨೫ ಜಿಲ್ಲೆಗಳಲ್ಲಿ 123 ಕೇಂದ್ರಗಳನ್ನು ತೆರೆದು 64 ಹಾಕ್ಟರುಗಳ 294 ಬಾಲಂಟಿಯರುಗಳ ಸಹಾಯ ಪಡೆದು ಜನರಿಗೆ ಸಹಾಯಕೊಟ್ಟರು.

ಇನ್ನೆರ್ಲಾ ಕೆಲಸ ಮಾಡಲು ಅನುಕೂಲವಾಗುವಂತೆ ಕೊಟ್ಟವರು ನಮಗೆ ಧನ ಕಳುಹಿಸಿ ಬೆಂಬಲಕೊಟ್ಟ ಮಹಾನೀಯರು. ಈ ಮಹಾನೀಯರಿಗೆ ಸಮಿತಿಯ ಪರವಾಗಿ ವಂದನೆಗಳನ್ನು ಅರ್ಪಿಸುವೆವು. ಹೃದಯಕರಗಿ, ಬಂಗಾಲದ ಬವಣೆಯಿಂದ ಮನನೊಂದು ಧನ ಸಹಾಯಮಾಡಿದ ಈ ಮಹಾನೀಯರು ನಮ್ಮ ವಂದನೆಗಳ ಅಪೇಕ್ಷೆಯಲ್ಲಿಲ್ಲವೆಂಬುದು ನಮಗೆ ಗೊತ್ತು. ಆದರೆ ತಮ್ಮ ಉದಾರ ಹಸ್ತದಿಂದ ಸಹಾಯವಿತ್ತು ಅನೇಕ ಜೀವಗಳನ್ನು ಉಳಿಸಲು ಸಹಾಯಕರಾದ ಮಾನ್ಯರಿಗೆ ನಮ್ಮ ವಂದನೆಗಳನ್ನು ಅರ್ಪಿಸುವದು ನಮ್ಮ ಕರ್ತವ್ಯ.

ಪ್ರಜೆಗಳ ಅಭಿಪ್ರಾಯವೇ ಕೊನೆಯೆಂದು.

ಗಾಂಧೀಜಿಯವರು ಮಿ ಜಿನ್ನಾರವರು ಒಂದು ಒಪ್ಪಂದಕ್ಕೆ ಬಂದಮ್ಮೇ ಆದರೆ ಮೊದಲು ಅವನ್ನು ಭಾರತದ ಪ್ರಜೆಗಳ ಮುಂದಿಟ್ಟು ಅವರ್ಲಿರ ಬಹುಸುತರ ಬೆಂಬಲ ಪಡೆಯುವುದಕ್ಕೆ ಅವರು ಯತ್ನಿಸುವರು ಎಂದು ಶ್ರೀ ಸಿ ರಾಜಗೋಪಾಲಾಚಾರಿಯವರು ತಾ 31ರ ಸಂಜೆ ಬಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು

"ಅಂತಹ ಸೂತ್ರಗಳು ಮುಸಲ್ಮಾನರಿಗೂ ಕೂಡ ಇಷ್ಟವೇ ವಿರೋಧಗಳನ್ನು ಎದುರಿಸಬೇಕಾಗುವುದು ಆ ವಿರೋಧಗಳನ್ನೆಲ್ಲಾ ಎದುರಿಸಿ ಅವರು ಕೆಲಸ ಮಾಡಬೇಕಾದೆ ಮುಸ್ಲಿಮರು ಇದು ಯಾವಲ್ಲಿ ಅಲ್ಪ ಸಂಖ್ಯಾತರೆಂದು ಸಂಗಡಿಲ್ಪಟ್ಟರೂ ಕೂಡ ಅವರ ಸಂಖ್ಯೆ ಜರ್ಮನಿಯ ಸ್ತ್ರೀ ವರ್ಗದ ಸಂಖ್ಯೆಗಿಂತಾ ಅಧಿಕವಾಗಿದೆ ಅದ್ದರಿಂದ ನಾವೀಗ ಬಿಡಿಸಬೇಕಾಗಿರುವ ಸಮಸ್ಯವು ಕೂಡಾ ಜಾಸ್ತಿದಾಗಿದೆ" ಎಂದು ರಾಜಾಜಿಯವರು ನುಡಿದರು

ಹಿಂದೂಗಳು ಭಾರತದ ಮುಸ್ಲಿಮರಲ್ಲಿ ಅಪನಂಬಿಕೆಯುದಕ್ಕಾದನೆಂದೂ ಅವರ ಕಲ್ಯಾಣವನ್ನು ಕೋರಿ ಅಧಿಕವಾಗಿ ಸರಿಗಣಿಸಬೇಪಡಬೇಕೆಂದೂ ರಾಜಾಜಿ ಹಿಂದೂಗಳನ್ನು ಪ್ರಾರ್ಥಿಸಿದರು

—oo—

ಮಹದೇಶ್ವರಂತೆ ಬೇಕಾಸೇವೆ ಮಾಡಿ.

ಅಲಹಾಬಾದ್ ವಿದ್ಯಾರ್ಥಿಗಳು ಸಂಘದ ಆಶ್ರಯದಲ್ಲಿ ನಡೆದ ಸಭೆಯಲ್ಲಿ ವಾ ಕೆ. ಎನ್ ಕಟ್ಜುರವರು ಮಹಾತ್ಮಾ ಜೀವನ ಚಾರಿತ್ರ್ಯದ ಮುಖ್ಯತ್ವವನ್ನು ಕುರಿತು ಅ ಪೇಕ್ಷಿತವಾದ ಭಾಷಣವನ್ನು ಮಾಡಿದರು ಈ ಪಂಗತ ಮಹಾತ್ಮಾ ಜೆಸಾಯಾಯರು ಮಹಾತ್ಮಾ ಗಾಂಧಿಯವರಿಗೆ ಶ್ರೇಷ್ಠರಾದ ಮಹಾ ಶಿಷ್ಯರಾಗಿದ್ದರು. ಗುರುವನ್ನು ಸಹಜವಾಗಿ ಶ್ರದ್ಧಿಸಿ ಪೂಜಿಸಿ ಮೆಚ್ಚಿದ ಶಿಷ್ಯರು ಮಹಾತ್ಮಾ ಜೀವಂತ ರಾಗಿರುವಾಗಲೂ ಸಾಯಂ ಸಿದ್ಧಾಸರೂ, ಸುಸ್ಕೃತಿದ್ದ ಪಶ್ಚಿಕೊಯ್ಯೋಗಿಯೂ ಆಗಿದ್ದರು. ಭಾರತದ ಚರಿತ್ರೆಯಲ್ಲಿ ಅವರ ಹೆಸರು ಸ್ಥಿರವಾಗಿ ನಿಲ್ಲುತ್ತದು. ಹಂಡಿತ ಜವಾಹರಲಾಲ ನೆಹರೂರವರಂತೆ ಈ ಸಮಯದಲ್ಲಿ ಇದ್ದವರಿಗೆ ಅವರು ವಿಷಯಗತ ವೈಪಾಯಿಯಂತರ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿಸುತ್ತಿದ್ದರು. ಪಂಡಿತ ನೆಹರುರವರು ನಿರಂತರ ಪ್ರಸಂಶಯವಿಗೆ ಸಹೋದರರಂತೆ ಇದ್ದರು. ಸಾರ್ವಜನಿಕರಿಗು ಮಹದೇಶ್ವರಾಯಿಯಂತೆ ನೀವೇ ಪೆ ಮಾಡಬೇಕು ಮಾರ್ಜನ ಧಾರಾಯಿಯವರು ತಮ್ಮ ಗುರುಗಳಾದ ಮಹಾತ್ಮಾ ಗಾಂಧಿಯವರ ಸೇವೆಯನ್ನು ಕೊನೆಯ ವರೆಗೂ ಶ್ರದ್ಧಾಭಕ್ತಿಪೂರ್ವಕವಾಗಿ ನೆರವೇರಿಸಿ ಅವರ ಸನ್ನಿಧಿಯಲ್ಲಿಯೇ ಪರಂಧಾಮವನ್ನೈದಿದರು" ಎಂದು ಶ್ರೀ ಕಟ್ಜುರವರು ನುಡಿದರು

—oo—

KODAGU MERCARA, (Coorg).

ಕೊಡಗು

ಸಂಪಾದಕರು-ಶ್ರೀ ಪಿ. ಸಿ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೫ | ತಾರೀಕು ೧೫—೯—೧೯೪೪ನೇ ಶುಕ್ರವಾರ. | ಸಂಚಿಕೆ ೧೫

ಗಾಂಧಿ ಜಿನ್ನಾ ಮಾತುಕತೆ.

ಇಡೀ ಜಗತ್ತೆ ಮುಂದೆ ನೋಡುತ್ತಿದ್ದ ಭಾರತದ ಮಹಾವ್ಯಕ್ತಿಗಳಾದ ಗಾಂಧಿ-ಜಿನ್ನಾರವರ ಭೇಟಿಯು ತಾ. 9-9-44ರ ಸಾಯಂಕಾಲ 4 ಗಂಟೆಗೆ ಪ್ರಾರಂಭವಾಯಿತು. ಭೇಟಿಯು ಇನ್ನೂ ಮುಂದರಿಯುತ್ತಿದೆ.

ಗಾಂಧೀಯವರು ಜಿನ್ನಾರವರ ಭೇಟಿ ತೆಗೆದುಕೊಳ್ಳಕೂಡದೆಂದು ಹಿಂದೂ ಮಹಾಸಭೆಯವರು ಸೂಚಿಸಿದ್ದರಷ್ಟೆ. ಇದರ ಆಶ್ರಯದಲ್ಲಿ ಅಖಿಲ ಭಾರತ ಪಾಕಿಸ್ತಾನ ವಿರೋಧ ಪಕ್ಷವೊಂದಾಗಿ ಅದರ ಕಾರ್ಯದರ್ಶಿಗಳಾದ ಶ್ರೀ ಕಾಟೆಯವರು ಗಾಂಧೀಯವರ ಆಶ್ರಮದ ಮುಂದೆ ಕುಳಿತು ಜನರೊಡನೆ ಸತ್ಯಾಗ್ರಹ ಮಾಡತೊಡಗಿದರು. ಈ ಸತ್ಯಾಗ್ರಹಿಗಳ ಗಲಭೆ ಜೋರಾಗತೊಡಗಿತು. ಬಳ್ಳಿಯ ಮುಸ್ಲಿಮರು ಸಹ ಹಿಂದೂ ಮಹಾಸಭೆಯ ಈ ನೀತಿಗೆ ವಿರುದ್ಧ ಕಾರ್ಯಕ್ರಮ ಕೈಕೊಳ್ಳಬೇಕೆಂದು ಪರ್ಯಾಲೋಚಿಸುತ್ತಿದ್ದರಂತೆ. ಅಷ್ಟರಲ್ಲಿ ಆಲ್ಲಿಯ ಜಿಲ್ಲಾ ಪೊಲೀಸ್ ಸುಪರಿಂಟೆಂಡೆಂಟರು ಪಾಗೆ ಪ್ರದರ್ಶನಮಾಡಲಿಕ್ಕೆ ಕೂಡದೆಂದೂ, ಆಲ್ಲಿಯ ಶಾಂತಿಭಂಗವಾಗುವಂತಿದೆಯೆಂದೂ, ಆಲ್ಲೇ ಕೋಮುವಾರು ಘರ್ಷಣೆಯಾಗುವ ಚಿಕ್ಕೆಯಿದೆಯೆಂದೂ, ಆದ್ದರಿಂದ ತಮ್ಮ ಪ್ರದರ್ಶನವನ್ನು ನಿಲ್ಲಿಸಬೇಕೆಂದೂ ಕಾಟೆಯವರಿಗೆ ನೋಟೀಸು ಕೊಟ್ಟರು. ಆ ಮಟು ಆದನ್ನು ಉಲ್ಲಂಘಿಸಿದ್ದರಿಂದ ಆ ಸಲುವನ್ನು ಪೊಲೀಸರು ಕೆಲವು ಅನುಯಾಯಿಗಳೊಡನೆ ದಸ್ತಗಿರಿ ಮಾಡಿದರು. ದಸ್ತಗಿರಿ ಮಾಡಿದ ನಂತರ ಆ ಜಾಗವೆಯಿಸುವಾಗ ತಾಟೆಯವರ ಉಡಿಪಿನೊಳಗೆ ಉದ್ದವಾದ ಕತ್ತಿಯೊಂದಿರುವುದು ಕಂಡು ಬಂದಿದೆ.

ಮಹಾತ್ಮ ಗಾಂಧಿಯವರು ತಮ್ಮ ಪರಿವಾರದವರೊಡನೆ ತಾ. 9 ರಲ್ಲಿ ಬೊಂಬಾಯಿಗೆ ಬಂದರು. ಗೈಲು ಬರಲು 3 ಗಂಟೆಗಳ ವಿಳಂಬವಾಗಿತ್ತು. ಬೊಂಬಾಯಿಯ ಮೇಯರರು, ಬುಲಾಬಾಯಿ ದೇಸಾಯಿ, ಸರೋಜಿನಿ ದೇವಿ, ಬಿ. ಜಿ. ಖೇರ್, ಡಾ. ಗಿಲ್ಡರ್ ಮೊದಲಾದವರು ರೈಲ್ವೆ ನಿಲ್ದಾಣದಲ್ಲಿ ಕಾದಿದ್ದು ಆವರನ್ನು ಸ್ವಾಗತಿಸಿದರು.

ತಾ. 9ರ ಸಾಯಂಕಾಲ 4 ಗಂಟೆಗೆ ಜಿನ್ನಾ ಗಾಂಧಿ ಭೇಟಿ ಪ್ರಾರಂಭವಾಯಿತು. ಮೂರು ಗಂಟೆಗಳ ತಾಲ ಮಾತುಕತೆ ನಡೆದು ತಾ. 11ರ ಸಾಯಂಕಾಲ 5-30 ಗಂಟೆಯಿಂದ ಪುನಹ ಮಾತುಕತೆ ಪ್ರಾರಂಭಿಸುವಡೆಯು ನಿಶ್ಚಯಿಸಲಾಯಿತು. ಪ್ರಥಮ ದಿನ ನಡೆದ ಮೂರು ಗಂಟೆಗಳ ಮಾತುಕತೆಯಲ್ಲಿ ಮಹಾತ್ಮ ಗಾಂಧಿಯವರು ರಾಜಗೋಪಾಲಾಚಾರಿಯವರ ಯೋಜನೆಯನ್ನು ಕೂಲಂಕುಶವಾಗಿ ಜಿನ್ನಾರವರಿಗೆ ವಿವರಿಸಿ ಹೇಳಿದರಂತೆ. ಜಿನ್ನಾರವರು ಪ್ರಾಮುಖ್ಯ ವಿಚಾರಗಳನ್ನು ಬರೆದಿಟ್ಟುಕೊಂಡಿರುವರಂತೆ. ಆ ವುಗಳನ್ನು ಪುನಹ ವಿವೇಚಿಸಿ ನೋವಾವರನ ಮಾತುಕತೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿರುವರಂತೆ. ತಾ. 10 ಆದಿತ್ಯವಾರವಾಗಿ ರಂಜಾನಿನ 21 ನೇ ದಿನವಾದ್ದರಿಂದ ಆ ದಿನ ಭೇಟಿಯಿಡಲಿಲ್ಲ. ಪ್ರಥಮ ದಿನದ ಭೇಟಿ ಆಳೆದು ಈ ಬೃಹದ್ವ್ಯಕ್ತಿಗಳು ಹೊರಬಂದಾಗ ಇಬ್ಬರೂ ಹರ್ಷಚಿತ್ತರಾಗಿದ್ದರಂತೆ. ಜಿನ್ನಾರವರ ಮನೆಯ ಆವರಣದಲ್ಲಿ ತುಂಬಿದ್ದ ಪತ್ರಿಕಾ ಪ್ರತಿನಿಧಿಗಳನ್ನು ನೋಡುತ್ತ, ಗಾಂಧಿಜಿಯವರು 'ಏನು ಬೇಕಾದರೂ ಜಿನ್ನಾರವರನ್ನು ಕೇಳಬೇಕೆಂದು' ನಗುವಿನಿಂದ ಹೇಳಿದರಂತೆ. ಅವರು ಹೊರಗೆ ಬಂದೊಡನೆಯೇ ಹಲವಾರು ಭಾವಚಿತ್ರ ಗ್ರಹಣಯಂತ್ರಗಳ ಕಟಕಟ ಶಬ್ದವೂ ಜನರ ಕಾತುರವೂ ದೃಷ್ಟಿಗೋಚರವಾಯಿತಂತೆ.

ಭೇಟಿಗೆ ನಿಶ್ಚಿತವಾದ ಸಮಯಕ್ಕೆ ಸರಿಯಾಗಿ ಮೊದಲಿನ ತನ್ನ ಉಡುಪಿನಲ್ಲಿ ಅರ್ಧನಗ್ನ ಗಾಂಧಿಯವರು ಜಿನ್ನಾರವರ ಮನೆಗೆ ಬಂದರಂತೆ. ಜಿನ್ನಾರವರು ಜೆನ್ನಾಗಿ ಇಸ್ತ್ರಿಮಾಡಿದ ಅರಸಿನ ಬಣ್ಣದ ಸಿಲ್ಕ್ ಸೂಟ್ ಧರಿಸಿ, ಕೆಂಪು ಟೈ ಕಟ್ಟಿದ್ದರಂತೆ. ಗಾಂಧೀಜಿಯವರು ಜಿನ್ನಾರವರ ಹೆಗಲಿನ ಮೇರೆ ಕೈ ಹಾಕಿ ಕಟ್ಟಿಕೊಂಡರಂತೆ.

ಮಾತುಕತೆಯಲ್ಲಿ ಏನಾಗಿದೆ, ಒಪ್ಪಂದದ ಸಾಧ್ಯತೆಯಿದೆಯೇ ಎಂಬುದು ತಿಳಿದುಬಂದಿರುವುದಿಲ್ಲ. ತಾ. 11 ರ ಭೇಟಿಗಾಗಿ ಇಬ್ಬರೂ ತಯಾರಿ ಮಾಡಿಕೊಳ್ಳುತ್ತಿರುವರಂತೆ. ಪ್ರಥಮ ದಿನದ ಭೇಟಿಯಲ್ಲಿದ್ದ ಸರ್ವ ವಿಷಯಗಳನ್ನೂ ಗಾಂಧಿಯವರು ರಾಜಗೋಪಾಲಾಚಾರಿಯವರಿಗೆ ಹೇಳಿರುವರಂತೆ. ಈ ಭೇಟಿಯ ಸಂದರ್ಭದಲ್ಲಿ ಅತ್ಯಂತ ಸಂತೋಷದಲ್ಲಿರುವ ವ್ಯಕ್ತಿಯೆಂದರೆ ರಾಜಾಜಿಯವರಂತೆ. ಎರಡು ವರ್ಷಗಳ ಹಿಂದೆ ತಾನು ಈ ಯೋಜನೆಯನ್ನು ಮುಂದೆ ಇಟ್ಟಾಗ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಅದನ್ನು ನಿರಾಕರಿಸಲು ಯಾವ ಯೋಜನೆಗಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯತನವನ್ನು ಬಲಿಕೊಟ್ಟಿದ್ದೋ ಆ ದೇ ಯೋಜನೆಯು ಚರ್ಚೆ ಇಂದು ಆಗುತ್ತಿರುವಾಗ ಆನಂದವಾಗುವದು ಸ್ವಾಭಾವಿಕವಲ್ಲವೇ?

ಯುದ್ಧಕ್ಕೆ ಸೇರುವ ಮೊದಲು.

ಜರ್ಮನಿಯು ಗುಪ್ತಚಾರರ ನಾಯಕನಾದ ಹೆನ್ರಿಚ್ ಹಿಮ್ಲೆರ್ ರಣರಂಗಕ್ಕೆ ತೆರಳುವ 18 ವರ್ಷದ ತ್ರಿಯದವರಿಗೆಲ್ಲ 'ನೊದಲು ಮದುವೆಯಾಗಿ ಮಕ್ಕಳಾದ ಮೇಲೆ ರಣಭೂಮಿಗೆ ಹೋಗಿ' ಎಂದು ಬೋಧಿಸುತ್ತಿದ್ದಾನೆ. ಕಾರಣವಿಷ್ಟೆ: 'ತಾನಿನ ಯುದ್ಧದಲ್ಲಿ ಪರಾಭವವಾದರೂ, ಇಂದಿನ ಯೋಧರ ಮಕ್ಕಳು ನಾಳೆಯ ಯುದ್ಧವನ್ನು ಗೆಲ್ಲಬಲ್ಲರು.' ಪ್ರತಿಯೊಂದು ಜರ್ಮನ್ ಸಂಸಾರದಲ್ಲೂ ಸರಾಸರಿ ನಾಲ್ಕು ಮಕ್ಕಳಿರಬೇಕೆಂದು ಜರ್ಮನ್ ಸೈನ್ಯಾಧಿಕಾರಿಗಳು ಸೂಚಿಸಿದ್ದಾರೆ. ಇದಕ್ಕೆ ಕಾರಣ: '1944ರಲ್ಲಿ ಹುಟ್ಟಿದ ಪ್ರತಿಯೊಬ್ಬ ಆರೋಗ್ಯವಂತನಾದ ಹುಡುಗ 1963 ರಲ್ಲಿ ವೀರ ಯೋಧನಾಗಬಲ್ಲ'

—೦೦—

೫ ವರ್ಷದ ಯುದ್ಧದಲ್ಲಿ ಬ್ರಿಟಿಷ್ ರಾಜ್ಯ ಕ್ಕಾದ ಹಾನಿ.

ಇಂದಿನ ಮಹಾಯುದ್ಧವಾರಂಭವಾದಾಗಿನಿಂದ ಇಂದಿನ ವರೆಗೆ ಬ್ರಿಟಿಷ್ ಸಾಮ್ರಾಜ್ಯದ ಸೇನೆಗಳಿಗಾದ ಸಾವು-ನೋವುಗಳ ಅಂಕೆಗಳನ್ನು ಕೆಳಗೆ ಕೊಡಲಾಗಿದೆ.

ಯುದ್ಧದಲ್ಲಿ ಸತ್ತವರು 2,42,995; ಕಾಣೆಯಾದವರು 80,603; ಗಾಯಗೊಂಡವರು 3,11,500; ಯುದ್ಧ ಕೈದಿಗಳು 2,90,866, ನಾಪತ್ತೆಯಾಗಿ ಹೊಂದಿದ್ದ 33,673 ಜನರಿಗೆ ಸಾವನ್ನೋವುಗಳಾಗಿದ್ದು ಅವರಲ್ಲಿ 29,381 ಸತ್ತಿರುವರು. ಏಷ್ಯಾ ಖಂಡದಲ್ಲಿ 1,32,092 ನಾಗರಿಕರಿಗೆ ಸಾವನ್ನೋವುಗಳಾಗಿವೆ. ಇವರಲ್ಲಿ ಸತ್ತವರು 56,195 ಜನರು. ಒಟ್ಟಿಗೆ ಎಲ್ಲ ಕಾರಣಗಳಿಂದ ಸಾವನ್ನೋವುಗಳಿಗೀಡಾದವರ ಸಂಖ್ಯೆ 10 ಲಕ್ಷ ನಿರುತ್ತದೆ.

—೦೦—

ಬಂಗಾಳದಲ್ಲಿ ಮತ್ತೆ ಕ್ಷಾಮದ ಸೂಚನೆ.

ಬಂಗಾಳದಲ್ಲಿ ಮತ್ತೆ ಕ್ಷಾಮ ಬರುವ ಸೂಚನೆಗಳಿವೆ. ಬ್ರಿಟಿಷ್ ಸರ್ಕಾರವು ಕೂಡಲೇ ಆಹಾರ ಸರಬರಾಜು ಮಾಡುವ ವ್ಯವಸ್ಥೆ ಮಾಡಬೇಕು ಎಂದು ಇಂಡಿಯಾ ಸರ್ಕಾರವು ಬ್ರಿಟಿಷ್ ಸರ್ಕಾರಕ್ಕೆ ಒತ್ತಾಯಿಸುತ್ತಿದೆ ಎಂದು ಗೊತ್ತಾಗಿದೆ.

ಇಂಡಿಯಾಕ್ಕೆ ಅಮೇರಿಕಾದಿಂದಲೂ ಆಹಾರ ಸರಬರಾಜು ಆಗಬೇಕು. ಜಹಜುಗಳನ್ನು ಒದಗಿಸಬೇಕು ಎಂದು ಅಮೇರಿಕ ದೆಲ್ಲಿ ಕಚೇರಿಯ ಸೆಕ್ರೆಟರಿ ಮಿ. ಎಲ್. ಬೆರಿಯವರು ವಾಷಿಂಗ್‌ಟನ್ನಿಗೆ ತಿಳಿಸಿದ್ದಾರೆ. ಮತ್ತು ಇವರು ಈಗ ವಾಷಿಂಗ್‌ಟನ್ನಿಗೆ ಹೋಗಿದ್ದಾರೆ. ಅಧ್ಯಕ್ಷ ರೂಸ್‌ವೆಲ್ಟರಿಗೆ ಎಲ್ಲವನ್ನು ಹೇಳಬಹುದು.

—೦೦—

ಭಾರತದ ವಿಭಜನೆಗೆ ವಿರೋಧ.

ಅಖಂಡ ಹಿಂದೂಸ್ಥಾನ್ ಆಶುವಳಿಯ ಮುಂಬಯಿ ಸಮ್ಮೇಳನವು ಕೆಲವಿಯಲ್ಲಿ ಅಳೋಬರ್ 7 ಮತ್ತು 8 ರಲ್ಲಿ ನಡೆಯುವಂತೆ ಡಾ. ವಿ. ಡಿ. ಸಾವರ್‌ಕರ್‌ರವರು ಏರ್ಪಡಿಸಿರುತ್ತಾರೆ. ಸಮ್ಮೇಳನದ ಅಧ್ಯಕ್ಷರ ಹೆಸರನ್ನು ಹಿಂದಳಿಂದ ತಿಳಿಸಲಾಗುವುದು. 'ಧಾರ್ಮಿಕ ವಿಷಯವೂ ಯಾವ ಕಾರಣದಿಂದಲೂ ವಿಭಾಗವಾಗ ಕೂಡದು. ಹಿಂದೂಸ್ಥಾನದ ಐಕ್ಯತೆಗೆ ಭಂಗ ಬರಕೂಡದು' ಎಂಬ ಒಂದೇ ನಿರ್ಣಯವು ಚರ್ಚೆಗೆ ಬರುವುದು. ಸಮ್ಮೇಳನಕ್ಕೆ ಶ್ರೀಗಳಾದ ಡಾ. ಜಿ. ಎಸ್. ಆರುಂಡೇಲ್, ಎಸ್. ಜಿ. ಕೇಳ್ಕರ್, ಡಾ. ಶ್ಯಾಮಪ್ರಸಾದ ಮುಖರ್ಜಿ, ಡಾ. ಮುಂಜೆ, ಸರ್. ಜೆ. ಪಿ. ಶ್ರೀವಸ್ತವ, ಡಾ. ವರದರಾಜುಲು ನಾಯಿಡು, ವೊಸ್ಟರ್ ಕಾರಾಸಿಂಗ್, ಭಾಯಿ ಪರಮಾನಂದ್, ಸರ್ ಟೋಟೊರಾಮ ಮೊದಲಾದವರು ಬರುವ ನಿರೀಕ್ಷೆಯಿದೆ.

ಕೊಡಗು

ತಾ. ೧೫-೯-೧೯೪೪ನೇ ಶುಕ್ರವಾರ

ಫಿಲಿಪ್ಸರ ಸ್ಪಷ್ಟ ನುಡಿ.

ಇಡೀ ಜಗತ್ತಿನ ಜನಸಂಖ್ಯೆಯ ಏಳನೆಯ ಒಂದು ಭಾಗವಾಗಿರುವ ಭಾರತೀಯರಿಗೆ ಸ್ವಾತಂತ್ರ್ಯವಿಲ್ಲ. ಭರತಖಂಡದ ಸ್ವಾತಂತ್ರ್ಯ ಪ್ರಶ್ನೆಯು ಇಡೀ ಜಗತ್ತಿನ ಸಮಸ್ಯೆ. ಈ ಅಖಂಡ ರಾಷ್ಟ್ರಕ್ಕೆ ಸ್ವಾತಂತ್ರ್ಯವಿಲ್ಲವೆಂದರೆ ಇಡೀ ಜಗತ್ತಿಗೆ ಸ್ವಾತಂತ್ರ್ಯವಿಲ್ಲ; ಮಾನವಲೋಕಕ್ಕೆ ಸುಖವಿಲ್ಲ. ನಲುವತ್ತು ಕೋಟಿ ಭಾರತೀಯರು ಗುಲಾಮರಾಗಿರುವಾಗ ಜಗತ್ತಿನ ಸ್ವಾತಂತ್ರ್ಯಕ್ಕೆ ಬೆಲೆಯೇನುಂಟು? ಕಳೆದ ಮಹಾಯುದ್ಧದ ಕಾಲಕ್ಕೆ ಭಾರತೀಯರು ನಾನಾರೀತಿಯಿಂದ ಬ್ರಿಟಿಷರಿಗೆ ಸಹಾಯವನ್ನೀಡಿದರು. 'ಯುದ್ಧದಲ್ಲಿ ಸಹಾಯಮಾಡಿರಿ; ನಿಮಗೆ ಸ್ವಾತಂತ್ರ್ಯ ಕೊಡುತ್ತೇವೆ; ನಿಮ್ಮ ತಲೆಯ ಮೇಲೆ ರಾಜಕಿರೀಟವಿಡುತ್ತೇವೆ' ಎಂದು ಬ್ರಿಟಿಷರು ಅಂದರು. ಧಾರ್ಮಿಕ ಭಾರತವು ಈ ಮಾತಿಗೆ ಬೆಲೆಕೊಟ್ಟು ಅಸಾಧ್ಯತ್ಯಾಗಮಾಡಿ, ಅನುಪಮ ಜೀವಿತತ್ತು ವಿಜಯವನ್ನು ಗಳಿಸಲು ಸಹಾಯಕರಾದರು. ಬ್ರಿಟಿಷರು ಮುಕ್ತಕಂಠದಿಂದ ಭಾರತೀಯರು ಸಹಾಯವನ್ನು ಪ್ರಶಂಸಿಸಿದರು. ಆದರೆ ಭಾರತೀಯರಿಗೆ ದೊರೆತುದೇನು? ಗುಲಾಮ ಭಾರತವು ಇನ್ನಷ್ಟು ಗುಲಾಮಗಿರಿಯಲ್ಲಿ ಬೀಳಬೇಕಾಯಿತು. ಅಸಹನೀಯ ಅವಮಾನಗಳನ್ನು ಅನುಭವಿಸಬೇಕಾಯಿತು.

ಆದರೆ ಪುನಹ ಮತ್ತೊಂದು ಯುದ್ಧ ಪ್ರಾರಂಭವಾಗಿ ಬ್ರಿಟಿಷರು ಯಥಾವಿಧಿ ಹಿಂದೀಯರ ಸಹಾಯ ಕೋರಿದ್ದಾರೆ. ಮನಸ್ಸಿಲ್ಲದ ಹಿಂದೀಯರ ಮೇಲೆ ಒತ್ತಾಯದ ಪ್ರಭಾವ ಬೀರಿ ಸಹಾಯಪಡೆಯುತ್ತಿದ್ದಾರೆ. ಪರರ ಈ ಸಾರಿ ಬ್ರಿಟಿಷರ ಹಿಡಿತ ಇನ್ನಷ್ಟು ಬಿಗಿಯಾಗಿರುವದು ಕಂಡುಬರುತ್ತದೆ. ಕಳೆದ ಯುದ್ಧದ ಕಾಲಕ್ಕೆ ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡುವೆವೆಂಬುವ ಕೋರಿಕೆಯ ಭರವಸೆಯನ್ನಾದರೂ ಇತ್ತಿದ್ದರು. ಆದರೆ ಈ ಸಾರಿ, ಯುದ್ಧಾನಂತರ ಭಾರತವು ಸ್ವತಂತ್ರವಾಗುವದೆಂದರೂ ನಿರ್ದಿಷ್ಟವಾದ ಯಾವ ಭರವಸೆಯನ್ನೂ ಕೊಡಲು ಅವರು ಮುಂದೆ ಬಂದಿರುವದಿಲ್ಲ. ಇದಲು ಭಾರತದ ಬಗ್ಗೆ ತಪ್ಪಾನುಭೂತಿ ತೋರಿಸುವ 'ರಾಷ್ಟ್ರಗಳನ್ನು ಗದರಿಸಿ ಮೂಲೆಯಲ್ಲಿ ಕೂರಿಸುವ ಪ್ರಯತ್ನ ಮಾಡಿದೆ.

ಭಾರತದ ಪರಿಸ್ಥಿತಿಯನ್ನು ತಿಳಿದಾಕೊಳ್ಳಲು ಅಮೇರಿಕಾದ ಪ್ರೆಸಿಡೆಂಟ್ ರೂಸ್‌ವೆಲ್ಟರ ಪ್ರತಿನಿಧಿಯಾಗಿ ಭಾರತಕ್ಕೆ ಬಂದಿದ್ದ ವಿಲಿಯಂ ಫಿಲಿಪ್ಸರು ಇಲ್ಲಿಯ ಸ್ಥಿತಿಯಾವಲೋಕನ ಮಾಡಿ ಒಪ್ಪಿಸಿ ವರದಿಯು ಬ್ರಿಟಿಷರ ಕಣ್ಣನ್ನು ಕೆಂಪಗೆ ಮಾಡಿದೆ. ಫಿಲಿಪ್ಸರು ತಮ್ಮ ರವದಿಯಲ್ಲಿ ಕಾಂಗ್ರೆಸಿನವರು ಕೇಳುತ್ತಿದ್ದ ವಿಷಯಗಳನ್ನೇ ಸಾರಿದ್ದಾರೆ. ಹಿಂದೂಸ್ಥಾನದಲ್ಲಿ ನಡೆಯುತ್ತಿರುವ ಬ್ರಿಟಿಷರ ಧೋರಣೆಯು ಸ್ವಾರ್ಥಪರವಾದುದು. ಯುದ್ಧದ ಪ್ರಮುಖ ಧ್ಯೇಯವೆನ್ನುವ ಪ್ರಜಾ ಪ್ರಭುತ್ವ ತತ್ವದ ಸಮೂಧಿ ಹಿಂದೂದೇಶದಲ್ಲಾಗಿಡೆಯೆಂದಿದ್ದಾರೆ. ಹಿಂದೂಸ್ಥಾನದ ಜನತೆಯಲ್ಲಿ ವಿಶ್ವಾಸವನ್ನು ಹುಟ್ಟಿಸಲು ಬ್ರಿಟಿಷರು ತಮ್ಮ ನೀತಿಯನ್ನು ಬದಲುಗೊಳಿಸಿ ಇಂತಿಷ್ಟು ಅವಧಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡಲಾಗುವದೆಂದು ಸಾರುವದಲ್ಲದೆ ಈ ಘೋಷಣೆಯು ಯಥಾರ್ಥ ಸದುದ್ದೇಶಗಳಿಂದ ಕೂಡಿದ್ದೆಂಬುದನ್ನು ಸೂಚಿಸಲು ಕೂಡಲೇ ತಾತ್ಕಾಲಿಕವಾದ ಪ್ರಾತಿನಿಧಿಕ ಸರಕಾರವನ್ನು ಸ್ಥಾಪಿಸಬೇಕೆಂದು ಫಿಲಿಪ್ಸರು ಸಾರಿದ್ದಾರೆ. 'ಕಂಡದ್ದು ಹೇಳಿದರೆ ಕೆಂಡದಂಥಾ ಕೋಪ'ವೆಂಬ ನಾಣ್ನುಡಿಯಂತೆ ಬ್ರಿಟಿಷರು ಕುಪಿತರಾಗಿದ್ದಾರೆ. ಭಾರತದ ವಿಷಯದಲ್ಲಿ ಯಾರೂ ಕೈಹಾಕಬೇಕಾದ ಅಗತ್ಯವಿಲ್ಲವೆಂದು ಎಲ್ಲರ ಬಾಯಿಮುಚ್ಚಿಸಿದ್ದಾರೆ.

ಹಿಂದೂದೇಶದ ಮೇಲೆ ಸಹಾನುಭೂತಿ ತೋರಿಸುವವರನ್ನು ಗದರಿಸುವ ಕಾಲ ಕಳೆಯುತ್ತಾ ಬಂದಿದೆ. ಹಿಂದೂದೇಶದ ಸಮಸ್ಯೆಯು ಸರ್ವತೋಮುಖ ಸಮಸ್ಯೆಯಾಗಿದೆ. ಜರ್ಮನಿಯು ಹತಾಶವಾಗಿ ಹಿಂದೆಗೆಯುತ್ತಿದೆ ಸಹಜ. ಆದರೂ ಜಪಾನರನ್ನು ಗೆಲ್ಲಬೇಕಿದೆ. ಜಪಾನರ ಯುದ್ಧದಲ್ಲಿ ಹಿಂದೂಸ್ಥಾನದ ಮತ್ತು ವಿಶ್ವಾದ ಸಹಾಯವು ಬ್ರಿಟಿಷರಿಗೆ ಅತ್ಯಗತ್ಯ. ಆದ್ದರಿಂದ ಫಿಲಿಪ್ಸರ ಸ್ಪಷ್ಟವಾಣಿಯನ್ನು ಗೌರವಿಸಿ ಹಿಂದೂಸ್ಥಾನದ ಹೃತ್ಪೂರ್ವಕ ಬೆಂಬಲವನ್ನು ಪಡೆಯಲು ಮತ್ತು ತಮ್ಮ ಕೀರ್ತಿಯನ್ನು ಉಳಿಸಲು ಬ್ರಿಟಿಷರು ಮುಂದೆ ಬರಬೇಕು.

ಒಳದೇಶ.

ಕೊಡಗು ಕಿತ್ತಳೆ ವ್ಯವಸಾಯಗಾರರ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಅಕ್ಟೋಬರ್ ತಾ. 6ರಲ್ಲಿ ವೀರಾಜಪೇಟೆಯಲ್ಲಿ ಕೊಡಗು ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯುವದಾಗಿ ತಿಳಿಯಬರುತ್ತದೆ.

ಚೀಫ್ ಕಮಿಷನರು ತಾ. 15 ರಲ್ಲಿ ನಾಪೋಕ್ಲಿಗೆ ಹೋಗಿ ತಾ. 16 ಮತ್ತು 17ರಲ್ಲಿ ವೀರಾಜಪೇಟೆಯಲ್ಲಿದ್ದು ಮತ್ತು ತಾ. 18ರಲ್ಲಿ ಪೊನ್ನಂಪೇಟೆಗೆ ಹೋಗಿ ವಾಪಸು ಮಡಿಕೇರಿಗೆ ಬರುವರೆಂದು ತಿಳಿಯಬಂದಿದೆ.

ಮಿಸ್ ಕೋದಂಡ ಸೀತಾನಂಜಸ್ಸ ಬಿ. ಎ. ಯವರು ಇಂಗ್ಲಿಷಿನಲ್ಲಿ ಹೆಚ್ಚಿನ ಅಂಬರುಗಳನ್ನು ಪಡೆದುದಕ್ಕೆ ಮದ್ರಾಸಿನ ಗವರ್ನರರ ಅಧ್ಯಕ್ಷತೆಯಲ್ಲಿ ನಡೆದ ಪದವಿಧಾನ ಸಮಾರಂಭೋತ್ಸವದಲ್ಲಿ ಕೊರವಂಡ ಅಪ್ಪಯ್ಯ ದೇವಯ್ಯ ವಿದ್ಯಾರ್ಥಿವೇತನ ನಿಧಿಯಿಂದ ಕೊಡಲ್ಪಟ್ಟ ಬಹುಮಾನವು ಅವರಿಗೆ ದೊರೆತಿದೆ.

ವೀರಾಜಪೇಟೆ ವಿದ್ಯಾರ್ಥಿನಿ ಭವನಕ್ಕೆ ಒಬ್ಬಳು 'ಡೆಪ್ಯುಟಿ' ವಾರ್ಡರಳು ಬೇಕಾಗಿದ್ದಾಳೆಂದೂ, ಅಪೇಕ್ಷೆಯಿರುವವರು ಈ ತಿಂಗಳ ಅಂತ್ಯದೊಳಗೆ ಅರ್ಜಿ ಬರಕೊಳ್ಳಬಹುದೆಂದೂ, ಹೆಚ್ಚಿನ ಮಾಹಿತಿಯನ್ನು ಬರೆದು ತಿಳಿದುಕೊಳ್ಳಬಹುದೆಂದೂ ತಿಳಿಯಬಂದಿದೆ.

ಅಖಿಲ ಕೊಡವ ಸಮಾಜದ ಕೇಂದ್ರ ಸಮಿತಿಯ ಮೀಟಿಂಗು ಅಧ್ಯಕ್ಷರಾದ ಶ್ರೀ ಮಾತಂಡ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆಯಲ್ಲಿ ನಡೆದು ಹಿಂದೂ ಲಾ ಸಮಿತಿಯವರು ಕಳುಹಿಸಿದ ಕರಡು ಮಸೂದೆಯನ್ನು ಅಜಮಾಯಿಸಿ ವಿಮರ್ಶಿಸಲು ದ. ಮತ್ತು ಉ. ಕೊಡಗುಗಳಿಗೆ ಒಂದೊಂದರಂತೆ ಉಪಸಮಿತಿಗಳನ್ನು ನೇಮಿಸಿರುವದಲ್ಲದೆ, ಕೊಡಗು ದೇಶದಲ್ಲಿ ದನಗಳ ರೋಗ, ಅಳುಗಳ ತೊಂದರೆ ಮೊದಲಾದ ಅಡಚಣೆಗಳಿಂದ ರೈತರಿಗೆ ತೊಂದರೆಯಾಗಿ ಬೆಳೆಯು ಕಡಿಮೆಯಾಗುವ ಸಂದರ್ಭವಿರುವದರಿಂದ ಬತ್ತದ ಬೆಲೆಯನ್ನು ಗಾಡಿಗೆ ರೂ. 150 ಕಡಿಮೆಯಿಲ್ಲದೆ ಏರಿಸಬೇಕೆಂಬ ಗೊತ್ತುವಳಿಯನ್ನೂ ಮಾಡಲಾಯಿತು.

ಯುದ್ಧದ ಐದನೆ ವರ್ಷದ ಉತ್ಸವವನ್ನು ಚೀಫ್ ಕಮಿಶನರವರ ಅಧ್ಯಕ್ಷತೆಯಲ್ಲಿ ತಾ. 11-9-44ರಲ್ಲಿ ಮಡಿಕೇರಿಯಲ್ಲಿ ಆಚರಿಸಲಾಯಿತು. ಆ ಸಮಯಕ್ಕೆ ಸರಿಯಾಗಿ ಮಡಿಕೇರಿ ಹೈಸ್ಕೂಲಿನ ಬಾಲಕರು ನೇಟಿಯ ಬೀದಿ ಬೀದಿಗಳಲ್ಲಿ ರಾಷ್ಟ್ರಗೀತೆಗಳನ್ನು ಹಾಡುತ್ತಾ, ಗಾಂಧಿ-ಜಿನ್ನಾ ಭೇಟಿ ಯಶಸ್ವಿಯಾಗಲೆಂದು ಹಾರೈಸುತ್ತಾ ಶಿಸ್ತಿನಿಂದ ಮೆರವಣಿಗೆ ಹೊರಟು ರಾಷ್ಟ್ರೀಯ ದಿನವನ್ನಾಚರಿಸಿದರು.

ರಿಸಿಡೆಂಟ್ ಸೆಷಿಕಲ್ ಆಫೀಸರಾಗಿದ್ದ ಶ್ರೀ ಕೋದಾಂಡ ಮೇದಪ್ಪನವರನ್ನು ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಲಾಗಿದೆ.

ಮಡಿಕೇರಿಯಲ್ಲಿ ಪ್ಲೇಗು ದಿನೆ ದಿನೇ ಹೆಚ್ಚಾಗುತ್ತಿದೆ. ಈ ವಾರ ನಾಲ್ಕು ಜನರಿಗೆ ಹೊಸದಾಗಿ ಅಂಟಿದೆ. ಇದರೊಂದಿಗೆ ಮಹದೇವಪೇಟೆಯಲ್ಲಿ ಸಿಡುಬೂ ವ್ಯಾಪಕವಾಗಿರುವದಾಗಿ ತಿಳಿಯಬಂದಿದೆ.

ಬರುವ ಅಕ್ಟೋಬರ್ ತಾ. 16 ನೇ ಸೋಮವಾರ ರಾತ್ರಿ 2 ಗಂಟೆ 10 ನಿಮಿಷಕ್ಕೆ ತುಲಾಸಂಕ್ರಮಣ ತೀರ್ಥೋದ್ಭವವಾಗುವದೆಂದು ತಿಳಿಯಬಂದಿದೆ.

ಕಾನ್ಸ್ಪರದಲ್ಲಿರುವ ಕೊಡವ ಸಂಘದವರು ಕೈಲುಮುಹೂರ್ತ ಹಬ್ಬವನ್ನು ತಾ. 3-9-44 ರಲ್ಲಿ ಆಚರಿಸಿದರೆಂದೂ, ಆ ಸಂದರ್ಭದಲ್ಲಿ ಆಟೋಟಗಳ ಸ್ಪರ್ಧೆಯನ್ನು ಏರ್ಪಡಿಸಿ ಜಯಶೀಲರಾದವರಿಗೆ ಬಹುಮಾನಗಳನ್ನು ಹಂಚಿದರೆಂದೂ ತಿಳಿಯಬರುತ್ತದೆ.

ಬರುವ ಅಕ್ಟೋಬರ್ ತಾರೀಕು 2 ರಲ್ಲಿ ಆಗುವ ಮಹಾತ್ಮ ಗಾಂಧಿಯವರ 75 ನೇ ಹುಟ್ಟು ಹಬ್ಬದ ಉತ್ಸವದ ಸಂದರ್ಭದಲ್ಲಿ ವೀರಾಜಪೇಟೆ ಮಹಿಳಾಸಮಾಜ ಮಂದಿರದಲ್ಲಿ ಹಿಂದಿ, ನೂಲುವದು, ಸಂಗೀತ ಮೊದಲಾದ ವಿಷಯಗಳ ಸ್ಪರ್ಧೆಯೊಂದನ್ನು ಏರ್ಪಡಿಸಿ ಬಹುಮಾನ ಹಂಚುವ ಏರ್ಪಾಡು ಮಾಡುವರಾಗಿ ತಿಳಿಯಬಂದಿದೆ.

ಕಸ್ತೂರ್ ಬಾ ಸ್ಮಾರಕ ನಿಧಿಯ ಸಹಾಯಾರ್ಥವಾಗಿ ತಾ. 16-9-44 ನೇ ಶನಿವಾರ ಸಾಯಂಕಾಲ 5 ಗಂಟೆಗೆ ಕೊಡಗು ಜಮಾನ್ದಾರರ ಸಂಘದ ಹಾಲ್‌ನಲ್ಲಿ 'ಕುರ್ಗ್‌ನ್ಸ್ಟಾರ್' ಶ್ರೀ ಚಿಕ್ಕೇರ ಅಪ್ಪಯ್ಯನವರಿಂದ ಸಂಗೀತವೂ, ಹರಿಕಥಾ ಶ್ರೇಷ್ಠ ಶ್ರೀ. ಬಿ. ಕೆ. ಗೋವಾಲದಾಸರ ಹರಿಕಥೆಯೂ ನಡೆಯಲಿದ್ದು. ಟಿಕೇಟು ರೂ. ಒಂದಾಣೆ ಎಂದು ಇಡಲಾಗಿದೆ. ಸರ್ವರೂ ಬಂದು ಪ್ರೋತ್ಸಾಹಿಸಿ ನಿಧಿಗೆ ಸಹಾಯಮಾಡಲು ಸಂದರ್ಭವಿದೆ.

ಸಾರ್ವಜನಿಕ ಸಭೆಗಳು.

ರೈತರ ಜೀವನದ ಖರ್ಚೂ, ವ್ಯವಸಾಯದ ವೆಚ್ಚವೂ ಈವರ್ಷ ವಿಪರೀತ ವಿರುವುದರಿಂದಲೂ, ಮಳೆಯು ಅಭಾವದಿಂದ ಬೆಳೆ ಕಡಿಮೆಯಾಗಿರುವುದರಿಂದಲೂ ಬತ್ತದ ಬೆಲೆಯನ್ನು ಗಾಡಿಗೆ ರೂ. 150ಕ್ಕಾದರೂ ಏರಿಸಬೇಕೆಂದು ಈ ತಾ. 5ರಲ್ಲಿ ಶ್ರೀ ಎಸ್. ಎನ್. ರಾಮಚಿಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಫ್ರೇಜರ್‌ಪೇಟೆಯಲ್ಲಿ ನಡೆದ ಸಾರ್ವಜನಿಕ ಮೀಟಿಂಗಿನಲ್ಲಿ ತೀರ್ಮಾನಿಸಿ, ಶ್ರೀ ರಾಮಚಿಟ್ಟರನ್ನು ಸರಕಾರಕ್ಕೆ ಈ ಬಗ್ಗೆ ಡೆಪ್ಯುಟೇಶನ್ ಹೋಗಲು ಪ್ರತಿನಿಧಿಯಾಗಿ ಆರಿಸಲಾಯಿತು. ಹಾಗೆಯೇ ತಾ. 10ರಲ್ಲಿ ಗೋಣಿಕೊಪ್ಪಲ್ಲಿ ಶ್ರೀ ಪಿ. ವಿ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ಕೊಳ್ಳಿಮಾಡ ಕರುಂಬಯ್ಯನವರನ್ನೂ, ತಾ. 11ರಲ್ಲಿ ಹುದಿಕೇರಿಯಲ್ಲಿ ಶ್ರೀ ಕಾಡ್ಯಮಾಡ ಐಯ್ಯಮ್ಮನವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನಲ್ಲಿ ಶ್ರೀ ಕಾಕಮಾಡ ಗಣಪತಿಯವರನ್ನೂ, ತಾ. 13ರಲ್ಲಿ ವೀರಾಜಪೇಟೆಯಲ್ಲಿ ಶ್ರೀ ಬಿದ್ದಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ಕೋಳೆರ ಕರುಂಬಯ್ಯನವರನ್ನೂ ಮತ್ತು ತಾ. 14ರಲ್ಲಿ ಮೂರ್ನಾಡಿನಲ್ಲಿ ಶ್ರೀ ಪಾಂಡಂಡ ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನಲ್ಲಿ ಶ್ರೀ ಪಾಂಡಂಡ ಮುದ್ದಪ್ಪನವರನ್ನೂ ಪ್ರತಿನಿಧಿಗಳಾಗಿ ಆರಿಸಲಾಯಿತು.

—oo—

ರಣಭೇರಿ.

ಯುದ್ಧದ ವಿಚಾರವಾಗಿ ಪ್ರಕಟವಾಗುತ್ತಿರುವ ಯಾವ ಮಾಹಿತಿಯನ್ನೇ ನೋಡಲಿ; ಯಾವ ರೇಡಿಯೋವನ್ನೇ ಕೇಳಿಲಿ ವಿಸ್ತಾರ ಮುನ್ನಡೆಯ ವಿಚಾರವಲ್ಲದೆ ಬೇರಿಲ್ಲ. ಸರ್ವತ್ರಿಕವಾದ ರಣರಂಗಗಳಲ್ಲಿ ಸರ್ವತೋಮುಖವಾದ ವಿಸ್ತಾರಮುನ್ನಡೆಯು ಕೇಳಿಬರುತ್ತಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ವಾರ್ತೆಗಳಷ್ಟಲ್ಲಿ, ರೇಡಿಯೋ ಸೂಚಕ ಬರುವ ವಾರ್ತೆಗಳಾಗಲೀ ಏಕಮುಖವಾದ ವಾರ್ತೆಗಳು ಎಂದು ಹೇಳುವವರಿದ್ದಾರೆ. ಕೇವಲ ವಿಸ್ತಾರಪಕ್ಷದ ವಾರ್ತೆಗಳ ವಿನಹ ಬೇರೆ ವರ್ತಮಾನಗಳು ದೊರೆಯಲಾರವು ಎನ್ನುವವರೂ ಇದ್ದಾರೆ. ವಿಸ್ತಾರು ಊಹಿದ್ದೇ ಶಂಕ, ಆದನ್ನು ಅಲ್ಲವೆನ್ನಲು ಅನರೊಳಗಿರುವರಿಗೆ ಎಲ್ಲಿಂದ ಸಾಧ್ಯ ಎನ್ನುವವರೂ ಇದ್ದಾರೆ. ಈಗ ಪ್ರಚಾರವಾಗುತ್ತಿರುವ ವಾರ್ತೆಗಳಲ್ಲಾ ನಿಜವೇ? ಬಲಾಢ್ಯವೆಂದೆನಿಸಿದ್ದ ಜರ್ಮನಿಯು ಇಷ್ಟು ಸುಲಭದಲ್ಲಿ ಸೋಲನ್ನು ಒಪ್ಪಿಕೊಳ್ಳುತ್ತಿರುವದೇ ಎಂದು ಶಂಕಿಸುವವರೂ ಇದ್ದಾರೆ. ವಿಸ್ತಾರು ತಮ್ಮ ಜಯಗಳನ್ನು ದೊಡ್ಡದು ಮಾಡಿ ಪ್ರಚಾರ ಮಾಡುತ್ತಿರುವದೆಂದು ಊಹಿಸಿಕೊಂಡರೂ ಈ ಕಳೆದ ಕೆಲವು ದಿನಗಳ ಘಟನೆಗಳ ವಿಸ್ತಾರಿಗೆ ನಿಶ್ಚಯವಾಗಿಯೂ ಜಯದೊರೆಯುತ್ತಿವೆ ಯೆಂಬುದನ್ನು ನಿರ್ವಹಿಸುತ್ತಿವೆ. ವಿಸ್ತಾರು ಪ್ರಚಾರ ಮಾಡುತ್ತಿರುವ ವಾರ್ತೆಗಳನ್ನು ನಿರಾಕರಿಸಿದರೂ ಫ್ರಾನ್ಸಿನಲ್ಲಿ ಯುದ್ಧ ನಡೆಯುತ್ತಿದೆಯೆಂಬುದನ್ನು ನಿರಾಕರಿಸಲಾಗುತ್ತದೆಯೇ? ಜರ್ಮನ್ನರು ಪ್ಯಾರಿಸ್ಸಿಗೆ ಬಂದಿರುವರೆಂಬುದನ್ನು ಅಲ್ಲಗಳೆಯಲಾಗುತ್ತದೆಯೇ? ಇವುಗಳನ್ನು ಅಲ್ಲಗಳೆಯಲಾಗದೆಂದ ಮೇಲೆ ಜರ್ಮನರ ಸ್ಥಿತಿಯು ಶೋಚನೀಯವಾಗುತ್ತಾ ಬರುತ್ತಿದೆಯೆಂಬುದನ್ನು ಒಪ್ಪಲೇಬೇಕಾಗುವದು.

ಜರ್ಮನರು ಯಾಕೆ ಈ ರೀತಿ ಹಿಂದೆ ಸರಿಯುತ್ತಾರೆ. ಯಾವ ಕಡೆಯಲ್ಲೂ ಪ್ರತಿಭಟಿಸದೆ ಹಿಂತೆಗೆದುಕೊಳ್ಳುವದರ ಗೂಢವೇನು? ಎಂಬುದು ಬಿಡಿಸಲಾರದ ಜನಸ್ಯೆಯಾಗಿದೆ. ಶತ್ರುವನ್ನು ಎದುರಿಸಲಾರದಷ್ಟು ಜರ್ಮನಿಯ ಶಕ್ತಿಯನ್ನು ಕಳೆದುಕೊಂಡಿದೆಯೆಂದರೆ ವಾಚಕರೇ ನಂಬಲಿಕ್ಕಿಲ್ಲ. ಯಾಕೆಂದರೆ ಇಡೀ ಜಗತ್ತನ್ನು ತಲ್ಲಣಗೊಳಿಸಿದ ಜರ್ಮನಿಯ ಧೀರತನದ ಮುದ್ರೆಯು ವಾಚಕರ ಸ್ಮೃತಿಯಿಂದ ಇನ್ನೂ ಮಾಯವಾಗಿರುವದಿಲ್ಲ. ಇರಲಿ, ಹೇಗೂ ಜರ್ಮನರಿಗೆ ಗಂಡಾಂತರದ ದಿನಗಳು ಸನ್ನಿಹಿತವಾಗುತ್ತಿವೆ.

ಫ್ರಾನ್ಸಿನ ಯುದ್ಧವನ್ನು ಪರೀಕ್ಷಿಸಿದರೆ ಅದರಲ್ಲಿ ಮೂರು ಮುಖ್ಯ ಭಾಗಗಳನ್ನು ಕಾಣಬಹುದು. ಪ್ರಥಮವಾಗಿ ಫ್ರಾನ್ಸಿನೊಳಗೆ ನುಗ್ಗಿ ಆಮೇಲೆ ಬಿಲ್ಗಿನರೊಡಗೂಡಿ ಶೆರ್‌ಬರ್ಗ್ ಮೊದಲಾದ ಬಂದರುಗಳನ್ನು ವಶಪಡಿಸಿಕೊಂಡ ಮೇಲೆ ಬ್ರಿಟಿಷರ ಕೇಂದ್ರ ಸೈನ್ಯ, ಸಂಟ್ ಲೋ, ಮೊದಲಾದವುಗಳನ್ನು ವಶಪಡಿಸಿಕೊಂಡ ಮೇಲೆ ಸೈನ್ಯಗಳನ್ನು ಹಿಮ್ಮೆಟ್ಟಿಸಿದ ಸಂತರ್ಭದಲ್ಲಿ ಸೈನ್ಯವು ಮುಂದುಗಡೆ ಬ್ರೆಸ್ಟ್ ದ್ವೀಪಕಲ್ಪವನ್ನು ವಶಪಡಿಸಿಕೊಳ್ಳುವದಕ್ಕಾಗಿ ಮುಂದರಿದು ಜರ್ಮನ್ ಗಡಿಗೆ ಸಾಗತೊಡಗಿದ್ದು. ಈ ಮೂರು ಪರ್ವಗಳನ್ನು ದಾಟಿ ಈಗ ವಿಸ್ತಾರ ಸೇನೆಯು ಜರ್ಮನರ ಎಲ್ಲೆಯ ಪಲವನ್ನು ಸುತ್ತುಗಟ್ಟಿ ಹಿಮ್ಮೆಟ್ಟಿಸಿ ವಿಜಯ ಪತಾಕೆ ಹಿಡಿದು ಮುನ್ನಡೆಯುತ್ತಿದ್ದಾರೆ. ನಾರ್ಮಂಡಿ ಕದನ ಒಂದರಲ್ಲಿ 400000 ಜರ್ಮನರು ಹತರಾದರಂತೆ. ಯುದ್ಧದ ಇಂದಿನ ನಿಜವಾದ ಸ್ಥಿತಿ ಹೇಗಿದೆ? ಇಡೀ ವಿಸ್ತಾರ ಸೇನೆಯ ಮಹಾಪ್ರವಾಹವು ದಾಪಿಯಲ್ಲಿ ಸಿಕ್ಕಿಲ್ಲವೆನ್ನೂ ಕೊಚ್ಚಿಕೊಂಡು ಜರ್ಮನಿಯ ಕಡೆ ಹರಿಯುತ್ತಿದೆ. ಈಗಾಗಲೇ ವಿಸ್ತಾರು ಜರ್ಮನಿಯೊಳಗನುಗ್ಗಿ ಏಮು ಮೈಲುಗಳಷ್ಟು ಮುಂದರಿದಿದ್ದಾರೆ ಜರ್ಮನರ ಮಹಾಗೋಡೆ ಸೀಜ್‌ಫ್ರೈಡ್ ಲೈನು ಈ ಪ್ರವಾಹವನ್ನು ತಡೆಯುವಂತೆ ಕಂಡು ಬರುವದಿಲ್ಲ. 60 ಲಕ್ಷ ಟನ್ ಸೀಮೆಂಟಿನಿಂದ ನಿರ್ಮಿಸಲ್ಪಟ್ಟ ಈ ಗೋಡೆಯನ್ನು ಒಂದು ಮಾರ್ಗವಾಗಿ ವಿಸ್ತಾರು ಬೇಧಿಸಿ ಒಳನುಗ್ಗಿದ್ದಾರೆ. ಈ ವ್ಯೂಹದಲ್ಲಿ 17,000 ಸುಸಜ್ಜಿತ ಕಾಂಕ್ರೀಟಿನ ಕೋಟೆಗಳವೆ., ಈ ಗೋಡೆಯನ್ನು ಕಟ್ಟಲು ಜರ್ಮನರು 1936 ರಲ್ಲಿ ಪ್ರಾರಂಭಿಸಿ 1938 ರಲ್ಲಿ ಪೂರೈಸಿದರು ಈ ಲೈನಿನಲ್ಲಿ ಕೋಟೆಯೊಳಗೆ ಕೋಟೆ, ಕೋಟೆಯ ಹಿಂದೆ ಮತ್ತೊಂದು ಕೋಟೆ, ಅದರ ಹಿಂದೆ ಮತ್ತೊಂದು ಕೋಟೆ ಈ ರೀತಿ ಅನೇಕ ಪ್ರಾಕಾರಗಳಿಂದ ಕೂಡಿದೆ. ಈ ಕೋಟೆಯು 30 ಮೈಲುಗಳ ಅಗಲವಾಗಿದೆ. ಗುಪ್ತರೀತಿಯ ಕೋಟೆಕೊತ್ತಲ, ಜೇಡರ ಬಲೆಯಂತೆ ಹರಡಿರುವ ಸುರಂಗಮಾರ್ಗಗಳು ನೂರಾರು ಆಡಿ ಆಳವಾಗಿ ರೂಡಿಸಲ್ಪಟ್ಟಿರುವ ಕಾಂಕ್ರೀಟ್ ಅದ್ದಗೋಡೆಗಳು ಸೀಜ್‌ಫ್ರೈಡ್ ಗೋಡೆಯನ್ನು ದುರ್ಗಮಸ್ಯೂಹವನ್ನಾಗಿ ಮಾಡಿವೆ. ಇಂಥಾ ಗೋಡೆಯು ಏಶ್ರಸ್ಯವಾಹದ ಮುಂದೆ ಬಿರುಕು ಬಿಟ್ಟ ವರ್ತೆ ಒಂದಿದೆ.

ವಿಸ್ತಾರ ಸೇನೆಗಳು ಈ ರೀತಿ ಮುಂದರಿಯುತ್ತಿರಲು ಇಂಗ್ಲೆಂಡಿನ ಎಲೆ ಜರ್ಮನರು ಪ್ರೇತವಿಮಾನಗಳ ಸುತ್ತು ಕಂಬಳಿಯು ತೋಪುಗಳ ಧಾಳಿ ನಡೆದೇ ಇದೆ. ಇದನ್ನು ನಿಲ್ಲಿಸಲು ವಿಸ್ತಾರ ಸೇನೆಯೊಂದು ಜನರಲ್ ಡೆಸ್ಟೆಯವರ ನಾಯಕತ್ವದಲ್ಲಿ ಫ್ರಾನ್ಸ್ ಕರಾವಳಿಗಾಗಿ ಸಾಗುತ್ತಿದೆ. ಕರಾವಳಿಯ ಯಾ ಬ್ಯಾಟರಿಗಳು, ಪಟ್ಟಗಳೆಲ್ಲ ಪೂರ್ ಜರ್ಮನರ ವಶವಲ್ಲಿಯೇ ಇವೆ. ಇವುಗಳನ್ನು ವಶಪಡಿಸಿಕೊಂಡರೆ ಇಂಗ್ಲೆಂಡಿನ ವೇಲಿನ ಜರ್ಮನ್ ಪ್ರೇತವಿಮಾನಧಾಳಿಯೂ ನಿಂತೇಹೋದಂತಾಗುತ್ತದೆ.

ಈ ಪರಿಸ್ಥಿತಿಯನ್ನು ರಷ್ಯನರು ಪೂರ್ಣ ಪ್ರಯೋಜನಕ್ಕೆ ತಂದುಕೊಳ್ಳದರು. ಇತ್ತ ಪೋಲೆಂಡಿನಲ್ಲಿ ವಾರ್ಸಾವನ್ನು ವಶಪಡಿಸಿದರು ಎಂಬ ವಾರ್ತೆಗಳು ಬಂದು ಎರಡು ವಾರಗಳಾದವು. ರಷ್ಯನರು ಅಲ್ಲಿಂದ ಮುಂದೆ ಬಂದಂತೆ ಕಂಡುಬರುವದಿಲ್ಲ. ಜರ್ಮನರ ಪ್ರತಿಭಟನೆ ಜೋರಾಗಿ ನುಸ್ಸಿದೆಯೆಂ ನಿಂತಿರುವದೋ ಯಾವದೇ ಯಾವುದಾದರೂ ಕಾರಣದಿಂದಲೋ ಎಂಬುದು ತಿಳಿದುಬಂದಿರುವದಿಲ್ಲ. ಹೇಗೂ ಯೂರೋಪಿನ ಯುದ್ಧ ಜನರಲ್ ಈಶನ್ ಹೋವರರಂತೆ 1944 ರ ಅಂತ್ಯದಲ್ಲಿ ಮುಗಿದೀತೆ ಎಂಬುದನ್ನು ಪರ್ಯಾಲೋಚಿಸಿದರೆ ಈಗ ಅದಕ್ಕೆ ಉತ್ತರ ಹೇಳಲು ಸಾಧ್ಯವಾಗಲಾರದು. ವಿಸ್ತಾರು ಜರ್ಮನಿಯೊಳಗೆ ನುಗ್ಗಿ ಒಂದು ವಾರವಾಗಬೇಕು. ಜರ್ಮನರು ಯಾವ ರೀತಿ ಪ್ರತಿಭಟಿಸುವರೆಂಬುದನ್ನು ನೋಡಿದರೆ ಗೊತ್ತಾಗುವದು. ಯೂರೋಪಿನ ಯುದ್ಧದ ಕಡೇ ಅಂಕವು ಬಂದಿಹಿದು ಭಾರತೀಯರಾದ ನಮಗೆ ಸಂತೋಷಪಡುವ ಕಾರಣವಿಲ್ಲ. ಯಾಕೆಂದರೆ ನಮಗೆ ಸಂಬಂಧಿಸಿದ ಯುದ್ಧವು ಇನ್ನೂ ಮುಂದಕ್ಕೆ ಪ್ರಾರಂಭವಾಗಲಿದೆ. ಜಪಾನರನ್ನು ಮುರಿಯುವ ಯುದ್ಧದಲ್ಲಿ ಭಾರತವು ನಾನಾರೀತಿಯ ಎದುರುತೊಡರುಗಳಿಗೆ ಈಡಾಗಿ ನಾನಾರೀತಿಯ ಕಷ್ಟಗಳನ್ನನುಭವಿಸಬೇಕಾಗಿ ಬರಬಹುದು. ಆದ್ದರಿಂದ ಪಶ್ಚಿಮದ ಯುದ್ಧ ಅಂತ್ಯವಾಗಿ ಹಿಟ್ಲರನ ಪತನವಾಯಿತೆಂದರೆ ಯುದ್ಧ ಸಮ್ಮ ಭಾಗಕ್ಕೆ ಮುಗಿದಂತಾಗದು.

ನಂಬಿಕೆಗರ್ಹವಾದ ಸಂಖ್ಯೆಗಳು.

23ನೇ ತ್ರೈವಾರ್ಷಿಕ ಮೌಲ್ಯಗಣನೆ.

ಮೂರು ವರ್ಷಗಳ ಜಿಸ್ ಲಾಭ 1,50,88,092.

ವಿಮಾದಾರರ ಕ್ಷೇಮನಿಧಿ ೫4 ಲಕ್ಷ ಸೇರಿಸಿದೆ.

ಬೋನಸುಗಳು ಹೋಲ್ ಲೈಫ್ 1000ಕ್ಕೆ ವರ್ಷಕ್ಕೆ 12½%

ಎಂಡೋಮೆಂಟ್ .... 1000ಕ್ಕೆ ವರ್ಷಕ್ಕೆ 10½%

'ಓರಿಯಂಟಲ್'

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ

ಸ್ಥಾಪನೆ ಭಾರತದಲ್ಲಿ 1874] [ಮುಖ್ಯ ಏಜೆನ್ಸಿ–ಬೊಂಬಾಯಿ

ಕಾಪೆ–'ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೇರೇಡ್, ಬೆಂಗಳೂರು.

ಇನ್ಸ್‌ಪೆಕ್ಟರರ ಆಫೀಸು—೬. ಸದಾಶಿವ ರೋಡು, ಮಂಗಳೂರು.

ಗಾಂಧಿ-ಜಿನ್ನಾ ಭೇಟಿ.

ಗಾಂಧಿ ಜಿನ್ನಾರವರ ಭೇಟಿಯು ಮುಂದರಿಯುತ್ತಾ ಇದೆ. ಈ ಭೇಟಿಯು ಇನ್ನೂ ಕೆಲವು ದಿನಗಳ ವರೆಗೆ ನಡೆಯಬಹುದೆಂದು ಅಂದಾಜುಮಾಡಲಾಗಿದೆ. ನಡೆದ ಮಾತುಕತೆಯ ವಿಚಾರವನ್ನು ಬಹು ಗೋಪ್ಯವಾಗಿಡಲಾಗಿದೆ. ಮಾತುಕತೆಯ ವಿವರವನ್ನು ಇಬ್ಬರೂ ಬರೆದು ಇಟ್ಟುಕೊಂಡಿರುವರಂತೆ. ಭೇಟಿಯೊಗ ಹೊರಬರುವಾಗ ಲಿರುವ ತಮ್ಮ ಮುಖಚರ್ಯೆಯು ಮೇಲೆ ಊಹಾಪೋಹಗಳನ್ನು ಮಾಡಿ ಸುಮ್ಮನೆ ವಿವಿಧ ವಿಚಾರಗಳನ್ನು ಪ್ರಕಟಿಸಬಾರದೆಂದು ಗಾಂಧೀಜಿಯವರು ಪತ್ರಿಕೋದ್ಯೋಗಿಗಳಿಗೆ ಎಚ್ಚರಿಸಿದ್ದಾರೆ. ತಾ. 13 ರ ದಿನದ ಭೇಟಿಯಲ್ಲಿ ಜಿನ್ನಾರವರು ಬಹುಧಾಗದ ಮಾತನ್ನಾಡಿದರಂತೆ. ಮಾತುಕತೆ ಎಷ್ಟು ದಿನಗಳ ವರೆಗೆ ನಡೆಯುವದೆಂದು ಸ್ಪಷ್ಟವಾಗಿ ಹೇಳಲು ಬರುವದಿಲ್ಲವೆಂದು ತಿಳಿದು ಬಂದಿದೆ.

ಈ ಮಾತುಕತೆಯು ಜಯಪ್ರದವಾದರೆ ಪ್ರಾಂತಗಳಲ್ಲಿ ಹೊಸ ಜುನಾವಣೆ ನಡೆದು, ಹೊಸ ನ್ಯಾಯಾಸನ ಸಭೆಗಳು ಮತ್ತು ಕೌನ್ಸಿಲುಗಳು ಕೆಲಸ ಮಾಡುವವೆಂದು ಊಹಿಸಲಾಗಿದೆ.

ವಾರ್ತೆಗಳು.

ದಿ. ಸಿ. ಎಫ್. ಏಂಡ್ರೂಸ್ ಸ್ಮಾರಕವೆಂದು ಕೂಡಿದ 5 ಲಕ್ಷ ರೂಪಾಯಿಗಳಲ್ಲಿ ಶಾಂತಿನಿಕೇತನದಲ್ಲಿ ಒಂದು ಆಸ್ಪತ್ರೆಯನ್ನು ತೆರೆಯಲು ಗೊತ್ತಾಗಿದ್ದು ಅದರ ಯೋಜನೆಯ ವಿವರಗಳೇಗ ಮಹಾತ್ಮರಿಡೆಗೆ ಬಂದಿವೆ. ಮಹಾತ್ಮ ಗಾಂಧಿಯವರು ನಿಧಿಯ ಹಣವನ್ನು ಹೆಚ್ಚು ಉಪಯುಕ್ತವಾಗಿ ಎಂತು ವ್ಯಯ ಮಾಡಬಹುದೆಂಬ ಬಗ್ಗೆ ತಮ್ಮ ಸಲಹೆ ಕಳಿಸಿರುವರು.

ಗುಜರಾಥದಲ್ಲಿ ನೆರೆಯಿಂದ ಪೀಡಿತರಾದವರ ಪರಿಹಾರಕ್ಕಾಗಿ 5 ಲಕ್ಷ ರೂಪಾಯಿಗಳನ್ನು ಕೂಡಿಸಬೇಕೆಂದು ಗುಜರಾಥ ಕಾಂಗ್ರೆಸ್ಸಿಗರು ನಿರ್ಧರಿಸಿದರು.

ಕಸ್ತೂರಿ ಬಾ ಸ್ಮಾರಕ ನಿಧಿ.

ಶ್ರೀ ಆರಮೇರಿ ನ್ಯಾಮುದ ಉದಿಯೂಂಡ, ನಾಯಕಂಡ, ಅಳಮಂಡ, ಪೊಯ್ಯಟ್ಟಿರ, ಬಾಚರ ಪೂಳಂಡ ವಂಸೆಯವರು	50
,, ಆಮ್ಮಣಕುಟ್ಟಿಂಡ ಗೆನಸತಿಯವರು	25
,, ಎಂ. 'ತಾರುಮತ್ತರವರು'	15
,, ಕೊಂಗೆಟ್ಟಿರ ಮುದ್ದಪ್ಪನವರು	10
,, ಮಿಸೆಸ್ ಜೋದಂಡ ಅಪ್ಪಯ್ಯನವರು	10
ಮಹಿಳಾ ಸಹಕಾರ ಸಮಾಜ, ವೀರಾಜಪೇಟೆ	10
ಶ್ರೀ ಕನ್ನಂಡ ಸಾಜಪ್ಪನವರು	5

3 ರೂ. ಕೊಟ್ಟವರು.

ಶ್ರೀ ಗಣಪತಿ ಮಲಚಿರ ಬೆಳ್ಯಪ್ಪ, ಕೊಡಂಜೇರ ಸುಬ್ಬಯ್ಯ, ಬೊಳ್ಳಚಿಟ್ಟಿರ ಅಚ್ಚಯ್ಯ ಇವರುಗಳು. ಈ ವರೆಗೆ ಒಟ್ಟು ರೂ. 9,213 ಆಸಿಯಾಗಿದೆ.

—೦೮—

ಧಾತುವೃದ್ಧಿ ರಸಾಯನ [ZANDU]

"ಧ್ಯಾಕ್ಷೋ—ಫಾಸ್‌ಫೋ—ಮೊಲ್ಫ್"

ಎಂದು ಖ್ಯಾತಿಹೊಂದಿರುವ ಡಾಕ್ಟರರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ

ಈ ರಸಾಯನ ಕಾಯಿಲೆಯಿಂದಲಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ಲೈಂಗಿಕ ನಿಸ್ಸತ್ವತೆಯಿಂದ ಸುಧಾರಿಸಿಕೊಳ್ಳುವವರಿಗೆ, ಬರ್ತಿಗೆ ಜಾಸ್ತಿ ವ್ಯಾಯಾಮಗಾರರಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ಪಥ್ಯಾಹಾರಿಗಳಿಗೆ, ಗೃಹಸ್ಥರಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಚರಾಗ್ನಿಯನ್ನು ಸರಿಪಡಿಸುವುದು. ಹೆದರಿಕೆ ಕಂಪನ್ನು ನಿವಾರಿಸುತ್ತದೆ, ನಾಲಿಗೆಗೆ ರುಚಿಯನ್ನುಂಟುಮಾಡುವುದು. ಇದರಲ್ಲಿ ನವೀನ ಶೋಧನೆಯಾದ ಎಲ್ಲಾ ವಿಧ ಮುದ್ದೆಗಳು ಕೊಬ್ಬು ರಕ್ತ ಆಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ

ಇದರಲ್ಲಿ ಇಲೆಕ್ಟ್ರಿಕ್ ಫಾಸ್‌ಫೋಮೊಲ್ಫ್, ಹೆಮೋಗ್ಲೋಬಿನ್, ಸೋಡಿಯಂ ಸಿಟ್ರೇಟ್ ಫಾಸ್ಫೇಟ್ ಪೆಪ್ಟನ್, ಸಾಲ್, ಸೊಲ್ಫ್ ಎಕ್ಸ್‌ಟ್ರಾಕ್ಟ್, ಜಾಸ್ಮಿನಮ ಮೊದಲಾದ ಪ್ರಸಿದ್ಧ ಔಷಧಿಗಳಂತೆ ಏದೇ ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ ಇದು ಎಲ್ಲಾ ಪ್ರಸಿದ್ಧ ಔಷಧ ಪಾಲುಗಳಲ್ಲಿದೆ

ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,

ಗೋಖಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

40) ಸ್ಥಾಪನೆ—೧೮೯೭.

೪೭ನೇ ವಾರ್ಷಿಕವ ರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೩,೩೭,೦೦೦ ರೂ. ಮೀರಿದೆ
	ಚಾಲ್ತಿಯಿರುವ ವಿಮೆಗಳು	೪೪,೪೮,೪೮,೦೦೦ ,, ,,
	ಆಸ್ತಿ	೬,೫೦,೪೬,೧೦೦ ,, ,,
ಕಂಪೆನಿಯ ಅದಿಯಲ್ಲಿ ಕೊಟ್ಟ ಕ್ಲೈಮುಗಳು		೮,೫೮,೦೦,೦೦೦ ,, ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೊಂಬಾಯಿ

"ಟ್ರೂ ಪಿ ಕ್ಲೆಲ್"

ಕಂಪೆನಿಯಲ್ಲಿ ವಿಮೆ ಮಾಡುವದೇ ಯೋಗ್ಯವೆಂದು ನಿನ್ನ 1944 ರ ತೀರ್ಮಾನವಾಗಲಿ

1943ರಲ್ಲಿ ನೂತನ ವಿವೂ ಮೌಲ್ಯ ರೂ 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಜೀರ: ಹೊಸ ದಿಲ್ಲಿ] [ಹೆಚ್ಚಿನ ವಿವರಗಳಿಗೆ ಈ ಪತ್ರಿಕೆಗೆ ಬರೆಯಿರಿ:—

ಯೂ. ಅಚ್ಚಣ್ಣ, ಮಡಿಕೇರಿ. ಅಥವಾ ಯಂ. ರಂಗನಾಥಶೆಟ್ಟಿ ಬ್ರಾಂಚ್ ಮೇನೇಜರ್, ಮಂಗಳೂರು.

35)

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿ., ಮಡಿಕೇರಿ

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1931ರಲ್ಲಿ ಸ್ಥಾಪಿತವಾಗಿದೆ

ವಸೂಲಾದ ಶೇರ್ ಮೊಬಲಗು 95,060, ಜನವರಿಯಂದ ತೆಗೆದಿಡಲಾದ 2,24,755; ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿವಾಜಿಟ್ಟು 2,02,925

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿವಾಜಿಟ್ಟುದಾರರಿಗೆ ಅವರ ಡಿವಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ 1 ವರ್ಷದಿಂದ 3 ವರ್ಷಗಳ ವರೆಗೆ ಶೇಕಡ 2. 3 ವರ್ಷಗಳಿಂದ 5 ವರ್ಷಗಳ ವರೆಗೆ 2½. 5 ವರ್ಷಗಳಿಂದ 10 ವರ್ಷಗಳ ವರೆಗೆ 3½ 10 ಮತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿವಾಜಿಟ್ಟುಗಳಿಗೆ ಶೇ 0-8-0.

ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ

ಯು. ಗಣಪತಿ, ಕಾರ್ಯದರ್ಶಿ.

Edited, Printed and Published by P. I. Bellippa at 'Kodagu' Press, Mercara, for 'Kodagu' Ltd.

ಫಿಲಿಪ್ಸರ ಪತ್ರದ ಪ್ರಕರಣ.

'ಹಿಂದೂ ಸ್ಥಾನವು ಜಪಾನರ ವಿರುದ್ಧ ಸಂಯುಕ್ತರಾಷ್ಟ್ರಗಳ ಯುದ್ಧದಲ್ಲಿ ಹಿಂದೂಸ್ಥಾನವು ಮಿತ್ರಪಕ್ಷವಾಗಿರುವುದೆಂಬುದು ಅಸಂಭಾವ್ಯ ವೆಂದು, ಹಿಂದೂಸ್ಥಾನವು ಜಪಾನೀಸರ ಬೆದರಿಕೆಯಿಂದ ಭಯಗ್ರಸ್ತವಾಗಿದೆ, ಸಮಾನುಭೂತಿ, ಸಹಾಯಯೋಗವಿರುವುದು ಅವಶ್ಯಕ ಎಂಬಾತನ ವಿರುದ್ಧ ಕೋಲಾಹಲದಲ್ಲಿ ನಾವು (ಅಮೇರಿಕನರು) ಸ್ವರ ಸುಮಸು ಹೊಗಳುಗುಟ್ಟು ಹೊರಬೇಕಾಗಿದೆ ಯಾಕೆಂದರೆ ಬ್ರಿಟಿಷರು ತೋರಿಕೆಯ ಸಹಾಯವನ್ನು ಮಾತ್ರ ಕೊಡುವಂತೆ ಕೋರುತ್ತಾರೆ"

'ಹಿಂದೂಸ್ಥಾನವು ಕೇವಲ ಕಾಯಿದೆ ದೃಷ್ಟಿಯಿಂದ ಈಗಿನ ಯುದ್ಧದಲ್ಲಿ ಎಳೆಯಲ್ಪಟ್ಟಿದೆ ಹಿಂದೂಸ್ಥಾನೆದಲ್ಲಿರುವ ಕಾಂಗ್ರೆಸ್ ಮಂಡಲದ್ದೆಯು ಮಿಂಪರನ್ನು ಕೂಡ ಬ್ರಿಟಿಷಾಕಾರವಾಗಿಯೂದರೂ ಕೇಳಿವೆ ಹಿಂದೂಸ್ಥಾನವನ್ನು ಯುದ್ಧಾಸಕ್ತ ರಾಷ್ಟ್ರವೆಂದು ಬ್ರಿಟನ್ನು ಸಾರಿತು ಹಿಂದೂಸ್ಥಾನ ಸರಕಾರದಲ್ಲಿ ತಮ್ಮದೇನೂ ಅಂಗವಿಲ್ಲವೆಂದೂ, ಆದ್ದರಿಂದ ಈಗಿನ್ ಯುದ್ಧದ ಹೊಣೆಯು ತಮ್ಮ ಮೇಲಿನಿಲ್ಲ ಇರುವಷ್ಟಿಲ್ಲವೆಂದೂ ಹಿಂದೀಯರ ಭಾವನೆಯಾಗಿದೆ 'ಸಂಯುಕ್ತ ರಾಷ್ಟ್ರಗಳ ಯುದ್ಧೋದ್ದೇಶಗಳಿಗೆ ತಮ್ಮದೇನೂ ಸಂಬಂಧವಿಲ್ಲದ್ದರಿಂದ ತಾವು ವಿಕಲ್ಪಾಗಿ ಹೋರಾಡಬೇಕು !" ಎಂದು ಹಿಂದೀಯರು ಕೇಳುತ್ತಾರೆ ಬ್ರಿಟನ್ ಮುಖ್ಯ ಮಂತ್ರಿಗಳಾದ ಚರ್ಚಿಲ್ಲರು 'ಅಟ್ಲಾಂಟಿಕ್ ಚಾರ್ಟರ್'ನ ತತ್ವಗಳು ಹಿಂದೂಸ್ಥಾನಕ್ಕೆ ಅನ್ವಯವಾಗುವುದಿಲ್ಲವೆಂದು ಹೇಳಿದ್ದಾರೆ ಆದ್ದರಿಂದ ಈ 'ಚಾರ್ಟರ್'ವು ಕೇವಲ ಬಿಳೀ ಜನರ ಸಲುವಾಗಿರುವುದೆಂದು ಹಿಂದೀಯರು ತಿಳಿದುಕೊಂಡರೆ ಅ ಸ್ವಾಭಾವಿಕವಾದದ್ದೆನಿಸಲಾರದು

ಈ ಯುದ್ಧದಲ್ಲಿರುವ ಹಿಂದೀ ಸೈನ್ಯವು ಬಾಡಿಗೆಯಾಗಿರುವುದು ಮಿಡ್ಡಿಗಾಗಿ ಯುದ್ಧ ಮಾಡುವ ಸೇನೆಯೂಗಿದ ಜಸ್ಟಿಲ್ಲೆಲ್ಲರು ತಮ್ಮ ಸಭೆಯಲ್ಲಿ ತಮ್ಮ ನಿಸಂಚಿನೆಯನ್ನು ವ್ಯಕ್ತ ಮಾಡಿರುವರು ಹಿಂದೀ ಸೈನ್ಯಾಧಿಕಾರಿಗಳ ಪ ನೋಧೈರ್ಯವು (Morale) ತೃಪ್ತಿಕರವಾಗಿಲ್ಲವೆಂದು ಅವರ ಅಭಿಪ್ರಾಯವಾಗಿದೆ ಜನ ಸಾಮಾನ್ಯರು ಈಗಿನ ಯುದ್ಧದ ಕಡೆಗೆ ನೋಡುವ ದೃಷ್ಟಿಯಂತೂ ಕೆಟ್ಟುಹೋಗಿದೆ ದೇಶದಲ್ಲಿರುವ ಭಯಂಕರ ಬರಗಾಲ, ದಿನಾಲು ಹೆಲೆಯುತ್ತಿರುವ ಜೀವನದ ವೆಚ್ಚ ಹಾಗೂ ರಾಜಕೀಯ ಬಿಕ್ಕಟ್ಟು ಇವುಗಳಿಂದ ಜನತೆಯಲ್ಲಿ ಉದಾಸೀನತೆ, ಬೇಸರಿಕೆಗಳು ಕಂಡು ಬರುತ್ತವೆ ಹಿಂದೂಸ್ಥಾನದಲ್ಲಿ ಅನೇಕ ರಾಜಕೀಯ ಪಕ್ಷಭೇದಗಳಿದ್ದರೂ, ಬ್ರಿಟಿಷ ರಾಳಿಕೆಯಿಂದ ಸ್ವತಂಪ್ರರಾಗಬೇಕೆಂಬುದರಲ್ಲಿ ನೂಕ್ರಿ ಒಮ್ಮತವಿದೆ

ಇಂಥಾ ಅಸಮಾಧಾನಕರವಾದ ಪರಿಸ್ಥಿತಿಯಲ್ಲಿ ನಾವು ಸಕ್ಕಿ ಪೇಚಾಡುತ್ತಿದ್ದೇವೆ ಈ ಪರಿಸ್ಥಿತಿಯು ಶುಭಾಸಚೀಷವಾದರೆ ಒಂದೇ ಒಂದು ಉಪಾಯವಿದೆ ಈ ಯುದ್ಧದಲ್ಲಿ ಹಿಂದೀ ಜನತೆಯು ಸಂಯುಕ್ತ ರಾಷ್ಟ್ರಗಳ ಕೂಡ ಹೊಸೆಯನ್ನು ಹೊರ ಬೇಕೆಂದೂ ಆ ಬಗ್ಗೆ ಅವರಿಗೆ ನಾವು ಖಾತ್ರಿಗಳನ್ನು ಒದಗಿಸಿಕೊಡುವೆಂದೂ ಭಾರತೀಯರಿಗೂ ಗೊತ್ತಾಗಬೇಕು ಮುಂದೆ ಪ್ರಸಂಗದ ಪುನರ್ಸ್ಥಾಪನೆಯಲ್ಲಿ ಹಿಂದುಸ್ಥಾನಕ್ಕೂ ಸ್ಥಾನವಿಡೆಯಿಂಬುದು ಹಿಂದೀಯರಿಗೆ ಅನುಮಾನಕ್ಕಾಸ್ಪದವಿಲ್ಲದಂತೆ ಆದರೆ ಈ ವಿಷಯದಲ್ಲಿ ಅಲ್ಲಿಯ ಈಗಿನ ರಾಜಕೀಯ ಪರಿಸ್ಥಿತಿಯು ಅನುಕೂಲವಾಗಿಲ್ಲ ಹಿಂದೀಯರ ವಿಶ್ವಾಸವನ್ನು ಸಂಪಾದಿಸಬೇಕಾದರೆ ಬ್ರಿಟಿಷ್ ಸರಕಾರವು 'ಯುದ್ಧ ಮುಗಿದ ಕೂಡಲೇ ಸ್ವಾತಂತ್ರ್ಯ ಕೊಡಲಾಗುವುದೆಂದು ಹೇಳಿಕೆಯು ಬರಿ ಶುಷ್ಕ ಗಳಿಂದ ಕಾರ್ಯವಾಗದು ಬ್ರಿಟಿಷರು ಕೂಡಲೇ ಕಾರ್ಯ ಸನ್ನದ್ಧರಾಗಬೇಕು ಯುದ್ಧ ಮುಗಿದ ಇಂತಿಷ್ಟು ವರ್ಷಗಳಲ್ಲಿಯೇ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಡುವೆನೆಂಬ ಘೋಷಣೆಯನ್ನು ಬ್ರಿಟಿಷರಿಗೂ ಕೂಡಲೇ ಮಾಡಬೇಕು ಈ ಘೋಷಣೆಯು ಖಾನೂನಿಕತೆಯ ನಿರ್ದರ್ಶನವೆಂದು ಹಿಂದೂಸ್ಥಾನದಲ್ಲಿ ಸಮ್ಮಿಶ್ರ ಸಚಿವಸಂಪುಟವನ್ನು ಸ್ಥಾಪಿಸಿ ತಮಗೆ ಸಿಕ್ಕಿಷ್ಟವಾದ ಆಧಿಕಾರವನ್ನು ಬಿಡಬೇಕು

ನಮ್ಮ ಬಿಲಿಟರಿ ಪರಿಸ್ಥಿತಿಯ ಮಾಳಿಕನ ಹಿಂದೂಸ್ಥಾನದ ಭವಿಷ್ಯತ್ಕಾಲದ ಬಗ್ಗೆ ಆಸ್ಥೆ ಇರುವುದು ತಪ್ಪಲ್ಲವೆಂದು ತಿಳಿಸಿರುತ್ತದೆ ಹಿಂದೂಸ್ಥಾನದ ಸಂಬಂಧದಲ್ಲಿ ಅಮೇರಿಕದವರಿಗೆ ಏನೂ ಸಂಬಂಧವಿಲ್ಲವೆಂದು ಬ್ರಿಟಿಷರು ಹೇಳುವದು ಯೋಗ್ಯವಾಗಿಲ್ಲವಂತೆ ಜಪಾನಿನ ವಿರೋಧ ಹೋರಾಟದಲ್ಲಿ ನಾವು ಮುಖ್ಯ ಪಾತ್ರವನ್ನು ವಹಿಸಬೇಕಾದುದೆಂದು ಬ್ರಿಟಿಷರು ಹೀಗೆ ಹೇಳುವದು ನ್ಯಾಯವಾಗಿಲ್ಲ ನಾವು ಬ್ರಿಟಿಷರ ಈ ಮಾತಿಗೆ ಒಪ್ಪಿದರೆ ಹಿಂದೂಸ್ಥಾನದ ಆಂತರಿಕ ಸಂಬಂಧ ಪರಿಸ್ಥಿತಿಯನ್ನು ಎದುರಿಸುವ ಪ್ರಸಂಗವು ನಮಗೊದಗಬಹುದಾಗಿದೆ ಕೋಟ್ಯಾನುಕೋಟಿ ಹಿಂದೀಯರಲ್ಲಿ ನೆಲೆಸಿರುವ ಬಿಳಿಯರ ವಿರೋಧವನ್ನು ನಾವು ಎದುರಿಸಬೇಕಾಗುವದು

ಇಷ್ಟಾದ ಮೇಲೂ 'ಈಗಿನ ಯುದ್ಧವು 'ಫ್ಯಾಸಿಸ್ಟ್' ಮಹತ್ವ ಸಾಮ್ರಾಜ್ಯವಾದಿಗಳ ನಡುವಿನ ಯುದ್ಧವಾಗಿದೆ"ಯೆಂದು ತಿಳಿದುಕೊಂಡಿದ್ದಾರೆ ಬ್ರಿಟಿಷರು ಈಗ ಹಿಂದೂಸ್ಥಾನದ ಎಸಯದಲ್ಲಿ ಔದಾರ್ಯವನ್ನು ತೋರಿಸಿದರೆ ಈ ಭಾವನೆಯು ಒಳ್ಳೆಯವಾಗಬಹುದು ಆಗ ಹಿಂದೂಸ್ಥಾನವು ಜಪಾನರ ವಿರೋಧ ನಡೆಯುವ ಹೋರಾಟದಲ್ಲಿ ಹೆಚ್ಚಿನ ಸಹಾಯ, ಸಮಕಾರಗಳನ್ನು ನೀಡಬಹುದು ಎಂದಿತ "

'ಸತ್ಯಕ್ಕೆ ಸಾಕ್ಷಿಲ್ಲ"ವೆಂಬ ನಾಣ್ಣುಡಿಯ ಪ್ರತ್ಯಂತರವು ಫಿಲಿಪ್ಸರ ಈ ಪ್ರಕರಣದಿಂದ ನಮ್ಮೆಲ್ಲರ ಅನುಭವಕ್ಕೆ ಬಿನ್ನಾಗಿ ಬಂದಿದೆ

ಫಿಲಿಪ್ಸರ ಪದವಿಯೂ, ಪತ್ರವೂ ಒಪ್ಪಿಸಲ್ಪಟ್ಟು ಒಂದು ವರ್ಷವಾದರೂ ಆಯಿತು ಆದರೂ ಅವುಗಳನ್ನು ಗೋಪ್ಯವಾಗಿಯೇ ಇಡಲಾಗಿತ್ತು ಫಿಲಿಪ್ಸರು ಹಿಂದೂಸ್ಥಾನದಿಂದ ಹೋದನಂತರ ಅವರನ್ನು ಲಂಡನ್ನಿನಲ್ಲಿ ಜ ವಸೆಸ್ ಹೋವರರು ರಾಜಕೀಯ ಸಲಹೆಗಾರರೆಂದು ನೇಮಿಸಲಾಯಿತು ಈಗ ಒಮ್ಮಿಂದೊಮ್ಮೆಲೇ ಅವರು ಆ ಕೆಲಸಕ್ಕೆ ರಾಜನಾಮ ಕೊಟ್ಟುಅಮೇರಿಕೆಗೆ ತಿರುಗಿ ಒರೂವೆ ಸುದ್ದಿಯಂದ ಅಮೇರಿಕದಲ್ಲಿ ತರ್ಕವಿತರ್ಕಗಳಿಗೆ ಆಸ್ಪದವುಂಟಾಯಿತು ಆ ಮೇಲೆ ಅವರ ಪತ್ರವು ಅಮೇರಿಕದ ಪತ್ರಿಕೆಗಳಲ್ಲಿ ಹೇಗೋ ಪ್ರಸಿದ್ಧವಾಯಿತು ಹೀಗೆ ಗೌಪ್ಯ ಸ್ಫೋಟನವಾದುದಂದಿಂದ ಲಂಡನ್, ವಾಷಿಂಗ್ಟನ್ ಸರಕಾರಗಳಿಗೆ ದಿಗಿಲು ಬಿದ್ದಂತಾಗಿದೆ ಇಂಗ್ಲೆಂಡಿನ ಮುಖ್ಯ ಮಂತ್ರಿ ಚರ್ಚಿಲ್, ವಿದೇಶಾಂಶಿ ಈಡನರ ಪಿತ್ತವು ಕೆಣಕಿಗೇರಿತು 'ಇಂಥಾ ಸಾಮಾನು ಫಿಲಿಪ್ಸರನ್ನು ನಾವು ಸದೆ ಬಡಿಯುವೆವು' ಎಂಬ ನಿಟ್ಟಿನ ಉದ್ಗಾರವು ಈಸರ ಬಾಯಿಯಿಂದ ಹೊರಬಿದ್ದಿ ಸುದ್ದಿಯೂ ಆಗಿದೆ ಇತ್ತ ಅಮೇರಿಕದ ಜನತೆಯೂ ಉದ್ರೇಕಗೊಂಡಿದೆ 'ಅಮೇರಿಕನ್ ರಾಷ್ಟ್ರವು ಇಷ್ಟು ನಿರ್ಬಲವಾಗಿದಯೇ! ಅಮೇರಿಕದ ಧೈರ್ಯ ಶೌರ್ಯಗಳಿಗೂ ಕೂಡ ತನ್ನ ಮಿತ್ರ ರಾಷ್ಟ್ರದ ವಿಷಯದಲ್ಲಿ ನಿಜವಾದ ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಆಧಿಕಾರವಿಲ್ಲವೆ!" ಎಂಬ ಉದ್ಗಾರಗಳನ್ನು ಯು ಡಾಂಡ್ಲರರೆಂಬ ಸೆನೇಟ್ ಸದಸ್ಯರು ತೆಗೆದಿದ್ದಾರೆ

ಮಿ ಫಿಲಿಪ್ಸರನ್ನು ಹಿಂದಕ್ಕೆ ಕರೆಸಲು ಯು ಎ ಕಾರ್ಯದರ್ಶಿಯವರ ಬಗ್ಗೆ ಉಗ್ರಾಪೋಪಗಳು ಸಲವಿವೆ ಬ್ರಿಟಿಷ್ ಸರಕಾರದ ಒತ್ತಾಯದಿಂದಲೇ ಅವನನ್ನು ಹಿಂದಕ್ಕೆ ಕರಿಸಬೇಕಾಯಿತೆಂದು ಅಮೇರಿಕದ ಜನತೆಯು ಬಾಯಿಬಿಡೆ ಬ್ರಿಟಿಷ್ ಸರಕಾರವು ಫಿಲಿಪ್ಸರು 'ಅನಿಷ್ಟ ವ್ಯಕ್ತಿ' (Persona non-grata) ಗಳೆಂದು ಘೋಷಿಸಿದೆಯೆಂದು ಅಮೇರಿಕನ್ ಸರಕಾರಕ್ಕೆ ತಿಳಿಸಿದ್ದು ಬಗ್ಗೆ ಪ್ರಕಟವಾಗಿದೆ ಫಿಲಿಪ್ಸರು 'ಹೊರಕ್ಕೆ ಕರೆಸಲಿಸಿದಂತೆ' ಉಗ ಸ್ವದೇಶಕ್ಕೆ ಮರಳಿ ಬರುತ್ತಿರುವರೆಂದೂ ಹೇಳಲಾಗುತ್ತಿದ ಆದರೆ ರಾಂಡ್ಲರರು ಲಿಂಡುಸ್ಥಾನ ಸರಕಾರದ ಸರಕಾರ್ಯ್ಯ ಖಾತೆಯು ಸೆಕ್ರೆಟರಿಗಾಗಿ ಮಿ ಕ್ಯಾರೋ ಒಬಾಯರು ಲಂಡನ್ ಸರಕಾರಕ್ಕೆ ತಳಿಸಿದ ಹಾಗೂದೆಂದು ಪ್ರಸಿದ್ಧಿ ಹಿಂದೂಸ್ಥಾನ ಸರಕಾರದ ಸೂಚನೆಯಂತೆ ಫಿಲಿಪ್ಸರನ್ನು 'ಅನಿಷ್ಟ ವ್ಯಕ್ತಿ'ಯೆಂದು ನಿರ್ಧರಿಸಿ ಅವರು ತಿರುಗಿ ಮನೆಗೆ ಹೋಗುವಂತಾಯಿತೆಂಬದನ್ನು ಹೊರಗಪಡಿಸಿದ್ದಾರೆ ಫಿಲಿಪ್ಸರು ರೂಜವೆಲ್ಟರಿಗೆ ಬರೆದ ಇನ್ನೊಂದು ಗುಪ್ತ ಪತ್ರವೂ ಶಾಂಡ್ಲರರ ಕೈಯ್ಯಕ್ಕೆ ದೆಯಂತೆ ಪ್ರಕಂಗ ಬಂದರೆ ಅದನ್ನೂ ನೀಟೇ ನಲ್ಲೆ ಒದಿ ಹೇಳುವೆವೆಂದು ಅವರು ಹೇಳಿದ್ದಾರೆ.

'ಯು. ಗ.'

Reg.No. M. 1550.
KODAGU MERCARA, (Coorg).

ಕೊಡಗು

ಸಂಪಾದಕರು:-ಶ್ರೀ ಪಿ. ಸಿ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೫ | ತಾರೀಖು ೨೨--೯--೧೯೪೪ನೇ ಫುಸ್ಲಾಯಿ. | ಸಂಚಿಕೆ ೧೬

ಗಾಂಧಿ ಜಿನ್ನಾ ಮಾತುಕತೆ.

ತಾ. 9-9-44 ರಿಂದ ಪ್ರಾರಂಭವಾದ ಗಾಂಧಿ-ಜಿನ್ನಾರವರ ಮಾತುಕತೆಯು ಇನ್ನೂ ಮುಗಿದಿರುವದಿಲ್ಲ ತಾ. 20 ರ ವರೆಗೆ ಒಟ್ಟು 15 ಗಂಟೆ 45 ನಿಮಿಷಗಳ ಮಾತುಕತೆಯಾಗಿದೆ. ಇನ್ನೂ ಸೂತುಕತೆಯು ಮುಂದರಿಯುವದು. ಈ ತಿಂಗಳ ಅಂತ್ಯದ ವರೆಗೆ ಈ ಭೇಟಿಯು ನಡೆಯಬಹುದೆಂದು ಊಹಿಸಲಾಗಿದೆ. ಈ ಮಾತುಕತೆಯು ಮುಗ್ಧೆ ಪತ್ರವ್ಯವಹಾರವೂ ನಡೆಯುತ್ತಿದೆ. ಚರಿತ್ರಾರ್ಹವಾದ ಈ ಮಾತುಕತೆಯನ್ನು ನಡೆಯುತ್ತಿರುವ ಈ ಎಡು ವ್ಯಕ್ತಿಗಳ ಆರೋಗ್ಯವು ಪನ್ನಾಗಿಲ್ಲ. ತಾ. 14 ರ ಸಾಯಂಕಾಲ ಮಿ. ಜಿನ್ನಾರವರು ತಾವು ಶಕ್ತಿಹೀನರಾಗಿರುವದನ್ನು ಗಾಂಧೀಜಿಗೆ ತಿಳಿಸಿ ಅನಂತರ ಅಂಗಮರ್ದನದಿಂದ ನೋವು ವಾಸಿಯಾಗುವದೇ ಎಂದು ಪ್ರಶ್ನಿಸಿದರು. ಗಾಂಧೀಯವರು ತಮ್ಮ ನ್ಯೆಸರ್ಗಿಕ ರೋಗಚಿಕ್ಸಾರಾದ ಡಾ. ಪಿ. ಹೆತಾರವರು ನಗರದಲ್ಲಿರುವ ರೆಂಯೂ ಅವರಿಂದ ದೇಹಪರೀಕ್ಷೆಸುವದು ಹಿತವೆಂದೂ ಸೂಚನೆಯನ್ನಿತ್ತರು. ಅದೇ ರೀತಿ ಜಿನ್ನಾರವರು ದೇಹಪರೀಕ್ಷೆ ಮಾಡಿಸಿಕೊಂಡರು.

ಗಾಂಧಿ ಜಿನ್ನಾ ಮಾತುಕತೆಯಲ್ಲಿ ಎರಡು ಮುಂದಾಳುಗಳೂ ಒಪ್ಪಂದದ ಪ್ರಧಾನ ವಿಚಾರಗಳಲ್ಲಿ ಎಳಕಭಿಪ್ರಾಯಕ್ಕೆ ಬಂದಿರುವರೆಂದು ಊಹಿಸಲಾಗಿದೆ.

—೦೦—

ಸತ್ಯವರನ್ನು ಬದುಕಿಸಬಲ್ಲರು!

ಜರ್ಮನಿಯಲ್ಲಿ ಇನ್ನೂ ಗುಪ್ತಪ್ರಗತಿಯವಾದರೆ, ಗನ್ಯನು ಸತ್ತವರನ್ನು ಬದುಕಿಸಬಲ್ಲನಂತೆ! ಹೌದ್ಯೋ ರೇಡಿಯೋವಿನ ಈ ಸುದ್ದಿಯನ್ನು ಸಾರಿದೆ. ವೈದ್ಯ ವಿಜ್ಞಾನಿಯೊಬ್ಬರು ಹಲವಾರು ಪ್ರಯೋಗನಿಗಳನ್ನು ನಡೆಸಿ, ಗಾಯಗೊಂಡು ಕೊನೆಯುಸಿರು ಬಿಡುತ್ತಿದ್ದವರನ್ನು ಅಥವಾ ಸತ್ತು ಕಲವೇ ನಿಮಿಷ ಸಾದವರನ್ನು ಬದುಕಿಸಬಲ್ಲರೆಂದಿದ್ದಾರೆ. ಕೆಲವರನ್ನು ಬದುಕಿಸಿ ಈ ವೈದ್ಯರು ಇಸ್ಪರಲ್ಲೇ ಯಶಸ್ವಿಗಳಾಗಿದ್ದಾರೆ.

ತಪ್ಪಿಸ್ಥರಿಗೆ ಜಾ ನಿಧಿ

ಕರ್ನಾಟಕ ಪ್ರಾಂತ ಸಿಧಿಗೆ ತಾ. 15 ರ ವರೆಗೆ 70 ಲಕ್ಷ ರೂಪಾಯಿಗಳು ಸೇರಿವೆ. ನಿಶ್ಚಿತವಾದ ಗುರಿ ಅ ಕ್ಕೋಬರ್ ೧೫ ರೊಳಗೆ ಇದು 75 ಲಕ್ಷವನ್ನು ದಾಟಲಿದೆಯಾ ನಿಧಿಯು 80 ಲಕ್ಷಕ್ಕೆ ಮುಟ್ಟಬಹುದೆಂದು ಕಾರ್ಯಕರ್ತರುಗಳಾದ ಶ್ರೀ ಅಮ್ಮಕಲಾಲ್ ಧರ್ಮಾರವರು ಬೇಳಿರುವರು. ಬೋಬಾಯಿಯಲ್ಲಿ ಈ ನಿಧಿಸಂಗ್ರಹದಲ್ಲಿ 16 ಲಕ್ಷ ರೂಪಾಯಿಗಳನ್ನು ಶೇಕರಿಸಿ ಪ್ರಥಮಸ್ಥಾನ ಪಡೆದಿದೆ. ಕಲ್ಕತ್ತ 91 ಲಕ್ಷ, ಸಂಯುಕ್ತ ಪ್ರಾಂತ 7½ ಲಕ್ಷ, ಬಿಹಾರ್ 4½ ಲಕ್ಷ, ಗುಜರಾಥ 5½ ಲಕ್ಷ ಮದ್ರಾಸು 5½ ಲಕ್ಷ, ಪೈಸೂರು, ಹೈದರಬಾದು ಮೊದಲಾದ ಸಂಸ್ಥಾನಗಳು ಹಿಂದೊಂದು ಲಕ್ಷಕ್ಕಿಂಥಾ ಹೆಚ್ಚಿಗೆ ಧನ ಸಹಾಯ ಮಾಡಿವೆ.

—೦೦—

ಬೊಂಬಾಯಿಯಲ್ಲಾದ ಸ್ಫೋಟನ.

ಕಳೆದ ಏಪ್ರಿಲ್ ತಿಂಗಳಲ್ಲಿ ಬೊಂಬಾಯಿಯಲ್ಲಿ ನಡೆದ ಭಯಂಕರ ಸ್ಫೋಟನದ ಬಗ್ಗೆ ನೇಮಿಸಲ್ಪಟ್ಟ ವಿಚಾರಣ ಸಮಿತಿಯು ವಿಚಾರ ವಿನಿಮಯಮಾಡಿ ಯುದ್ಧ ಪರಿಸ್ಥಿತಿಗಳ ಮೂಲಕ ನಡೆದ್ದುಗುಂದುಗಳಿಂದ ಕುಂಬಿದ ಪಡಗಗಳನ್ನು ಬಂದರಿನಲ್ಲಿ ತರುವ ಪ್ರಮ ಕೈಕೊಂಡದು ಅವಘಾತಕ್ಕೆ ಸಿಸ್ಪೆಪ ಹಡಗದಲ್ಲಿ ಅರಿಳೆ ಗಂಟುಗಳನ್ನು ಮದ್ದು ಮತ್ತು ಸ್ಫೋಟಕ ಪದಾರ್ಥಗಳ ಕೆಳಗೂ ಮೇಲು ಕರಾಬಿಯಲ್ಲಿ ಇಟ್ಟಿದ್ದು ಮತ್ತು ಕೆಳಭಾಗದಲ್ಲಿದ್ದ ಎಡನೇ ಪದಾರ್ಥಗಳಲ್ಲಿದ್ದ ಅರಿಳೆಗಳಿಗೆ ಉಕಸ್ಮಾತ್ ಬೆಂಕಿಹತ್ತಿಸಿದ್ದು, ಪ್ರತ್ಯಕ್ಷದರ್ಶಿಯ ಉಗ್ರ ಸ್ವರೂಪವನ್ನು ಕಂಡುಹಿಡಿದು ಯೋಗ್ಯ ಉಪಾಯ ಕೈಕೊಳ್ಳಲು ಅವಿಕ ವಿಳಂಬ ತಪ್ಪಿಸಿದ್ದು, ಕೊನೆಯ ಅಗ್ನಿ ಕೊಡುವ ಅಧಿಕಾರಿಯು ಅಲ್ಲೇ ಇರದಿದ್ದದ್ದು ಮೊದಲಾದ ಕಾರಣಗಳು ಮೂಲಕ ಏಪ್ರಿಲ್ 14 ರಲ್ಲಿ ಬೊಂಬಾಯಿ ಬಂದರದಲ್ಲಿ ನಡೆದ ಭೀಕರ ಅನಾಹುತಕ್ಕೆ ಕಾರಣವಾಯಿತು. ಅಧಿಕಾರಿಗಳ ಕಲಕ್ಷ್ಯವೇ ಇದಕ್ಕೆ ಕಾರಣವೆಂದು ನರದಿ ಮಾಡಿರುವರು.

ಚರ್ಚಿಲ್ ರೂಸ್ವೆಲ್ಟ್ ಭೇಟಿ.

ರಾಜಕೀಯ ವಿದ್ಯಮಾನಗಳನ್ನು ಬಿಡಿಸಲು ಹಿಂದೂದೇಶದಲ್ಲಿ ನಡೆಯುತ್ತಿರುವ ಗಾಂಧಿ ಜಿನ್ನಾ ಮಾತುಕತೆಯು ಈ ಡೆಗೆ ಇಡೀ ಜಗತ್ತಿನ ದೃಷ್ಟಿ ನೆಟ್ಟಿರುವಷ್ಟೆ ಚರ್ಚಿಲ್-ರೂಸ್ವೆಲ್ಟ್ ಭೇಟಿಯು ಕೂಡ ಜಗತ್ತಿನ ಗಮನವನ್ನು ಸೆಳೆದಿದೆ. ಹಿಂದೂದೇಶದಲ್ಲಿ ಒಮ್ಮತವನ್ನು ಹುಟ್ಟಿಸಲು ಫಲವಿಲ್ಲ ಯೂರಿಪ ಈ ಅಭಿಪ್ರಾಯವು ಮುಂದಾಳುಗಳ ಪ್ರಯತ್ನದಿಂದ ಬ್ರಿಟಿಷರ ರಾಜಕಾರಣಿಗಳಿಗೆ ಗಾಬರಿಯಾಗಿರದಿದೆ. ಹಿಂದೂಸ್ಥಾನವು ಒಂದಾಗಿ ಬ್ರಿಟಿಷರ ಕೈಬಿಟ್ಟರೆ ಬ್ರಿಟಿಷರ ಗತಿ ಅದೋಗತಿಯಾಗುವುದೆಂದು ಅವರಿಗೆ ತಿಳಿದಿದೆ. ತನ್ನ ವಸಾಹತು ಸಾಮ್ರಾಜ್ಯದ ಈ ಸಮಯದಲ್ಲಿ ಹಿಂದೂದೇಶವು ಬ್ರಿಟಿಷ್ ಸಾಮ್ರಾಜ್ಯದಿಂದ ಬೇರಾಗಲು ಬಿಡಬಾರದೆಂಬ ಆಲೆ ಚರ್ಚಿಲ್ಲರಿಗಿದೆ. ಈ ಆಲೆಯನ್ನು ಹಲವು ಬಾರಿ ಅವರು ಆತಿಯೂ ತೋರಿಸಿದ್ದಾರೆ. ಇದಕ್ಕನುಸಾರವಾಗಿ ಲಂಡನಿನ ಪತ್ರಿಕೆಗಳು ಅಪಪ್ರಚಾರಕ್ಕೆ ತೊಡಗಿವೆ. ಗಾಂಧಿ-ಜಿನ್ನಾ ಒಪ್ಪಂದವಾದರೆ ಹಿಂದೂದೇಶದ ಸಮಸ್ಯೆ ಬಗೆಹರಿದಂತಾಗದಿಲ್ಲ. ಸಿಕ್ಕರು, ಮತ್ತಿತರ ಅಲ್ಪ ಸಂಖ್ಯಾಕರ ಪಂಗಡಗಳ ಪ್ರಶ್ನೆಯೂ ಬಗೆಹರಿಯಬೇಕು ಎಂದು ಹೇಳುತ್ತಿವೆ. ಈ ಮಧ್ಯೆ ಹಿಂದೂದೇಶದಲ್ಲಿಯ ಬ್ರಿಟಿಷರ ನೀತಿಯನ್ನು ಪ್ರಶ್ನಿಸಿದ ಫಿಲಿಪ್ಪರ ಪತ್ರವು ನೂರು ಭೂಮಿದ್ದಗಳನ್ನು ನಷ್ಟಗೊಳಿಸಿತು. ಅಮೇರಿಕನರು ಪೂರ್ಣ ಸಂಧಾನಮಾಡಿದ್ದರೂ ಅವರ ಪರಿಸ್ಥಿತಿಯಲ್ಲಿ ಒಡಲಾಳದೊಗುತ್ತಿದೆ. ಶ್ವೇತಾಪ್ರಭುತ್ವಕ್ಕಾಗಿ ರಣಕಣಕ್ಕಿಳಿದಿರುವ ಅಮೇರಿಕನರಿಗೆ ಆ ತತ್ವದ ತೊಲೆಯು ತನ್ನ ವಿಸ್ತರಣೆಯಿಂದ ಆಗುತ್ತಿರುವ ದನ್ನು ಸಹಿಸಿ ಎಷ್ಟು ದಿನ ಕೂರುವಪದೋ ನೋಡಬೇಳು, ಅವೆರಿಕ ಚನರು ಹಿಂದೂಸಮಸ್ಯೆಯನ್ನು ತೃಪ್ತಿಕರವಾಗಿ ಬಗೆಹರಿಸಬೇಕು. ಅದು ತಮ್ಮ ಹೆಸರಿಗೆ ಕಳಂಕಮಾಯವಾಗಿವೆಯೆಂದು ಒತ್ತಾಯಪಡಿಸುತ್ತಿರುವದರಿಂದ ರೂಸ್ವೆಲ್ಟ್--ಚರ್ಚಿಲ್ ಭೇಟಿಯಲ್ಲಿ ಹಿಂದೂದೇಶದ ವಿಷಯ ಚರ್ಚಿಸಲ್ಪಡುವದೆಂದು ಊಹಿಸಲಾಗಿದೆ.

ಲಂಡನಿನಲ್ಲಿ ಹಿರ್ವ ಹಿಂದೀಯನಿಗೆ ಶಿಕ್ಷೆ.

ತಾ. 14ರಲ್ಲಿ ಲಂಡನ್ ನಗರದ ನ್ಯಾಯಾಸ್ಥಾನದಲ್ಲಿ 34 ವರ್ಷ ವಯಸಿನ ಹಿಂದೀಯನಾದ ಶ್ರೀ ಗಾನ ಭಾಯಿ ಪಟೇಲನ ವಿಚಾರಣೆ ನಡೆಯಿತು. ಚಕ್ರವರ್ತಿಗಳ ಸೈನ್ಯ ಪೋಷಣಾ ಧನಕ್ಕೆ ಸಲ್ಲಿಸಿದ ಆರೋಪದ ಮೇಲೆಗೆ ಇವರನ್ನು ಸೈನ್ಯ ಕೋರ್ಟಿನವರು 93 ದಿನಗಳ ಶಿಕ್ಷೆಗೆ ಗುರಿಪಡಿಸಿದ್ದರು. ಆದರೆ ಶ್ರೀ ಪಟೇಲರ ಪರವಾಗಿ ಕೂಲಿಕಾರ ಪಕ್ಷದ ಸದಸ್ಯ ಮಿ. ಸ್ಟಿಫೆನ್ ಮಲ್ಲರ್ರವರು ಪರಾಪ ದಿಸಿರುವರು. ಇದೇ ತಪ್ಪಿಗಾಗಿ ಶ್ರೀ ಪಟೇಲರ ಸೋದರನಿಗೆ ಶಿಕ್ಷೆಯಾಗಿತ್ತು.

—೦೦—

ವಿದ್ಯಾ ಪತ್ನಿ.

ಗಂಡನು ತಾನು ವಿವಾಹ ಮಾಡಿಕೊಂಡ ಪತ್ನಿಗೆ ಇಂಗ್ಲಿಷ್ ಗೊತ್ತುಂಟೆಂದು ಭಾವಿಸಿದ್ದನು. ಹಾಗೆ ಅವನು ಭಾವಿಸಿಕೊಂಡುದು ಬೆಡಗಿನ ಹೆಂಡತಿಗೆ ಒಂದು ಪೆಟ್ಟೆ. ಒಂದು ದಿನ ಗಂಡನು ಆಫೀಸಿನಿಂದ ಮನೆಗೆ ಬರುತ್ತಿರುವುದನ್ನು ನೋಡಿ, ಆಕೆ ಇಂಗ್ಲಿಷ್ ಗ ಜೆಯೊಂದನ್ನು ತೆಗೆದು ಕುರ್ಚಿಯಲ್ಲಿ ಕುಳಿತುಕೊಂಡು ಓದುವಂತೆ ನಟಿಸಿದಳು. ಗಂಡನು ತನ್ನ ಸಮೀಪಕ್ಕೆ ಬಂದರೂ ಕೂಡ ತುಂಬಾ ಆಸಕ್ತಿಯಿಂದ ಓದುವುದರಲ್ಲಿ ಮಗ್ನಳಾಗಿರುವಂತೆ ಪತ್ರಿಕೆಯ ಮೇಲಿನಿಂದ ತನ್ನ ಕಣ್ಣುಗಳನ್ನು ಒಂದಿಷ್ಟು ಮಿಸುಕಲಿಲ್ಲ. ತುಟಿ ಪೂರ್ತ ಅಲ್ಲಾಡುತ್ತಿತ್ತು. ಗಂಡನು ಪತ್ರಿಕೆಯನ್ನು ನೋಡಿದನು, ಹಾಗೆಯೇ ತಿರಸ್ಕಾರದ ನಗುವನ್ನು ಬೀರಿದನು. ಯಾಕೆಂದರೆ ಪತ್ರಿಕೆಯು ಅವಳ ಕೈಯಲ್ಲಿ ತಿರುಗಮುರುಗವಾಗಿತ್ತು.

—೦೦—

ಶಾಂತಿ ಸಮ್ಮೇಳನ ಮತ್ತು ಇಂಡಿಯ.

ಯುದ್ಧಾನಂತರ ನಡೆಯುವ ಸಂಭವದ ಶಾಂತಿ ಸಮ್ಮೇಳನದಲ್ಲಿ ಇ ದಿರುವ ಭಾಗವಹಿಸಬೇಕು. ಇಂಯದ ಪಶ್ಚಾಬ್ಧತೆಗಳನ್ನು ಶಾಂ ಸಮ್ಮೇಳನದಲ್ಲಿ ಸರಿಯಾಗಿ ಸಮರ್ಥಿ ಅಸ್ತಗಳನ್ನು ಸಮ್ಮೇಳನವು ಒಪ್ಪುವ ತೆ ಮೂಡಬೇಕು. ಈ ಬಗ್ಗೆ ಭಾರವು ವೈಗೊಳ್ಳಬೇಕಾದ ಕ್ರಮವೇನ ಎಂಬ ವಿಚಾರಗಳನ್ನು ಗಾಂಧಿ-ನ್ನಾ ಮಾತುಕತೆಗಳಲ್ಲಿ ಪರಿಶೀಲಿಸಿ ರ್ಧರಿಸಲಾಗುವುದು. ಈ ಬಗ್ಗೆ ತೃಪ್ತಿಕರವಾದ ನಿರ್ಧಾರ ಏರ್ಪಡಬಿದ್ದಲ್ಲಿ ಸಂಧಾನವನ್ನು ಮುಂದುವರಿಸಿ ಮಾ ಪರಿಶೀಲನೆ ನಡೆಸಲಾಗುವುದು. ಈ ಸಂಧಾನವು ವಿಫಲವಾಗಲೂಬಹುದು ಒಪ್ಪಂದವು ಏರ್ಪಡಬೇಕೆಂದು ಮುಂದಿರುವಿಗಳ ಪ್ರಬಲವಾದ ಆಯವಾಗಿದೆ.

—೦೦—

—ವೀರಾಜಪೇಟೆಗೆ 'ಕೊಡಗು' ಪತ್ರಿಕೆಯು
—ಶ್ರೀ ಕೆ. ಎಂ. ಪುಟ್ಟಾ ಯುವಕರು

ಕೊ ಡ ಗು

ತಾ. ೨೨-೯-೧೯೪೪ನೇ ಶುಕ್ರವಾರ

ನಿರಾಶೆಯ ಭವಿಷ್ಯ.

ಯೂರೋಪು ಯುದ್ಧವು ತನ್ನ ಕಡೇ ಅಂಕಕ್ಕೆ ಬಂದು ತಲಪಿದೆ. ಯುದ್ಧದ ಝಳದಿಂದ ಪರಿತಪ್ತರಾದ ಜನರು ಭವಿಷ್ಯದಲ್ಲಿ ತಮ್ಮ ಜೀವನವು ಸುಖಮಯವಾಗಬಹುದು; ಜೀವನದ ಅನುಕೂಲತೆಗಳು ಒದಗಿ ಸಾರ್ವತ್ರಿಕವಾಗಿ ಹರಡಿರುವ ಜಿಗುಪ್ಸೆಯು ಪೂರ್ಣವಾಗಿ ಸರ್ವತೋಮುಖವಾದ ಅಭಿವೃದ್ಧಿ ಆಗಬಹುದೆಂದು ಆಶಿಸತೊಡಗಿದ್ದಾರೆ. ಈ ಆಶೆಯಿಂದ ಒಂದರ ಒಂದರಂತೆ ನಂತರ ಯುದ್ಧವನಂತರಕ್ಕೆ ರುವ ಯೋಜನೆಗಳು ಹೊರಬೀಳುತ್ತಿವೆ. ಇಂದು ಜನತೆಯು ಕಲ್ಪಿಸಿಕೊಳ್ಳುತ್ತಿರುವಂತೆ, ಮನಸಿನಲ್ಲಿ ಚಿತ್ರಿಸುತ್ತಿರುವಂತೆ ಮುಂದಿನ ದಿನಗಳು ನಿಜವಾಗಿಯೂ ಸುದಿನಗಳಾಗಿ ಪರಿಣಮಿಸುವವೆ? ಇಂದು ಸರ್ವಶಕ್ತರಾಗಿ ವಿಜಯ ಮಾರ್ಗದಲ್ಲಿ ಮುನ್ನಡೆಯುತ್ತಿರುವ ರಾಷ್ಟ್ರಗಳ ವರ್ತನೆಯು ಇದಕ್ಕೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿವೆ.

ಎರಡು ಉದಾಹರಣೆಗಳನ್ನು ಪರೀಕ್ಷಿಸುವಾ ಫೈಲೇಂಡು (ಸಯೊಮು) ಜಪಾನರ ವಶದಲ್ಲಿದೆ. ಇದರ ಬಗ್ಗೆ ಯೂಪ ರೀತಿಯ ಘೋರಣೆಯನ್ನು ತಳೆಯ ಬೇಕೆಂಬ ವಿಚಾರದಲ್ಲಿ ಬ್ರಿಟನ್, ಅಮೇರಿಕಾಗಳಲ್ಲಿ ತೀವ್ರ ವಿರುದ್ಧ ಅಭಿಪ್ರಾಯಗಳಿರುವವೆಂದು ಗೊತ್ತಾಗಿದೆ. ಜಪಾನರು ಆಕ್ರಮಿಸುವ ಮೊದಲಿದ್ದಂತೆಯೇ ಫೈಲೇಂಡಿಗೆ ಅದರ ಅಧಿಕಾರವನ್ನು ಬಿಟ್ಟು ಕೊಡುವದು ಅವಶ್ಯವೆಂದು ಅಮೇರಿಕನರು ಹೇಳುತ್ತಾರೆ. ಬರ್ಮಾ, ಮಲಯಾ ಪ್ರಾಮುಖ್ಯವಾಗಿ ಹಿಂದೂ ದೇಶದ ಮುಂದಿನ ಭದ್ರತೆಯ ದೃಷ್ಟಿಯಿಂದ ಫೈಲೇಂಡಿನ ಗಡಿಯಲ್ಲಿ ಸ್ವಲ್ಪವಾದರೂ ಬದಲಾವಣೆಗಳಾಗಬೇಕು. ಫೈಲೇಂಡಿನ ಒಳಗೆ ವಿಮಾನ ನಿಲ್ದಾಣ ಮೊದಲಾದುವುಗಳನ್ನು, ಮಿಲಿಟರಿ ದೃಷ್ಟಿಯ ಮತ್ತಿತರ ಅನುಕೂಲತೆಗಳನ್ನು ಬ್ರಿಟಿಷರಿಗೆ ಬಿಡಬೇಕು ಎಂಬುವುದು ಬ್ರಿಟಿಷರ ಅಭಿಪ್ರಾಯವಿರುವಂತೆ ಕಂಡು ಬರುತ್ತಿದೆ. ಜಪಾನರ ವಿರುದ್ಧ ವಿದ್ದ ಫೈಲೇಂಡಿನ ಅಧಿಕಾರಿಗಳು, ಜಪಾನರಿಂದ ಫೈಲೇಂಡು ಆಕ್ರಮಿಸಲ್ಪಡುವ ಕಾಲಕ್ಕೆ ಬಹುದೊಡ್ಡ ಧನ ಸಂಚಯವನ್ನು ನ್ಯೂಯಾರ್ಕಿನ ಮತ್ತು ಲಂಡನಿನ ಬೇಂಕುಗಳಲ್ಲಿ ಇಟ್ಟಿದ್ದಾರೆ. ನ್ಯೂಯಾರ್ಕಿನ ಅಂತರಿಅಮೇರಿಕಾದ ಬ್ಯಾಂಕುಗಳು ಈ ನಿಕ್ಷೇಪವನ್ನು ಬೇಕಾದಾಗ ಪ್ರಚಾರ ಮೊದಲಾದ ಕಾರ್ಯಗಳಿಗೆ ವಾಪಸು ತೆಗೆಯುವ ಅನುಕೂಲತೆ ಕೊಟ್ಟಿದ್ದರೆ ಬ್ರಿಟಿಷರು ಲಂಡನಿನ ನಿಧಿಯನ್ನು ಪ್ರಮುಖ್ಯವಾಗಿ ಬ್ರಿಟಿಷರ ಬಗ್ಗೆ ಫೈಲೇಂಡಿನವರಲ್ಲಿ ದ್ವೇಷ ಹುಟ್ಟಿದೆ. ಯುದ್ಧದಲ್ಲಿ ಅನೇಕ ತರದ ನಷ್ಟ ಪಟ್ಟ ಅನೇಕರು ಅನೇಕ ರೀತಿಯಲ್ಲಿ ಬುದ್ಧಿ ಕಲಿತಿದ್ದರೂ ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ಪರಕೀಯರನ್ನು ಶೋಷಿಸುವ ತನ್ನ ಹಳೆಯ ಬುದ್ಧಿಯಲ್ಲಿಯೇ ಇದೆ.

ಯೂರೋಪಿನ ಒಂದು ರಾಷ್ಟ್ರವನ್ನು ತನ್ನ ಸಂತೆಯಾಗಿ ಮಾಡಿಕೊಳ್ಳುವದು ಯಾರಿಂದಲೂ ಸಾಧ್ಯವಿಲ್ಲ ಬ್ರಿಟನಾದರೂ ಈ ಬಗ್ಗೆ ಹತ್ತು ಸಾರಿ ಹಿಂದುಮುಂದು ಆಲೋಚನೆಮಾಡ ಬೇಕಾಗುವದೆಂದು ಹಲವರು ಊಹಿಸಿದ್ದರು. ಅದರೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಇಂದು ಹಿಂದಿನದಕ್ಕಿಂತಲೂ ತನ್ನ ಸಾಮ್ರಾಜ್ಯಲಾಲಸೆಯನ್ನು ಹೆಚ್ಚಿಸಿಕೊಂಡಿರುವಂತೆ ಕಂಡುಬರುತ್ತದೆ. ಇಟೆಲಿಯ ಬಗ್ಗೆ ಜನೇರಿಕಾ ಬ್ರಿಟನುಗಳಲ್ಲಿ ಭಿನ್ನಾಭಿಪ್ರಾಯ ಬಂದಿದೆ. ಇಟೆಲಿಯಲ್ಲಿ ಕೈಗಾರಿಕಗಳನ್ನು ಹೆಚ್ಚಿಸಲು ಬಿಡದೆ ಅದನ್ನು ಕೇವಲ ಸಂತೆಯಾಗಿ ಮಾಡಿಕೊಂಡು ಮುಂದೆ ಅದು ಹಡಗು ಪಡಕಟ್ಟು, ಸೈನ್ಯಸಿದ್ಧತೆಗಳನ್ನು ಮಾಡಿಕೊಂಡು ಪ್ರಥಮ ದರ್ಜೆಯ ರಾಷ್ಟ್ರವಾಗದಂತೆ ಬ್ರಿಟಿಷಿನ ಅಭಿಪ್ರಾಯ. ಯುದ್ಧದಲ್ಲಿ ನಷ್ಟಹೊಂದಿ ಭೂಶಾಯಿಯಾಗಿ ಬಿದ್ದಿರುವ ಇಟೆಲಿಯನ್ನು ಕೈಹಿಡಿದೆತ್ತಿ ನಿಲ್ಲಿಸಿ ಹಿಂದಿನಂತೆ ತನ್ನ ಶಕ್ತ ಫೈತ ನೈಗಳನ್ನು ಹೆಚ್ಚಿಸಿಕೊಳ್ಳಲು ಸಹಾಯಮಾಡಬೇಕೆಂಬುದು ಅಮೇರಿಕನರ ಮನೀಶೆ. ಯುದ್ಧದಲ್ಲಿ ಜಯವು ಬೆಳಕು ಕಂಡುಬರುವುದಿಲ್ಲ ವಿಜಯ ಮಾರ್ಗದಲ್ಲಿ ಗೋಚರವಾಗಿದೆ ಅಷ್ಟೆ ಪೂರ್ಣ ಜಯದೊರೆಯಬೇಕಾದರೆ ಆ ಮಾರ್ಗದಲ್ಲಿ ಇನ್ನೂ ಬಹುದೂರ ಸಾಗಬೇಕಿದೆ. ಅಷ್ಟಾಂತರ ಜನರ ಬಲಿದಾನವಾಗಬೇಕಿದೆ ಹೀಗೆ ವಿಜಯದ ಗಡಿಯನ್ನು ಮುಟ್ಟಲು ಅಡ್ಡವಾಗಿ ದೊಡ್ಡ ಕಾರ್ಯವೇರುವೇ ಇದ್ದರೂ ಮಿತ್ರರು ಈಗಲೇ ಭೂಶಾಯಿಯಾದ, ತಮ್ಮ ಹಿಡಿತಕ್ಕೆ ಬಂದ ರಾಷ್ಟ್ರಗಳ ಬಗ್ಗೆ ತಮ್ಮ ಸ್ವಾರ್ಥಹಿತವನ್ನು ಸಾಧಿಸುವ ಘೋರಕೃತಕತೆಯಿಂದ ವಿಶಿಂದದ ಸಂಗತಿ. ಪ್ರಜಾಪ್ರಭುತ್ವಕ್ಕಾಗಿ ನಡೆಯುತ್ತಿರುವ ಯುದ್ಧ! ಎಂದರೆ ಕಾರ್ಯಾಚರಣೆಯಲ್ಲಿ ಇದೇ ತತ್ವದ ಕೊಲೆ!

ಇಟೆಲಿ, ಫೈಲೇಂಡುಗಳ ಬಗ್ಗೆ ಈ ನೀತಿಯನ್ನು ಅನುಸರಿಸುವ ಬ್ರಿಟನು ಭಾರತದ ಬಗ್ಗೆ ಹೇಗೆ ವರ್ತಿಸೀತು? ಭವಿಷ್ಯವನ್ನು ನೆನೆದರೆ ಕಣ್ಣಿಗೆ ಕತ್ತಲೆ ಬರುತ್ತದೆ. ನಿರಾಶೆಯ ತಿಮಿರವು ಸರ್ವದಿಶೆಗಳಲ್ಲೂ ಕಂಡುಬರುತ್ತಿದೆ.

ಒಳ ಬೇ ಶೆ.

ಕೊಡಗು ಪಬ್ಲಿಕ್ ಸರ್ವೆಂಟ್ಸ್ ಸಹಕಾರ ಸ್ಟೋರಿನ ಏಜೆಂಟಂಗು ತಾ. 30-9-44 ರಲ್ಲಿ ಅಪರಾಹ್ನ 4 ಗಂಟೆಗೆ ಮಡಿಕೇರಿಯಲ್ಲಿ ಜರಗುವದು.

ನಿವೃತ್ತ ವಿದ್ಯಾಧಿಕಾರಿಗಳಾದ ಶ್ರೀ. ಸಿ ಎಂ. ರಾಮರಾಯರು ಕೊಡಗು ಉಪಾಧ್ಯಾಯರ ಸಂಸ್ಥೆಗೆ ರೂ. 250 ದಾನವೀಡಿ ಪ್ರತಿವರ್ಷ ಇದರ ಬಡ್ಡಿಯಿಂದ, ಕೊಡಗು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ಬರುವ ವಿದ್ಯಾರ್ಥಿಗೆ ರಾಮರಾವ್ ಮೆಡಲೆಂದು ಬಹುಮಾನ ಕೊಡಲು ಏರ್ಪಡಿಸಿರುವರೆಂದು ತಿಳಿಯಬರುತ್ತದೆ.

ಮಿಸೆಸ್ ಇಟ್ಟೀರ ಚಂಗಪ್ಪನವರು ಕೊಡಗು ವಿದ್ಯಾನಿಧಿಗೆ ರೂ 500 ಕೊಟ್ಟು ಜೀವಾವಧಿ ಸದಸ್ಯರಾಗಿರುವರು.

ಬೋಂಬಾಯಿ ಕೊಡವ ಸಂಘದ ವರು ತಾ. 3ರಲ್ಲಿ ಕೈಲುಮೊಸ್ತ ಪೆಬ್ಬಟನ್ನು ಆಟೋಟಗಳ ಸ್ಪರ್ಧೆಯೊಡನೆ ವಿಜೃಂಭಣೆಯಿಂದ ಮಿಸೆಸ್ ಚೆಪ್ಪುಡೀರ ಪೂನ್ನಪ್ಪನವರ ಭವನದಲ್ಲಿ ಆಚರಿಸಿದರು. ಸ್ಪರ್ಧೆಯಲ್ಲಿ ಗೆದ್ದವರಿಗೆ ಮಿಸೆಸ್ ನುಚ್ಚಿಯಪಂಡ ಚಿಣ್ಣಪ್ಪನವರು ಬಹುಮಾನಗಳನ್ನು ಹಂಚಿದರು.

ಪರ್ಯಾಪುಸ್ತಕವನ್ನು ಸಿಟ್ಟಿಕ ಬೆಲೆಗಿಂಥಾ ಹುಚ್ಚಿನ ಶ್ರಯಕ್ಕೆ ಸೂರಿಬಿಂದ ರಿಂದ ಮಡಿಕೇರಿಯ ಶ್ರೀ ಚಕ್ಕಾಪಾಣಿ ಶೆಟ್ಟಿಯವರಿಗೆ ರೂ 200 ಜಲ್ಮಾನೆ ವಿಧಿಸಲಾಗಿದೆ.

ನಿಯಂತ್ರಿಸಿದ ಸಾಮಾನುಗಳನ್ನು ತಾಸಿಲಿಕ್ಕೆ, ಅಂಥಾ ಸಾಮಾನುಗಳನ್ನು ಹೊರಗೆ ಕಳಿಹಿಸಲಿಕ್ಕೆ ಕೂಪನುಗಳಿಗೂ, ಪರ್ಮಿಟ್ಟುಗಳಿಗೂ ಪರ್ಚೇಸ್ ಆಸಿಸ್ಟೆಂಟರ ಬದಲು ಅಯಾಗ ಪಟ್ಟಾಧಿಗಳ ಜೀಪ್ ಇನ್ಸ್‌ಪೆಕ್ಟರಿಗೆ ಬರೆದುಕೊಳ್ಳಬೇಕೆಂದು ತಿಳಿಸಿದ್ದಾರೆ

ಇಂಡಿಯನ್ ಪೆಡ್‌ಕ್ರಾಫ್ ಸಂಸ್ಥೆಯ ಸಾಡಗನ ಶಾಖೆಯ ಸಂಘ ಸಭೆಯು ಈ ದಿನ ಮಡಿಕೇರಿಯಲ್ಲಿ ನಡೆಯುವದು

ಯುದ್ಧಾನಂತರ ಪುನರ್ನಿರ್ಮಾಣ ಸಮಿತಿಯ ಕಾರ್ಯದರ್ಶಿಗಳಾಗಿ ಆಯ್ಕೆ ಮಾಡಿಗಿನ ಎಂಜಿನೀಯರಾದ ಶ್ರೀ ಐಚೆಟ್ಟಿರ ಸಚ್ಚಯ್ಯನವರನ್ನು ನೇಮಿಸಲಾಗಿದೆ

ಮಡಿಕೇರಿಯಲ್ಲಿ ಫ್ಲೇಗು ಹುಟ್ಟುತ್ತಲೇ ಇದೆ. ಹುಬನ್ನೆದು ಜನರಿಗೆ ಈ ಜಬೆಗೆ ಆಗಿದೆ ಇಬ್ಬರು ಗ್ಯಾಂಗ್ರೀನಿಂದ ಸಿಡುಮಿನಿ ಏಟು ಜನರಿಗೆ ಆಗಿದೆ. ಈ ವಾರದಿಂದ ರಾಜಾಸೀಟಿನಲ್ಲಿ ಸಂಜೆ ಸಂಗೀತ ಕಾರ್ಯಕ್ರಮಗಳಿರುವವು.

ಗಾಂಧಿ ಜಯಂತಿಯ ಬಗ್ಗೆ ಸೇವಾಜನೇಟಿಯಲ್ಲಿ ಅಸ್ಪೃಶ್ಯತಾ ನಿವಾರಣೆ ಸಾಯಂಕಾಲ ಗಿಳ್ಳಿ ಗಂಟಿಯ ನೂಲುವ ಸ್ಪರ್ಧೆ, ಹಿಂಜುವ ತಿರ್ಪೆ ಕಾರ್ಯ ನೂಲಿನ ಪ್ರದರ್ಶನ ಮೂಲಕ ಆಚರಿಸಲಾಗುವುದು. ಪಿ ಐ. ಶ್ರೀ ಬೆಳ್ಯಪ್ಪನವರು ಅಧ್ಯಕ್ಷತೆ ವಹಿಸುವರು

ಇಂಡಿಯಾ ಸರಕಾರದವರು ಹಳ್ಳು ತಿಕ್ಕುವ ಬ್ರಸ್ಸು, ಪೇಸ್ಟ್, ಮತ್ತು ಪುಡಿಗಳ ಮತ್ತು ಇತರ ಟಾಯಿಲೆಟ್ ಸಾಮಾನುಗಳ ಬೆಲೆಯನ್ನು ಬೈಸಿಕಲ್ಲು ಮತ್ತು ಅದರ ಭಾಗಗಳ ಕ್ರಯವನ್ನು ನಿರುಕಮೊಡಿರುವದನ್ನು ಕೊಡಗಿನ ಸರಕಾರವವರು ಗಜೆಟನಲ್ಲಿ ಪ್ರಕಟಿಸಿರುವರು.

ಸೆಂಟ್ರಲ್ ಎಕ್ಸಯಿಸಿನ ಸಿಬ್ಬಂದಿಗೆ ಉಮೇದುವಾರರನ್ನು ಕೊಡಗಿನಿಂದ ಚುನಾಯಿಸಲು ಮದ್ರಾಸು ಪ್ರಾಂತದ ಎಕ್ಸಯಿಸ್ ಕಮಿಷನರು 16-9-44 ರಲ್ಲಿ ಮಡಿಕೇರಿಗೆ ಬಂದು ಕೆಲವು ಜನ ಇನ್ಸ್‌ಪೆಕ್ಟರುಗಳನ್ನು ನೇಮಿಸಿರುವರು

ಕೂಲಿಗಾರರ ಸ್ಥಿತಿಗತಿಗಳನ್ನು ಪರಿಶೀಲಿಸಲು ಇಂಡಿಯಾ ಸರಕಾರದಿಂದ ನೇಮಿತವಾಗಿರುವ ಸಮಿತಿಯ ಚೇರ್‌ಮೆನ್‌ರವರು ಕೊಡಗಿಗೆ ಬಂದು ತಾ. 25-9-44 ರಲ್ಲಿ ಇಂಡಿಯನ್ ಪ್ಲಾಂಟರುಗಳ ಪ್ರತಿನಿಧಿಗಳನ್ನು ಭೇಟಿಮಾಡುವರು

ಈ ತಾ 16 ರ ರಾತ್ರಿ ವೈಸೂರಿನಲ್ಲಿ ಶ್ರೀ ಮಡಿಕೇರಿಯಂಡ ನಂಜಪ್ಪನವರೂ ತಾ 17ರಲ್ಲಿ ಹಲವು ವರ್ಷಗಳಿಂದ ವೆನ್ಲಾಕ್ ಪಡೆಯಲ್ಲಿದ್ದ ಜೆಳ್ಳಿರು ಗ್ರಾಮದ ರಿಟಯರ್ಡ್ ಪಾರೆಪತ್ಯಗಾರರಾದ ಶ್ರೀ ಇಟ್ಟೀರ ಪೊನ್ನಪ್ಪನವರೂ ವಿಧಿವಶರಾದರು.

ಸಾರ್ವಜನಿಕ ಸಭೆಗಳು.

ಈ ತ 18 ರಲ್ಲಿ ನಾಪೋಕ್ಲಿನಲ್ಲಿ ಶ್ರೀ ಅರಿಯಂಡ ಸಚ್ಚಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಕೂಡಿ, ಗ್ರಾಮದ ಯೆದ ವೆಚ್ಚವು ವಿಪರೀತ ಏರಿರುವ ಕಾರಣ ಭತ್ತದ ಬೆಲೆಯನ್ನು ಗಾಡಿಗೆ ರೂ 115 ರಿಂದ ರೂ. 150 ಕ್ಕಾದರೂ ಏರಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಿ, ಈ ವಿಷಯವನ್ನು ಜೇಕ್ ಕಮಿಷನರವರಲ್ಲಿಗೆ ಡೆಪ್ಯುಟೇಶನ್ ಹೋಗಲು ಶ್ರೀ ಬಿದ್ದಂಡ ಕಾರ್ಯಪ್ಪನವರನ್ನು ಆರಿಸಲಾಯಿತು

ತಾ. 21 ರಲ್ಲಿ ಭಾಗಮಂಡಲದಲ್ಲಿ ಶ್ರೀ ಟಿ. ರಂಗಾಚಾರ್‌ರವರ ಅಧ್ಯಕ್ಷತೆಯಲ್ಲಿ ನಡೆದ ಪಬ್ಲಿಕ್ ಮೀಟಿಂಗಿನಲ್ಲೂ ಇದೇ ತೀರ್ಮಾನವಾಗಿ, ಶ್ರೀ ತೆದಂಡಾಡಿ ಗಣಪತ್ತಿಯವರನ್ನು ಪ್ರತಿನಿಧಿಯಾಗಿ ಚುನಾಯಿಸಲಾಯಿತು

ರಣಭೇರಿ.

—oo—

'ನಾಜಿ' ಭೂತವು ಬಿಚ್ಚಲಿನ ಶೀಘ್ರತೆಯಲ್ಲಿ ಜರ್ಮನಿಯ ಉಳಿಯಲಿ. ಇನ್ನು 'ಮೊರ್ಗ' ಎಂಬ ಪಾನಿ ಜನೇರಿಂದ ಉನಾ. ಧ್ಯಕ್ಷರಿಂದ ಸರ್ ಹೆನ್ರಿವಾಲೇಸರು ಹೇಳಿದರು. ಈ ಅಭಿಪ್ರಾಯವು ಇಂದು ಲಂಡನ್‌ನಲ್ಲಿ ಸ್ವತ್ಯಮಾಡಲ್ಪಡುತ್ತಿದೆ. ಜರ್ಮನಿಯು ಸೋತು ಹಿನ್ನಡೆದಿದೆ. ಕಡೆಯ ವರೆಗೆ ಯೋರಾಡಿ ಅನಂಯ್ಯ ಸಪ್ಪವಾಡಿ ಕೊಳ್ಳುವವರ ಬದಲು ಮಿತ್ರರಿಗೆ ಶರಣಾಗತರಾಗಿ ಜೀವಉಳಿಸಿಕೊಳ್ಳುವದು ಯೋಗ್ಯವೆಂದು ಅಭಿಪ್ರಾಯಗಳು ಹಬ್ಬಿವೆ. ಆದರೆ ಇದು ಸಾಧ್ಯವೇ? ಯಾರಿಗೂ ಈ ವರೆಗೆ ತಿರಬಾಗದೆ ಎದೆಯನ್ನು ಮುಂದೆ ಮಾಡಿಕೊಂಡು ಗಂಭೀರನಾಗಿ ವರ್ತಿಸಿದ ಜರ್ಮನಿಯು ಮಿತ್ರರ ಮುಂದೆ ನೆಲಮುಟ್ಟಿ ಬಗ್ಗಲಾಶಾದೀ? ಯಾಕೆಂದರೆ ಪ್ರತಿಯೊಬ್ಬನಿಗೂ ಸ್ವಾಭೀಮಾನವೆಂಬುದಿದೆ. ಅದಿನ್ನು ಎತ್ತೇ ಕಷ್ಟಬಂದರೂ ಬಿಟ್ಟು ಕೊಟ್ಟು ವರ್ತಿಸಲಾರನು.

ದಿನಗಳು ಕಳೆದಂತೆ ಜರ್ಮನ್ ಸಪ್ಲಯರ್ಸ್‌ಗಳಿದ್ದವರು ಅವರ ಕೈಬಿಡಿಕೊಡಗಿ ಬ್ಬಾರೆ. ಅಷ್ಟೇ ಅಲ್ಲ; ಜರ್ಮನಿಯ ಮೇಲೆ ಯುದ್ಧವನ್ನು ಹೂಡಿವೆ. ಇಷ್ಟರ ಪರಿಗೆ ಸ್ನೇಹಿತನಂತಿದ್ದ ಫಿನ್ಲಂಡೂ ಸಹ ಜರ್ಮನಿಯ ಮೇಲೆ ಯುದ್ಧ ಸಾರಿದೆಯಂತೆ.

ಜರ್ಮನಿಯತ್ತ ಹರಿಯುತ್ತಿರುವ ಮಿತ್ರಸೇನಾಸ್ತೋಮವು ಒಂದನ್ನೊಂದು ಹೊಂದಿಕೊಂಡು ಅಖಂಡವಾಗಿ ನುಗ್ಗುತ್ತಿದೆ. ಹಿಟ್ಲರನು ಈ ವರೆಗೆ ತನ್ನ ಸೇನೆಗಳನ್ನು ಹಿಂದಕ್ಕೆ ತೆಗೆಯುತ್ತಾ ಬಂದು ತನ್ನ ಅಖಂಡವಾದ 'ಸೀಜ್‌ಫ್ರೈಡ್' ಕೋಟೆಯ ಹಿನ್ನಲೆಯಲ್ಲಿ ನಿಂತಿದ್ದಾನೆ. ಮಿತ್ರರು ಈಗ ಗೋಡೆಯ ಹಾಗೂ ಅವರಣಗಳನ್ನು ಛೇಧಿಸಿರುವರಂತೆ. ಒಂದೆಡೆಯಲ್ಲಿ ಬೆಳಗ್ಗೂ ನುಗ್ಗಿದ್ದಾರೆ. ಎಂಬೂ ವಾರ್ತೆ. ಆದರೆ ಈ ಕೋಟೆಯು ನಿಷ್ಪಯೋಜಕವಾಗಲ್ಲಾ. ಇನ್ನೂ ಬಲವಾಗಿಯೇ ಇದೆ. ಹಿಟ್ಲರನು ತನ್ನನ್ನು ತಾನೂ ಕೆಲವು ಕಾಲ ಹೀಗೆ ಬಂದೆ ತೆಗೆದುಕೊಂಡು ಮಿತ್ರರನ್ನು ಒಳ್ಳಲ್ಲಿ ಕಡೆದು ಯುದ್ಧದ ತೀವ್ರತೆಯಿಂದ ದೂರವನ್ನು ಮುಂದೂಡಬಹುದು. ಆದರೆ ಅದು ತೀರಾ ಗಂಡಾಂತರ ಕಾರಿಕವಾಗುವುದು. ಹಿಟ್ಲರನು ತಾನು ಹಿಂತೆಗೆದುಕೊಳ್ಳುವ ಯೋಜನೆಯನ್ನು ಒಪ್ಪಿ ಆ ರೀತಿ ನೂಡುತ್ತಾ ಬಂದಂತೆ ತನ್ನ ಇಂದಿನ ಅಪಾಯಕರ ಪರಿಸ್ಥಿತಿಗೆ ಕಾರಣನೆಂದು ಹೆಲವು ಯುದ್ಧ ತಜ್ಞರಾದವರು ಹೇಳುತ್ತಿದ್ದಾರೆ. ಹಿಂತೆಗೆಯುತ್ತಾ ಬಂದು ತನ್ನ ಮೂಲಭೂ ವಿಯೊಳಗೇ ಶತ್ರುವು ಕೇಂದ್ರೀಕರಿಸುವಾಗ ತನ್ನನ್ನು ಹಿಂತೆಗೆದುಕೊಳ್ಳುವುದು ಜ್ಞಾ ಘಾತವಲ್ಲ. ಜರ್ಮನಿಯಂ ತೆ ಹಿಂತೆಗೆದುಕೊಳ್ಳುವುದಿಲ್ಲ? ಅನ್ನು ಒಂದು ಪಟ್ಟಿಗೂ ತನ್ನ ಕಾರ್ಯ ಯೋಜನೆಯನ್ನು ಇಟ್ಟು ಗಾಡಲೇಬೇಕಿದೆ. ಆ ಯುದ್ಧದ ಅಂತಿಮ ಯುದ್ಧವನ್ನೇ ಜಯಿಸಿ; ಬಹು ಕರ್ಕಶವಾದ ಯುದ್ಧವೂ ಆಗುವುದು.

ಈ ಪೂರ್ವಭಾಗದಲ್ಲಿ ಕಳೆದ ನೂರಾರು ಯುದ್ಧದ ಅಂಶಗಳಾವುದನ್ನೂ, ಇಂದಿನ ಕದನ ಚಿತ್ರವನ್ನೂ ಹೋಲಿಸಿ ನೋಡಿದರೆ ಜರ್ಮನಿಯು ಬಳಿದಯವಿದ್ದದ್ದಕ್ಕಿಂತಲೂ ಸೀರಿಯಸ್ ವಾಗಿದಿಯೇ ಎಂಬ ರೀತಿ ಹುಟ್ಟುವದುಂಟು. ಕಳೆದ ಯುದ್ಧದಲ್ಲಿ ಇಂದಿನ ರೀತಿಯಲ್ಲಿ ಜರ್ಮನರು ತಂಡತಂಡವಾಗಿ ಶೈಸೆರೆಯೂಮದಲ್ಲಿ 1939ರ ಕಾಲಲ್ಲಿ ಇಡೀ ಜಗತ್ತನ್ನು ಜಯಿಸುವ ಹುಮ್ಮಸ್ಸಿನಿಂದ ರಣರಂಗಕ್ಕೆಳಿದ ಯೋಧರಲ್ಲಿ ಎಷ್ಟು ಜನರು ಜೀವಂತ ವಿದ್ದಾರೋ ಬಲ್ಲವರಾರು? ಈಗ ಅವರ ಬದಲು ಇರುವ ಯೋಧರಲ್ಲಿ ಅಷ್ಟೇ ಹುರುಪು, ಹುಮ್ಮಸ್ಸು ಇದೆಯೆಂದು ಹೇಳಬಲ್ಲವರಾರು? 1918ರಲ್ಲಿ ಜರ್ಮನಿಯನ್ನು ಈಗ ತೊಂಪರೆಗೀಡು ಮಾಡಿರುವ ರಷ್ಯಾದ ಸೇನೆಯೆಯಿಗಲ್ಲಿಲ್ಲ. ಪೂರ್ವಭಾಗದಿಂದ ಅದಕ್ಕೆ ಯಾವ ಸೊಂದಲವೂ ಇರಲಿಲ್ಲ. ಆದರೆ ಇಂದು ಇಕ್ಕಟ್ಟೆಯಲ್ಲಿಯೂ ಶಪ್ರ ಸೈನ್ಯಾ ರಗಳಿಂದ ತಾಡಿತವಾಗಿ ಜರ್ಮನಿಯು ಜರ್ಝರಿತವಾಗತೊಡಗಿದೆ. 1918ರಲ್ಲಿ ಜರ್ಮನಿಗೆ ಈಗಿರುವಷ್ಟು ಶತ್ರುಗಳೂ ಇರಲಿಲ್ಲ. ಈಗ ತನ್ನ ಅಂಕಿತದಲ್ಲಿರುವವರೇ ಶತ್ರುಗಳಾಗತೊಡಗಿದ್ದಾರೆ. 'ಶನಿಬಂದು ಹಿಡಿದಾಗ ನೆಲವೆದ್ದು ಬಡಿಯುವದು' ಎಂಬ ಸರ್ವಜ್ಞನ ನುಡಿಯಂತೆ ಜರ್ಮನಿಗೆ ಇಂದು ಮಿತ್ರರು ಶತ್ರುಗಳಾಗಿರುವುದಲ್ಲದೆ ಅಂತರಾಷ್ಟ್ರೀಯ ಸೈನಿಕ ದೃಷ್ಟಿಗಳಿಂದ ಜರ್ಮನಿಯು ಅಗಾಧವಾಗಿ ತನ್ನ ಸ್ಥಿತಿಗಿಂತಲೂ ಅಶಕ್ತವಾಗಿತ್ತು. ಆದರೂ ಅಪಜಯವು ತಪ್ಪಿಲ್ಲಿ. ಆದರೆ ಇಂದು ಜರ್ಮನಿಯು ಸ್ಥಿತಿ ಚಿಂತಾಜನಕವಿದೆಯೆಂದು ಎಲ್ಲರಿಗಳು ಹೇಳುತ್ತಿವೆ. ದೇಶದೊಳಗೇ ಅಂತರ್ಕಲಹಗಳಾಗುತ್ತಿವೆಯೆಂದೂ ಪರದಿಗಳಿವೆ. ಒಟ್ಟಿನಲ್ಲಿ ಕಳೆದ ಮಹಾಯುದ್ಧದ ಜರ್ಮನ್ ನಾಯಕರಂತೆ ಹಿಂಡೆನ್‌ಬರ್ಗ್ ಮೂ ಲ್ಯೂಡೆನ್‌ಡಾರ್ಫ್‌ಗಿಂತಲೂ ಚತುರನು. ದೇಶಗೊಳಗಾದ ರಂಗೆಯನ್ನು ಪ್ರಥಮಿಸಿ ಸಬಲವಿಸಿಕೊಂಡಿದ್ದಾನೆ. ದೇಶದೊಳಗೆ ತಿಕ್ಕಾಟ್ಟವನ್ನು ತಂದು ನಾಗರಿಕ ಸೈನ್ಯಗಳನ್ನು ವಿಕ್ಷೀಣಿಸಿದ್ದಾನೆ ಆದ್ದರಿಂದ ಸಿಂಡೆಯಿಂದ ಜರ್ಮನಿಯನ್ನು ಶರಣಾಗುವಂತಾಗಲಾರದು. ಜರ್ಮನ್ ಗಡಿಯು ಮಿತ್ರರ ಪ್ರಹಾರಗಳಿಗೆ ಸುಲಭದಲ್ಲಿ ದಾರಿಕೊಡದು. ಜರ್ಮನರು ಕಜ್ಜೆಯಿಂದ ಮಿತ್ರರನ್ನು ಕಷ್ಟಿಸಿ ಈ ಕಡೆಯ ಯುದ್ಧದಲ್ಲಿ ಎಮರಿಸಬಹುದು.

ಇಂದು ಯುದ್ಧ ಜರ್ಮನಿಯೊಳಗೆ ನಡೆಯುತ್ತಿದೆ. ಜರ್ಮನರ ಜೊತೆಗುತ್ಸಾಹಗಳು ಇನ್ನೂ ಜೊರಬಿದ್ದಿರುವಿಲ್ಲ. ಈ ಕಡೆಯಿಂದ ಐದು ಮೂರ್ಗಗಳ ಮೂಲಕ ಮಿತ್ರರು ಜರ್ಮನಿಯೊಳಗೆ ನುಗ್ಗಲು ಪ್ರಯತ್ನ ಮಾಡುತ್ತಿದ್ದಾರೆ. 'ಮಿತ್ರರು ಜರ್ಮನಿಯೊಳಕ್ಕೆ ನುಗ್ಗಿ ಬಂದರೆ ಪ್ರತಿಯೊಂದು ಮನೆಯನ್ನು ಸುಟ್ಟುಹಾಕಲಾಗುವದು, ಪ್ರತಿಯೊಂದು ರಸ್ತೆಯನ್ನು ನಾಶಮಾಡಲಾಗುವದು, ಪ್ರತ್ಯೆಯ ಅಡಚಣೆಯನ್ನು ಸ್ವಾಗತಿಸುವಂತೆ ಮಾಡಲಾಗುವದು' ಎಂದು ಜರ್ಮನರು ಪ್ರಚಾರಮಾಡುತ್ತಿದ್ದಾರೆ. ಈ ರೀತಿ ತಮ್ಮ ಸ್ವಂತ ಆಸ್ತಿಯನ್ನು ಜರ್ಮನರು ನಾಶಮಾಡಕೊಡಗಿದರೆ ಮುಂದೆ ಅವರಿಗೆ ಏನೇನೂ ಕಷ್ಟಗಳು ಬಾರದಿರಲು. ಅವರಿಗೆ ಬೇಕಾದ ಸರಬರಿಯ, ಆಹಾರಸಾಮಗ್ರಿಗಳು ಬರುವದೆಲ್ಲಿಂದ? ಈ ನೀತಿಯಿಂದ ಜರ್ಮನಿಯು ಸಂಕುಚಿತವಾಗುತ್ತಾ ನಾಶವಾಗಬಹುದು.

ಇತ್ತ ಪೂರ್ವದಲ್ಲಿ ರಷ್ಯನರು ನಾಲ್ಕು ಮೂರ್ಗಗಳಲ್ಲಿ ಜರ್ಮನಿಯೊಳಗನ್ನುಗ್ಗಲು ಯತ್ನಿಸುತ್ತಿದ್ದಾರೆ. ಪೂರ್ವ ಪ್ರತ್ಯಾದಲ್ಲಿ ಜರ್ಮನರ ಪ್ರತಿಘಟನೆ ಅತೀ ತೀವ್ರವಾದುದರಿಂದ ರಷ್ಯನರು ಆ ಭಾಗವನ್ನು ಬಿಟ್ಟು ಸ್ವಲ್ಪ ದಕ್ಷಿಣಕ್ಕೆ ಬಂದಿರುವರು. ರಷ್ಯಾನೇನೆಗಳು ವೋರೆಂಡಿನಿಂದ ಕೆಳಗಿಳಿದು ಡುಂಕಿಸ್ಬೋವೇಕಿಯಾಕ್ಕೆ ನುಗ್ಗುವ ವಿಚಾರ ಮಾಡುತ್ತಿರುವರು. ಹೀಗೆ ಮಾಡುವದು ಜರ್ಮನರಿಗೆ ಗಂಡಾಂತರ ಕಾರಿಯಾಗಿದೆ. ರಷ್ಯನರಿಗೂ ಇದು ಸುರಕ್ಷಿತ ಎಂಗರ್‌ವಲ್ಲ ಹೇಗೂ ಜರ್ಮನಿಯು ಸುತ್ತಲೂ ಯುದ್ಧದ ಜ್ವಾಲೆಯನ್ನು ಹತ್ತಿಸಿಕೊಂಡು ಕೃಷೀಣ ಜರ್ಮನಿಯ ಹೃದಯ ಕೋಶದ ಹತ್ತಿರ ಹತ್ತಿರ ಬರತೊಡಗಿದೆ.

ಯೂರೋಪಿನ ಯುದ್ಧದ ಕೊನೆ ಅಂಕವು ಈ ರೀತಿ ನಡೆಯುತ್ತಿದ್ದರೆ ಇತ್ತ ಪೂರ್ವದಲ್ಲಿ ಜಪಾನಿನ ಮೇಲಿನ ಯುದ್ಧದ ಪೂರ್ವಾಂಕದ ಸಿದ್ಧತೆಗಳಾಗುತ್ತಿವೆ. ಅಮೇರಿಕನರು ಫಿಲಿಫೈನಿನ ಮೇಲೆ ದೊಡ್ಡ ಪ್ರಮಾಣದಿಂದ ಯುದ್ಧ ಹೂಡಿ ವಿಜಯ ಮಾಡುತ್ತಿದ್ದಾರೆ. ಈ ವರೆಗೆ ಈ ಭಾಗದ ಯುದ್ಧವು ವಿಶಾಲ ರೀತಿಯಿಂದ ನಡೆದೇ ಇಲ್ಲ. ಈ ಭಾಗಕ್ಕೆ ಯುದ್ಧ ವಿಚಾರ ವಿನಿಮಯಮಾಡಲು ಚರ್ಚಿಲ್ ಮತ್ತು ರೂಸ್‌ವೆಲ್ಟರು ಕ್ವಿಬೆಕ್‌ನಲ್ಲಿ ಸೇರಿರುವರು. ಜಪಾನನ್ನು ಮಣಿಸುವ ಭಾರವು ಹೆಚ್ಚಾಗಿ ಅಮೇರಿಕನರ ಮೇಲೆ ಬೀಳಬಹುದಾದ್ದರಿಂದ ಈ ಭಾಗದ ಯೋಜನೆಗಳೆಲ್ಲವೂ ರೂಸ್‌ವೆಲ್ಟರ ಅಭಿಪ್ರಾಯದಂತೆ ನಡೆಯಬಹುದು.

ನಿಮ್ಮ ದಿನನಿತ್ಯದ ಉಪಯೋಗಕ್ಕೆ ಉತ್ತಮೋತ್ತಮ ವಾ ದ

ಪಲಿಮಳಪುಳ್ಳ

—ಬಾ ರ ಬಾ—

ಕಾಫಿ ಪುಡಿ

ಇದನ್ನೇ ಉಪಯೋಗಿಸಿರಿ.

ಕಾಫಿ ಪುಡಿಗಳಲ್ಲಿ ತಿಲಕಪ್ರಾಯವಾದ್ದು.

SHRI SHARADA COFFEE HOME,

McDOWELLS BUILDINGS, *MERCARA.*

ಕಸ್ತೂರಿ ಬಾ ಸ್ಮಾರಕ ನಿಧಿ.

ಶ್ರೀಯುತ ಎಸ್. ಪಟ್ಟಮಾಡ ಎಸ್. ಅಶ್ವತ್ಥನಾರಾಯಣ 51
ಡಾ. ಕೊಂಗಂಡ ಎ. ಅಯ್ಯಮ್ಮನವರು 50
,, ಚೇಂದ್ರಿಮಾಡ ಕೆ. ಅಪ್ಪಯ್ಯನವರು 25
ಶ್ರೀ ಬಮುವಂಡ ಗಣಪತಯ್ಯನವರು 25
ಸುಬ್ಬಾರಾಮು ಯೂನಿಯನ್ ಕಾಫಿಫರೆನ್ಸ್ 15
ಶ್ರೀಯುತ ಎಸ್. ಪಟ್ಟಮಾಡ ಸೋಮೆಯಂಡ ಮುದ್ದಯ್ಯನವರು 10
ಶ್ರೀ ಚಾಳಿಪಡ ಜೀವಪ್ಪನವರು 10
,, ಪಳಂಗಂಡ ಸಿ. ಕರುಂಬಯ್ಯನವರು 10
,, ಕೋದೆರ ಬಯ್ಯಪ್ಪನವರು 10
ಮಿಸಸ್ ಕೊಂಗಪ್ಪಂಡ ನಂಜಪ್ಪ, ಚಂಗಪ್ಪ ,, 10

5 ರೂ. ಕೊಟ್ಟವರು.

ಶ್ರೀ ಗಣಾಧಿ ಕಾರ್ಯನಿರ್ವಾಹಕ ಅಧಿಕಾರಿ, ಸಿ. ಕೆ. ಉತ್ತಪ್ಪ ಕುಟ್ಟ, ಬಿ ಅಬ್ದುಲ್ಲಾ, ಕೊಡಗು ವಿದ್ಯಾಸಂ. ಎ. ಎಸ್. ರಾಮಯ್ಯ, ವೀರಾಜಪೇಟೆ, ಮಿಸಸ್ ಬಿದ್ದಂಡ ಮುತ್ತಣ್ಣ, ಕೊಣ್ಣಲು ಎಳೆಯ ಸಮಾರ ಸಂಖ್ಯಾ —ಇವರುಗಳು.

2 ರೂ. ಕೊಟ್ಟವರು.

ಶ್ರೀ ಗಣಾಧಿ ಕಾರ್ಯವಾಹಕ ಗಣಪತಿ, ಮೂರ್ತಿರ ಮುತ್ತಪ್ಪ, ಪೆಕ್ಕೇರ ನಂಜುಂಡ, ಮಿಸಸ್ ಕೆಚಾ. ವೆಂಕಪ್ಪಯ್ಯ, ಚೆಕ್ಕಿಮಂಡ ಕರುಂಬಯ್ಯ ಗುಡ್ಡಾಂಡ ಭೀಮಯ್ಯ, ನಾಪನೆರವಂಡ ಅಚ್ಚಮ್ಮ, ಜಾರ್ಜ್ ಪೆನ್ನಪ್ಪ, ಮಿಸಸ್ ಬೊವ್ವೇರಿಯಂಡ ಪಕ್ಕೆಮ್ಮ ಮುದ್ದಯ್ಯ, ಬಮುವಂಡ ದಕ್ಕೆಸ್ಸ, ಜಾರ್ಜ್ ಎಂ. ಜೋನ್ಸ್ನ್ನ, ಕೊರವಂಡ ಮಂದಣ್ಣ —ಇವರುಗಳು. ಈ ವರೆಗೆ ಒಟ್ಟು ರೂ. 9,498 ಜಮೆಯಾಗಿದೆ.

ಸೂಚನೆ—ಸ್ಥಳ ಸಂಕೋಚದ ಕಾರಣ ಇಲ್ಲಿ ಪ್ರಕಟಿಸಿರುವ ಪಟ್ಟಿಯಲ್ಲಿ ಹೆಸರುಗಳನ್ನು ಬರುವ ವಾರ ಪ್ರಕಟಿಸಲಾಗುವುದು.

ಈ ದಿನಗಳಲ್ಲಿ ಜೀವವಿಮೆಯು ಜಾತಿ, ಮತ್ತು ಉದ್ಯೋಗಗಳ ಬೇಧವಿಲ್ಲದೆ ಎಲ್ಲರಿಗೂ ಅವಶ್ಯವೇ ದು ನಾವೆಲ್ಲರೂ ಒಪ್ಪುತೇವೆ.

ನಿವರಗಳಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್, ಲಿ.

ದಕ್ಷಿಣ ಹಿಂದೂಸ್ಥಾನ ಮುಖ್ಯ ಏಜಂಟರು.

ದಿ ಭೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

1) ಪುತ್ತೂರು, ಕಲ್ಲಿಕೋಟೆ.

ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಕಾಪಿಗಳೂ, ಎಜೆನ್ಸಿಗಳೂ ಇವೆ

ಧಾತುವೃದ್ಧಿ ರಸಾಯನ [ZANDU]

"ಕ್ಯಾಕ್ಟೋ—ಫಾಸ್‌ಫೋ—ಮೊಲ್ಫ"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ

ಈ ರಸಾಯನ ಕಾಯಿಲೆಯವರಿಗೆ, ಆಫೀಸ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಹಿತಕಾರಿ.

ವಿದ್ಯಾರ್ಥಿಗಳಿಗೆ, ನಕ್ಷೀಲರಿಗೆ, ವೈದ್ಯರಿಗೆ, ಡಾಕ್ಟರುಗಳಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜರಠಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನಪಜೀವಸಕರವಾದ ಎಲ್ಲಾ ಸತ್ವ ಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ

ಇದರಲ್ಲಿ ಇಲೆಕ್ಟ್ರಿಕ್ ಫಾಸ್‌ಫೋಮೊಲ್ಫ್, ಹೆಮೋಗ್ಲೋಬಿನ್, ಸೋಡಿಯಂ ಸರೊ ಫಾಸ್ ಫೇಟ್ ಪೆಪ್ಸಿನ್, ಸಾಲ್, ಮೊಲ್ಫ ಎಕ್ಸ್‌ಟ್ರಾಕ್ಟ್ ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂತೆ ವಿದೆ. ಇಂದಿನಿಂದಲೇ ಸೇವಿಸಿ ಆತುರತ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಪಾಕಗಳಲ್ಲಿದೆ

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,

3) ಗೋಖಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

40) ಸ್ಥಾಪನೆ—೧೯೧೮.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಪ್ನ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂಪಿಯ
	ಚಾಲ್ತಿಯಿರುವ ವಿಮೆ	೧೩,೪೯,೦೮೮,೦೦೦ ,,
	ಆಸ್ತಿ	೬,೫೦,೪೬,೦೦೦ ,,
	ಕಂಪೆನಿಯ ಅವಿಯಲ್ಲಿ ಕೊಟ್ಟ ಕ್ಲೈಮುಗಳು	೪,೩೪,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆ್ಯಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. ೫೫,೦೪೦, ಇವೂ ಬಾಬ್ತ ಶೇಷವಾಗಿ 2,24,750 ವಸೂಲಾದ ಫ್ಲೇಮಸಿನಲ್ಲಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ತತ್ಸಂಬಂಧ ಸಂಘಗಳನ್ನೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟು ದಾರರಿಗೆ ಅವರ ಡಿಪಾಜಿಟ್ಟು ಅಧಾವಧಿ ವೇಳೆಗೆ 90% ಕೊಡಲಾಗುತ್ತೆ. ನಿರಖು ರೇಮಣಕೆ ಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 3. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟು ಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

"ಟ್ರಾಪಿಕಲ್"

ಕಂಪೆನಿಯಲ್ಲಿ ವಿಮೆ ಮಾಡುವದೇ

ಯೋಗ್ಯವೆಂದು ನಿಮ್ಮ 1944 ರ ತೀರ್ಮಾನವಾಗಲಿ

1943ರಲ್ಲಿ ಮಾಡಿದ ವಿಮೆ ಮೌಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಜೀರ: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ರಿಕೆಗೆ ಬರೆಯಿರಿ:

ಜೆ.ಪಿ. ಯು. ಅಚ್ಚಣ್ಣ, ಯಂ. ರಂಗನಾಥಶೆಟ್ಟಿ,

35) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಭಾರತದ ಕ್ರೈಸ್ತ

—೧೦—

ಲೇ|| ಯುಂ. ಪಿ. ಜಾಪೆತ್

ಇಂದು ಕ್ರಿಸ್ತ ಭಾರತಕ್ಕೆ ಬರಲಾರ ಯಕೆಂದರೆ ಸ್ಥಾಪಿತ ಸೊಬ್ಬನ–ಪುಣ್ಯಾತ್ಮ ೧೦೧–ರೂಪದಲ್ಲಿ ಅನತರಿಸಿದ್ದಾನೆ. ಭಾರತದ ಕೋಟ್ಯಾಂತರ ಜನರಿಗೆ ಆತನೇ ಕ್ರಿಸ್ತ. ಅವರ ಪಾಲಿಗೆ ಆತನೇ ಜಗದೋದ್ಧಾರಕ, ಸತ್ಯ ಪ್ರಚಾರಕ. ಭಾರತದ ಸಣ್ಣ ಹಳ್ಳಿಯೊಂದರಲ್ಲಿ ಕೂತಿದ್ದಾನೆ ಆತ. ರಾಟೆಯನ್ನು ತಿರುಗಿಸುತ್ತ ಸತ್ಯವನ್ನು ನೂಲುತ್ತಿದ್ದಾನೆ. ಜಿಲ್ಲೆಯ ಜನಕೋಟಿಗೆ ಪ್ರೇಮ ಮತ್ತು ದೆಳಕಿನ ಆಸುಭವನವನ್ನು ಉಂಟುಮಾಡಿ ಕೊಡುತ್ತಿದ್ದಾನೆ.

ಉದಾರಿ ಪಾಶ್ಚಿಮಾತ್ಯದೇಶಗಳು ಭಾರತವನ್ನು "ನಾಗರಿಕ"ವನ್ನಾಗಿ ಮಾಡಲು ಹೊರಟಿದ್ದು ಅನೇಕ ವರ್ಷಗಳ ಹಿಂದ! ಅಂದಿನಿಂದ ಎಲ್ಲ ಪಂಥಗಳ ಸ್ತ್ರೀ—ಪುರುಷರು ಬಾರತ ತೀರವನ್ನು ತುಳಿದ್ದಾರೆ. ಅವರು ಬಂದ ಕಾರಣ ನಾನಾ ವಿಧ ಸಾಮ್ರಾಜ್ಯ ನಿರ್ಮಾಪಕರಾದ ಲಾರ್ಡ್ ಕ್ಲೈವ್, ವಾರನ್ ಹೇಸ್ಟಿಂಗ್ ಇವರಿಂದ ಹಿಡಿದು ಕಲ್ಕೀಹತಿಸಕರಾದ ವೆಲರ್ಜಿ ವಿಲ್ಕೋಲಾಸ್‌ರವರೆಗೆ ನಾನಾ ಮುಖನೀಯರು ನಮ್ಮ ದೇಶಕ್ಕೆ ಬಂದು ಹೋದರು. ಇವರೆಲ್ಲ ಭಾರತದ ಮಿತ್ರರು

ಭಾರತ ಅದೊತಹನಾದು! ತಮ್ಮ ದೇಶಕ್ಕೆ ಕಾಲಿಟ್ಟ ವಿದೇಶೀಯರಿಗೆಲ್ಲ ಭಾರತೀಯರು ಸುಸ್ವಾಗತ ನೀಡಿದ್ದಾರೆ; ಸಕಲ ಸುವಿಕಲ್ಪಿಸಿದ್ದಾರೆ ಒಂದು ದೃಷ್ಟಿಯಂದ ನೋಡಿದರೆ ಭಾರತೀಯರಲ್ಲಿ ಈ ಅತಿಥಿಸತ್ಕಾರ ತಪ್ಪೆನ್ನುವಷ್ಟು ಬೆಳೆದಿದೆ. ಅವರ ಗುಣ ಅಷ್ಟು ನೋಲ್ಮಟ್ಟದ್ದು. ಇದರಿಂದಲೇ ಕ್ಯಾಥೆರೈನ್ ಮೇಯೋ ಮುಂತಾದವರು ಸುಲಭವಾಗಿ ಹುಮಲಯದಿಂದ ಕನ್ಯಾಕುಮಾರಿವರೆಗೆ ಸಂಚರಿಸಿದ್ದು. ಮಿತ್ರನ ವೇಷದಲ್ಲಿರುವ ಶತ್ರುವಿಗೆ ತಾನು ಆಶ್ರಯನಿತ್ತಿರುವುದು ಭಾರತಕ್ಕೆ ಹೇಗೆ ಗೊತ್ತು?

ಸಾನ್ರ್ಯಾಜ್ಯಶಾಹಿ ಭಾರತಕ್ಕೆ ಆಡಿಯಿಟ್ಟಾಗ ಅದರ ಹಿಂದೆ ಮೆಷ್ಟ ಸರಿವಾರ ಬಂದು. ಅಳ ಬಾದವರು ತಮ್ಮ ಕಟ್ಟಿಣದ ಮುಷ್ಟಿಗೆ ಮೊಮವಲ್ಲು ತೊಡಿಸಿ, ಆದರ ಭೀಷಣ ಸ್ವರೂಪವನ್ನು ಮರೆಮಾಚಬೇಕಷ್ಟೆ. ಭಾರತವನ್ನು ಗೆಲ್ಲಲು ಮತ್ತು ಸೂರೆಹೊಡಲು ಬಂದ ಸೈನಿಕನೂ ವ್ಯಾಪಾರಿಯೂ ತಮ್ಮ ಹಿಂದೆ 'ಮಿಷನರಿ' (ಕ್ರಿಸ್ತ ಧರ್ಮ ಪ್ರಚಾರಕರು)ಗಳನ್ನು ಕರತಂದರು ಯಾಕೆ? ಭಾರತದ ಆತ್ಮೋದ್ಧಾರಕ್ಕಾಗಿ

ಒಂದು ಧರ್ಮದವರನ್ನು ಇನ್ನೊಂದು ಧರ್ಮಕ್ಕೆ ತಿರುಗಿಸುವುದೆಂದರೆ—ಆ ಕೆಲಸ ಎಷ್ಟೇ ಒಳ್ಳೆಯದಾಗಿರಲಿ—ಅದನ್ನು ಮಾನವನು ಸಹಿಸನು. ಇದರ ಜೊತೆಗೆ ಈಸಾಯಿ ಧರ್ಮದ ತೊಟ್ಟಿಲೆಂದು ಭುಜಪಟ್ಟಿಕೊಳ್ಳುವ ದೇಶಗಳು ನಿಜವಾಗಿಯೂ ಆ ಧರ್ಮಕ್ಕೆ ಹೆಸರು ತಾರಿಸ್ಲಿವೆಂಬ ವಿಚಾರ ಮೇಲಿಂದ ಮೇಲೆ ಮನಸ್ಸಿಗೆ ಬಂದಾಗಲಂತೂ ತೀರ ಚಿಗುಸ್ಲೆ ಆಗುತ್ತದೆ.

ಇಂದು ಕ್ರಿಸ್ತ ಭರತಖಂಡದಲ್ಲಿ ತನ್ನ ಮಹಿಮೆ ತೋರಿದ್ದಾನೆಂದು ನಾವು ಭಾವಿಸಬೇಕಾಗಿದೆ. ಮಹಾಮಹಿಮನಾದ ಸಾಧುವೊಬ್ಬನು ಕ್ರಿಸ್ತನ ಅದರ್ಶ ಜ್ಯೋತಿಯನ್ನು ಇಲ್ಲಿ ಎತ್ತಿ ಹಿಡಿದಿದ್ದಾನೆ. ಮೊದಮೊದಲು ಯೂರೋಪಿನಲ್ಲಿ ಅನೇಕರು ಈಸಾಯಿಧರ್ಮಕ್ಕಾಗಿ ಜೀವವಿಟ್ಟರು. ಇಂದು ದಿನವಹಿ ಅಲ್ಲಿ ಜೀವತರಣ ನಡೆಯುತ್ತಲೇ ಇದೆ. ಇಂದು ಯೂರೋಪು ಕಕ್ಷಿಯ ಧರ್ಮವನ್ನು ಎತ್ತಿ ಹಿಡಿದಿದೆ ಇನ್ನು ಕ್ರಿಸ್ತ ಕ್ಕೆ ತೀರ ಪಿರುದ್ಧವಾದುದು

ಈಸಾಯಿ ಪಾದ್ರಿಗಳು ಭಾರತದಲ್ಲಿ ಧರ್ಮೋದ್ಧಾರ ಮಾಡಬೇಕಾಗಿಲ್ಲ ಎನ್ನುವ ಮೂಲ ಕಾರಣವನ್ನು ಪೂರ್ತಿಪಡಿಸಿದೆ. ಈ ಪ್ರಶ್ನೆಯ ಕಡೆ ಸಾಗಿ, ಯುದ್ಧದಿಂದ ಕಂಗೆಟ್ಟಿರುವ ಒನತ್ಕೈ ಕ್ರಿಸ್ತ ಸಂದೇಶವನ್ನು ಜರೆಯೆಲೆ ಆ ಸಂದೇಶವನ್ನು ಈಸಾಯಿ ಪಾದ್ರಿಗಳಿಗೆ ಕೊಡಬಲ್ಲ ಮಹಾತ್ಮಭಾವನೊಬ್ಬ ಭಾರತಲ್ಲಿದ್ದಾನೆ. ಆತನ ವಾಸಸ್ಥಳ ಕೇಂದ್ರ ಭಾರತದಲ್ಲಿರುವ ಒಂದು ಹಳ್ಳಿ. ಆತ ಅಲ್ಲಿ ದಿನವಹಿ ರಾಟೆಯಿಂದ ಸತ್ಯವನ್ನು ಹೊರತೆಗೆಯುತ್ತಿದ್ದಾನೆ ಆ ಸತ್ಯ ಇಂದು ನಾನಾ ಧರ್ಮಗ್ರಂಥಗಳಲ್ಲಿ ಅಡಗಿಕೂತಿದೆ ಯವ ಜನರಿಗೂ ಬ್ಖಾಪಕವಿಲ್ಲ.

ಕ್ರಿಸ್ತ ಇಂದು ಭಾರತಕ್ಕೆ ಬರಲಾರ ಯಕೆಂದರೆ ಕ್ರಿಸ್ತ ಇಲ್ಲೇ ಇದ್ದಾನೆ

ಈಸಾಯಿ ಪಾದ್ರಿಗಳಿಂದ ನಮಗೆ ಅಪಕಾರವಾಗುತ್ತಿರುವುದು ಕೇವಲ ಧಾರ್ಮಿಕ ಕ್ಷೇತ್ರದ ಲ್ಲಲ್ಲ. ಈ ದೇಶದ ಅಧೀನತೆಯನ್ನು ಮುಂದು ಪಸಲು ಸಹ ಅವರು ಸಾಧನವಾಗಿದ್ದಾರೆ. ಅದು ಅವುಗೆ ಗೊತ್ತಿದೆಯೋ ಇಲ್ಲವೋ!

ಇಂದು ಭಾರತಕ್ಕೆ ಜೇಕಾಗಿರುವುದು ಧಾರ್ಮಿಕ ಸೋಲ್ಕವಲ್ಲ ಅಧ್ಯಾತ್ಮಿಕತೆಯನ್ನು ನಮಗೆ ಯಾರೂ ಬೋಧಿಸಬೇಕಾಗಿಲ್ಲ ಪೌರಾತನ ಕಾಲದಿಂದ ಭಾರತ ಅದರ್ಶ ಧಾರ್ಮಿಕತೆಯನ್ನು ಎತ್ತಿ ಹಿಡಿದಿದೆ. ಮಹಾತ್ಮ ಗಾಂಧಿಯನರೇ ಹೀಗೆ ಹೇಳಿದ್ದಾರೆ. 'ದೇವರು ಪಹ ಬಡವರ ಮುಂದೆ ಅನ್ನದ ರೂಪದಲ್ಲಿ ಅಲ್ಲದೆ ಮುತ್ತಾನ ರೂಪದಲ್ಲಿ ನಿಲ್ಲಲಾರ' ನಮಗೆ ಮಿತ್ರರು ಜೇಕು ನಿಜ. ಅವರು ಸಮಯಕ್ಕೆ ಸರಿವಾಗುವಂತಿರಬೇಕು. ಈ ನಾಡಿನಲ್ಲಿ ಸ್ವಾಗತ ಬಯಸುವವರು ಶ್ರೀ. ಸಿ. ಎಫ್. ಆಂಡ್ರೂಸ್, ವೆರಿಯರ್ ಎಲ್ವಿನ್, ಬಿಷಪ್ ಹೀಬರ್ ಮುಂತಾದ ಮಹನೀಯರ ರೂಪದಲ್ಲಿ ಬರಬೇಕು. ಅವರೆಲ್ಲ ಭಾರತದ ಅಜನ್ಮಸಿದ್ಧವಾದ ಸ್ವಾತಂತ್ರ್ಯದ ಜ್ಯೋತಿಯನ್ನು ಎತ್ತಿ ಹಿಡಿದಿದ್ದಾರೆ. ನಿಜವಾದ ಸೇವಾ ಭಾವನೆಯಿಂದ ತುಂಬಿ ಅವರು ಭಾರತಕ್ಕೆ ಬಂದರು. ಬಹಿರಂಗವಾಗಿ ಭಾರತದ ಅದರ್ಶವನ್ನು ಎತ್ತಿ ಹಿಡಿದರು. ಇದರ ಫಲವಾಗಿ ಅಧಿಕಾರಿಗಳಿಗೆ ಆಸಹನೆ ಹುಟ್ಟಿತು. ಅವನ್ನು ಸಹ ಆ ಮಹನೀಯರು ಪ್ರತಿಭಟಿಸಿ ನಿಂತರು

ಇಂತಹ ಮಹಾ ಆದರ್ಶ ಇಂದು ಕ್ರಿಸ್ತಪಾದ್ರಿಗಳ ಕ್ಷೇತ್ರದಲ್ಲಿ ಕಾಣಬರುವಾಗಿದೆ. ಭಾರತವು ಸ್ವಾತಂತ್ರ್ಯದ ಗಾಳಿಯನ್ನು ಸವಿಯಲು ಪೂರ್ವ ಲಿಮವರೆಗೆ ನಮಗೆ ಕ್ರಿಸ್ತಪಾದ್ರಿಗಳೊಡನೆ ದೇಪ ಭಾರತಕ್ಕೆ ಒಳ್ಳೆಯದನ್ನು ಒಯಸುವವರು ಅವರ ಕದಪದಲ್ಲಿ ಬಾಗವಹಿಸಬೇಕು. ಬಂದದ್ದನ್ನೆಲ್ಲ ಆಸುಳಿಸಲು ಸಿದ್ಧರಿರಬೇಕು. ವಾಣಿಜ್ಯ ದೇಶಗಳಿಗೆ ಬೇಕಾಗಿರುವುದು ಧಾರ್ಮಿಕ ಮುಕ್ತಿಯಲ್ಲ; ರಾಜಕೀಯ ಸ್ವಾತಂತ್ರ್ಯ—ಎಂದು ಪಾಶ್ಚಿಮಾತ್ಯ ದೇಶಗಳ ನಾಯಂಕರಿಗೆ ಬೋಧಿಸಬೇಕು. ಪೌರ್ವಾತ್ಯ ದೇಶಗಳು ಸಮಾನಸ್ಕಂಧರಂತೆ ಕೈ ತುಲಸಿಸಿದಾಗ ಈಸಾಯಿ ಪಾದ್ರಿಗಳು ಭಾರತಕ್ಕೆ ಬರಲಿ—ಬಂದು 20ನೇ ಶತಮಾನದ ಕ್ರಿಸ್ತನಿಗೆ ಪಾದಸೇವೆ ಸಲಿಸಲಿ.' (ವಿ. ಕ.)

ಗಾಂಧೀಜಿಯ ಸಂದೇಶ.

ವಾರ್ಸಾದ ಯಂತನೆಯು ಪೋಲೆಂಡಿನ ಯಾತನೆ, ಪೋಲರ ಯಾತನೆಯೇ ದಲಿತ ಜಗತ್ತಿನ ಯಾತನೆ, ಪೋಲೆಂಡ್ ಯಾವ ಮಿತ್ರ ರಾಷ್ಟ್ರದ ಮೇಲೆಯೂ ತನ್ನ ವಿನೇಚನೆಗಾಗಿ ಭರವಸೆ ಇಪಬೇಕಾಗಿಲ್ಲ. ದೇವರೊಬ್ಬರ ಮೇಲೆ ಭರವಸೆ ಇದಲಿ.' ಇದು ಪೋಲಂಗಾಗಿ ಗಾಂಧಿಯವರಿತ್ತ ಸಂದೇಶ.

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

ನಂ. ೩೦. ಮಿ. ೨೦೫೦.
KODAGU' MERCARA, (Coorg).

ಕೊಡಗು

ಸಂಪಾದಕರು—ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ ರೂ: ೩-೪-೦.

ಸಂಪುಟ ೨೧ | ಪೊನ್ನಂಪೇಟೆ ೨೯—೮—೧೯೪೫ನೇ ಶುಕ್ರವಾರ. | ಸಂಚಿಕೆ ೧೩

ಹಿಂದೂ ಮುಸ್ಲಿಂ ವಿಚ್ಛೇದ

[ಗಾಂಧಿ–ಜಿನ್ನಾ ಸೂತ್ರಚರ್ಚೆ ಮುಂದಿನ ಜಿಜ್ಞಾಸಾರ್ಥ ಈ ಲೇಖನವನ್ನು ಸಂಗ್ರಹಿಸಲಾಗಿದೆ]

ಗಾಂಧಿ–ಜಿನ್ನಾ ಸಂಭಾಷಣೆಗಳಲ್ಲಿ ಇನ್ನಾವುದೇ ವಿಚಾರ ಚರ್ಚೆಯಾಗಲಿ ಎಷ್ಟು ದಿನಗಳು ನಡೆಯಲಿ, ಕೊನೆಗೆ ಅದು ಪಾಕಿಸ್ತಾನದ ಪ್ರಶ್ನೆಗೆ ಬಂದು ನಿಲ್ಲುತ್ತದೆ ಎಂದು ಜಿನ್ನಾ ಹೇಳಿದ್ದಾರೆ.

ಗಾಳಿಯನ್ನು ಬೀಸುವುದೆಯೆಂದು ಬೆರಳಿನಿಂದ ತೋರಿಸಲು ಸಾಧ್ಯವೇ? ಅದನ್ನು ಕಾಣಬೇಕಾದರೆ ಅದರ ಪರಿಣಾಮವನ್ನು ನೋಡಬೇಕು. ಅಂತೆಯೇ ಪಾಕಿಸ್ತಾನವೆಂಬ ಪದವನ್ನು ಬಳಸದೆ ಜಿನ್ನಾರ ಬೇಡಿಕೆಯ ಪರಿಣಾಮವನ್ನು ಕಾಣಲು ಸಾಧ್ಯವಿಲ್ಲ. ಅದಕ್ಕೆ ಅವಕಾಶ ಕೊಡಬೇಕೆಂದು ಮುಸ್ಲಿಮರು ಕೇಳಿಕೊಳ್ಳುತ್ತಾರೆ. ಅದಕ್ಕೆ ಅವಕಾಶ ಕೊಡುವುದೆಂದರೆ ಅದನ್ನು ಕಾರ್ಯಗತಗೊಳಿಸಲು ಅವಕಾಶ ಕೊಡುವುದೆಂದೇ ಅರ್ಥ. ಆದ್ದರಿಂದ ಪಾಕಿಸ್ತಾನವನ್ನು ಕಾರ್ಯಗತಗೊಳಿಸಲು ಅವಕಾಶ ಕೊಡಬೇಕೆಂದು ಮುಸ್ಲಿಮರು ಕೇಳಿಕೊಳ್ಳುತ್ತಾರೆ. ಅದಕ್ಕೆ ಏನಾದರೂ ಒಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಒಪ್ಪಣ ಗಾಂಧಿಯವರಿಗೆ ಅವಕಾಶ ಕೊಡಿಸಲು ನಿರಾಕರಿಸುವುದು ಸಾಧ್ಯವಿಲ್ಲ.

ಆನಂತರ ಕ್ರಿಪ್ಸ್ ಸಲಹೆಗಳನ್ನು ಚರ್ಚಿಸಲು ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಕೆಂಡು ಹಾರಿ ಒಪ್ಪಿಗೆ ಪಡೆಯಲಿಲ್ಲ. ಅವಕಾಶ ಕೊಡಬೇಕೆಂದು ನಮ್ಮ ಕೈಯಲ್ಲಿ ಅವರು ಬ್ರಿಟಿಷ್ ಪರಕಾರವನ್ನು ಕೇಳಿಕೊಂಡರು. ಆದಕ್ಕೆ ಏನಾದರೂ ಒಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ! ಒಪ್ಪಣ ಗಾಂಧಿಯವರಿಗೆ ಅವಕಾಶ ಕೊಡಿಸಲು ಸಾಧ್ಯವಿಲ್ಲ.

ಕ್ರಿಪ್ಸ್‌ರವರಿಗೆ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಕೆಂಡು ಹಾರಿ ಒಪ್ಪಿಗೆ ಪಡೆಯಲಿಲ್ಲ ಅವಕಾಶ ಕೊಡಬೇಕೆಂದು ನಮ್ಮ ಕೈಯಲ್ಲಿ ಬ್ರಿಟಿಷ್ ಪರಕಾರವನ್ನು ಕೇಳಿಕೊಂಡರು. ಆದಕ್ಕೆ ಏನಾದರೂ ಒಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ! ಒಪ್ಪಣ ಗಾಂಧಿಯವರಿಗೆ ಅವಕಾಶ ಕೊಡಿಸಲು ಸಾಧ್ಯವಿಲ್ಲ.

ಕೊನೆಗೆ ಜಿನ್ನಾ ಹಿಂದು ಮುಸ್ಲಿಂ ಸಹಕಾರ ಹಾಳಾಗಿದೆ ಎಂದು ಹೇಳಿದರು. ಇದು ಸ್ವಾಭಾವಿಕ ವಿಷಯ.

ಶಿಲ್ಪಿಗಳಿಬ್ಬರೂ ಅದ್ಭುತ ಭವ್ಯ ಭವಿಷ್ಯತ್ಸೌಧವನ್ನು ಕಟ್ಟಲು ಸಿದ್ಧರಾಗಿದ್ದಾರೆ. ಶಂಕುಸ್ಥಾಪನೆಯಾಗಿ ಕೆಲವೇ ಜಿನ್ನಾ ಲಂಗು ಲಗಾಮು ಕಳಚಿ ಬಿಡುಗಡೆಯನ್ನು ಕೊಡಿಸಿಕೊಳ್ಳಲು ಕಾಂಗ್ರೆಸ್ಸಿಗರು ಸಿದ್ಧರಾಗಿದ್ದಾರೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರನ್ನು ಕೆಂಡು ಹಾರಿ ಒಪ್ಪಿಗೆ ಪಡೆಯಲಿಲ್ಲ ಅವಕಾಶ ಕೊಡಬೇಕೆಂದು ನಮ್ಮ ಕೈಯಲ್ಲಿ ಬ್ರಿಟಿಷ್ ಪರಕಾರವನ್ನು ಕೇಳಿಕೊಂಡರು. ಆದಕ್ಕೆ ಏನಾದರೂ ಒಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ! ಒಪ್ಪಣ ಗಾಂಧಿಯವರಿಗೆ ಅವಕಾಶ ಕೊಡಿಸಲು ಸಾಧ್ಯವಿಲ್ಲ.

ಹಿಂದೂ ಮುಸ್ಲಿಂ ಐಕಮತ್ಯಕ್ಕಾಗಿ ತಮ್ಮ ಜೀವನವನ್ನೇ ಧಾರೆ ಎರೆದಿರುವುದಾಗಿ ಮಹಾತ್ಮರು ಸಿಳಿಸುತ್ತ 'ಇತಿ ಶಿಕ್ಷಾನಲ್ಲಿಯೇ ಭಾರತಕ್ಕೆ ಸ್ವಾತಂತ್ರ್ಯ ಬರಬೇಕೆಂದು ನೀವು ಬಯಸುವಿರಾದರೆ ಹಿಂದೂಗಳೂ ಮುಸ್ಲಿಮರೂ ಪರಸ್ಪರ ವಿಶ್ವಾಸವನ್ನು ಬೆಳೆಸಬೇಕು. ನಾವು ಒಂದೇ ಒಂದು ಜನಮತಕ್ಕಾಗಿ ಸ್ವರಾಜ್ಯದ ದಿನಗಳು ದೂರವಾಗಿ, ಸಂತೆಮೊದಲಾದರೂ ನಾನು ಮರಬೇಕೆಂದು ಅಂದಿರುವುದಾಗಿ ಲಂಡನ್ ಬಿಂದಿ ಒಂದು ಆದೇಶವನ್ನು ನಾನಿ ಹೇಳುತ್ತಿದ್ದೇನೆ; ಹಿಂದೂಗಳು, ಮುಸ್ಲಿಮರು, ಪಾರ್ಸಿಗಳು, ಕ್ರಿಶ್ಚಿಯನ್ನರು—ಎಲ್ಲರೂ ಒಂದು ಜನಾಂಗವಾದರೆ ಸ್ವರಾಜ್ಯ ಪತ್ತಗಳಾಗುವುದು ಖಂಬುದೇ ಅರ್ಥ. ನಾವೂ ಜಿನ್ನಾರ ಎರಡು ವಿಶೇಷ ಒತ್ತಾಸೆಯನ್ನು ಬಿಟ್ಟು ಮಿಕ್ಕ ಸಿನಗಳೆಲ್ಲವನ್ನು ಕಳೆದು 15 ದಿನಗಳೊಂದಿಗೆ ಸಭೆ ಸೇರಿಸಿದ್ದೇವೆ. ಇಷ್ಟಿಷ್ಟರಿಗೆ ನಡೆಯಿಸಿಕೊಡುವ ಜವಾಬ್ದಾರಿಯನ್ನು ತಳೆಯಿಸಿಕೊಳ್ಳುವ ಸ್ವಾತಂತ್ರ್ಯ ನನಗಿಲ್ಲ. ಧೈರ್ಯದಿಂದ ಮುಂದೆ ಬಂದು ಜನರ ಹೆಂಬಲ ಪಡೆಯಲು ಮಹಾತ್ಮರೇನಾದರೂ ರಕ್ತಪರೀಕ್ಷೆಯ ಮೂಲಕ ರಂಭಿಸಿದರೆ ಅವರು ಗೆಲ್ಲುವುದು ಖಂಡಿತ.

'ನಾವು ದಿನಪಹಿ ಇಭೆ ಸೇರಿಸಿರುವುದು ವ್ಯರ್ಥ ಕಾಲಹರಣವಲ್ಲ. ಜಗತ್ತಿನ ಪರಿಸ್ಥಿತಿಯಲ್ಲಿ ನಾವು ಸಭೆ ಸೇರಿರುವುದು ಕಗ್ಗಂಟಾಗಿ ಉಳಿದಿರುವ ಭಾರತ ಸಮಸ್ಯೆಯನ್ನು ಬಿಡಿಸಿ, ಒಂದು ಒಪ್ಪಂದಕ್ಕೆ ಬರಲು ನಾವು ಸರ್ವ ಪ್ರಯತ್ನವನ್ನು ಪಡುವುದಕ್ಕಿದ್ದೇವೆ. ನಾವು ಅಕಸ್ಮಿಕವಾಗಿ ಸಭೆ ಸೇರುವುದಾದರೆ ಅದಕ್ಕೆ ಉದ್ದೇಶವಿದ್ದೀತೆ? ಎಷ್ಟರಿಂದ ನಿರ್ಧರಿಸಿದ್ದೇವೆ? ಎಷ್ಟರಿಂದ ನಿರ್ಧರಿಸಿದ್ದೇವೆ? ಎಷ್ಟರಿಂದ ನಿರ್ಧರಿಸಿದ್ದೇವೆ?

ಹಿಂದೂ ಮುಸ್ಲಿಂ ವಿಚ್ಛೇದ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲವೆಂದು ಜಿನ್ನಾರವರೂ ತಿಳಿಸುವಷ್ಟರಲ್ಲಿ ಸಮಸ್ಯೆ ಬಗೆಹರಿಯಲಿಲ್ಲವೆಂದು ಜಗತ್ತಿಗೆ ತಿಳಿಯ

ಕೊ ಡ ಗು

ತಾ. ೨೯-೯-೧೯೪೪ನೇ ಶುಕ್ರವಾರ

ಗಾಂಧಿ ಜಯಂತಿ.

ಹಿಂದೂದೇಶದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲ್ಪಡತಕ್ಕಂಥಾ 1869 ನೇ ವರ್ಷದ ಅಕ್ಟೋಬರು ತಾ. ಎರಡನೇ ದಿನ ಕಳೆದು 75 ವರ್ಷಗಳು ಸಂದುಹೋದವು. ಅಂದೇ ನರಕುಲ ಚೂಡಾಮಣಿ ಮಹಾತ್ಮ ಗಾಂಧಿಯವರು ಹುಟ್ಟಿದ್ದು. ಅಂದೇ ಭಾರತ ಮಾತೆಯ ಭವ್ಯಭವಿಷ್ಯದ ಪೂರ್ವೋದಯವಾದುದು. ಅಂದೇ ಭಾರತ ದಿಗಂತದಲ್ಲಿ ಭಾಗ್ಯರವಿಯಾಗಿ ಮೆರೆಯತ್ತಿರುವ ಮಹಾವ್ಯಕ್ತಿ ಗಾಂಧಿಯವರ ಜನನವಾದುದು. ಈ ಮುಕ್ಕಾಲು ಶತಮಾನದ ಅವಧಿಯಲ್ಲಿ ಹಿಂದೂದೇಶದ ಚರಿತ್ರೆಯಲ್ಲಾದ, ಮಹಾಘಟನೆಗಳಲ್ಲಿ ಮಹಾತ್ಮರ ಕೈವಾಡ ವಿಲ್ಲದ್ದು ಯಾವುದೂ ಇಲ್ಲವೆಂದರೂ ಅತ್ಯುಕ್ತಿಯಾಗದು. ಭರತಖಂಡದ ಈ ಎಪ್ಪತ್ತೈದು ವರ್ಷಗಳ ಜೀವನ ಪ್ರವಾಹದಲ್ಲಿ ಸಮರಸವಾಗಿ ಬೆರೆತು, ಆ ಪ್ರವಾಹಕ್ಕೆ ಒಂದು ಚೇತನ ಶಕ್ತಿಯಾಗಿ, ಒಂದು ಮಾರ್ಗದರ್ಶಿಯಾಗಿ ಗಾಂಧೀಜಿಯವರು ಕೆಲಸ ಮಾಡಿದ್ದಾರೆ. ಪಾಶ್ಚಿಮಾತ್ಯ ಸಂಸ್ಕೃತಿಯ ಸಂಪರ್ಕದಿಂದ ಭಾರತೀಯರ ಧರ್ಮ ಸರಸ್ಸು ಕಲುಷಿತವಾಗಿ, ಭಾರತ ಸಂಸ್ಕೃತಿಯು ನುಸಿಯೊಗುತ್ತಿದ್ದ ಕಾಲಕ್ಕೆ ಜನ್ಮವೆತ್ತಿ ಭೌತಿಕವಾದ ಪರಕೀಯರ ಸಂಸ್ಕೃತಿಯ ಬೊಳ್ಳುತನವನ್ನು ಸಾರಿ ಮಹಾ ತಪೋನಿಧಿ ಗೌತಮಬುದ್ಧನಾಶೆ, ಮಹಾತೇಜಸ್ವಿಯಾದ ವಿವೇಕಾನಂದನಂತೆ ಭಾರತದ ಆರ್ಷೇಯ ಸಂಸ್ಕೃತಿಯ ವಿಜಯ ಡಿಂಡಿಮವನ್ನು ಜಗತ್ತಿನಲ್ಲಿ ಬಾರಿಸಿದ ಮಹಾಪುಣ್ಯ ವ್ಯಕ್ತಿ ಮಹಾತ್ಮರ ಜನ್ಮೋತ್ಸವವು ಸರ್ವರಿಗೂ ಪುಣ್ಯಮುಹೂರ್ತವಾಗಿದೆ. ಈ ಭಾರತ ಭಾಗ್ಯವಿಧಾತನ ಪುಣ್ಯಜೀವಕ್ಕೆ ಸ್ಮರಣೆಯೇ ಅಖಂಡವಾದ ಪ್ರಾರ್ಥನೆ; ಅತ್ಯುತ್ತಮವಾದ ದೇವತಾರಾಧನೆ. ಆದ್ದರಿಂದಲೇ ಡಾ. ಪಟ್ಟಾಭಿಯವರು 'ಮಹಾತ್ಮರು ಉಪನಿಷತ್ತಿನ ಪುರಾಣಪುರುಷ'ರೆಂದದ್ದು.

ಗುಲಾಮ ಭಾರತವನ್ನು ಸ್ವಾತಂತ್ರ್ಯದ ಸನ್ನಿಧಿಗೆ ಒಯ್ಯುವ ಕಾರ್ಯದಲ್ಲಿ ತನ್ನ ಜೀವನವನ್ನು ತೇದು ಸವೆಯಿಸಿದ ಈ ಮಹಾತ್ಮನ ಜೀವನ ಸಮಯದಲ್ಲಿ ನಾವು ಬದುಳುತ್ತಿರುವುದು ನಮ್ಮ ಪೂರ್ವಪುಣ್ಯ. ಇಂದಿನ ಯುಗದೇವತಾರಾದ ಮಹಾತ್ಮರ ಪ್ರತಿಯೊಂದು ಹೆಜ್ಜೆಯು ಮೋಕ್ಷವ ತೋಟಕು ಅಂತರ್ಯಾದಲ್ಲಿ ಬೆಳಗಿ, ಅವರ ರ ದಲ್ಲಿ ತತ್ವವಾಗಿ, ಮಂತ್ರದಲ್ಲಿ ಮಂ ಗಿ, ಜೀವನದ ಶ್ರೇಯೋಗಮವ ಕ್ಕೊಂದು ಶಾಶ್ವತ ಪ್ರೇರಕಶಕ್ತಿಯೂಗಿ, ಕಷ್ಟಕಾಲದಲ್ಲೊಂದು ವಜ್ರಕವಚವಾಗಿ, ನಿರಾಶೆಯ ತಿಮಿರದಲ್ಲೊಂದು ಆಶಾಕಿರಣವಾಗಿ, ಅಧೈರ್ಯದ ಕಾಲದಲ್ಲೊಂದು ಖಾಂಚಜನ್ಯವಾಗಿ ಜನಜೀವನವನ್ನು ಬೆಳಗಿಸುತ್ತಿದೆ. ಈ ಮಹಾ ತತ್ವಗಳನ್ನು ಗಾಂಧೀಜಿಯವರು ಕಾಯ್ದರೂಪದಲ್ಲಿ ಭಾರತೀಯರ ಮುಂದಿಟ್ಟಿರುವರು. ಮಹಾತ್ಮರು ಅದ್ವಿತೀಯರಾದ ಕರ್ಮಯೋಗಿಗಳು. ಕರ್ಮವೆಂಬುದೆ, ಕರೀರವನ್ನು ಸವೆಯಿಸದೆ ಯಾವ ಪರಮೋತ್ಕೃಷ್ಟ ಸಾಧನೆಯೂ ಸಾಧ್ಯವಿಲ್ಲವೆನ್ನುತ್ತಾರೆ. ಇಂದು ಭರತಖಂಡದಲ್ಲಿರುವ 400 ಮಿಲಿಯ ಭಾರತೀಯರೇ ದೇವರ ಪ್ರತೀಕಗಳು. ಮಾನವ ಸಮಾಜದ ಸೇವೆಮಾಡುವದೇ ಅತ್ಯುಚ್ಚ ಭಗವತ್ ಆರಾಧನೆ. 'ಚರಜಾ ತಕಲಿಗೇ ನಿಮ್ಮ ಪೂಜಾಸಾಧನಗಳಾಗಲಿ, ಅದರ ಮಂಜುಳಗಾನವೇ ನಿಮ್ಮ ಮಂತ್ರವಾಗಲೀ' ಎಂದು ಮಹಾತ್ಮರು ಸಾರಿದ್ದಾರೆ. ಸಮನ್ವಯ ದೃಷ್ಟಿಯಿಂದ ಸರ್ವರನ್ನು ನೋಡುವ, ಪರರ ಕಷ್ಟ ಕಾಲದಲ್ಲಿ ಧಾವಿಗಳಾಗುವ, ಉದಾತ್ತ ತತ್ವವನ್ನು ಬೋಧಿಸಿರುವ ಈ ಯುಗಾಚಾರ್ಯನ ಧೀರವಾಣಿಯು ವಿನಾಶ ಪಥದಲ್ಲಿ ಕ್ರಮಿಸುತ್ತಿರುವ ಜಗತ್ತಿಗೆ ಸಂಜೀವಿನಿಯಂತಿದೆ

ಕೇವಲ ಒಂದು ಉತ್ಸವದ ದೃಷ್ಟಿಯಿಂದ ಇಂಥಾ ಸಾವಿರ ಜಯಂತಿಗಳನ್ನಾಚರಿಸಿದರೂ ಅದರಿಂದ ಪುರುಷಾರ್ಥವೇನೂ ಸಾಧಿಸದು ಇರಲಿ ಪವಿತ್ರನಾಮವನ್ನು ಕೇಳಿ ಸೂನವರ್ಣವು ಹಿಗ್ಗುವದೋ, ಯೂ ಚರಣಧೂಳಿನಿಂದ ಸರ್ವವೂ ಪವಿತ್ರವಾಗುವದೆಂದು ಜನತೆಯು ನಂಬಿರುವದೋ ಅಂಥಾ ಯುಗದೇವನ ಜಯಂತಿಯೇ ಸಾಲದು. ಆ ಜಯಂತಿಯು ಸಾರ್ಥಕವಾಗಬೇಕಾದರೆ ಈ ದಿನವು ನಮ್ಮ ಪ್ರತಿಜ್ಞಾದಿನವೂ ಆಗಬೇಕು. ಯಾವ ತತ್ವಗಳಿಗಾಗಿ, ಯಾವ ಧ್ಯೇಯಸಾಧನೆಗಳಿಗಾಗಿ ಈ ಮಹಾವಿಭೂತಿಪುರುಷನು ಜೀವಿಸಿರುವೆನೋ ಆ ತತ್ವಗಳನ್ನು, ಆ ಧ್ಯೇಯವನ್ನು ನಮ್ಮ ಶಕ್ತಿಗೆ ತಕ್ಕಂತೆ ಸಾಧಿಸಲು ನಾವು ಪ್ರಯತ್ನಿಸಬೇಕು. ಇದೇ ಜಯಂತಿಯ ಮೂಲೋದ್ದೇಶವಾಗಿದೆ. ಈ ಉದ್ದೇಶವನ್ನು ಕೊಡಗುನಾಡಿನ ಮಹನೀಯರೂ ಸಾಧಿಸಿ ಜಗಜ್ಜೀವನದ ಸಾರವಾದ ಸುಧಾಮಯವಾದ, ಶಾಂತಿ ಪ್ರೇರಕವಾದ ಗಾಂಧೀತತ್ವಗಳ ಪ್ರಗತಿಗೆ, ಸ್ವರಾಜ್ಯಕ್ಕೆ ಸಹಾಯಕರಾಗಬೇಕು. ಶಾಂತಿನ ಹಿತಸಾಧನೆಯೊಗಬೇಕಾದರೆ, ಜನತೆಯ ಕಲ್ಯಾಣವಾಗಬೇಕಾದರೆ, ಮಾನವಗಣದ ಉದ್ಧಾರವಾಗಬೇಕಾದರೆ ಗಾಂಧಿ ಮಾರ್ಗವನ್ನು ಬಿಟ್ಟು ಅನ್ಯಮಾರ್ಗವಿಲ್ಲ. ಗಾಂಧೀಜಿಯವರು ಚಿರಾಯುಗಳಾಗಲಿ.

ಒಳದೇಶ.

ಮಡಿಕೇರಿಯ ಜೂನಿಯರ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಶ್ರೀ ನೆಲ್ಲಿಮಕ್ಕಡ ಬಿ. ಉತ್ತಪ್ಪನವರು ಎಲ್. ಡಿ. ಎಸ್ಸಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರು.

ಕರ್ನಾಟಕ ಸಂಘದ ಕೊಡಗಿನ ಶಾಖೆಯ ಮಹಾ ಸಭೆಯು ತಾರೀಕು 1-10-44ನೇ ಆದಿತ್ಯವಾರ ಸಾಯಂಕಾಲ 4 ಗಂಟೆಗೆ ಮಡಿಕೇರಿ ಓಂಕಾರೇಶ್ವರ ದೇವಸ್ಥಾನ ಹಾಲ್‌ನಲ್ಲಿ ನಡೆಯುವುದು.

ಕೇಂದ್ರ ಎಕ್ಸೈಸ್ ಇಲಾಖೆಯ ಸಬ್ ಇನ್ಸ್‌ಪೆಕ್ಟರುಗಳಾಗಿ ಶ್ರೀ ಗಳಾದ ಡಿ. ಎಸ್. ದೀಪಶೆಟ್ಟಿ, ಪಾಲೇಕಂಡ ಉತ್ತಪ್ಪ, ಮೂಚಿಮಂಡ ಏಯ್ಯಪ್ಪ, ಮೂಡೆರ ತಮ್ಮಯ್ಯ ಕೋದಂಡ ನೊಣ್ಣಪ್ಪ, ಪಿ ಎಸ್ ಪುಟ್ಟುಸ್ವಾಮಿ ಮತ್ತು ಸಿ ಕೆ. ಕಾಳಯ್ಯ ಇವರುಗಳನ್ನು ನೇಮಿಸಲಾಗಿದೆ

ಮಡಿಕೇರಿ ವಾಂಡರರ್ಸ್ ಹಾಕಿ ಟೀಮಿನವರು ದಸರಾದ ಸಂದರ್ಭ ನೈಸೂರಿನ ಹಾಕಿ ಸಂದ್ಯಾಟದ ಕಡೇ ಆಟದಲ್ಲಿ ಅಪಜಯವನ್ನು ಪಡೆದರು.

ತಲಚೇರಿಯ ಬ್ರೆನೆನ್ಸ್ ಕಾಲೇಜಿನ ಆಟಗಾರರು ಮಡಿಕೇರಿಗೆ ಬಂದು ಇಲ್ಲಿಯ ಹೈಸ್ಕೂಲು ಟೀಮಿನೊಡನೆ ಹಾಕಿ ಆಟದಲ್ಲಿ ಸೋತರು. ಬಾಸ್ಕೆಟ್ ಬಾಲ್ ಮತ್ತು ಕ್ರಿಕೆಟ್ ಆಟಗಳಲ್ಲಿ ಜಯಶೀಲರಾದರು.

ಗಾಂಧಿ ಜಯಂತಿಯನ್ನು ಮಡಿಕೇರಿಯಲ್ಲಿ ತಾರೀಕು 2-10-44ರಲ್ಲಿ ಆಚರಿಸಲಾಗುವದೆಂದು ತಿಳಿಯಬಂದಿದೆ.

ಮಡಿಕೇರಿ ವೇದಾಂತ ಮಂದಿರದವರು ನವರಾತ್ರಿ ಉತ್ಸವವನ್ನು ತಾ. 18ರಿಂದ 27ರ ವರೆಗೆ ವಿಜೃಂಭಣೆಯಿಂದ ನೆರವೇರಿಸಿದರು. ಅನೇಕ ಮಹನೀಯರ ಭಾಷಣ, ಹರಿಕಥೆ, ವಾಚನಗಳು ಏರ್ಪಡಿಸಲ್ಪಟ್ಟಿದ್ದವು.

ಸಾರ್ವಜನಿಕ ಸಭೆಗಳು.

ಇತರ ಎಲ್ಲಾ ಸಾಮಾನುಗಳ ಕ್ರಯವು ಏರಿ, ಜೀವನದ ಖರ್ಚು ಹೆಚ್ಚಾಗಿರುವ ಕಾರಣ ಭತ್ತದ ಕ್ರಯವನ್ನು ಕಮ್ಮಿಪಕ್ಷ ಗಾಡಿಗೆ ರೂ. 150 ಕ್ಕಾದರೂ ನಿರಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುವಂತೆ ಈ ತಾ. 29 ರಲ್ಲಿ ಮಡಿಕೇರಿಯಲ್ಲಿ ಶ್ರೀ ಕೊಕ್ಕಲೆರ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ತೀರ್ಮಾನಿಸಿ, ಈ ಸಂಬಂಧ ಚೇಳ್ ಕಮಿಷನರರವರಲ್ಲಿಗೆ ಡೆಪ್ಯುಟೇಶನ್ ಹೋಗಲು ಶ್ರೀ ಕೊಂಗೆಟ್ಟಿರ ಅಪ್ಪಯ್ಯನವರನ್ನು ಪ್ರತಿನಿಧಿಯಾಗಿ ಆರಿಸಲಾಯಿತು

ಇದೇ ರೀತಿ ಈ ತಾ. 28 ರಲ್ಲಿ ಕಾರ್ಯಾಂದದಲ್ಲಿ ಶ್ರೀ ಪಟ್ಟಡ ಮೊನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಪಬ್ಲಿಕ್ ವಿಷಯಗಳಲ್ಲೂ ತೀರ್ಮಾನ ಮಾಡಿ, ಡೆಪ್ಯುಟೇಶನ್ ಹೋಗಲು ಶ್ರೀ ಕುಟ್ಟಿಯರ ತಿಮ್ಮಯ್ಯನವರನ್ನು

ಸಂಧಾನ ವಿಫಲವಾಯಿತೇ

ಭಾರತದ ಸ್ವಾತಂತ್ರ್ಯ ಸಾಧನೆಗಾಗಿ ಮಿ. ಜಿನ್ನಾರವರು ಬಹಳಮತ್ಸರದಿಂದ ಸಹಕರಿಸಿ, ಪಾಕಿಸ್ತಾನ ಮುಸ್ಲಿಮರಿಗೆ ಆತ್ಮ ನಿರ್ಣಯ ಹಕ್ಕನ್ನು ಕೊಡಲಾಗುವುದು ಎಂದು ಗಾಂಧೀಜಿಯವರು ಮಿ. ಜಿನ್ನಾರಿಗೆ ತಮ್ಮ ಮೂತುಕತೆಯ ಕಾಲದಲ್ಲಿ ತಿಳಿಸಿದರೆಂದುಗೊತ್ತಾಗಿದೆ.

ಯುದ್ಧ ಕಾಲದ ಒಪ್ಪಂದ ಮತ್ತು ವ್ಯವಸ್ಥೆ ವಿಚಾರಗಳಲ್ಲಿ ಮಿ. ಜಿನ್ನಾರವರು ತಮಗೆ ಬೇಕಾದ ಎಲ್ಲಾ ಅಂಶಗಳನ್ನೂ ಗಾಂಧೀಜಿಯವರಿಂದ ಪಡೆದುಕೊಂಡರೆಂದೂ, ಆದರೆ ಸರ್ಕಾರದ ಮೇಲೆ ಒತ್ತಾಯ ಮಾಡುವ ವಿಷಯದಲ್ಲಿ ಅಷ್ಟು ಹೆಚ್ಚಾಗಿ ಸಹಕರಿಸುವ ಮನೋಭಾವ ವುಳ್ಳವರಾಗಿಲ್ಲವೆಂದೂ ಹೇಳಲಾಗಿದೆ. ಸರ್ಕಾರದವರು ಮಧ್ಯಕಾಲದ ವ್ಯವಸ್ಥೆ ವಿಚಾರವಾಗಿ ಎಷ್ಟರಮಟ್ಟಿಗೆ ಅವಕಾಶ ಕೊಡುತ್ತಾರೋ ಅಷ್ಟೇ ಸಾಕೆಂಬುವುದೇ ಮಿ. ಜಿನ್ನಾರವರ ಅಭಿಪ್ರಾಯವಾಗಿದೆ

ವೈಸರಾಯರ ಎಗ್ಸಿಕ್ಯುಟಿವ್ ಕೌನ್ಸಿಲನ್ನು ಈಗಿರುವ ಸ್ವರೂಪದಲ್ಲಿ ಪರಿಸಿಕೊಟ್ಟರೂ ಸಹ ಜಿಬಳ್ಳಾ ಮಿ. ಜಿನ್ನಾರವರ ಒಪ್ಪಿಗೆ ಇದೆಯಂತೆ. ವೈಸರಾಯರ ಎಗ್ಸಿಕ್ಯುಟಿವ್ ಕೌನ್ಸಿಲ್ ಸಚಿವರಾದ ಸರ್ ಸುಲ್ತಾನ್ ಅಹಮದ್ ಮತ್ತು ಸರ್ ಶೋಜಿಖ್ ನೂನ್ ಇವರುಗಳು ಜೋಬಾಯಿ ಮೂಲಕ ಪ್ರಸ್ತಾಪಿಸಲಾದ ವಿಷಯವು ಗಾಂಧೀಜಿಯವರಿಗೆ ಮೂತುಕತೆ ನಡೆಸಿದ ವಿಷಯವು ಗೊತ್ತಾಗಿದ್ದು.

ಮೂತುಕತೆ ವಿಫಲಯಾಗಲಿದೆ ಎಂಬ ಧಾನವು ವ್ಯರ್ಥವಾಗುವ ನಿರೀಕ್ಷೆಯಿಂದ ಇಲ್ಲಿಯ ರಾಜಕೀಯ ವಲಯದಲ್ಲಿ ವಿಷಾದವನ್ನೂ ನಿರಾಶೆಯನ್ನೂ ಉಂಟುಮಾಡಿದೆ ಸಂಧಾನವು ವಿಫಲವಾಯಿತೆಂದು ಬ್ರಿಟಿಷ್ ಆವರಣದಲ್ಲಿ ಮಾತ್ರ ಸಂತೋಷವಾಗಿದೆಯೆಂದು ಅಭಿಪ್ರಾಯವಿದೆ.

ಗಾಂಧಿ-ಜಿನ್ನಾ ಮೂತುಕತೆ ಫಲಕಾರಿಯಾಗುವ ಸಂಭವವಿಲ್ಲವೆಂದು ಶ್ರೀ ಸಿ. ರಾಜಗೋಪಾಲಾಚಾರ್ಯರಿಗೆ ಖಚಿತವಾಗಿ ತಿಳಿದುಬಂದಿದೆಯೆಂದು ಗೊತ್ತಾಗಿದೆ. ಈ ವಿಚಾರವನ್ನು ರಾಜಾಜಿಯವರು ತಮ್ಮ ಆಪ್ತ ಮಿತ್ರರೊಬ್ಬರಿಗೆ ತಿಳಿಸಿದರು.

ಗಾಂಧಿ-ಜಿನ್ನಾ ಮೂತುಕತೆ ಫಲಕಾರಿ ಆದರೆ ಅದು ದೊಡ್ಡ ಆಶ್ಚರ್ಯವೆಂದು ರಾಜಾಜಿಯವರು ಹೇಳಿದರೆಂದು ತಿಳಿದುಬಂದಿದೆ.

ಸಂಧಾನದಲ್ಲಿ ಗಾಂಧೀಜಿಯವರು ಬಹುಮಟ್ಟಿಗೆ ಬಹಳ ಉದಾರಭಾವದಿಂದ ನಡೆದುಕೊಂಡರು. ಮಿ. ಜಿನ್ನಾರವರು ಬಹು ಬಿಗಿಯಾಗಿಯೂ, ಹಟ

ರಣಭೇರಿ.

ಮುಂಗೋಪು ಯುದ್ಧದ ಕಡೇ ಘಂಟೆಯು ಮೂರೀಪಿನಲ್ಲಿ ನಾದೆಯುತ್ತಿದೆ ಮಿತ್ರದು ಜರ್ಮನ್ನಿಯೊಂಗೆ ನುಗ್ಗಿತೊಡಗಿದ್ದಾರೆ ಸವಿಪ್ರತೆಂಯ ಒರ್ಮಾನರು ಜೇಳುವ ಜರ್ಮನಿಯೋನುಗ್ಗಿ ನಾರಿಳು ಶಕ್ತನನ್ನು ನಾಶಮಾಡಲು ಮಿತ್ರರು ಅಖಂಡ ಪ್ರಯತ್ನಕ್ಕೆ ತೊಡಗಿದ್ದಾರೆ ಜಗತ್ತನ್ನೇ ವಶಪಡಿಸಿಕೊಳ್ಳಲು ಹೂರಟ ಜರ್ಮನಿಯೊಳಗೇ ಬಂದು ಶತ್ರುಗಳು ನುಗ್ಗುವ ಪರಿಸ್ಥಿತಿ ಇಂದು ಬಂದು ಹೋಗಿದೆ ಇದಾ ಸಂದಿಗ್ಧತೆಯಲ್ಲಿ, ಜರ್ಮನಿಯೇ ಶತ್ರುಗಳ ವಶಕ್ಕೆ ಇಂಚು ಇಂಚಾಗಿ ಸೇರುತ್ತಿದ್ದರೂ ಹಿಟ್ಲರನು ಮೊನಚಿಂದಿರಲು ಕಾರಣವೇನೆಂದು ಕೆಲವರು ಕೇಳುತ್ತಿದ್ದಾರೆ ಆತನು ಜರ್ಮನಿಯಿಂದ ಓಡಿಹೋಗುವ ಹಂಚಿಕೆಯಲ್ಲಿದ್ದಾನೆಂದು ಕೆಲವರು ಕೇಳುತ್ತಾರೆ ಹಿಟ್ಲರ ಸ ಈ ವರೆಗಿನ ಕಾರ್ಯ, ನಡತೆಗಳನ್ನು ನೋಡಿದರೆ ಆತನು ಈ ರೀತಿ ಶರ್ಟೆಪ್ಪಿಸಿಕೊಂಡು ಓಡಿಹೋದಾನೆಂಬುದಕ್ಕೆ ಆಧಾರಗಳು ದೊರೆಯುವುದಿಲ್ಲ. ಹೇಗೂ ಕಾರ್ಯಸಿದ್ಧಿ ಪ್ರಸಿದ್ಧನಾದ ಹಿಟ್ಲರನೆಲ್ಲೂ ಜರ್ಮನಿಯ ಹೊರಗಿನ ಬ್ಯಾಂಕಿಂಗ್ ಖಾತೆಯಲ್ಲಿ ಸಂಚಯ ಧನ ಸಂಗ್ರಹಿಸಿಟ್ಟಿರಬಹುದೆಂದು ತಿಳಿಯುವಂತಿಲ್ಲ. ಜರ್ಮನಿಗೆ ಗಂಡಾಂತರ ಬಂದ ಗಳಿಗೆಯಲ್ಲಿ ತಪ್ಪಿಸಿಕೊಂಡು ಓಡಿಹೋದಾನೆಂಬ ದೇಶದ್ರೋಹದ ಆರೋಪವೂ ಅವನ ಮೇಲಿಲ್ಲ. ಜರ್ಮನಿಯ ಕಡೇ ಉಸಿರಿರುವವರೆಗೂ ಅವನು ಅಲ್ಲಿಯೇ ಇರುತ್ತಾನೆ. ಅವನು ಹೋರಾಡುತ್ತಲೇ ಸಾಯುತ್ತಾನೆ. ಅದಕ್ಕಾಗಿಯೇ ಅವನು ಜರ್ಮನಿಯ ಸರ್ವಾಧಿಕಾರಿಯಾಗಿ ಹೊರಹೊಮ್ಮಿದ್ದು. ಅವನ ಸಾಂಘಿಕ ಸಂಸ್ಥಾಪಕ. ಅವನ ಹೋರಾಟಗಳಲ್ಲಿ ಮಿತ್ರರಾಷ್ಟ್ರಗಳನ್ನು ಬಹು ತೀವ್ರವಾಗಿ ಎದುರಿಸಿ ಸಿತ್ರರನ್ನು ಕೆಲವು ಕಡೆ ಹಿಮ್ಮೆಟ್ಟಿಸಿದ್ದಲ್ಲದೆ ಮಿತ್ರರಿಗೆ ಸಾಕಷ್ಟು ನಷ್ಟವನ್ನೂ ಉಂಟುಮಾಡಿದ್ದಾನೆ. ಹೇಗೂ ವಿತ್ರರು ಬಹು ಕ್ರಮವಹಿಸಿ ದಿಟ್ಟತನದಿಂದ ಕಾದಾಡಿದುದರಿಂದ ಮಿತ್ರರ ಬೃಹತ್ ಯೋಜನೆಯು ಅಗತ್ಯವಾಗಿ ಯಶಸ್ವೀರೀತಿ ಇವರ ಮನ್ನಡೆಯು ಅಗತ್ಯವಾಗಿದೆ. ಜರ್ಮನರ ಶಕ್ತಿ ಪೂರ್ಣ ಕುಗ್ಗಿದೆಯೆಂದು ಯಾವ ರೀತಿಯಿಂದಲೂ ಹೇಳಲಿಕ್ಕೆ ಬರುವುದಿಲ್ಲ.

ದುದು ವಿಫಲವಾಗಲು ಕಾರಣವಾಯಿತು. ಲೀಗ್ ನಿರ್ಣಯಕ್ಕಿಂತಲೂ ಅಧಿಕವಾಗಿ ಮಿಜಿನ್ಯಾರಿಯತ್ನ ಬೇಡಿಕೆಗಳನ್ನು ಮೊದಲಕತೆಯಲ್ಲಿಯೂ ಮಂಡಿಟ್ಟು ನಾಡಿನಿದ್ದಾರೆ ಎಂದುಹೇಳಲಾಗಿದೆ.

ಎರಡು ವಾರಗಳಿಂದ ನಡೆದ ಮೂಕುಕತೆಯೆಲ್ಲವೂ ವ್ಯರ್ಥವಾಯಿತು. ಯಾವ ವಿಧವಾದ ಒಪ್ಪಂದಕ್ಕೂ ಬರಲಿಲ್ಲವೆಂದು ಹೇಳಲಾಗಿದೆ ಉಭಯತರಿಗೂ ಶನಿವಾರಿಗೆ 26 ಗಂಟೆಗಳ ಕಾಲ ಮುತುವರ್ಜಿ ಕೊಡಲಾಗಿದೆ.

ಸಹಿಸಲಾರದಷ್ಟು ನಷ್ಟವಾಗಿದ್ದರೂ ಆತನ ಪ್ರತಿಭಟನಾ ಶಕ್ತಿ ಹೆಚ್ಚಿಕೊಳ್ಳುತ್ತಿದೆ ಇದೆ ಜರ್ಮನಿಯನ್ನು ಬಗ್ಗುಬಡಿಯಬೇಕಾದರೆ ಅಮಂಡವಾದ ಸಿದ್ಧಿಪ್ರೇಮ ಶೌರ್ಯವನ್ನು ನಾಶಮಾಡಬೇಕು ಈ ಶೌರ್ಯವು ಒಂದು ಕೋಟೆಯಲ್ಲ, ಅದು ಲಕ್ಷಾನುಲಕ್ಷ ಕೋಟಿಗಳ ಸಮ್ಮಿಲನ ಒಂದು ಕೋಟೆಯನ್ನು ಮುರಿದರೆ ಇನ್ನೊಂದು ಕೋಟೆಯು ಎದುರಿಸಲು ಸಿದ್ಧ. ಸೀಜ್‌ಫ್ರೈಡ್ ಲೈನನ್ನು ನಾಶಮಾಡಿದರೆ ಇಡೀ ಜರ್ಮನಿ ನಾಶವಾದಂತೆ. ಜರ್ಮನರ ಪ್ರತಿಭಟನೆ ಜೋರಾದಂತೆ ಮಿತ್ರರ ಪ್ರಹಾರಗಳೂ ಬಲವರ್ಧಿಸಿದೆ. ಜರ್ಮನರು ಮುಂದಿನ ದಿನಗಳಲ್ಲಿ ಒಡಾಟ ಕೌರ್ಯದಿಂದ ಪ್ರತಿಭಟಿಸಲು ಬೆಲ್ಜಿಯಂ ಕಂಡುಬರುತ್ತಿದೆ.

ಜರ್ಮನಿಯ ಜನಸಂಖ್ಯೆಯು ಇಂದು ಯೂರೋಪಿನ ಅಭಿವೃದ್ಧಿಯನ್ನೆಲ್ಲ ರಕ್ಷಿಸುವ ಶಕ್ತಿಯಾಗಿದೆ ಯೂರೋಪಿನ ಭವಿಷ್ಯವು ಜರ್ಮನಿಯ ಯೋಜನೆಯ ಮೇಲೆ ನಿಲ್ಲಬಹುದೆಂದು ಹೇಳಿದರೆ ಮೇಲೆ ಮೇಲೆ ಬುಡಕ್ಕಿರುವ ಅಜಯರ್ಯಕ್ಕೆ ದಿಕ್ಕೆಟ್ಟು ಪರಿಸುತ್ತಿರುವುದೆಂದು ಹೇಳಬೇಕಾಗಿಲ್ಲ. ಕಳೆದ ಲದಲ್ಲಿ ದೇಶವನ್ನು ಜಿಮ್ಮಿಜಗ್ಗಾಡಿಸಿದ ಹೊಗಳಾದ ಜನರನ್ನು ಜರ್ಮನರು ಬಲಿಗಾಗಿ ಸ್ವಾರ್ಥಪ್ರೇರಿತ ಹೋರಾಟಕ್ಕೆ ಕ್ಷಿದೆ. ಅವಕಾಶಕ್ಕಾಗಿ ಸ್ವಾರ್ಥವನ್ನು ತೀರಿಸಿಕೊಳ್ಳುವ ರು ಹಿಂಜರಿಯುವಂತೆ ಕಿರುವ ಲದಲ್ಲಿರುವ ಜನರಿಗೆ ಸ್ವಾಂತ್ರ್ಯಕ್ಕಾಗಿ ಹೋರಾಡುವ ಸಮರ್ಥನೆಯನ್ನು ಎಲೆಲ್ಲಿ ದಲು ಜೇಮ್ಸ್‌ಬಂಡ್ ಯಂಗ್‌ಮನ್ಸ್ ರು ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧರಾಗಿ ಸುತ್ತಿರುವಂತೆ ತಮ್ಮ ಕ್ಷೇಮವನ್ನು ದ್ಯಾವುದೂ ತ್ಯಾಗಮಾಡದ ಜನಾಂಗವನ್ನು ನುತ್ತಿಬ್ಬರಿಗೆ ಬಗಲಾರದು ಈ ರೈಷ್ಟಿಯಿಂದ ಜೇಮ್ಸ್‌ಬಂಡ್ ಜರ್ಮನರು ಎದೆ ಯುದ್ಧಕ್ಕೆ ಬಿಜುರಾಗುತ್ತಿರಲೇಬೇಕು ಯಾವದೇ ಜನಾಂಗದಲ್ಲಿ ಇರುವವೆಲ್ಲರೂ ಲರ್ದ ವೈಕ್ತಿಗಳೇ ಇರಲಾರರು. ಯುದ್ಧ ಸಾಕಷ್ಟ. ದೇಶವು ನಾಶವಾದರೂ ಆಗಲಿ, ನಶ್ಯ ಜೀವ ಉಳಿದು ಎಂದಿನ ಜೀವನ ನಡೆಯುವ ಸ್ಥಿತಿ ಬಂದರೆ ಸಾಕೆಂಬವರು ಇಲ್ಲದಿಲ್ಲ. ಆದರೆ ಒಂದು ರಾಷ್ಟ್ರವು ಜಗತ್ತಿನಲ್ಲಿ ಅದ್ವಿತೀಯವಾಗಿ ಹೊಯಬೇಕಾದರೆ, ಅನ್ನೆ ಜಾಜ್ಞೆಯಿಂದ, ಕಲ ವಾರಲದಿಂದ ಜಗತ್ತನ್ನು ಬೆರಗುಗೊಳಿಸಬೇಕಾದರೆ ಆ ಜನಾಂಗವು ಒಹುಮಂದಿಯಾದರೂ ಜೈವೈಶ್ಯಯಕ್ಕಾಗಿ ಸಿದ್ಧರಾಗಬೇಕು ನಾಡಿನ ವಿಶಿಗಾಗಿ ಶ್ರಮಿಸುವವರಿರಬೇಕು. ಆಗ್ಗಿಂದ ಜರ್ಮನಿಯು ಯುದ್ಧದ ವಿಶಮವಾತಾವರಣದಿಂದ ಬೇಸರಗೊಂಡಿದ್ದಿರಬಹುದಾದರೂ ಕಂಗೆ ಭಾಗದಿಂದ ಶತ್ರುಗಳು ಮುಂದೊತ್ತಿಬರುತ್ತಿದ್ದಾರೆ ಆದರೆ ಈ ಕಳೆದ ವಾರದಿಂದ ಸಂಘರ್ಷಣೆಯು ಸಾಗಗೂಡದೆ ಅವರ ದಾರಿಗೂ ಒಡ್ಡು ಹಾಕಿದ್ದಾರೆ ಜರ್ಮನರು.

ಈ ಎಳ್ಳಷ್ಟು ಬ್ರಿಟಿಷ್ ಪ್ರಧಾನ ಚರ್ಚಿಲ್ಲರೂ, ಅಮೇರಿಕ ಅಧ್ಯಕ್ಷ ರೂಸ್‌ವೆಲ್ಟರೂ ಕ್ವಿಬೆಕಿನಲ್ಲಿ ಮಾತುಕತೆ ನಡೆಸಿದರು ರಷ್ಯಾದ ಸ್ಟಾಲಿನ್‌ನಿಗೂ ಆಮಂತ್ರಣವಿತ್ತು ಸ್ಟಾಲಿನರು ಹೋಗದಿದ್ದರೂ ಅಂತೋಣಿಡನ್ ಮೊದಲಾದವರು ಈ ಚರ್ಚೆಯಲ್ಲಿದ್ದು ದನ್ನು ಯೋಚಿಸಿದರು ಯೂರೋಪಿನ ಭವಿಷ್ಯದ ವಿಚಾರ ಇದ್ದಿ ಚರ್ಚೆ ಆಗಿರಬಹುದೆಂದು ಹೇಳಲಾಗುವುದು ಆ ಸ್ಥಿತಿ ಜರ್ಮನಿಗೆ ಶರಣಾಗತಿ ಕೊಡುವಂತೆ ಹಾಕಿಗಾಗುವ ಪರಿಸ್ಥಿತಿಯೇ ಯಲ್ಲರೂವರಿಗೂ ಮಾನ್ಯವಾಗುವಂತೆ ಮುಂದಿನ ಭಯಂಕರ ಯುದ್ಧಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳುವಿಕೆ ಮುಂಗಿನ ಘಟನೆಗಳನ್ನು ಅವಲೋಕಿಸುತ್ತಿರುವಾ

ನಿಮ್ಮ ದಿನನಿತ್ಯದ ಉಪಯೋಗಕ್ಕೆ ಉಸ್ಮಾನೋತ್ತಮ ಪಾಪ ಪರಿಮಳದೈಲ —ಪಾರದರ್ಶಕ— ಕಾಫಿ ಸ್ಪೂನ್ ಇವನ್ನೇ ಉಪಯೋಗಿಸಿರಿ.

ಕಾಫಿ ಪುಡಿಗಳಲ್ಲಿ ತಿಲಕಪ್ರಾಯ ವಾಗಿದ್ದು.

SHRI SHARADA COFFEE HOME,
McDOWELLS BUILDINGS, *MERCARA.*

ನಂಬಿಕೆಗರ್ಹವಾದ ಸಂಸ್ಥೆಗಳು.

23ನೇ ತ್ರೈಮಾಸಿಕ ಮೌಲ್ಯಗಣನೆ.

ಹೂರು ವರ್ಷಗಳ ನಿವ್ವಳ ಲಾಭ 1,59,08,092.
ವಿಮಾದಾರರ ಕ್ಷೇಮನಿಧಿ 51 ಲಕ್ಷ ಸೇರಿಸಿದ.
ಬೋನಸ್‌ಸಂಗಳು ಹೋಲ್ ಲೈಫ್ 1000ಕ್ಕೆ ವರ್ಷಕ್ಕೆ 12½%
ಎಂಡೋಮೆಂಟ್ 1000ಕ್ಕೆ ವರ್ಷಕ್ಕೆ 10½%

'ಓರಿಯಂಟಲ್'

ಗೆವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ
ಸ್ಥಾಪನೆ ಭಾರತದಲ್ಲಿ 1874] [ಕಾರ್ಯ ಬಳಕೆ—ಬೊಂಬಾಯಿ.
ಶಾಖೆ—ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು.

ಈ ದಿನಗಳಲ್ಲಿ ಜೀವವಿಮೆಯು ಜಾತಿ, ಮತ್ತು ಉದ್ಯೋಗಗಳ ಬೇಧವಿಲ್ಲದೆ ಎಲ್ಲರಿಗೂ ಅವಶ್ಯವೆಂದು ನಾವೆಲ್ಲರೂ ಒಪ್ಪುತ್ತೇವೆ.

ವಿವರಗಳಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್, ಲಿ.

ಪಟ್ಟಣ ಹಿಂದೂಸ್ಥಾನ್ ಕ್ಕೆ ಮುಂಬಯಿ ಸಿಜಂಟರು.

ದಿ ಜೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

2) ಪುತ್ತೂರು, ಕಲ್ಲಿಕೋಟೆ.

ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ, ಏಜೆನ್ಸಿಗಳೂ ಇವೆ

ಧಾತು ವೃದ್ಧಿ ರಸಾಯನ (JANDU)

"ರ್ಯಾಕ್ಸ್ಟೋ—ಫಾಸ್ಫೋ—ಮೊಲ್ಟ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅವಶ್ಯಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ಬಿಡೋಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯುಂಟುಮಾಡುವುದು. ಇದರಲ್ಲಿ ಸಮಜೀವನಕರವಾದ ಎಲ್ಲಾ ವಿಧ ವಿಧವಾದ ಸತ್ವಗಳು ತಂಪಾಗಿ ರಕ್ತ ರಸಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋಸೋಲ್ಟ್, ಹೆಮೋಗ್ಲೋಬಿನ್, ಸೋಡಿಯಂ ಸಲೈನ್ ಫಾಸ್ಫೇಟ್ ಪೊಟ್ಯಾಸ್, ಸಾಲ್, ವೊಲ್ಟ್ ಎಲೆಕ್ಟ್ರಾಲೈಟ್ಸ್ ಮೊದಲಾದವೆಲ್ಲವೂ ಪ್ರಸಿದ್ಧ ಔಷಧಿಗಳಂಶವಿವೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಸ್ಥಾನಿದ ಔಷಧಿ ಅಂಗಡಿಗಳಲ್ಲಿವೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್.

4) ಗೋವಿಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

41) ಸ್ಥಾಪನೆ:—೧೮೯೬.

೪೭ನೇ ವಾರ್ಷಿಕ } ಪದಿಯಲ್ಲಿನ ಕೆಲವು } ಸ್ಪೆಷ್ಟ ಸಂಗತಿಗಳು.	ಒಟ್ಟು ಆದಾಯ:	೯೭,೩೭,೦೦೦ ರೂಪಾಯಿ
	ಚಾಲ್ತಿಯಿರುವ ನಿಮಿ	೧೬,೪೯,೮೮,೦೦೦ ,,
	ಆಸ್ತಿ	೬,೫೦,೪೬,೧೦೦ ,,
	ಕಂಪೆನಿಯ ಅಮಿಯಲ್ಲಿ ಕೊಡಬೇಕಾದ ಕ್ಲೈಮುಗಳು	೪,೫೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಲವೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರ್ ಆಗಿದೆ. (1921ರಲ್ಲಿ ಸ್ಥಾಪಿತವಾಗಿದೆ)

ವಸೂಲಾದ ಶೇರ್ ಮೊತ್ತಗಳು ರೂ. 95,040, ಜಮೆ ಬಾಬ್ತು ರೇಜರ್ವು 2,21,730 ವಸೂಲಾದ ಡೆಪಾಜಿಟ್ಟು 2,16,330, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಸಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಿಖ ರೇಸಾತಾಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 6. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 7½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 8½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರನು ಲೆಕ್ಕ ಪರಿಶೋಧನೆ ಮಾಡುತ್ತಾರೆ

"ಟ್ರಾಪಿಕಲ್"

ಪು. ವೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಬಾಷ್‌ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯರು ಭೂರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಘಾತ್ಯ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ಏಜೆಂ ಮಾಡಿರಿ.

ಸುಬ್ಬಿ ಖಚೇರಿ: **ಹೊಸ ದಿಲ್ಲಿ**] [ಹೆಚ್ಚಿನ ಮಾಹಿತಿಗೆ ಈ ಸಕ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಯಂ. ರಂಗನಾಥಶೆಟ್ಟಿ,

36) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಕಸ್ತೂರ್ ಬಾ ನಿಧಿ.

[illegible]	೨೧೧
ಶ್ರೀ ಮುಡಿಪು ಕೃಷ್ಣಾಚಾರ್ಯರು	೧೧೧
ಶ್ರೀ ಮಾಯಿಪಾಡಿ ಸುಬ್ರಾಯಪ್ಪನವರು	೧೧೦
[illegible]ಪಾಡಿ ಎಸ್ ತಿಮ್ಮಯ್ಯನವರು	೧೦೦
ಮಿಸ್ಸಿಸ್ ಬಿ. ಸುಬ್ಬಯ್ಯನವರು	೧೦೧
ಶೈನ್ಸ್‌ನವರು	೧೦೧
ಲೇಡೀಸ್ ಸೆಕಂಡ್ ಆಕ್ಸಿಲಿಯರಿ	೧೦೦
ಪುತ್ತೂರಿನ ಮೈದಾನವರು	೧೦೦
ಗೋಪಾಲಬಾಸರ ಪರಿಶಿಷ್ಟ ಮುತ್ತುಚಿಕ್ಕೇರ ಅಯ್ಯಯ್ಯನವರ ಸಂಗಡ	೯೩೬
ಕೆ. ಎಲ್ ಥಂಬಾಯಿಯವರು	೭೫
ದಾ. ಆರ್ಯಾನವರು	೫೦
ಶ್ರೀ ಬೊಳಿಯಂಡ ಅಳಿಪ್ಪನವರು	೫೦
ಹಾರ್ಮಂಗಡ ಅಚ್ಚಯನವರು	೫೦
ಕೇಳಪಂಡ ಅಚ್ಚಯ್ಯನವರು	೫೦
ಮುಕ್ಕಾಟಿರ ಕರುಂಬಯ್ಯನವರು	೫೦
ಹಾ. ಪಾಂಡಂಡ ಸೋಮಪ್ಪನವರು	೫೦
ದಾ. ನಂಜುಂಡೇಶ್ವರನವರು	೫೦
ಶ್ರೀ ಎಸ್. ಶ್ರೀನಿವಾಸಯ್ಯನವರು	೫೦
ತೋಡಾಂಡ ಎ. ನಂಜಪ್ಪನವರು	೫೦
ಜೆ. ಪಿ. ವೈಟ್‌ರವರು	೫೦
ಮುದಿಕೇರಿ ಸೈರ್ಕಾರ್	೪೬
ಟಿ. ಆರ್. ರಾಮುಡಂಪ್ರಾಚಾರ್ಯರವರು	೪೦
ಪುಟ್ಟಿಚಂಡ ಅಚ್ಚಯ್ಯ ಅಂಡ್ ಬ್ರದರ್	೩೫
ಜನ್ಮಾಡ ಅಚ್ಚಪ್ಪನವರು	೩೫
ಕೆ. ವಿ. ಗಿರಿಯವರು	೩೫
ಕುಟ್ಟೇಟಿರ ಎಂ ತಿಮ್ಮಯ್ಯನವರು	೩೦
ಶ್ರೀಮತಿ & ಶ್ರೀಯುತ ಕೋಣಿರುಣಿಯಂಡ ವೆಂಕಪ್ಪನವರು	೩೦
ಶ್ರೀ ತೀತಿರ ಸಂಜಪ್ಪನವರು	೩೦
ಬಿ. ಜಿ. ಬೆಳ್ಳಪ್ಪನವರು	೩೦
ಚೆಪ್ಪುಡಿರ ನಂಜಪ್ಪನವರು	೩೦
ಹಾರ್ಮಂಗಡ ಗಣಪತಿಯವರು	೨೮
ಪಿ. ಎ. ದಾನೇಗೌಡ ಸೊದಲಿಯೆತ್ತನವರು	೨೬
ಟಿ. ಕೆ. ರಾಮುಡಾಪ್ರಾಚಾರ್ಯರವರು	೨೫
ಸಟ್ಟಿವ ಬೊಳ್ಳನ್ನನವರು	೨೫
ಪಾಲ್ಕೇರಂಡ ಎಂ ಪೊನ್ನಪ್ಪ & ಬ್ರದರ್ಸ್	೨೬
ಆಕಪೊವ ಅಪ್ಪಯ್ಯನವರು	೨೫
ಕೊಣಿರ ಪಿ. ಕರುಂಬಯ್ಯನವರು	೨೫
ಎಂ. ಸಿ. ರಾಂತಮಲ್ಲಪ್ಪನವರು	೨೫
ಬೊಳ್ಳಿರ ಎಂ. ಮುತ್ತಣ್ಣನವರು	೨೫
ಸಿ. ಪಿ. ಸುಬ್ಬಯ್ಯನವರ ಹೆಣ್ಣುಮಕ್ಕಳು	೨೫
ಎಚ್. ರೇಷಪ್ಪ ಪೆಬ್ಬಾರ್‌ರವರು	೨೫
ಮುಂಗಳೂರು ಸ್ಟೋರ್ಸ್	೨೫
ಕವಂಯಾಡಿ ಗಣಪತಿಯವರು	೨೫
ತೀತಿರ ಬೆಳ್ಳಪ್ಪನವರು	೨೫
ಕೋದಾಂಡ ಎಂ. ದೇವಯ್ಯನವರು	೨೦
ಕುರ್ಗ್ ಸ್ಟೋರ್ಸ್ ಮದಿಕೇರಿ	೨೦
ಕೊಂಗಂಡ ಡಿ. ಪೊನ್ನಪ್ಪನವರು	೨೦
ಮಿಸೆಸ್ ಕೋದಾಂಡ ಬೆಳ್ಳಪ್ಪನವರು	೨೦
ಶ್ರೀ ಮುಕ್ಕಾಟಿರ ಮೊಣ್ಣಪ್ಪನವರು	೧೫
ದಿ ದಾರ್ಸಾರವರು	೧೫
ಬಿ. ಪಿ. ಅಣ್ಣಪ್ಪನವರು	೧೫
ಕೊಕ್ಕಲೆರ ನಂಜುಂಡನವರು	೧೫
ಟಿ. ರಾಮಣ್ಣಾಚಾರ್‌ರವರು	೧೫
ಪಿ. ಆರ್. ಟಿ. ಪೂಂಜನವರು	೧೫
ಬಿ.ಸ್ಸರ ಎ. ಅಪ್ಪಣ್ಣನವರು	೧೫
ಉಪಾಧ್ಯಾಯರ ಸಹಕಾರ ಸ್ಟೋರ್ಸ್	೧೫
ಶ್ರೀ ಕೂಡಕಂಡಿ ದೇವಯ್ಯನವರು	೧೫
ಎ. ಕೆ ಬಾದಶಾ	೧೫
ಬಿದ್ದಾಟಂಡ ಐಯ್ಯಣ್ಣನವರು	೧೧
ವೀರಾಜಪೇಟೆ ಟೌನ್ ಬ್ಯಾಂಕ್	೧೦
ತೀತಿರ ಸುಬ್ಬಯ್ಯನವರು	೧೦
,, ಟಿ. ಮುತ್ತಪ್ಪನವರು	೧೦
ಗಿತ್ತಾಪೇಟ್ ಸನ್ಸ್ ಅಂಡ್ ಕಂಪೆನಿ	೧೦
ಪಾಂಡಂಡ ತಿಮ್ಮಯ್ಯನವರು	೧೦
ಶ್ರೀ ಕರ್ನಂಡ ತಂಗಪ್ಪನವರು	೧೦
ತುಟ್ಟೀರಿರ ಸಿ. ಮುತ್ತಣ್ಣನವರು	೧೦
,, ಸುಬ್ಬಯ್ಯನವರು	೧೦
ಬಬ್ಬರ ಎಸ್. ಪೆಮ್ಮಯ್ಯ	೧೦
ಪಿ. ಕಾರ್ಯಪ್ಪನವರು	೧೦
ಜಿ. ತಿಮ್ಮಯ್ಯ ಶೆಟ್ಟಿ	೧೦
ಜಿ. ಸಿ. ಪೂವಪ್ಪನವರು	೧೦
ಕೆ. ಜಿ. ಗಣಪತಿಯವರು	೧೦
ಕರ್ನಂಡ ಬೋಪಯ್ಯ	೧೦
ಕುಟ್ಟಂಡ ತಿಮ್ಮಯ್ಯ	೧೦
ಎ. ಎಸ್. ತಮ್ಮಯ್ಯನವರು	೧೦
ಮಿಸಾ ಕುಟ್ಟಮವ ತಿಟ್ಟಿ ಪೊನ್ನಪ್ಪನವರು	೧೦
ಶ್ರೀ ಹಸನ ಜಾಫರಿಯವರು	೧೦
ಕಾಂತೂರು ಸಂಘ	೧೦
ಶ್ರೀ ಬುಟ್ಟಂಡ ಗಣಪತಿ ಪ್ರಸನ್ನ	೧೦
ಸಿ. ಪಿ. ನಾರಾಯಣರವರು	೧೦
ಪಿ. ಎಂ. ಗಂಗಮ್ಮನವರು	೧೦
ಟಿ. ಬಿ. ಪುಟ್ಟಸ್ವಾಮಿಯವರು	೧೦
ಕುಂಞಂಕಳಂಡ ಚಿಣ್ಣಪ್ಪನವರು	೧೦
ಕೆ. ಎಸ್. ಶೃಂಗೇರಿಯಯ್ಯರವರು	೧೦
ಎಂ ಜಾಲು ಪ್ರೆಸ್ ಬ್ರದರ್ಸ್	೧೦
ಬಿದ್ದಂಡ ಬೆಳ್ಳಿಯಪ್ಪನವರು	೧೦
ಎ. ಎಸ್. ಶಿವನಂಜಪ್ಪನವರು	೧೦
೧೦೫ನೆಯ ಸಂಘ	೬

ರೂ. ೧ ಕೊಟ್ಟವರು.

ಶ್ರೀ ಗಳಾದ ಕೆ ಸೆಮ್ಮಯ್ಯ, ಬೈಲಪ್ಪರ ಬಂಗಪ್ಪ, ಎ ಡಿ ಅಪ್ಪಚ್ಚು ಮಿಸೇಸ್ ಮುದಿಯಪ್ಪ ಮಾದಪ್ಪ ಬಿ ಕಾರಿಯಪ್ಪ, ಕೆ ಎಂ ಐಮ್ಮಕ್ಕಿ, ಬಿ ದ್ದಾಂಡಂಡ ಸೀತಮ್ಮ, ಫೈಜುಸೇಬ್ ಸಹಕಾರ ಕೂಟ, ಬಿ ಎನ್ ಕೃಷ್ಣಪ್ಪ, ಮಿಸೇಸ್ ಕೆ ಎನ್. ಭಾಗ್ಯಲಕ್ಷ್ಮಿ, ಜೀನುಸೀನ ಸಂಘ, ಭುಜಬಲಯ್ಯ ಎನ್. ಎಸ್. ರಂಬಯ್ಯ, ಇಸ್ಮಾಯಿಲ್ ಹೊನ್ನಪ್ಪ ಜೊಟ್ಟಿರ ಬಿ ಬಣ್ಣಪ್ಪ, ಬಮುಡಂಡ ಶಂಕರಿಉಪ್ಪ ಜೋಚನ್ನ, ಹೆಮಚಾಯಿ ಉಪ್ಪಯ್ಯ, ಜಿಜ್ಞೇನಾಸಿ ಸಂಘ, ಶ್ರೀಪತಿ ಆಚಾರ್ಯ ಸುಬ್ಬಾಚಾರ ಪಿಸುಳ್ಳಿ ಎನ್. ಸುಬ್ರಾಯ, ಎ ಎನ್. ಕೃಷ್ಣಭಟ್ಟ. ಟಿ ಎ ವಿದ್ಯನಾಥಾಚಾರ್, ಮುಂಡಪನಂಡ ಐಯ್ಯಮ್ಮ, ಪುಚ್ಚಿಮಾಡ ಕಾಳಪ್ಪ, ಮಿನೇಸ್ ತೀತಿರ ಲಕ್ಷ್ಮಿಪ್ಪ ಇಟ್ಟಿರ ಸಂಜಪ್ಪ, ಜಾವಗ ಸಮಸ್ತರ ಸಂಘ ಕೋದಮೂರು ಮುಕ್ತಾರುಮುದಿ ಸಂಘ, ಕೆ ಎ ಮಹಮ್ಮದ್ ಹುಸೇನ್, ಬಿ ಸಿ ಅಪ್ಪಚ್ಚು, ಗುಬ್ಬಿ ಏಸಪ್ಪ, ಬಾ ಕದೇಮಾಡ ಕರುಂಬಯ್ಯ, ಎಂ ಎನ್. ಕಾಮತ್ ಮಿನೇಸ್ ಪೊರ್ಕುಂದ ಮುಕ್ತಣ್ಣ ಬಾಳುಗೋದು ಸಂಘ, ಶ್ರೀ ಕಾಪೇರಿ ಅತ್ರಪ ಜಿ ಕೆ ರಾಮಕೃಷ್ಣ, ಮಧ್ಯೂರ ಮಾಬಣ್ಣ ಜಿ ವಿಶ್ವನಾಥಶೆಟ್ಟಿ ಕೋಳಿರ ಚಿಟ್ಟಿಯಪ್ಪ ಪರಾಕಾಸನ ಪೊನ್ನಪ್ಪ ಕೋದಮಣಿಯಂಡ ಕಾವೇರಿ ಬಿಟ್ಟಿಯಪ್ಪ ಸಂಘ ಚಿಟ್ಟಿಯಪ್ಪ ದಸಪಳಂಬಂಡ ಬಿ ಆರ್. ಮಂಜಪ್ಪ ರೈ ಕೆ ಡಿ ಸೋಮಾಡಯ್ಯ ಅಮ್ಮಂಡಾ ರಘುಪಾಸ್ ಕೆ ಲಕ್ಷ್ಮಿನಾರಾಯಣ ಭಾಗವಂಡ್ಲ ಸಂಘ ಚೇರಂಗಾಲ ಸಂಘ ಕೋರಂಗಾಲ ಸಂಘ ಬಿ ಎ ತಮ್ಮಯ್ಯ ಬಿದ್ದಂಡ ಜಿ ಮುತ್ತಪ್ಪ ಅಜ್ಜಮಾಡ ಕೆ ಅಮ್ಮಿ ಬಿ ನಾರಾಯಣರೆಟ್ಟಿ ಪೇಕೇರಿರ ಅಚ್ಚಪ್ಪ ಮಿನೇಸ್ ಕೆ ಕೆ ಸೋಮಯ್ಯ ಮಿನೇಸ್. ಚೀಂದಂತ ಜಂಗಪ್ಪ ಕೊಕ್ಕಲೆರ ತಿಮ್ಮಯ್ಯ ಪಟ್ಟಡ ಸೋಮಯ್ಯ ಪಳೆಯಂಡ ಉತಾಲಪ್ಪ ಕುಪ್ಪಂಡ ಎಂ ಸುಬ್ಬಯ್ಯ ಐ ಬಿ ಸೋಮಯ್ಯ—ಇವರುಗಳು.

1 ರೂ. ಕೊಟ್ಟವರು.

ಶ್ರೀ ಗಳಾದ ಮುಳ್ಳಂಡ ಜೋಯಪ್ಪ, ಕೊಂಗೆಟ್ಟಿರ ಕಾರ್ಯಪ್ಪ ಮುಳ್ಳಂಡ ಮುತ್ತಪ್ಪ ಮುಳ್ಳಂಡ ಕಾವೇರಪ್ಪ ಬಟ್ಟಿರ ಅಚ್ಚಯ್ಯ ಬಟ್ಟಿರ ಮಾದಪ್ಪ ಪುತ್ತೇರಿರ ಬಾಬುಲಪ್ಪ ಪುತ್ತೇರಿರ ಬಣ್ಣಪ್ಪ ಪಾಣಿಪಂಡೆ ಪೂಣಚ್ಚ ಬರ್ಮ, ಕುಂಜಿನವೀಲು ಹೊಳ್ಳಚಿಟ್ಟಿರ ಐಯ್ಯಪ್ಪ ಪಳಂಗಂಡ ಕಾಳಪ್ಪ ಕೋರಂಡ ಉತ್ತಯ್ಯ ಚೆಪ್ಪೇಡಂಡ ಗೋವಿಂದ ಬಲ್ಲಾರಂಡ ಸುಬ್ಬಯ್ಯ ಬೆಟ್ಟಂಡ ಬೋಪಯ್ಯ ಕೊಂಗೆಟ್ಟಿರ ಬಿದ್ದಪ್ಪ ಮುಂಡೋಟಿರ ಮಂದಣ್ಣ ಮುಕ್ಕಾಟಿರ ಜೋಳಪ್ಪ ಕೆ ಬಿ ಅಪ್ಪಣ್ಣ ಪೆ ತ್ತು ಒಬ್ಬ ಹಿತೈಷಿ—ಇವರುಗಳು.

ಈ ವರೆಗೆ ಒಟ್ಟು ರೂ. ೨೭,೬೭೯—೧೨—೦ ಜಮೆಯಾಗಿದೆ. ಉಳಿದ ಸುಹೃದ್ವರರುಗಳ ಹೆಸರುಗಳನ್ನು ಮುಂದಿನ ವಾರ ಪ್ರಕಟಿಸಲಾಗುವುದು.

Reg.No. M. 1550.
KODAGU MERCARA, (Coorg).

ಕೊಡಗು

ಸಂಪಾದಕರು:–ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩–೮–೦.

ಸಂಪುಟ ೨೬ | ತಾರೀಕು ೬—೧೦—೧೯ಳಳನೇ ಶುಕ್ರವಾರ. | ಸಂಚಿಕೆ ೧೯

ಗಾಂಧಿ-ಜಿನ್ನಾ ಪತ್ರವ್ಯವಹಾರ

ಗಾಂಧಿ ಜಿನ್ನಾ ಭೇಟಿಯು ಸೆಪ್ಟೆಂಬರ್ ತಾ. 9ರಲ್ಲಿ ಪ್ರಾರಂಭವಾಯಿ ತು. 10ನೇ ತಾರೀಕಿನಲ್ಲಿ ಜಿನ್ನಾರವರು ಹೀಗೆ ಬರೆದರು–'ಹಿಂದೂ ಮುಸ್ಲಿಂ ಐಕ್ಯದ ಬಗ್ಗೆ ಮಾತಾಡಲು ನೀವು ನಿನ್ನು ವಯಕ್ತಿಕ ಜವಾಬ್ದಾರಿಯ ಮೇಲೆ ಬಂದಿದ್ದೀರಿ. ಹಿಂದೂಗಳ ಯಾ ಕಾಂಗ್ರೆಸಿನ ಪ್ರತಿನಿಧಿಯಾಗಿ ನೀವು ಬಂದಿಲ್ಲ. ಹಾಗೆ ಬರಲು ನಿಮಗೆ ಅಧಿಕಾರ ಇಲ್ಲ ಆದ್ದರಿಂದ ನನಗೆ ಕಷ್ಟವಾಗಿದೆ. ನಾನು ಮುಸ್ಲಿಂ ಲೀಗಿನ ಪ್ರತಿನಿಧಿಯೂ ಗಿರುವೆನು. ಆದ್ದರಿಂದ ಆ ಸಂಸ್ಥೆಯ ರಚನೆ, ನಿಯಮಗಳಗನುಗುಣವಾಗಿ ಮಾತಾಡಬೇಕಿದೆ. ಲಾಹೋರಿನಲ್ಲಿ ಮುಸ್ಲಿಂ ಲೀಗು ಮಾಡಿರು ಗೊತ್ತುವಳಿಯನ್ನು ವಿವರಿಸಿದ್ದೇನೆ. ಅದನ್ನು ನೀವು ಪರಾಕೀಲಿಸದೆ 'ನನಗೂ ನಿಮಗೂ ಸಾಗರದಷ್ಟು ಭೇದವಿದೆ' ಎಂದು ಹೇಳಿದಿ. ನೀವು ಇದಕ್ಕೆ ಪ್ರತಿಯಾಗಿ ನಿನ್ನ ಅಂಗೀಕಾರ ಪಡೆದ ರಾಜಾಜಿ ಯೋಜನೆಯನ್ನು ಮುಂದಿಟ್ಟಿರಿ. ಇದರಲ್ಲಿ ಸಂಶಯದ ಅನೇಕ ವಿಚಾರಗಳಿವೆ ಸ್ವತಂತ್ರ ಭಾರತಕ್ಕೆ ಬೇಕಾದ ರಾಜ್ಯಾಂಗ ರಚನೆ ಯಾವುದು? ಅತನ್ನು ರಚಿಸುವವರು ಯಾರು? ತಾತ್ಕಾಲಿಕವಾಗಿ ಸ್ಥಾಪಿಸಲ್ಪಡುವ ರಾಷ್ಟ್ರೀಯ ಸರಕಾರವು ಯಾವ ಆಧಾರದ ಮೇಲೆ ರಚಿಸಲ್ಪಡುವದು. ಬ್ರಿಟಿಷರು ಯಾರಿಗೆ ಅಧಿಕಾರ ಪಹಿಸಿಕೊಡಬೇಕು? ಯಾವಾಗ?' ಎಂದು ಪತ್ರದಲ್ಲಿ ಪ್ರಶ್ನೆಯೆತ್ತಿದರು.

ಗಾಂಧೀಜಿಯವರು ಈ ರೀತಿ ಬರೆದರು–'ನನ್ನ ಜೀವನವೆಲ್ಲಾ ಹಿಂದೂ ಮುಸ್ಲಿಂ ಐಕ್ಯಕ್ಕಾಗಿಯೇ ಆಗಿದೆ. ಅದನ್ನು ಸಾಧಿಸಬೇಕಾದರೆ ವಿದೇಶೀ ಆಳರಕರು ಹೋದ ಹೊರತು ಸಾಧ್ಯವಿಲ್ಲ. ಆತ್ಮ ನಿರ್ಣಯ ಹಕ್ಕನ್ನು ಪಡೆಯಲು ಮೊದಲನೆಯದಾಗಿ ಭಾರತದಲ್ಲಿಯ ಎಲ್ಲಾ ಪಕ್ಷಗಳ ಮತ್ತು ಗುಂಪುಗಳ ಸಂಯುಕ್ತ ಪ್ರಯತ್ನವಾಗಬೇಕು. ನಾನು ಪ್ರತಿನಿಧಿಯಾಗಿ ಬಂದಿಲ್ಲವೆಂದು ಹೇಳಿದ ಮೇಲೂ ಕೂಡ ನೀವು ಮಾತುಕತೆಗಳನ್ನು ನಿಲ್ಲಿಸಿ ಬಿಡದೆ ಹೋದುದಕ್ಕಾಗಿ ನಾನು ಸಂತೋಷಿಸುತ್ತೇನೆ. ನಿಮ್ಮ ಭಾವನೆಗೂ, ನನ್ನ ಭಾವನೆಗೂ ಸಾಗರದಷ್ಟು ವ್ಯತ್ಯಾಸವಿದೆಯೆಂದು ನಿಜ. ಲಾಹೋರಿನಲ್ಲಾದ ನಿರ್ಣಯವು ಸ್ಪಷ್ಟವಾಗಿಲ್ಲ. ರಾಜಾಜಿಯ ಯೋಜನೆಯು ಆ ನಿರ್ಣಯದ ಸಾರ. ಸ್ವಾತಂತ್ರ್ಯವೆಂದರೆ ಇಡೀ ಭಾರತಕ್ಕೆ ಆನ್ವಯಿಸುವದು. ತಾತ್ಕಾಲಿಕ ಸರಕಾರವನ್ನು ರಚಿಸುವ ಆಶಯವಲ್ಲಿ ಕಾಂಗ್ರೆಸು ಸುಶ್ತು ಮುಸ್ಲಿಂ ಲೀಗು ಒಪ್ಪಂದಕ್ಕೆ ಬರಬೇಕು. ಪರಿವರ್ತಾಧಿಕಾರವನ್ನು ರಾಷ್ಟ್ರಕ್ಕೆ ಸರ್ಮಾಯಿಸಬೇಕೆಂದರೆ ತಾತ್ಕಾಲಿಕ ಸರಕಾರಕ್ಕೆ ವರ್ಗಾಯಿಸಬೇಕು.'

ಸೆಪ್ಟೆಂಬರ್ 11ರಲ್ಲಿ ಜಿನ್ನಾರವರು ಮತ್ತೊಂದು ಪತ್ರ ಬರೆದು, 'ನಿಮ್ಮೊಡನೆ ನಾನು ಚರ್ಚಿಸುವ ಉದ್ದಿಶ್ಯ ಮೆಂದರೆ ನಿಮ್ಮನ್ನು ನನ್ನ ಭಾವನೆಗೆ ಪರಿವರ್ತಿಸುವುದೇ ಆಗಿದೆ. ಭಾರತ ಸಮಸ್ಯೆಯ ಪರಿಹಾರಕ್ಕೆ ಇದೊಂದೇ ಮಾರ್ಗ. ಲಾಹೋರಿನಲ್ಲಿ 1940ರಲ್ಲಾದ ನಿರ್ಣಯದಂತೆ ಹಿಂದೂಸ್ಥಾನವನ್ನು ವಿಭಜಿಸುವದು. ರಾಜಾಜಿಯವರು ಈ ನಿರ್ಣಯದ ಮೇಲೆ ತಮ್ಮ ಯೋಜನೆಯನ್ನು ರೂಪಿಸಿದ್ದಾರೆಂಬುವುದನ್ನು ನಂಬಲಾರೆ. ಬಲು ಆದರ ರೂಪುಗೆಡಿಸಿದ್ದಾರೆ. ಎಗಡು ಪಂಗಡಗಳು ಸೇರಿ ಸ್ವಾತಂತ್ರ್ಯಕ್ಕೆ ಹೋರಾಡಬೇಕೆನ್ನುವಿರಿ. ಇದು ಕುದುರೆಗಳನ್ನು ಗಾಡಿಯ ಹಿಂದೆ ಕಟ್ಟಿದಂತೆ. ಭಾರತಕ್ಕೆ ಸ್ವಾತಂತ್ರ್ಯ ಲಭಿಸಬೇಕಾದರೆ ಮೊದಲು ಹಿಂದೂ ಮುಸ್ಲಿಂ ಐಕ್ಯವಾಗಬೇಕು.' ಎಂದು ಸೂಚಿಸಿದರು.

ಸೆಪ್ಟೆಂಬರ್ 14ರಲ್ಲಿ ಗಾಂಧೀಜಿಯವರು 'ನಮ್ಮ ಚರ್ಚೆಯೆಲ್ಲಾ ಮುಗಿವ ಹೊತ್ತಿಗೆ ನಿಮಗೆ ವ್ಯಕ್ತವಾಗುವದು ರಾಜಾಜಿಯವರು ಲಾಹೋರು ನಿರ್ಣಯವನ್ನು ರೂಪುಗೆಡಿಸಿಲ್ಲವೆಂಬುವುದು. ಮೂರನೇ ಶಕ್ತಿಯನ್ನು ನೂರ ಮೂಡುವ ವರೆಗೆ ನಾವುಗಳು ಸಗಪ್ಪರ ಶಾಂತಿಯಿಂದಿರುವದು ಸಾಧ್ಯವಿಲ್ಲ. ಯಾವುದೇ ತಾತ್ಕಾಲಿಕ ಸರಕಾರವು ಎಲ್ಲಾ ಪಕ್ಷಗಳಿಂದ ಕೂಡಿದ್ದಾಗಿರಬೇಕು. ಅಂಥಾ ಸಂದರ್ಭವೊಯಗಿದಾಗ ನನ್ನ ಬದಲು ಅಧಿಕಾರ ಹೊಂದಿದ ಬೇರೊಬ್ಬರನ್ನು ನೇಮಿಸಲಾಗುವುದು. ಮತ ತೆಗೆಯುವ ವಿಚಾರದಲ್ಲಿ ವಾಕಿಸ್ಥಾನದ ಪ್ರದೇಶದಲ್ಲಿ ವಾಸವಿರುವವರು ಅಭಿಪ್ರಾಯದಂತಾಗಬೇಕು ಈ ಮತ ಗಣನೆಯಲ್ಲಿ ಪಾಕಿಸ್ತಾನಕ್ಕೆ ಬಹುಮತ ದೊರೆತ ದಾದರೆ ತಾತ್ಕಾಲಿಕ ಸರಕಾರವು ಎರಡು ರಾಷ್ಟ್ರಗಳಿಗೂ ಅನ್ವಯಿಸುವಂಥಾ ಆಂಶಗಳಲ್ಲಿ ಕೌಲನ್ನೂ ಒಪ್ಪಂದಗಳನ್ನೂ ತಯಾರಿಸುವದು.'

ಸೆಪ್ಟೆಂಬರ್ 14ರಲ್ಲಿ ಜಿನ್ನಾರವರು ಪತ್ರ ಬರೆದು, 'ಭಾರತ ಸ್ವಾತಂತ್ರ್ಯ ಮೆಂದರೆ 1942ನೇ ಆಗಸ್ಟಿನಲ್ಲಿ ಎ ಐ. ಸಿ. ಸಿ. ಯಲ್ಲಾದ ನಿರ್ಣಯದಲ್ಲಡಕವಾದ ಅರ್ಥವೇ ಎಂದು ಕೇಳಿದರು. ಸೂತ್ರವನ್ನು ತೃಪ್ತಿಕರವಾಗಿ ಚರ್ಚಿಸುವ ಮುನ್ನ ತಾತ್ಕಾಲಿಕ ಸರಕಾರದ ಬಗ್ಗೆ ಸ್ಪಷ್ಟ ಅಭಿಪ್ರಾಯ ಹೊಂದಬೇಕು. ಅದು ರಚಿತವಾಗುವದು ಹೇಗೆ? ಯಾರಿಗೆ ಜವಾಬ್ದಾರಿ, ಯಾರು ಯಾರು ಅದರಲ್ಲಿರುವರು' ಎಂದು ಪ್ರಶ್ನಿಸಿದ್ದರು.

ಸೆಪ್ಟೆಂಬರ್ 15ರಲ್ಲಿ ಗಾಂಧಿಯವರು ಈ ರೀತಿ ಬರೆದರು, 'ನೀವು ನಮ್ಮ ಚರ್ಚೆಯ ಸಮಯದಲ್ಲಿ ಭಾರತದಲ್ಲಿ ಎರಡು ಜನಾಂಗಗಳಿವೆಯೆಂದೂ, ಅವು ಹಿಂದೂ ಮತ್ತು ಮುಸ್ಲಿಂ ಎಂದೂ ವಾದಿಸಿದ್ದೀರಿ. ಆದರೆ ಅದು ಸತ್ಯವಲ್ಲ. ಮತಾಂತರ ಹೊಂದಿದವರು ಮತ್ತು ಅವರ ಪುತ್ರಪೌತ್ರರು ತಮ್ಮ ಮೂಲ ಬುಡಕಟ್ಟಿನಿಂದ ಪ್ರತ್ಯೇಕ ಜನಾಂಗವೆನ್ನುವುದಾದರೆ ಅದು ನಿಜವಾಗಿಯೂ ಇತಿಹಾಸದಲ್ಲಿಯೇ ಹೊಸ ಸಂಗತಿ. ಇಸ್ಲಾಂ ಧರ್ಮವು ಬರುವ ಮುನ್ನ ಭಾರತವು ಒಂದು ರಾಷ್ಟ್ರವಾಗಿದ್ದಲ್ಲಿ ಅದರ ದೆಚ್ಚಿನ ಪ್ರಜೆಗಳು ಮತಾಂತರ ಹೊಂದುವವರೆಂದಲೂ ಕೂಡ ಅದು ಒಂದು ರಾಷ್ಟ್ರವಾಗಿಯೇ ಉಳಿಯುವದು. ಬಂಗಾಳಿಗಳು, ತಮಿಳರು, ಆಂಧ್ರರು, ಗುಜರಾತಿಗಳು, ಈಗ ಮುಸಲ್ಮಾನರಾಗಿ ಬಿಟ್ಟರೆ ತಮ್ಮ ವಿಶೇಷ ಭೌಗೋಳಿಕ ಗುಣಗಳನ್ನೆಲ್ಲಾ ಬಿಟ್ಟು ಒಂದಾಗುವುದೇ? ಇವರೆಲ್ಲರೂ ಈಗ ಒಂದಾಗಿರುವುದಾದರೂ ಏಕೆ? ವಿದೇಶಿಯರ ಬಂಧನವನ್ನು ಕಿತ್ತೊಗೆಯಲು ಅವರು ಪ್ರಯತ್ನಿಸುತ್ತಿರುವರು. ರಾಷ್ಟ್ರೀಯತೆಗೆ ನೀವು ಹೊಸದೊಂದು ಆಳತೆ ತಂದಿರುವಿರಿ. ನಾನೆಲ್ಲರೂ ರಾಜಕೀಯವಾಗಿ ಒಂದು ಎಂಬುವುದಕ್ಕೆ ವಿದೇಶಿಯರ ಆಳ್ವಿಕೆಯೇ ಕಾರಣವಾಗಿದೆ. ಲಾಹೋರ್ ನಿರ್ಣಯದಲ್ಲಿ ಪಾಕಿಸ್ತಾನವಿಲ್ಲ. ಪಾಕಿಸ್ತಾನದ ಗುರಿಯು ಇಸ್ಲಾಂ ಧರ್ಮವೇ? ಮತ ಧರ್ಮವನ್ನು ಬಿಟ್ಟು ಬೇರೆ ಯಾವುದಲ್ಲಾದರೂ ಹಿಂದೀಯನಿಗೂ, ಮುಸ್ಲಿಮನಿಗೂ ಭೇದವಿದೆಯೇ? ಮುಸ್ಲಿಂ ಲೀಗಿನ ನೀತಿಯಿಂದ ದೂರವಾಗಿರುವ ಮುಸ್ಲಿಮರನೇಕರಿದ್ದಾರೆ. ಅವರ ವಿಷಯವೇನು?'

ಗಾಂಧೀಜಿಯವರು ಸೆಪ್ಟೆಂಬರ್ 15ರಲ್ಲಿ ಪುನಹ ಪತ್ರ ಬರೆದು 'ಮತಗಣನೆ ಪ್ರಕಾರ ದೇಶವು ವಿಭಾಗಿಸಲು ಒಪ್ಪಿದರೆ ವಿಭಾಗವಾಗುವದು. ಇದೇ ರಾಜಿ. ಜಿನ್ನಾರವರ ಪ್ರತಿಕ್ರಿಯೆ. ತಾತ್ಕಾಲಿಕ ಸರಕಾರವನ್ನು ಬಗ್ಗೆ ಚರ್ಚೆ ಮುಂದೆ ಆಗಬೇಕು. ಈ ಸರಕಾರವು ಅಸೆಂಬ್ಲಿಗೆ ಜವಾಬ್ದಾರವಾಗಿರುವದು. ಲೀಗಿಗೂ, ಕಾಂಗ್ರೆಸಿಗೂ ಆಗುವ ಯಾವುದೇ ಒಪ್ಪಂದವನ್ನು ನಡೆಸಲು ಈ ಸರಕಾರಕ್ಕೆ ಅಧಿಕಾರವಿರುವದು' ಎಂದು ಸೂಚಿಸಿದರು.

ಸೆಪ್ಟೆಂಬರ್ 17ರಲ್ಲಿ ಜಿನ್ನಾರವರು ಪತ್ರ ಬರೆದು, 'ಮುಸ್ಲಿಮರು ಹಿಂದುಗಳು ಭಾರತದ ಎರಡು ದೊಡ್ಡ ಜನಾಂಗಳು. ಜನಾಂಗ ಎಂಬ ಶಬ್ದದ ಅರ್ಥದಂತೆಯೇ ಇವೆರಡು ಬೇರೆ ಬೇರೆ ಜನಾಂಗಗಳೆಂದು ನಾನು ಹೇಳುತ್ತೇನೆ' ಎಂದು ಸೂಚಿಸಿದರು.

ಸೆಪ್ಟೆಂಬರ್ 19ರಲ್ಲಿ ಗಾಂಧೀಜಿಯವರು ಪತ್ರ ಬರೆದು ಈ ರೀತಿ ಉತ್ತರವಿತ್ತರು. 'ಹಿಂದೂಗಳೂ, ಮುಸಲ್ಮಾನರೂ ಎರಡು ಬೇರೆ ಜನಾಂಗಗಳೆಂಬ ವಿಚಾರವನ್ನು ನಾವಿಬ್ಬರೂ ಈಗ ಬಿಟ್ಟು ಆತ್ಮ ನಿರ್ಣಯದ ತತ್ವದ ಆಧಾರದ ಮೇಲೆ ಸಮಸ್ಯೆಯನ್ನು ಪರಿಹರಿಸಬಾರದೇ? ಲಾಹೋರ್ ನಿರ್ಣಯದ ಪ್ರಕಾರ ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳನ್ನು ಬೇರೆಯೊಗಿ ಮಾಡುವುದಾದರೆ ಪ್ರತ್ಯೇಕವಾಗುವುದರಿಂದ ಉಂಟಾಗುವ ತೀವ್ರ ಪರಿಣಾಮವನ್ನು ಆ ಪ್ರದೇಶದ ಜನಗಳ ಮುಂದಿಟ್ಟು ಸಮ್ಮತಿ ಪಡೆಯುವುದು ಅಗತ್ಯವಾದ ವಿಚಾರ.'

ಸೆಪ್ಟೆಂಬರ್ ತಾ. 21ರಲ್ಲಿ ಜಿನ್ನಾರವರು ಪತ್ರ ಬರೆದು ಕಾಂಗ್ರೆಸಿನ ಅಗಸ್ಟ್ ನಿರ್ಣಯವು ಮುಸ್ಲಿಂ ಇಂಡಿಯಾದ ಹಿತಕ್ಕೆ ವಿರುದ್ಧವಿದೆ. ಆತ್ಮ ನಿರ್ಣಯದ ಹಕ್ಕು ಎಂಬುವುದರಲ್ಲಿ ನಿಮಗೆ ತಪ್ಪಭಿಪ್ರಾಯವಿರುವಂತೆ ಕಾಣುತ್ತದೆ. ಮುಸ್ಲಿಮರು ಪ್ರತ್ಯೇಕ ಜನಾಂಗವಾಗಿರುವುದರಿಂದಲೇ ಅವರಿಗೆ ಆತ್ಮ ನಿರ್ಣಯದ ಹಕ್ಕು. ಮುಸ್ಲಿಂ ಜನಾಂಗವಾಗಿ ನಾವು ನಮ್ಮ ಹಕ್ಕನ್ನು ಪ್ರಯೋಗಿಸುತ್ತೇವೆ' ಎಂದು ಹೇಳಿದರು.

ಸೆಪ್ಟೆಂಬರ್ 22ರಲ್ಲಿ ಮಹಾತ್ಮರು ಅದಕ್ಕೆ ಜವಾಬು ಬರೆದು, ಮುಸ್ಲಿಮರು ಬೇರೆ ಜನಾಂಗವೆಂಬುವುದನ್ನು ನಾನು ಒಪ್ಪುವುದಿಲ್ಲ. ಹಾಗೆ ಬೇರೆಯೆಂದು ಹೇಳುವದು ಅಪಾಯಕರ. ಜನರ ಮತ ತೆಗೆಯುವುದಕ್ಕೆ ನೀವು ವಿರುದ್ಧವಿದ್ದೀರಿ. ಸಾರ್ವತ್ರಿಕವಾದ ಸಾಮಾನ್ಯವಾದ ರಕ್ಷಣಾ ವಿಚಾರ, ವಿದೇಶಾಂಗ ಕಾರ್ಯನೀತಿ ಮೊದಲಾದ ಅಂಶಗಳ ವಿಚಾರ ಪರಸ್ಪರ ಸಮ್ಮತಿಯಿಂದ ನಿರ್ದಿಷ್ಟವಾದ ಒಪ್ಪಂದ ವಿರ್ಪಡುವವರೆಗೆ ಭಾರತದ ವಿಭಜನೆಗೆ ನಾನು ಒಪ್ಪಲಾರೆನು. ಈ ರೀತಿ ನವಂಬರ್ ಗೆ ಜಿನ್ನಾ

3ನೇ ಪುಟ ನೋಡಿ)

ಕೊ ಡ ಗು

ತಾ. ೬-೧೦-೧೯ಳಳನೇ ಶುಕ್ರವಾರ

ಗಾಂಧಿ ಜಿನ್ನಾ ಭೇಟಿ.

ಇಡೀ ಜಗತ್ತೇ ಎದುರುನೋಡುತ್ತಿದ್ದ ಗಾಂಧಿ ಜಿನ್ನಾ ಭೇಟಿಯು ಮುಕ್ತಾಯವಾಯಿತ್ತು. ತಾರ್ಕತ್ತಲು ಕವಿದಿರುವ ಹಿಂದೂಸ್ಥಾನದ ಸಭೋಮಂಡಲದಲ್ಲಿ ಆಶಾಕಿರಣವಾಗಿದ್ದ ಈ ಸಂಧಾನವು ಕಳಚಿಬಿದ್ದು ಯ.ಧಾ ಪ್ರಕಾರ ಘೋರಾಂಧಕಾರವು ಕವಿಯಿತು. ಭಾರತೀಯರು ಕಟ್ಟಿದ್ದ ಆಶಾಗೋಪುರಗಳು ನಾಶವಾದವು. ಸಾರ್ವತ್ರಿಕ ಹರ್ಷಚ್ಚಿದ್ದ ಆಕೆ ಭರವಸೆಗಳು ಮಣ್ಣುಗೂಡಿದವು ಸಂಧಾನವು ಫಲಕಾರಿಯಾಗದಿರಲು ಪ್ರಾಮುಖ್ಯವಾದ ಕಾರಣವೆಂದರೆ ಜಿನ್ನಾರವರ ವಾಕಿಸ್ಥಾನದ ಕಲ್ಪನೆ. ಸ್ವಯಂನಿರ್ಣಯ ತತ್ವಕ್ಕೆ ಗಾಂಧೀಜಿಯವರು ಒಪ್ಪಿದರೂ ಮುಸ್ಲೀಂ ಜನಾಂಗವು ಪ್ರತ್ಯೇಕ ಸ್ವತಂತ್ರ ರಾಷ್ಟ್ರವಾಗಬೇಕೆನ್ನುವ ಜಿನ್ನಾರವರ ಸ್ವಪ್ನವನ್ನು ಗಾಂಧೀಜಿಯವರು ಒಪ್ಪಲಿಲ್ಲ. ಯಾಕೆ? ಯಾವನೊಬ್ಬ ಭಾರತೀಯನೂ ಇದನ್ನು ಒಪ್ಪಲಾರನು ಮುಸ್ಲಿಮರು ಅಂತರಿಕ ಆಡಳಿತದಲ್ಲಿ ಬೇರೆದ್ದುಕೊಂಡು, ತಮ್ಮ ಸಂಸ್ಕೃತಿ, ಧರ್ಮಗಳಿಗನುಸಾರ ಪ್ರಗತಿಪಥದಲ್ಲಿ ನಡೆಯುವದರಲ್ಲಿ ಯಾರ ಆಕ್ಷೇಪವೂ ಇಲ್ಲ. ಆದರೆ ವಿದೇಶಸಂಬಂಧ, ದೇಶದ ರಕ್ಷಣೆ ಇವುಗಳಲ್ಲಿ ಹಿಂದೂದೇಶವು ಅಖಂಡವಾಗಿರಬೇಕು. ಜಿನ್ನಾರವರು ಈ ಅಭಿಪ್ರಾಯವನ್ನು ಒಪ್ಪಲಿಲ್ಲ. ಮುಸ್ಲಿಮರು ಮತ್ತು ಹಿಂದೂಗಳು ಪ್ರತ್ಯೇಕ ಜನಾಂಗಗಳು, ಆದ್ದರಿಂದ ಬೇರೆ ಬೇರೆ ಸ್ವತಂತ್ರ ರಾಷ್ಟ್ರಗಳಾಗಬೇಕೆಂದರು. ಪಾಕಿಸ್ತಾನವನ್ನು ರೂಪಿಸುವ ಕಾಲಕ್ಕೆ ಅದಕ್ಕೆ ಸಂಬಂಧಪಡುವ ಜನರ ಮತದಂತೆ ಆಗಬೇಕೆನ್ನುವ ನೀತಿಗೂ ಸಹ ಜಿನ್ನಾರವರು ವಿರುದ್ಧವಿದ್ದಾರೆ. ಗಾಂಧಿ ಜಿನ್ನಾರವರ ಪತ್ರವ್ಯವಹಾರವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇವರಿಬ್ಬರಲ್ಲಿಗಾಂಧೀಜಿಯವರಿಂದಂತೆ 'ನಾಗರದಂತಾ ಬೇಧವಿರುವದು' ಕಂಡುಬರುತ್ತದೆ.

ಯಾವುದೇ ಹಿಂದು ಒಪ್ಪಂದವಾಗಬೇಕಾದರೆ ಎರಡು ಕಡೆಯವರೂ ತಮ್ಮ ಅಲ್ಪ ಸ್ವಲ್ಪ ಹಿತವನ್ನು ಬಲಿಕೊಡಬೇಕು, ಮಹಾತ್ಮರು ಮುಸ್ಲಿಮರ ಸ್ವಯಂನಿರ್ಣಯ ತತ್ವವನ್ನು ಒಪ್ಪಿ, ಎರಡು ಹೆಜ್ಜೆ ಮುಂದೆ ಬಂದಿದ್ದರು ಜಿನ್ನಾರವರು ತಮ್ಮ ಪಾಕಿಸ್ತಾನ ಶ್ಲೋಕವನ್ನೇ ಹೇಳುತ್ತಾ ನಿಂತಲ್ಲೇ ನಿಂತಿದ್ದರೆ ಒಪ್ಪಂದವಾಗುವದು ಹೇಗೆ? ಗಾಂಧೀಜಿಯವರಂದಂತೆ ಇದರಿಂದ ನಿರಾಶರಾಗುವ ಕಾರಣವಿಲ್ಲ. ದೇಶೀಯರು ಹಿಂದೂ ಮುಸ್ಲಿಮರಲ್ಲಿ ಐಕ್ಯ ಬೆಳೆಸುವ ಕಂಕಣಬದ್ಧರಾಗಿ ಇನ್ನಷ್ಟು ಹುರುಪಿನಿಂದ ಕೆಲಸ ಮಾಡಬೇಕಿದೆ. ಪುನಃ ಸಂಧಾನದ ಪ್ರಯತ್ನವಾಗಿ ಅದು ಜಯಪ್ರದವಾಗುವ ಸನ್ನಿವೇಶವನ್ನು ಕಲ್ಪಿಸಬೇಕಿದೆ. ಯಾಕೆಂದರೆ ಈ ಐಕ್ಯತೆಯಲ್ಲಿಯೇ ಹಿಂದೂದೇಶದ, ಹಿಂದೀಯರ ಉಜ್ವಲ ಭವಿಷ್ಯವಿರುವದಾಗಿದೆ.

ಒಳ ದೇಶ.

ಕೊಡಗಿನ ಜೀಪ್ ಫಾರೆಸ್ಟು ಆಫೀಸರು ಕಾಯಿಲೆಯಲ್ಲಿರುವದರಿಂದ ಡಿವಿಜನಲ್ ಆಫೀಸರ್ ರಾ. ಸಾ. ಸಿ ಬಿ. ಚಂಗಪ್ಪನವರು ತಮ್ಮ ಕೆಲಸದೊಂದಿಗೆ ಜೀಪ್ ಫಾರೆಸ್ಟ್ ಆಫೀಸರ ಜಾಜೀನಲ್ಲಿರುವರು.

ಕೊಡಗು ಕಾಂಸ್ಟಿಲಿನ ಮೀಟಿಂಗು 9-10-44 ರಲ್ಲು ಮಡಿಕೇರಿಯಲ್ಲಿ ನಡೆಯುವದು.

ಹಿಂದೂ ಲಾಕಮಿಟಿಯವರು ಸಾರ್ವಜನಿಕರ ಅಭಿಪ್ರಾಯವನ್ನು ತಿಳಿಯಲು ಸಮಯವನ್ನು 30-11-44 ರ ವರೆಗೆ ಮುಂದುವರಿಸಿರುವದಾಗಿ ತಿಳಿಯುತ್ತೇವೆ.

ಆದಿ ಶ್ರೀಕಾವೇರಿ ಬಸ್ಸ್ ಕಂಪೆನಿಯ ಜನರಲ್ ಮೀಟಿಂಗು 26-10-44 ರಲ್ಲು ಮಡಿಕೇರಿಯಲ್ಲು ನಡೆಯುವದು.

ಕೊಡಗಿನ ಗೆಜೆಟೆಡ್ ಆಫೀಸರುಗಳಿಗೆ ತಿಂಗಳಿಗೆ 500 ರೂಪಾಯಿ ಮೇಲ್ಪಟ್ಟು 1000 ರೂಪಾಯಿಗೆ ಒಳಪಟ್ಟು ಶೇಕಡ 10 ರಂತೆಯೂ, 500 ರೂ. ಗೆ ಕಡಿಮೆ ಸಂಬಳ ಇರುವವರಿಗೆ 50 ರೂಪಾಯಿಯಂತೆಯೂ, ತುಟ್ಟಿ ಭತ್ಯ ಕಳೆದ ಜುಲೈ ತಿಂಗಳಿಂದ ಮಂಜೂರಾಗಿದೆ.

ಜನರಲ್ ಪರ್ಪಸಸ್ ಕಮಿಟಿಗೆ ಮೆ. ಗಳಾದ ಏಪರ್ ಬುಲ್ಲ್, ಸಿ. ಯಂ. ಭೀಮಯ್ಯ, ಪಿ ಜಿ ಐಯ್ಯಪ್ಪ ಮತ್ತು ಯನ್. ಸೋಮಣ್ಣನವರುಗಳನ್ನು 18-7-44 ರಿಂದ ಒಂದು ವರ್ಷದ ವರೆಗೆ ನೇಮಿಸಲಾಗಿದೆ.

ಕೊಡಗು ಮಹಿಳಾ ಸಹಕಾರ ಸಮಾಜದ ವಾರ್ಷಿಕ ಮಹಾಸಭೆಯು ತಾ. 1-10-44 ನೇ ಭಾನುವಾರ ದಿವಸ ಅಪರಾಹ್ನ 3 ಗಂಟೆಗೆ ಸಮಾಜದ ಕಟ್ಟಡದಲ್ಲಿ ಪ್ರೆಸಿಡೆಂಟರಾದ ಶ್ರೀಮತಿ ಕಲಿಯಂಡ ಬೋಜಮ್ಮನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಮತಿಯವರಾದ ಪಾಂಡಂಡ ಬೋಜಮ್ಮನವರನ್ನು ಪ್ರೆಸಿಡೆಂಟರನ್ನಾಗಿಯೂ, ಆಗತಾ ಡಿ. ಮೆಬೊರವಪದನ್ನು ವೈಸ್ ಪ್ರೆಸಿಡೆಂಟರನ್ನಾಗಿಯೂ, ಚೆಂಬಾಂಡ ತಂಗಮ್ಮನವರನ್ನು ಕಾರ್ಯದರ್ಶಿಯನ್ನಾಗಿಯೂ, ಚೇಂದಿರ ಪೊನ್ನಮ್ಮನವರನ್ನು ಖಜಾಂಚಿಯವರನ್ನಾಗಿಯೂ ಮತ್ತು ಕಂಡ್ರತಂಡ ಪೊನ್ನಮ್ಮ, ಮೊಳೆರ ಗಂಗಮ್ಮ, ಕೋದಾಂಡ ದೇಚಮ್ಮ, ಚೇಂದಂಡ ಪೂವಮ್ಮ, ಕೆ. ಅಮ್ಮಣ್ಣಿಅಮ್ಮ ಇವರುಗಳನ್ನು ಕಾರ್ಯಕಾರಿ ಮಂಡಳಿಯ ಸದಸ್ಯರನ್ನಾಗಿಯೂ ಚುನಾಯಿಸಿರುವರಾಗಿ ತಿಳಿಯಬರುತ್ತದೆ.

ಗಾಂಧಿ ಜಯಂತಿಯ ಬಗ್ಗೆ ಮೇರಿ ಹೈಸ್ಕೂಲು ವಿದ್ಯಾರ್ಥಿಗಳು ಪ್ರಾರ್ಥನೆ ನಡೆಸಿ ಶಾಂತ ರೀತಿಯಿಂದ ಜಯಘೋಷಗಳನ್ನು ಮಾಡುತ್ತಾ ಗಾಂಧಿಯವರ ಭಾವಚಿತ್ರದ ಮೆರವಣಿಗೆ ಮಾಡಿದರು. ನಂತರ ಜಮಿನ್ದಾರರ ಸಂಘದ ಎದುರುಗಡೆ ಸಭೆ ಸೇರಿ ಗಾಂಧಿಯವರು ಧೀರ್ಘಾಯುಗಳಾಗಲೆಂದು ಆಶಿಸಿದರು.

ವೀರಾಜಪೇಟೆ ಹೈಸ್ಕೂಲಿನ ವಿದ್ಯಾರ್ಥಿಗಳೂ ಗಾಂಧಿ ಜಯಂತಿಯ ಬಗ್ಗೆ ರಾಷ್ಟ್ರಗೀತೆಯೊಡನೆ ಮೆರವಣಿಗೆ ತೆಗೆದು ಮಹಾತ್ಮರ ಆಯುರಾರೋಗ್ಯಕ್ಕೆ ಪ್ರಾರ್ಥಿಸಿದರು.

ಕೊಡಗು ವಿದ್ಯಾ ನಿಧಿಯಿಂದ 1944-45ನೇ ಸಾಲಿಗೆ ಹೊರಗೆ ವ್ಯಾಸಂಗ ಮಾಡುವ 42 ವಿದ್ಯಾರ್ಥಿಗಳಿಗೆ ಒಟ್ಟು ರೂ. 3430 ಸಾಲ ಮಂಜೂರು ಮಾಡಲಾಗಿದೆ.

ತುಲಾ ಕಾವೇರಿ ಸಂಕ್ರಮಣದ ಕಾಲದಲ್ಲಿ ಭಾಗಮಂಡಲ ಮತ್ತು ತಲಕಾವೇರಿಗೆ ಸ್ಪೆಷಲ್ ಮತ್ತು ವಾಲಂಟಿಯರ್ ಬಸ್ಸುಗಳು ಸಂಚರಿಸುವ ಪ್ರದೇಶಗಳಿಂದ ಜನರು ಹೋಗಬಹುದೆಂದು ನಿರ್ಬಂಧಿಸಲಾಗಿದೆ.

ಕೊಡಗಿನಲ್ಲಿ ಆಗಸ್ಟ್ ತಿಂಗಳಲ್ಲಿ 280 ಜನನಗಳೂ, 305 ಮರಣಗಳೂ ಸಂಭವಿಸಿವೆ.

ಶ್ರೀ ಕೊಂಗೆಟ್ಟಿರ ಅಪ್ಪಯ್ಯನವರನ್ನು 1947ನೇ ಅಕ್ಟೋಬರ್ 2ರ ವರೆಗೆ ಕೊಡಗು ಟೆಂಪಲ್ ಫಂಡಿನ ಸದಸ್ಯರಾಗಿ ಚುನಾಯಿಸಲಾಗಿದೆ.

ಗಾಂಧಿ ಜಯಂತಿ.

ತಾ. 2-10-44ರಲ್ಲಿ ವೀರಾಜಪೇಟೆಯ ಹಿಂದೀ ಪ್ರಚಾರ ಮಂಡಳಿಯ ಆಶ್ರಯದಲ್ಲಿ ಗಾಂಧಿ ಜಯಂತಿಯನ್ನು ಆಚರಿಸಲಾಯಿತು. ಶ್ರೀ ಪಿ. ಐ ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು ನೂಲಿನ ಮತ್ತು ಹಿಂದಿ ಸ್ಪರ್ಧೆ ಏರ್ಪಡಿಸಲಾಗಿತ್ತು. ನೂಲಿನ ಪ್ರದರ್ಶನದಲ್ಲಿ ಶ್ರೀ ಕೆ. ಪಿ ರಾಮಚಂದ್ರ, ಮಿಸ್ ಬಿ. ಸಿ. ಮುತ್ತಮ್ಮ, ಮಿಸ್ ಪಿ. ಕಿಟ್ಟು ಸೋಮಪ್ಪನವರಿಗೆ ಅನುಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳು ದೊರೆತವು. ಚರಖಾದಲ್ಲಿ ನೂಲುವ ಸ್ಪರ್ಧೆಯಲ್ಲಿ ವೇಗಕ್ಕೆ ಶ್ರೀ ಬಿ ಪಿ. ಮಾದಪ್ಪ (1) ಮತ್ತು ಶ್ರೀ ಬಿ. ಪಿ. ಗಣಪತಿ (2) ಯವರಿಗೂ, ಉತ್ತಮ ನೂಲಿಗೆ ಮಿಸ್ ಬಿ.ಸಿ. ಮುತ್ತಮ್ಮ (1) ಮತ್ತು ಸಿ. ಸಿ. ಗಂಗಮ್ಮ (2) ನವರಿಗೂ, ಬಹುಮಾನಗಳು ದೊರೆತವು. ವೇಗ ಮತ್ತು ಉತ್ತಮ ನೂಲಿಗಾಗಿ ಶ್ರೀ ಬಿ. ಪಿ ಮಾದಪ್ಪ(1) ಶ್ರೀ ಬಿ. ಪಿ. ಗಣಪತಿ (2), ಉತ್ತಮ ನೂಲಿಗೆ ಮಿಸ್ ಎಸ್. ಆರ್. ಸುತೀಲ (1) ಮತ್ತು ಮಿಸ್ ಕೆ. ಜಿ. ಕಮಲ ಇವರಿಗೆ ಬಹುಮಾನ ದೊರೆಯಿತು. ಹಿಂದೀ ಉಕ್ತ ಲೇಖನ (ಕಾಗದದಲ್ಲಿ) ದಲ್ಲಿ ಒಂದನೇ ಬಹುಮಾನ ಮಿಸ್ ಎಂ. ಪಿ. ವಿಮಲನವರಿಗೂ, ದ್ವಿತೀಯ ಬಹುಮಾನ ವಿ. ಎಸ್. ಪುಟ್ಟಯ್ಯನವರಿಗೂ ದೊರೆಯಿತು. ಸ್ಲೇಟಿನ ಮೇಲೆ ಉಕ್ತಲೇಖನದಲ್ಲಿ ಶ್ರೀ ಕೆ. ಎಸ್. ಶಿವರಾಮನವರಿಗೆ ಪ್ರಥಮ ಬಹುಮಾನವೂ ಶ್ರೀ ಗಳಾದ ರತಿ ಮತ್ತು ಕೆಮ್ಮಶರಿಗೆ ದ್ವಿತೀಯ ಬಹುಮಾನವೂ ದೊರೆಯಿತು. ಶ್ರೀ ಗೋಪಾಲನವರಿಗೆ ವಿಶೇಷ ಬಹುಮಾನ ಕೊಡಲ್ಪಟ್ಟಿತು.

ಬಹುಮಾನ ವಿನಿಯೋಗದ ನಂತರ ಶ್ರೀ ಕೆ. ವಿದ್ಯಾನಾಭರಾಯರು ಗಾಂಧಿಯವರ ಧಾರ್ಮಿಕ ಜೀವನದ ಬಗ್ಗೆ ಭಾಷಣ ಮಾಡಿದರು. ನಂತರ ಸಂಗೀತ ನಡೆಯಿತು. ಅಧ್ಯಕ್ಷರು ಮಾಡಿದ ತಮ್ಮ ವ್ಯುತ್ಪತ್ತಿಯನ್ನು ಪರಿಚಯಿಸಿ ಭಾಷಣ ಮಾಡಿದನಂತರ ಪಂಚನೆಯಿಂದ ಸಭೆಯು ಮುಕ್ತಾಯಗೊಂಡಿತು.

ಮಡಿಕೇರಿಯಲ್ಲಿ ಗಾಂಧಿ ಜಯಂತಿಯು ಕೊಡಗು ಜಮಿನ್ದಾರರ ಸಂಘದ ಹಾಲ್‌ನಲ್ಲಿ ಡಾ. ಬಿ. ಕೆ. ನಂಜುಂಡೇಶ್ವರನವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ 7½ ಗಂಟೆಯಿಂದ 8½ಯ ವರೆಗೆ ಪ್ರಾರ್ಥನೆ ನಡೆಯಿತು. 9ರಿಂದ 10½ಯ ವರೆಗೆ ನೂಲುವ ಸ್ಪರ್ಧೆನಡೆಯಿತು ತಕಲಿಯಲ್ಲಿ ನೂಲು ತೆಗೆದುದಕ್ಕೆ ಶ್ರೀ ಕೆ. ಎಸ್. ದೇವರಾವ್‌ರವರಿಗೂ, ಧನುಶ್ ತಕಲಿಯಲ್ಲಿ ನೂಲು ತೆಗೆದುದಕ್ಕೆ ಶ್ರೀ ಪಿ. ಎಲ್. ಕೃಷ್ಣರವರಿಗೂ, ಚರಖಾದಲ್ಲಿ ನೂಲು ತೆಗೆದುದಕ್ಕೆ ಶ್ರೀ ಎಂ. ಎಂ. ಶಾಂತು ಮತ್ತು ಸರಳರಿಗೆ ಬಹುಮಾನಗಳು ಕೊಡಲ್ಪಟ್ಟವು. ಸಂಜೆ 6 ಗಂಟೆಗೆ ಸಭೆ ಸೇರಿದಾಗ ಶ್ರೀಮತಿ ಸೀತಾ ಬೆಳ್ಯಪ್ಪನವರು ಈ ಬಹುಮಾನ ವಿತರಣೆ ಮಾಡಿದರು. ನಂತರ ಶ್ರೀ ಬಿ. ಡಿ. ಗಣಪತಿಯವರು ಗಾಂಧೀಜಿಯವರ ಉದಾತ್ತ ಜೀವನವನ್ನು ವಿವರಿಸಿ ಪೂರೈಸಿದರು ಅಧ್ಯಕ್ಷರು ಗಾಂಧೀಜಿಯವರ ಪ್ರಾಮುಖ್ಯತೆಯನ್ನು ಕೊಂಡಾಡಿದನಂತರ ಕುಮಾರಿ ಪಿ. ಲೀಲಾ, ಕಮಲಾರವರ ಸುಶ್ರಾವ್ಯ ರಾಷ್ಟ್ರಗೀತೆಯೊಡನೆ ಕಾರ್ಯಕಲಾಪವು ಮುಕ್ತಾಯವಾಯಿತು.

ತಿಮ್ಮಪಡಿ.

ಕಳೆದ ವಾರ ಪ್ರಕಟವಾದಕಸ್ತೂರ್ ಬಾ ನಿಧಿಗೆ ಧನ ಸಹಾಯಮಾಡಿದವರ ಪಟ್ಟಿಯಲ್ಲಿ ಶ್ರೀಮತಿ ಬಡುವಮಂಡ ಕಾರ್ಯಪ್ಪ ದೇಚಮ್ಮ ಎಂಬ ಹೆಸರು 'ಬಡುವಂಡ' ಎಂದೂ, ಅಣ್ಣಪ್ಪ ಭಾಗಮಂಡಲ ರೂ. 5 ಬಿ. ಪಿ. ಅಣ್ಣಪ್ಪ ರೂ. 10 ಎಂಬುದು ಬಿ. ಪಿ. ಅಣ್ಣಪ್ಪ ರೂ. 15 ಎಂದೂ ತಪ್ಪಾಗಿ ಪ್ರಿಂಟಾಗಿವೆ. ಅದನ್ನು ಸರಿಪಡಿಸಿಕೊಳ್ಳಬೇಕಾಗಿ ವಿನಂತಿ. ಸಂ.

ರಣಭೇರಿ.

ಚರ್ಚಿಲ್ಲರ ಭಾಷಣ.

ಯುದ್ಧ ಪರಿಸ್ಥಿತಿಯ ವಿಷಯದ್ದೇ ಸೂಚ ಶ್ರೀಮಜಿಸ್ಟಿಲ್ಲರು ಪಾರ್ಲಿಮೆಂಟಲ್ಲಿ ಹೀಗೆ ಹೇಳಿದರು. 'ಯೂರೋಪ್ಖಂಡ ಸಂಗ್ರಾಮದ ಸ್ಥಿತಿ ಬದಲಾಯಿಸಿದೆ. ಸುಮಾರು 20 ರಿಂದ 30 ಲಕ್ಷ ಸೈನಿಕರು ಯೋಧರು ಯೂರೋಪಿನ ನೈರುತ್ಯ ರಣರಂಗದಲ್ಲಿ ಹೋರಾಡುತ್ತಿದ್ದಾರೆ. ಈ ರಂಗಗಳಲ್ಲಿ ನಮಗೆ ಸಹಾಯಕರಾಗಿ ಮಹೋಪಕಾರ ಮಾಡುತ್ತಿರುವ ಅಮೇರಿಕನರನ್ನು ಎಷ್ಟು ಹೊಗಳಿದರೂ ಸಾಲದು. ಶಾಂತಿಸಾಗರದಲ್ಲಿ ಜಪಾನಿದೊಡನೆಯೂ ಅದು ಯುದ್ಧ ನಡೆಯುತ್ತಿದೆ. ನೋದರೀ ಜನಾಂಗವಾದ ಅಮೇರಿಕಕ್ಕೆ ಬ್ರಿಟನು ಕೈಮುಗಿಯಬೇಕು. ಪರಿಸ್ಥಿತಿ ಚಿಂತಾಜನಕವಿದ್ದರೂ ಭಾರತೀಯರು ಗಂಭೀರ ಧೈರ್ಯದಿಂದ ಜಗತ್ತಿನ ಸಂಗ್ರಾಮ ಜಂಝಾಪವಾತವನ್ನು ಎದುರಿಸುತ್ತಿದ್ದಾರೆ. ಸಾಮ್ರಾಜ್ಯ ಗುರಾಣಿಯ ಹಿಂದಿದ್ದುಕೊಂಡು ನೆಮ್ಮದಿಯಿಂದಿದ್ದಾರೆ. ಅಮೇರಿಕ, ಬ್ರಿಟನ್, ರಷ್ಯಗಳು ಒಂದಾಗಿ ಒಬ್ಬ ಮನುಷ್ಯನಂತೆ ಜರ್ಮನಿಯ ಮೇಲೆ ಬಿದ್ದಿವೆ. ಇದರಿಂದ ಫ್ರಾನ್ಸಿನ ಬಿಡುಗಡೆಯಾಯಿತು ಜರ್ಮನಿಯ ಬೆನ್ನೆಲುಬು ಮುರಿದಂತಾಯಿತು. ರಷ್ಯಾಕ್ಕೂ ಜರ್ಮನಿಯು ವಿಪರೀತವಾದ ತೊಂದರೆ ಕೊಟ್ಟಿದೆ. ಜರ್ಮನಿಯಿಂದ ಪೋಲೆಂಡು ಉಳಿಯಬೇಕಾದರೆ ರಷ್ಯಾದಿಂದಲೇ ಅದು ಸಾಧ್ಯ. ಕೆರಳಿತ ಜರ್ಮನಿಯು ನಾಲ್ಕು ವರ್ಷಗಳ ವರೆಗೆ ಯೂರೋಪಿನಲ್ಲಿ ತಾಂಡವ ನೃತ್ಯವಾಡಿತು. ಪಶ್ಚಿಮರಣರಂಗದಲ್ಲಿ ನಾಲ್ಕಾರು ಲಕ್ಷ ಜನರನ್ನು ಕೊಂದು, ಗಾಯಗೊಳಿಸಿ ಓಡಿತು. ತಮ್ಮ 2 ಲಕ್ಷ ಯೋಧರನ್ನು ನಮ್ಮ ಕೈಯಲ್ಲಿ ಬಂಧಿಗಳಾಗಿ ಇರಿಸಿ ಕಾಲಿಗೆ ಬುದ್ಧಿ ಹೇಳಿತು. ಅನೇಕರು ಹಿಟ್ಲರನನ್ನು ನೆಪೋಲಿಯನನಿಗೆ ಹೋಲಿಸುತ್ತಾರೆ, ನೆಪೋಲಿಯನನು ಮಹಾವೀರ ಆದರೆ ಹಿಟ್ಲರನು ಕೊಲೆಪಾತಕಿ, ದ್ರೋಹಿ. ನೆಪೋಲಿಯನನಿಗೆ ಈತನನ್ನು ಹೋಲಿಸಿದರೆ ನೆಪೋಲಿಯನನನ್ನು ಹೀನಗೈದಂತೆ. ಈ ಯುದ್ಧ 1944 ರಲ್ಲಿ ಅಂತ್ಯವಾಗುವೆಂದು ಅನೇಕ ಸಮರ ತಜ್ಞರು ಹೇಳುತ್ತಾರೆ. 1945ನೇ ವರ್ಷವು ಇನೇಕ ತಿಂಗಳುಗಳ ವರೆಗೂ ಈ ಯುದ್ಧ ನಡೆಯಲಾರದೆಂದು ನಾನು ಹೇಗೆ ಹೇಳಲಿ? ಇದು ಸರ್ವಕ್ಷೇತ್ರದಲ್ಲೂ ಸಮಗ್ರ ಜಯವೇ! ಸೋಲಿನ ಸೊಲ್ಲೇ ಇಲ್ಲ' ಎಂದರು. ಚರ್ಚಿಲ್ಲರ ಭಾಷಣವು ಜಯದ ಸಂತೋಷದಿಂದ ತುಂಬಿದೆ. ಇನ್ನೇನು ಜರ್ಮನಿಯು ಯುದ್ಧ ಮುಗಿದಂತೆ ಎನ್ನುವಂತಿದೆ.

ಜರ್ಮನ್ ನೀತಿ.

"ಶರಣಾಗು' ಎಂಬ ಶಬ್ದವು ಜರ್ಮನ್ ರಬ್ಬಕೋಶದಲ್ಲಿರಕೂಡದು. ಇಂದಿನ ಪರಿಸ್ಥಿತಿ ಹಾಗಿದೆ. ಇನ್ನು ಹಿಂತೆಗೆದುಕೊಳ್ಳುವದು ಸಾಧ್ಯವಿಲ್ಲ. ನಾವು ಈಗ ಜರ್ಮನ್ ನೆಲದಲ್ಲಿ ನಿಂತು ಹೋರಾಡುತ್ತಿರುವೆವು. ನಮ್ಮ ಜನರನ್ನು ಗುಲಾಮರಾಗಿ ಮಾಡಿ ಸದಾ ಹಿಂಸಲು ಮಿತ್ರರು ಪ್ರಯತ್ನಿಸುತ್ತಿದ್ದಾರೆ." ಇದು ಜರ್ಮನ್ ರೇಡಿಯೋದಲ್ಲಿ ಪ್ರಕಟವಾದ ಮಾತು. ಇದರಿಂದ ಜರ್ಮನರ ಮನೋಭಾವ ಹೇಗಿದೆಯೆಂದು ತಿಳಿಯಬರುವದು. ಜರ್ಮನರು ಎಂದಿಗೂ ಶರಣಾಗತರಾಗುವಂತೆ ಕಂಡುಬರುವದಿಲ್ಲ. ಬದಲು ಕಳೆದ ವಾರದ ಯುದ್ಧಗತಿಯನ್ನು ನೋಡಿದರೆ ಜರ್ಮನರು ಮಿತ್ರರ ಪಟ್ಟುಗಳನ್ನು ಇನ್ನೂ ಹಲವು ಸಮಯದ ವರೆಗೆ ತಡೆಯಬಲ್ಲರೆಂಬುದು ವೇದ್ಯವಾಗುತ್ತಿದೆ. ಕಳೆದ ವಾರ ಪಾಲೆಂಡಿನಲ್ಲಿ ಅಕ್ಯುಸ್ಸ್ರವಾದ ಕದನವಾಯಿತು. ಒಟ್ಟಿರನ 'ಸೀಜ್‌ಫ್ರೈಚ್' ಕೋಟೆಯು ಈ ಭಾಗದಲ್ಲಿಯೇ ಸ್ವಲ್ಪ ನಿರ್ಬಲವಾಗಿರುವದೆಂಬಿದೆ. ಅಲ್ಲಿದ ಈ ಮಾರ್ಗವಾಗಿಯೇ ಬರ್ಲಿನಿಗೆ ಹತ್ತಿರದ ದಾರಿಯೂಗಿದೆ ಅಲ್ಲಿದ್ದರಿಂದ ಮಿತ್ರರು ಈ ಮಾರ್ಗವಾಗಿ ಜರ್ಮನಿಗೆ ನುಗ್ಗಲು ಪ್ರಯತ್ನಿಸುತ್ತಿದ್ದಾರೆ. ಜರ್ಮನರು ಇಲ್ಲಿ ಬಹು ತೀವ್ರವಾದ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಹಾಲೆಂಡು ಹೊಳೆಗಳ ರಾಜ್ಯ. ಈ ಹೊಳೆಗಳು ತಮ್ಮನ್ನು ರಕ್ಷಿಸುವವೆಂದು ಜರ್ಮನರು ತಿಳಿದಿದ್ದರು. ಆದರೆ ಮಿತ್ರರು ವಿಮಾನದ ಮೂಲಕ ಸೇನೆಗಳನ್ನು ತಂದಿಳಿಸಿದ ಕಾರಣ ಜರ್ಮನರು ಮುಂದೆಸಾಗಿ ಪ್ರತಿಭಟಿಸಬೇಕಾಯಿತು ಈ ಪ್ರತಿಭಟನೆಯು ಬಹು ಭಯಂಕರವಾಗಿ ನಡೆಯಿತು ಜರ್ಮನರು ಜೀವದ ಹಂಗು ತೊರೆದು ತಾಡುತ್ತಿದ್ದಾರೆ. ಮಿತ್ರರ ಸರ್ವದಳಗಳನ್ನೂ ಹಿಮ್ಮೆಟ್ಟಿಸಿ ದಂಗುಬಡಿಸಿದ್ದರು. ಆದರೆ ಪುನಹ ಮಿತ್ರರ ಸೇನೆಗಳು ಮೇಲೇರಿ ಬಂದಿವೆ. ಈ ಭಾಗದಲ್ಲಿ ಇನ್ನೂ ಖಾಡಾಖಾಡಿಯಾಗಿ ಯುದ್ಧವಾಗುತ್ತಿದೆ. ಪ್ರದೇಶಗಳು ಈ ಕ್ಷಣ ಮಿತ್ರರ ವಶವಿದ್ದರೆ ಮತ್ತೊಂದು ಕ್ಷಣ ಶತ್ರುಗಳಲ್ಲಿ. ಇನ್ನೊಂದು ಕ್ಷಣ ಮಿತ್ರರಲ್ಲಿ ಹೀಗೆ ಕೈ ಬದಲಾಗುತ್ತಿವೆ. ಯುದ್ಧವನ್ನು ಹೀಗೆ ಎಷ್ಟು ದಿನ ಮುಂದೆ ನೂಕಬಹುದೆಂಬುದು ಅನಿಶ್ಚಿತವಾಗಿದೆ. ಚರ್ಚಿಲ್ಲರು 1945 ರಲ್ಲೂ ಯುದ್ಧವಾಗಬಹುದೆನ್ನುತ್ತಾರೆ. 'ಈ ವರ್ಷ ಯುದ್ಧವು ಮುಗಿಯುವದೆಂಬ ಆಶೆ ನನಗಿಲ್ಲ. ಬಹುಶಃ ಜರ್ಮನರು 1945 ನೇ ವರ್ಷದ ಶರತ್ಕಾಲದಲ್ಲಿ ಸೋಲಬಹುದು' ಎಂದು ಜನರಲ್ ವಿಲಿಬಟ್ಲರವರು ಹೇಳಿದ್ದಾರೆ. ಇವರು ಮೊದಲು ಜರ್ಮನಿಯಲ್ಲಿದ್ದು ಅದರ ಆಂತರಂಗ ಶಕ್ತಿಯನ್ನು ಬಲ್ಲವರು. ಆದ್ದರಿಂದ ಯುದ್ಧವು ಬರುವ ವರ್ಷವೂ ನಡೆಯಬಹುದು. ಹಿಟ್ಲರನ ಆಶಯವಾದರೂ ಹೀಗೆ ಇರಬಹುದು. ಅಕ್ಟೋಬರಿನಿಂದ ಡಿಸೆಂಬರ್ ವರೆಗಿನ ಮೂರು ತಿಂಗಳು ಹಿಟ್ಲರನಿಗೆ ಯುದ್ಧಕ್ಕೆ ಯೋಗ್ಯ ಸಮಯವಾಗಿದೆ. ಯುದ್ಧವನ್ನು ಇನ್ನೂ ಮುಂದೆ ಸಾಗಿಸಿ ಮಿತ್ರರನ್ನು ಬಹುಮಟ್ಟಿಗೆ ನಷ್ಟ ಕಷ್ಟಕ್ಕೆ ಗುರಿಮಾಡಿಸಿ ಸುಲಭ ಶರತ್ತುಗಳಿಂದ ಒಪ್ಪಂದವಾಗುವಂತೆ ಪ್ರಯತ್ನಿಸಬಹುದು ಅತನ ಆಶೆಯಿದ್ದಂತಿದೆ. 'ಜರ್ಮನಿಯ ಮೇಲೆ ಹಿಟ್ಲರನ ಗೆಸ್ಟಪೋದಳದ ಹಿಡಿತವಿರುವವರೆಗೆ ಯುದ್ಧ ಮುಗಿಯದು' ಎಂಬುದಾಗಿ ಜನರಲ್ ಅಲೆನ್ ಜೋಪರೇ ಹೇಳಿದ್ದಾರೆ. ಗೆಸ್ಟಪೋದಳವು ಜನತೆಯ ಮೇಲಿರುವ ಹಿಡಿತವನ್ನು ಕಳಕೊಂಡಂದು ಹಿಟ್ಲರನ ಆಳಿಕೆಯು ಕೊನೆಯೂ ಆಗುವದು. ಆದ್ದರಿಂದ ಆತನು ತನ್ನ ಗೆಸ್ಟಪೋದಳದ ಹಿಡಿತವನ್ನು ಭದ್ರಮಾಡಿ ಯುದ್ಧವನ್ನು ಇನ್ನಷ್ಟು ಮುಂದೆ ಸಾಗಿಸುವ ನಿಶ್ಚಯಿಂದಿದ್ದಾನೆ.

ಇತ್ತ ಪೂರ್ವರಂಗದಲ್ಲಿಯಂದ ಬರುತ್ತಿರುವ ರಷ್ಯಾವು ಹೆಜ್ಜೆ ಪ್ರಗತಿ ಪಡೆದಿಲ್ಲ. ಇಲ್ಲಿಯಲ್ಲಿ ಮಿತ್ರರು ಈ ವರೆಗೆ ಸ್ವಲ್ಪ ಮೈಕೊಡಹಿ ಮುಂದೆ ನುಗ್ಗುವ ಯತ್ನ ಮಾಡಿದ್ದಾರೆ. ಜಪಾನ್ ಕಾಳಗ ಇನ್ನು ಪ್ರಾರಂಭವಾಗಬೇಕು. ಚೀನಾದ ಪರಿಸ್ಥಿತಿ ಸುಧಾರಿಸಿಲ್ಲ.

(1ನೇ ಪುಟದಿಂದ ಸಾಗಿದ್ದು)

ಭಿನ್ನಾಯನಿರುವದರಿಂದ ಮೂರನೇ ಯವರ ಮಧ್ಯಸ್ಥಿಕೆಕ ಏರ್ಪಡಿಸಬಹುದು.' ಎಂದರು.

ಸೆಪ್ಟೆಂಬರ್ 23 ರಲ್ಲಿ ಜಿನ್ನಾರವರು ಉತ್ತರ ಕೊಡುತ್ತಾ 'ಗಾಂಧಿಯವರು ವಯಕ್ತಿಕವಾಗಿ ಯಾವ ಪ್ರತಿನಿಧಿಯೂ ಅಲ್ಲದೆ ಮಾತುಕತೆಯಲ್ಲಿದ್ದ ಮಧ್ಯಸ್ಥಿಕೆ ಏರ್ಪಡಲಿ ಎಂದು ಹೇಗೆ ಹೇಳುವದು. ಗಾಂಧಿಜಿಯವರು ಒಂದು ಸಂಸ್ಥೆಯ ಅಧಿಕೃತ ಪ್ರತಿನಿಧಿಯೂಗಿ ಬರಲಿ. ಲಾಹೋರ್ ನಿರ್ಣಯದ ಆಧಾರದ ಮೇಲೆಯೇ ನಾನು ನಡೆಯುತ್ತಿದ್ದೇನೆ.' ಎಂದರು.

ಗಾಂಧೀಜಿಯವರು ಸೆ. 24 ರಲ್ಲಿ ಪತ್ರ ಬರೆದು 'ನನಗೂ ಜಿನ್ನಾರವರಿಗೂ ಭಿನ್ನಾಭಿಪ್ರಾಯಗಳಿವೆ. ನಾನು ಈ ಸೂಚನೆಗಳನ್ನು ಮಾಡುತ್ತೇನೆ. (1) ಪ್ರತ್ಯೇಕವಾಗುವ ಪ್ರದೇಶಗಳು ಯಾವುವು ಎಂದು ನಿರ್ಧರಿಸಲು ಕಾಂಗ್ರೆಸ್ ಮತ್ತು ಲೀಗಿನ ಒಪ್ಪಂದದಿಂದ ಸವಿತಿ ಏರ್ಪಾಡಾಗಬೇಕು. (2) ನಿರ್ಧಿಷ್ಟ ಪ್ರದೇಶದಲ್ಲಿ ವಾಸಮಾಡುವ ಜನರ ಅಭಿಪ್ರಾಯವೇನೆಂದು ಪ್ರತ್ಯೇಕವಾಗುವ ವಿಚಾರದಲ್ಲಿ ತಿಳಿಯಬೇಕು. (3) ವಾಪ್ತಿಯ ವಯಸ್ಸಿನ ಜನರೆಲ್ಲರೂ ಈ ವಿಚಾರ ಮತದಾನಮಾಡಬೇಕು. (4) ಪ್ರತ್ಯೇಕವಾಗಬೇಕೆಂದು ಈ ಪ್ರದೇಶಗಳ ಜನರು ಅಭಿಪ್ರಾಯ ಹಚ್ಚಿದರೆ ಭಾರತವು ಪರಾಧೀನತೆಯಿಂದ ಸ್ವತಂತ್ರವಾದ ನಂತರ ಆ ರೀತಿ ಪ್ರತ್ಯೇಕ ರಾಜ್ಯಾಚರಿಸಬಹುದು. (5) ಎರಡು ರಾಜ್ಯಗಳಿಗೂ ವಿದೇಶ ವಿಚಾರ, ರಕ್ಷಣೆ ಮೊದಲಾದ ವಿಷಯಗಳಲ್ಲಿ ಪರಸ್ಪರ ಸಮ್ಮತಿಯಿರಬೇಕು. ಅಲ್ಪ ಸಂಖ್ಯಾತ ಕೋಮುಗಳ ಹಕ್ಕು ಬಾಧ್ಯತೆಗಳ ರಕ್ಷಣೆ ವಿಚಾರ ನಿರ್ದಿಷ್ಟ ಶರತ್ತುಗಳಿರಬೇಕು. (6) ಕಾಂಗ್ರೆಸ್ ಲೀಗೂ ಈ ಒಪ್ಪಂದಕ್ಕೆ ಸಮ್ಮತಿಸಿ ಭಾರತ ಸ್ವಾತಂತ್ರ್ಯ ಸಾಧನೆಗಾಗಿ ಪರಿಸ್ಥಿತಿಯ ಕಾರ್ಯಕ್ರಮವನ್ನು ಅನುಸರಿಸಬೇಕು. (7) ಕಾಂಗ್ರೆಸ್ ಸತ್ಯಾಗ್ರಹಿಯ ಸತ್ಯಾಗ್ರಹ ಮಾಡುವಾಗ ಮುಸ್ಲಿಂಲೀಗ್ ಹಾಗೆ ಮಾಡದೆ ಸಹಾಯಸಂಬಹುದು. ಜಿನ್ನಾರವರು ಇದಕ್ಕೆ ಒಪ್ಪದಿದ್ದರೆ ತಮ್ಮ 'ಲಾಹೋರ್' ನಿರ್ಣಯದ ಶರತ್ತುಗಳನ್ನು ತಿಳಿಸಲಿ.' ಎಂದು ಕೇಳಿದರು.

ಜಿನ್ನಾರವರು ಉತ್ತರ ಬರೆಯುತ್ತಾ 'ಗಾಂಧೀಜಿಯ ಸಲಹೆಗಳಿಗೆ ಒಪ್ಪಲಾರೆನು. ಈ ಸಲಹೆಗಳೆಲ್ಲವೂ ಲಾಹೋರ್ ನಿರ್ಣಯಕ್ಕೆ ವಿರುದ್ಧವಾಗಿವೆ.' ಎಂದರು.

ಗಾಂಧೀಜಿಯವರು ಪುನಹ ತಾ. 25 ರಲ್ಲಿ ಪತ್ರ ಬರೆದು 'ಲಾಹೋರ್ ನಿರ್ಣಯದ ಮುಖ್ಯಾಂಶಗಳಂತೆ ನಡೆದುಕೊಳ್ಳಲು ನಾನು ನಿನ್ನ ಸಲಹೆಗಳನ್ನು ಮಾಡಿದೆನು. ಇದನ್ನು ನಿರಾಕರಿಸಲು ವಿಷಯ ಸಾರಿ ಆಲೋಚನೆ ಮಾಡಬೇಕು. ಕೋಮುವಾರು ಐಕ್ಯಮತ್ಯವನ್ನು ಸಾಧಿಸುವ ಮತ್ತು ಭಾರತಕ್ಕೆ ಸೇವಸಲ್ಲಿಸುವ ದೃಷ್ಟಿಯಿಂದಲೇ ನಾನು ಸಂಧಾನ ನಡೆಸುತ್ತಿದ್ದೇನೆ. ನನ್ನ ಸಲಹೆಗಳನ್ನು ಅರಸ್ಕರಿಸುವದು ಜವಾಬ್ದಾರಿಯುತವಾದ ಕೆಲಸ. ದಯವಿಟ್ಟು ನಿರಾಕರಿಸುವಿರಿ. ನಿಮ್ಮ ಮುಸ್ಲಿಂಲೀಗ್ ಕಾರ್ಯಸಮಿತಿಯಲ್ಲಿ ಭಾಷಣ ಮಾಡಲು ನನಗೊಂದು ಅವಕಾಶಕೊಡಿ. ನಿಮ್ಮಂತೆ ಅವರೂ ನಿರಾಕರಿಸಿದರೆ ಮುಸ್ಲಿಂಲೀಗಿನ ಒಬ್ಬರಂಗ ಅಧಿವೇಶನದಲ್ಲಿ ಇದು ತೀರ್ಮಾನವಾಗಲಿ.' ಎಂದು ಹೇಳಿದರು.

ಜಿನ್ನಾರವರು ಪತ್ರ ಬರೆದು, 'ಲೀಗ್ ಕೌನ್ಸಿಲಿನಲ್ಲಿಯೂ ಲೀಗ್ ಒಬ್ಬರಂಗ ಅಧಿವೇಶನದಲ್ಲಿಯೂ ಭಾಷಣಮಾಡಲು ಮುಸ್ಲಿಂಲೀಗಿನ ಸದಸ್ಯರೂ ಜೈಲಿಗೇಟಿರಿಗೆ ವಿನಹ ಬೇರೆಯವರಿಗೆ ಅಕ್ಕಿಲ್ಲವೆಂದು ತಿಳಿಸಿದರು.

ಗಾಂಧೀಜಿಯವರು ಉತ್ತರಿಸುತ್ತಾ 'ಲಾಹೋರ್ ನಿರ್ಣಯವನ್ನು ಒಪ್ಪಲಾರೆನು. ಅದಕ್ಕೆ ನೀವು ಹೊಸ ಅಂಶಗಳನ್ನು ಸೇರಿಸಿದ್ದೀರಿ. ಭಾಷಣವೂ ಸಹ ಇದನ್ನು ಒಪ್ಪಲಾರದು. ನಾವಿಬ್ಬರೂ ಒಂದು ರೀತಿಯ ಒಪ್ಪಿಗೆಗೆ ಒಂದಲಿ ನನ್ನ ಪ್ರಭಾವವನ್ನು ಬಳಯೋಗಿಸಿ ಕಾಂಗ್ರೆಸು ಅದಕ್ಕೆ ಒಪ್ಪುವಂತೆ ವಿಚಾರಸ್ಸನ್ನು ಹೂಡುವೆನು. ನೀವು ಒಪ್ಪಂದವನ್ನು ಮುಂದಿದರೆ ಅದು ನನಗೆ ಪ್ರತಿನಿಧ್ಯ ಜವಾಬ್ದಾರಿ ಇಲ್ಲವೆಂಬ ಯಾ ಲಾಹೋರ್ ನಿರ್ಣಯದ ತಿರುಳನ್ನು ನಾನು ಒಪ್ಪಲಿಲ್ಲವೆಂಬ ಕಾರಣದಿಂದ ಆಗಲಾರದು' ಎಂದು ಹೇಳಿದರು.

ಜಿನ್ನಾರವರು ತಮ್ಮ ಕೊನೆ ಪತ್ರದಲ್ಲಿ 'ಗಾಂಧೀಜಿಯವರು ಲಾಹೋರ್ ನಿರ್ಣಯವನ್ನು ಒಪ್ಪಲಿಲ್ಲ. ಇಂಡಿಯಾದ ಪಾಕಿಸ್ತಾನ ರಚನೆಗೆ ಪುರಸ್ಕಾರ ಕೊಡಲಿಲ್ಲ. ಎಷ್ಟೇ ದೊಡ್ಡವರಾದರೂ ಪ್ರತಿನಿಧ್ಯವಿಲ್ಲದ್ದರಿಂದ ಸಂಧಾನವು ಫಲಿಸದು. ಸಂಧಾನ ಮುರಿದರೆ ಅದಕ್ಕೆ ಗಾಂಧೀಜಿಯವರೇ ಕಾರಣ' ಎಂದು ತಿಳಿಸಿದರು.

—೦೦—

ಈ ದಿನಗಳಲ್ಲಿ ಜೀವವಿಮೆಯು ಜಾತಿ, ಮತ್ತು ಉದ್ಯೋಗಗಳ ಬೇಧವಿಲ್ಲದೆ ಎಲ್ಲರಿಗೂ ಅವಶ್ಯವೆಂಬು ನಾವೆಲ್ಲರೂ ಒಪ್ಪುತ್ತೇವೆ.

ವಿವರಗಳಿಗೆ ಬರೆಯಿ:—

ಕೊಚ್ಚಿಕಾರ್ ಬ್ರದರ್ಸ್, ಲಿ.

ದಕ್ಷಿಣ ಹಿಂದೂಸ್ಥಾನಕ್ಕೆ ಮುಖ್ಯ ಏಜಂಟರು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

3) ಪುತ್ತೂರು, ಕಲ್ಲಿಕೋಟೆ.

ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ, ಏಜೆನ್ಸಿಗಳೂ ಇವೆ.

ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ಯೂ—ಫಾಸ್‌ಫೋ—ಮೂಲ್ಟ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಜಾರ್ತಿದಾರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ಕುಷ್ಮಂಡುವುದು, ನಾಲಿಗೆಗೆ ರುಚಿಯನ್ನುಂಟುಮಾಡುವುದು. ಇದರಲ್ಲಿ ಪೌಷ್ಟಿಕವಸ್ತುಗಳು ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟರ್ ಪಾಸ್‌ಫೋಮೊಲ್ಟ್, ಹೆಕೋಗ್ಲೋಬಿನ್, ಸೋಡಿಯಂ ಸಲೈನ್ ಫಾಸ್‌ಫೇಟ್ ಪೊಟ್ಟಿನ್, ಸಾಲ್, ಮೊಲ್ಟ್ ಎಕ್ಸ್‌ಟ್ರಾಕ್ಟ್ ಮುಂತಾದ ಪ್ರಸಿದ್ಧ ಔಷಧಿಗಳಂಶ ಇವೆ. ಇಂದಿನಿಂದಲೇ ಸೇವಿಸಿ ಆರೋಗ್ಯ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಾಲಯಗಳಲ್ಲಿವೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,

5) ಗೋಖಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

42) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು	ಒಟ್ಟು ಆದಾಯ	೯೭,೩೭,೦೦೦ ರೂಪಾಯಿ
	ಚಾಲ್ತಿಯಿರುವ ವಿಮೆ	೧೩,೪೯,೮೮,೮೮೮ ,,
ಸ್ವಪ್ನ ಸಂಗತಿಗಳು.	ಆಸ್ತಿ	೬,೩೦,೪೬,೦೦೦ ,,
ಕಂಪೆನಿಯು ಅದಿಯಲ್ಲಿ ಕೊಟ್ಟ ಕ್ಲೈಮುಗಳು		೪,೩೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,	ಅರ್ಜಿಗಳನ್ನು	ಎಂಪೈರ್ ಆಫ್ ಇಂಡಿಯಾ
ಕೆಂಪೇಗೌಡ ರಸ್ತೆ, ಬೆಂಗಳೂರು.	ಸ್ವಾಗತಿಸಿದೆ.	ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆ್ಯಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ)

ವಸೂಲಾದ ಶೇರ್ ಮೊಬಲಗು ರೂ. 95,040, ಜಮಾ ಬಂದ ರೇವಣಾತಿ 2,24,750 ವಸೂಲಾದ ಕ್ಷೇಮನಿಧಿ 3,16,200, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಅಧಾರದ ಮೇಲೆ 90% ಕೊಡಲಾಗುತ್ತೆ. ನಿಮ್ಮ ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಬಾಶ್‌ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಇಳಿಸಿರಿ.

ಮುಖ್ಯ ಏಜೆಂಟರು: ಹೊಸ ದಿಲ್ಲಿ] [ಹೆಚ್ಚಿನ ವಿವರಗಳಿಗೆ ಈ ಪತ್ರಿಕೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಯಂ. ರಂಗನಾಥಶೆಟ್ಟಿ,

37) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

— ಕೊಡಗು ಕಸ್ತೂರ್ ಬಾ ಸ್ಮಾರಕ ನಿಧಿ —

ಕೊಡಗಿನಲ್ಲಿ ರೂ. 14,370 ಸಂಗ್ರಹವಾಯಿತು

ಶ್ರೀಗುರಾಪ ಸಿ. ಜೆಂ. ಸಾಹೆಬ್,	100
ಗುರಪ್ಪ ಬಿ.	75
ಮೂಡನಾನಂದ ಸ್ವಾಮಿ,	50
ಸಾಲೇಕಾಂಡ ಐಯ್ಯಮ್ಮ,	50
ಜೊಳ್ಳೆರ ಚಂಗಪ್ಪ,	50
ಗಾಂಧಿ ಫಂಡ,	40
ಎಂ. ಎ. ಹಮೀದ್‌ಖಾನ್,	30
ವಾಚಿಟ್ಟೀರ ಉತ್ತಯ್ಯ,	25
ಲೇಟ್ ಕೂತಂಡ ಜೋಯಪ್ಪ,	25
ಮಿಸೆಸ್ ಚಿಪ್ಪುಡೀರ ಮುದ್ದಪ್ಪ,	25
ಹಳ್ಳೋನಿಯ ಕ್ಲಬ್,	25
ದೇಂಗೋಡಿ ಜೋಜಪ್ಪ,	25
ಮಿಸೆಸ್ ಪಟ್ಟಿಯಂಡ ಕುಟ್ಟಪ್ಪ,	25
ಮುಂಡೇಸಂಡ ಬಿ ಪೂವಪ್ಪ,	25
ಬಡುವಮಂಡ ಮಂದಣ್ಣ,	25
ಎಂ. ಜಿ. ಪೂವಪ್ಪ,	25
ತೋಟಂಬೈಲು ಮೊದಪ್ಪ,	25
ಪಿ. ಜಿ ಮಾಚಿದ್ದಮ್ಮಯ್ಯ,	25
ಕುಂದಳ್ಳಿ ಚಂಗಪ್ಪ,	20
ಪೊಡನೋಳಂಡ ಭೀಮಯ್ಯ,	20
ಕೋದಾಂಡ ಎಸ್. ನಂಜಪ್ಪ,	20
ಮುನಿಮಂಡಂಡ ಗಣಪತಿ,	20
ಮಿಸೆಸ್ ಕಾಂಡಂಡ ಚಂಗಪ್ಪ,	20
ಪಟ್ಟಮೂಡ ಬಿ. ಮೇದಪ್ಪ,	15
ದಕ್ಷಿಣ ಕೊಡಗು ಸಹಕಾರ ಸ್ಟೋರ್	15
ಸಿ. ಸಿದ್ದಪ್ಪ,	15
ಕಾಕಮೂಡ ಗಣಪತಿ & ಬ್ರದರ್ಸ್	15
ಪಟ್ಟಮೂಡ ಐಯ್ಯಣ್ಣ	15
ತಿರುವಂಗಡಂ ಪಳ್ಳಿ,	12
ನೈಯಂಡೆರ ನಂಜಪ್ಪ,	10
ಪೊಡನೋಳಂಡ ಸೋಮಣ್ಣ,	10
ಎನ್. ಅಬ್ದುಲ್ ರಹೀಂ & ಸನ್ಸ್,	10
ಕೋದಾಂಡ ಎಸ್. ಕಾರ್ಯಪ್ಪ,	10
ಮೂಡಿ ಅಬ್ದುಲ್ ಕಾದರ್ ಸಾಹೇಬ್,	
ಹಸನ್ ಸಾಹೇಬ್ & ಸನ್ಸ್	10
ಖಾಜಿ ಮುಮ್ಮದ್ & ಸನ್ಸ್	10
ನೊನ್ಮೀನ್ ಅಹ್ಮದ್ ಬಾದರ್	
ಸಾಹೇಬ್ & ಮುಮ್ಮದ್ ಸಾಹೇಬ್,	10
ಪಿ. ಪಿ. ಕುಂಞಮಮ್ಮದ್,	10
ಚೀಂಡಂಡ ಮುತ್ತಣ್ಣ,	10
ಬಟ್ಟಿಯಂಡ ಮಿಸೆಸ್ ಬತ್ತಯ್ಯ,	10
ಪೂಕೇರ ಪೂಚಣ್ಣ,	10
ರಾ. ಬ. ತೇಸಕಿರಾವ್,	10
ಮಿಸೆಸ್ ಮನೆಯಪಂಡ ಉತ್ತಪ್ಪ,	10
ಸಂವಾದಕ ಜನಧ್ವನಿ,	8
ಜಮ್ಮಡ ಮೂದಪ್ಪ,	7

ರೂ. 5 ಕೊಟ್ಟವರು.

ಶ್ರೀಗಳಾದ ಬಡ್ಡೀರ ಪೊನ್ನಪ್ಪ, ಸೆಕಂಡ ಅಚ್ಚಯ್ಯ, ತೆಕ್ಕಡ ಮುತ್ತಪ್ಪ, ಎನ್.ಎಸ್. ಕುಟ್ಟಪ್ಪ, ಮಣವಟ್ಟೀರ ಚಿಣ್ಣಪ್ಪ, ವಕ್ಕಲಿಗರ ಕೆಂಪಯ್ಯ, ವಕ್ಕಲಿಗರ ಕರಿಯಪ್ಪ, ಅಬ್ದುಲ್ ನಬ್ಬ, ಅಬ್ದುಲ್ ರಹಿಮನ್, ಪೂಪಳ್ಳಿ ಬೀಮನಮನೆ, ಪೂಪಳ್ಳಿ ಕರಿಮಮ್ಮದೆ, ಕುಂಞಂಬು, ಕುಟ್ಟಂಡ ಕುಟ್ಟಪ್ಪ, ಕುಟ್ಟಂಡ ಸೋಮಯ್ಯ, ಕುಸ್ತಂಡ ಗಣಪತಿ, ಅಮ್ಮಣಕುಟ್ಟಂಡ ಕುಶಾಲಪ್ಪ, ಪುಂಡಂಡ ಮಂದಣ್ಣ, ಎನ್. ಮೊಯಿದಿನ್ ಸಾಹೇಬ್ ಎ. ಪಿ. ಅಬೂಬಕರ್, ಬಾಡಗರೇರಿ ಸಂಘ, ನಂಗಾರು ಮುತ್ತಣ್ಣ, ಮೊರ್ಚ್ ಮಂದಣ್ಣ, ಕೊಡಂದೆರ ಪೂಚಯ್ಯ, ಹಿ. ಎಂ. ನಾಣಮ್ಮಯ್ಯ, ಪಟ್ಟಮೂಡ ತಂಗಮ್ಮ, ಎನ್. ಸೋಮಣ್ಣ, ಡಾ. ಎಂ. ಎ ಚಂಗಪ್ಪ, ಪೊನ್ನಿಮೂಡ ಮೊಣ್ಣಯ್ಯ, ಇ. ಪಿ. ವಾಚಯ್ಯ, ಚರಮರ್ತಿ ಹುಚಂಣ್ಣ, ವಾಚಿಟ್ಟೀರ ಮುತ್ತಣ್ಣ, ಹಿತಚಿಂತಕರು, ಬಲ್ಯಂಡ ಪೂವಯ್ಯ, ಪೊನ್ನೆಚಂಡ ಮುದ್ದಪ್ಪ.

ರೂ. 4 ಕೊಟ್ಟವರು.

ಶ್ರೀಗಳಾದ ಎ. ಟಿ. ವೈದ್ಯನಾಥ, ಚೈಯ್ಯಂಡಾಣೆ ಶಾಲೆ, ಎಫ್. ಎಸ್. ಮಿನೇಜಸ್, ಪುಚ್ಚಿಯಂಡ ಐಯ್ಯಪ್ಪ & ಬ್ರದರ್ಸ್, ಸಂಪ್ಟಿಲ್ ಹೈಸ್ಕೂಲು

ರೂ. 3 ಕೊಟ್ಟವರು.

ಶ್ರೀಗಳಾದ ಕೋಡಿ ನಂಜಪ್ಪ, ಕೆ. ನರಸಿಂಹಮೂರ್ತಿ, ಕೆ. ಎ. ರಾಮಯ್ಯ, ಸೆಂಟ್ಪಿಲ್ ಸ್ಟೋರ್ಸ್, ಕುಯ್ಯಮುಡಿ ದಪನ ಭಂಡಾರ, ಸಣ್ಣಪುಲಿಕೋಟು ದಪನ ಭಂಡಾರ, ತವಕಲು ಸ್ಟೋರ್ಸ್, ಮುಕ್ಕಾಟಿರ ಸುಬ್ಬಕ್ಕಿ, ಪಿ. ಕೆ. ಪೊನ್ನಪ್ಪ, ಟಿ. ಟಿ. ಜೋಸೆಫ್, ನಾಯಕಂಡ ಸೀತಮ್ಮ, ಸಾಗು ಫಾಪ್ಪ, ಅಬ್ದುಲ್ಲಾ ಖಾನ್ ಮತ್ತು ತಬ್ದುಲ್ ಗಫೂರ್, ಎ. ಪಿ. ಪೋಳು ಬಿ. ಟಿ. ಕುಟ್ಟಪ್ಪಹಳ್ಳಿ, ಗುಟ್ಟುಧದ್ಯಕ್ಷಾದೇವರು ಎನ್. ಎಸ್. ರಾಮದಾಸ್, ಎಂ. ಟಿ. ಕುಟ್ಟಪ್ಪ.

ರೂ. 2 ಕೊಟ್ಟವರು.

ಶ್ರೀಗಳಾದ ಎಂ. ಅಯ್ಯಪ್ಪಯ್ಯ, ಕೆ. ಎಸ್. ಮೂರ್ತಿ, ಸಿ. ಎಸ್. ಪಣ್ಯಕ್ಕಯ್ಯ, ಕೆ. ನಂಜಿಂಹನಾಯಕ, ಪಣಗಾಲ ಚಿಣ್ಣಪ್ಪ, ದೇಂಗೋಡಿ ಕೃಷ್ಣಪ್ಪ, ಕೆ. ಮಹಮ್ಮದಾಗೌಸ್, ವಿ. ಎಸ್. ಚಕ್ರಪಾಣಿ ರೆಟ್ಟಿ, ಎಸ್. ಎನ್. ಮೂಪ್ಪರೆಟ್ಟಿ, ನೆರವಂಡ ಮಂದಣ್ಣ, ಎ. ಈರಪ್ಪ, ಎಸ್. ಕೆ. ಶ್ರೀನಿವಾಸನ್, ಕೈಬಲಿರ ಬೆಳ್ಯಪ್ಪ, ಮಚ್ಚಮೂಡ ಪೆಮ್ಮಯ್ಯ, ನಾರಾಯಣಶೆಟ್ಟಿ, ಆಚ್ಚುತನ, ಕೆ. ಎಸ್. ಶಾರದಮ್ಮ, ವಿ. ಅಬ್ದುಲ್ ಖಯ್ಯೂಮ್, ಫ್ರೇಜರ್ ಬೇಟೆ ಸಹಕಾರ ಕೂಟ, ನಂದರಂಡಸಿಂಗ್ & ಸನ್ಸ್, ಜೋಜನ ಸೋಮಯ್ಯ, ಟಿ. ಆರ್. ವೆಂಕಟರಮಣಾಚಾರ್, ಪಟ್ಟಡಂಡ ಸೋಮವ್ವ, ಮೊಟ್ಟನ ನಂಜಪ್ಪ, ಚೇಂದ್ರಿಮೂಡ ಪುಣ್ಣಪ್ಪ, ಅಪಾಡಂಡ ಡಿ ಕಾವೇರ್ಯಪ್ಪ, ಅಪಾಡಂಡ ಮಿಸೆಸ್ ಕಾಮವ್ವ, ಕಗ್ಗೋಡು ಜಿ. ಬಿ. ಮಿಸೆಸ್. ಕೆ. ಮೊಗಪ್ಪ, ಚೈಯಂಡಾಣೆ ವೈದ್ಯ, ಸೂರ್ಯನಾರಾಯಣರಾವ್, ಬಿ ಬಿ. ಪೂಡಪ್ಪ, ಎ. ಎಂ. ಚಿಣ್ಣಪ್ಪ, ಕೆ. ಎ. ಗಣಪತಿ, ಪೆಮ್ಮಂಡ ಕುಟ್ಟಪ್ಪ, ಐ. ಜಿ. ಪೂಪಪ್ಪ, ಎಂ. ಎಂ. ಐಯ್ಯಪ್ಪ, ಐ. ಜಿ. ಪೆಮ್ಮಯ್ಯ, ಎಂ. ಬಿ. ಮುತ್ತಣ್ಣ, ಬಾಳೆಕುಟ್ಟರ ಮೂಚಯ್ಯ, ಕೀತಿಯಂಡ ಕುಶಾಲಪ್ಪ, ಮಿಸೆಸ್ ಪುಲಿಯಂಡ ಕುಶಾಲಪ್ಪ, ಶ್ರೀಮತಿ & ಶ್ರೀಪೂನಾ ಪಳೆಯಂಡ ತಿಮ್ಮಯ್ಯ, ಸಿ. ಡಿ. ಗಂಗವ್ವ, ಕೆ. ಎಂ. ಸುಬ್ರಾಯ, ಎಸ್. ರಂಗನಾಥರಾವ್, ಶ್ರೀವಾದರಾವ್‌ಗಾಡ್ ಟೋಲೆ & ಬ್ರದರ್ಸ್, ಕುಪ್ಪಂಡ ಎಸ್. ಸೀತಮ್ಮ, ಎಸ್. ಎಸ್. ಚಂಗಪ್ಪ, ಕುಂಜೆಟ್ಟೀರ ಪೊನ್ನವ್ವ, ಪಟ್ಟಮೂಡ ಎಂ. ಮುತ್ತಣ್ಣ, ಮುಕ್ಕಾಟಿರ ಮೇದಪ್ಪ, ಬಿ. ವಾಂಡುರಂಗರಾವ್, ಬಿ. ಸಕೆರಾಂ, ಬಿ. ಅಮ್ಮುಕುಟ್ಟಿ, ಜನಾರ್ಧನರಾವ್, ಎ. ಎನ್. ಲಿಂಗಯ್ಯ, ಸಿ. ಎಂ. ಅಬ್ದುಲ್ಲಾ, ನೆವ್ಯಲೆ ಸಹಕಾರ ಸಂಘ, ಎಸ್. ಆರ್. ಮೂರ್ತಿ, ಕೂಕಂಡ ನಂಜಪ್ಪ, ಸಿ. ಕೆ. ತಮ್ಮಯ್ಯ, ಕೆ. ಎ. ಬಾಲಕೃಷ್ಣ, ಮಿಸೆಸ್. ಕಲ್ಲುಮೂಡಂಡ ದೇವಕಿ ಮೂಚಯ್ಯ, ಕುಂದಳ್ಳಿ ಸಂಘ, ತಳ್ತರೆ ಸಂಘ, ಹಾನಗಲ್ಲು ಸಂಘ, ಚೌಡ್ಲು ಸಂಘ, ಕಿರುಗಂದೂರು ಸಂಘ, ಗೆಜ್ಜೆಹಣಕೋಡು ಸಂಘ, ಎಡೂರು ಸಂಘ, ತೋಳೂರು ಸಂಘ, ಕೆ. ಬಿ. ಶಾಂತವಲ್ಲಪ್ಪ, ಮಿಸೆಸ್ ಎಂ. ಎಸ್. ಚರ್ಮಾಣಿ, ಮಿಸೆಸ್. ಕೆ. ದೇವಯ್ಯ,

ಉಳಿದಿರುವ ಪೆಸರುಗಳನ್ನು ಮುಂದಿನ ವಾರ ಕೊಡಲಾಗುವುದು.

Reg.No. M. 1550.
KODAGU" MERCARA, (Coorg).

ಕೊಡಗು

ಸಂಪಾದಕರು:—ಶ್ರೀ ಪಿ. ಪಿ. ವಿಶ್ವನಾಥ, ವಾರ್ಷಿಕ ಚಂದಾ: ರೂ: ೩-೪-೦.

ಸೆಂಪ್ಟೆಬರ್ ೨೬ | ತಾರೀಕು ೧೩—೧೦—೧೯೪೪ನೇ ಶುಕ್ರವಾರ. | ಸಂಚಿಕೆ ೨೦

ಪಾನ ನಿರೋಧವನ್ನು ಜಾರಿಗೆ ತರಬೇಕು.

ಬಜ್ಜೆದ ಬೆಲೆಯನ್ನು ಗಾಡಿಗೆ ರೂ. ೧೫೦ಕ್ಕೆ ನಿರಿಸಬೇಕು.

ಕೊಡಗು ನ್ಯಾಯವಿಧಾಯಕ ಸಭೆಯ ವಿಷೇಂಗು ತಾ. 9-10-44 ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಪ್ರಸಂಪಟ್ಟಾದ ದಿ ಬ. ಕೆ ಜಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಪಿ. ಪಿ ವಿಶ್ವನಾಥನವರು ಮತ್ತು ಪಾರೆಸ್ಟ್ ಇಲಾಖಾ ವೇಂಬರರು ಗೈರ್‌ಹಾಜರಾಗಿದ್ದರು. ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ವಿಷೇಂಗು ಪ್ರಾರಂಭಗೊಂಡಿತು. ಅಧ್ಯಕ್ಷರು ತಮ್ಮ ಪ್ರಥಮ ಭಾಷಣದಲ್ಲಿ ಹೀಗೆ ಹೇಳಿದರು.

'ಕೊಡಗಿನಲ್ಲಿ ಉರುವಲಿಯಿಂದ ಎಮ್ಮೆರು 13 ಲಕ್ಷ ರೂಪಾಯಿಗಳಷ್ಟು ಹತ್ತು ಲಕ್ಷ ರೂಪಾಯಿಗಳನ್ನು ಬೇಕಾದ 2 ರ ಬಡ್ಡಿಯಂತೆ ಕೇಂದ್ರ ಸರಕಾರದಲ್ಲಿ ಇಡಲಾಗಿದೆ ಈ ಹಣವು ಯುದ್ಧಾನಂತರದ ಪುನರ್ನಿರ್ಮಾಣಕ್ಕೆ ನಮಗೆ ಬೇಕಾಗುವುದು ಆಗ ನಮ್ಮಲ್ಲಿ ಉಳಿಕೆ 3 ಲಕ್ಷ ರೂಪಾಯಿಗಳಿವೆ. ಯುದ್ಧಾನಂತರದಲ್ಲಿ ಕೊಡಗಿನ ಪುರೋಭಿವೃದ್ಧಿಯ ಬಗ್ಗೆ ಹಲವು ಯೋಜನೆಗಳನ್ನು ಮಾಡಬೇಕಿದೆ ಇನಕ್ಕೊಂದು ಪುನರ್ನಿರ್ಮಾಣ ಸಮಿತಿಯನ್ನು ನೇಮಿಸಲಾಗಿದೆ. ಕೊಡಗಿನಿಂದ ವಿಲೇಜ್‌ಗೆ ಸೇರಿದವರ ಜನಸಂಖ್ಯೆ 3000 ದಿಂದ 4000 ದವರೆಗೆ ಇದೆ ಯುದ್ಧಾನಂತರ ಇವರುಗಳಿಗೆ ಯೋಗ್ಯ ಉದ್ಯೋಗ ಕೊಡುವುದು ಕಷ್ಟವಾಗಿದೆ. ಆದ್ದರಿಂದ ಕೊಡಗಿನಲ್ಲಿಯ ಒಸ್ ಕಂಪನಿಗಳನ್ನು ಸರಕಾರದ ಅಧೀನಕ್ಕೆ ತೆಗೆದುಕೊಳ್ಳಲಾಗುವುದು. ಈ ದೃಷ್ಟಿಯಿಂದಲೇ ಟ್ರಿವಂಕೂರಿನ ವಹಿವಾಟು ವಿಸ್ತಾರಣೆಗಳನ್ನು ಅಭ್ಯಸಿಸಿ ಬರಲು ಪೊಲೀಸ್ ಇನ್ಸ್‌ಪೆಕ್ಟರೊಬ್ಬರನ್ನು ತಿರುವಂಕೂರಿಗೆ ಕಳುಹಿಸಲಾಗಿತ್ತು. ಇಲ್ಲಿಯ ಮಲೇರಿಯಾ ನಿವಾರಣೆಗೆ ತಕ್ಕ ಯೋಜನೆ ಮಾಡಲು ಇಂಡಿಯಾ ಮಲೇರಿಯಾ ಸಂಸ್ಥೆಯೊಡನೆ ರಾಸಾಯನಿಕ ಪ್ರಯೋಗ ಸಲಹೆ ಕೇಳಲಾಗಿದೆ. ಕೊಡಗಿನಲ್ಲಿ ವಿದ್ಯುಚ್ಛಕ್ತಿ ಶಕ್ಯಾಯನ್ನು ಉತ್ಪಾದಿಸುವ ಯೋಜನೆಯನ್ನು ಕೈಕೊಳ್ಳಲಾಗುವುದು. ಇದಕ್ಕೆ ಸುಮಾರು 7 ಲಕ್ಷ ರೂಪಾಯಿಗಳಾದರೂ ಬೇಕಾಗಬಹುದು. ಈ ಬಗ್ಗೆ ಪ್ರಸ್ತಾಪಿಸಿ ಪರವಾನಗಿಯನ್ನು ಕೊಡಲು ಸೆಂಟ್ರಲ್ ಸರಕಾರದಾದ ಎಗ್ಸಿಕ್ಯೂಟಿವ್ ಇಂಜಿನಿಯರ್ ರೂಬ್ಬರನ್ನು ಕಳಿಸಿದ್ದೇವೆ ಎಂದು ಹೇಳಿದರು.

ಕೊಡಗು ನ್ಯಾಯವಿಧಾಯಕ ಸಭೆಯ ಸದಸ್ಯರಾದ ಶ್ರೀ ಎಂ. ಎಸ್. ಪೊನ್ನಪ್ಪನವರು ಅನುಮೋದಿಸಿ ಮಾತನಾಡಿದರು. ಈ ಸಂಬಂಧವಾಗಿ ಸಭೆಯಲ್ಲಿ ಹಲವರು ಮಾತನಾಡಿದರು. ಕೊಡಗಿನಲ್ಲಿ ಕಿತ್ತಳೆ ರಪ್ತಾತೆಗೆಯುವ ಕೈಗಾರಿಕೆಯು ಒಬ್ಬರನ್ನು ಬೆಳೆಸುವುದಕ್ಕೆ ಪ್ರಯತ್ನಿಸಬೇಕು. ಕೊಡಗಿನಲ್ಲಿ ನಾನಾ ಕೈಗಾರಿಕೆಗಳ ಸ್ಥಾಪನೆಯು ಸುಲಭವಾಗಬಹುದು. ಕೊಡಗಿನಲ್ಲಿ ಕಿತ್ತಳೆ ರಪ್ತಾತೆಗೆಯುವ ಕೈಗಾರಿಕೆಯು ಒಬ್ಬರನ್ನು ಬೆಳೆಸುವುದಕ್ಕೆ ಪ್ರಯತ್ನಿಸಬೇಕು. ಕೊಡಗಿನಲ್ಲಿ ನಾನಾ ಕೈಗಾರಿಕೆಗಳ ಸ್ಥಾಪನೆಯು ಸುಲಭವಾಗಬಹುದು. ಕೊಡಗಿನಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಯೋಜನೆಯನ್ನು ಕೈಕೊಳ್ಳಲಾಗುವುದು. ಕೊಡಗು ವಿದ್ಯಾಮಖ್ಯವಾಗಿ ಕೃಷಿಕರನಾಡು. ಇಥ್ ನಾವಿನ ಅಭಿವೃದ್ಧಿಯು ವಿದ್ಯಾಮಖ್ಯವಾಗಿ ವಹಿವಾಟಿನ ಮೇಲೆ ಹೊಂದಿಕೊಂಡಿದೆ. ಆದ್ದರಿಂದ ಈ ವಹಿವಾಟು ಸೌಕರ್ಯವನ್ನು ಹೆಚ್ಚಿಸುವದು ಯುದ್ಧಾನಂತರದ ಪುನರ್ನಿರ್ಮಾಣ ಯೋಜನೆಯಲ್ಲಿ ಒಡಕವಾಗಬೇಕು ಕೊಡಗಿನಲ್ಲಿ ಒಟ್ಟು 68,000 ಟನ್ ಬತ್ತ ಬೆಳೆಯುತ್ತಿದೆಯೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 42,000 ಟನ್ ಬತ್ತವು ಕೊಡಗಿನ ನಿವಾಸಿಗಳ ಉಪಯೋಗಕ್ಕೆ ಬೇಕು. ಉಳಿದ 26,000 ಟನ್ನುಗಳನ್ನು ಹೇಗೆ ಕಳುಹಿಸಬಹುದು. ಕಳೆದ ಪರ್ಷ ಪೈಕಾರಿಗೆ 15,000 ಟನ್ನುಗಳನ್ನೂ ಮಲಬಾರಿಗೆ 5,000 ಟನ್ನುಗಳನ್ನೂ ಕಳುಹಿಸುವ ವಿಫಲಪ್ರಯತ್ನ ಮಾಡಲಾಗಿತ್ತು. ಅದರಲ್ಲಿ ಮೈಸೂರಿಗೆ 14,000 ಟನ್ನುಗಳನ್ನೂ ಮಲಬಾರಿಗೆ 8000 ಟನ್ನುಗಳನ್ನೂ ಕೊಡಲಾಗಿದೆ. ಈ ವರ್ಷ ಕೊಡಗಿನಲ್ಲಿ ಪಳೆ ಸರಿಯಾಗಿ ಇಲ್ಲದೆ, ದನಕರುಗಳಿಗೆ ಪಯಲೆ, ಆಳುಗಳಿಗೆ ಅಕ್ಕಾಪ ಮೊದಲಾದ ತೊಂದರೆಗಳಿಂದ ಕೊಡಗಿನ ವ್ಯವಸಾಯವು ಸಾಧಾರಣ 1000 ಎಕ್ರೆಗಳಷ್ಟು ಕಡಿಮೆಯಾಗಿರಬಹುದು ಇದನ್ನು ಸರಿಯಾಗಿ ನಡೆಸಲು ಬೇಕಾಗುವ ಬತ್ತವು ಬೆಳೆಯುವವರಲ್ಲಿಗೆ ಜಲ್ಲ ಸ್ವಲ್ಪ ಹೊಸಗೆ ಕೊಡಲೂ ಉಳಿಯಬಹುದು. ಬರುವ ವರ್ಷ ಬತ್ತದ ಬೆಲೆಯನ್ನು ಗಂಟಿಗೆ ರೂ. 150 ಕ್ಕೆ ನಿರಿಸಬೇಕೆಂದು ಸಾರ್ವಜನಿಕ ಅಭಿಪ್ರಾಯವಿದೆ. ಬತ್ತಕ್ಕೆ ಯೋಗ್ಯ ಬೆಲೆ ದೊರೆಯುವಂತೆ ಸರಕಾರವು ಎಲ್ಲಾ ಹರಾಜುಗಳನ್ನು ರದ್ದುಮಾಡಬೇಕೆಂಬ ಠರಾವನ್ನು ಶ್ರೀ. ನಿಡ್ಡಮಲೆ ಸೋಮಯ್ಯನವರು ಸೂಚಿಸಿದರು ಶ್ರೀ ಸಿ ಎಂ ಭೀಮಯ್ಯನವರು ಅನುಮೋದಿಸಿದರು ಕಂದಾಯವನ್ನು ಪಾವತಿಸಲಾರದ ರೈತರು ಹರಾಜು ಮಾಡಿದ ರೀತಿಯಲ್ಲಿ ಬಹಳ ಬೇಸರವನ್ನು ವ್ಯಕ್ತಪಡಿಸಿದರು ಆಸ್ಥಾಯಿ ಸಮಿತಿಯ ಸದಸ್ಯರು ಪಿಯೂಷ್ ಫೈನಾನ್ಸ್ ಕಂಪೆನಿಯವರು ಮಾಡಿರುವ ಹರಾಜಿನ ವಿಷಯವಾಗಿ ಶ್ರೀಗಳಾದ ಎಸ್. ಚಿಣ್ಣಪ್ಪ, ಬಾಮಂಡಿರ ಜೆ ಎ ಬೆಳ್ಯಪ್ಪ, ಬಲ್ಲಚಂಡ ಅಣ್ಣಯ್ಯ, ಎಸ್ ಪೂವಯ್ಯ, ಎಚ್ ಪಿ ಪೈಸಾರಿ, ಜೆ. ಎ. ಪೂವಪ್ಪ, ಬಿ. ಎಸ್ ಪೊನ್ನಪ್ಪ, ಎ ಪಿ ಕಾಳಪ್ಪ ಇವರುಗಳು ಪರವಾಗಿ ಅಲ್ಲಲ್ಲಿ ಮಾತನಾಡಿದರು ಠರಾವು ಪಾಸಾಯಿತು.

(4) ಚೆಟ್ಟಿಮಾಂಡ ನೊಂದಣಿ ಕಾಲೇಜಿನ ವ್ಯಾಸಂಗಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ಸೀಟು ದೊರೆಯುಲು ಇರುವ ಕಷ್ಟವನ್ನು ಮತ್ತು ವಿದ್ಯಾರ್ಥಿನಿಲಯದ ಅವಶ್ಯಕತೆಯನ್ನು ಮನಗಂಡು ಕೊಡಗಿನಲ್ಲಿ ಒಂದು ಕಾಲೇಜು ಸ್ಥಾಪಿಸಲಿಕ್ಕಾಗಿ ಕೇಂದ್ರ ಸರಕಾರದಿಂದ 5 ಲಕ್ಷ ರೂ ಸಹಾಯಗಳ ಮಂಜೂರಿಗೆ ಕೇಳಬೇಕೆಂದು ಈ ವಿಷಯ ವೀಕ್ಷಣಾ ಕಮಿಟಿಗೆ ಶಿಫಾರಸ್ಸು ಮಾಡುವಂತೆ ಶ್ರೀ ಕೋಳೇರ ಕರುಂಬಯ್ಯನವರು ಠರಾವನ್ನು ಸೂಚಿಸಿ ಕಾಲೇಜಿನ ಅವಶ್ಯಕತೆ, ಈಗಿರುವ ಹೊಂದಿಕೆಗಳನ್ನು ವಿವರಿಸಿದರು ಶ್ರೀ ಎಂ. ಎಸ್. ಪೊನ್ನಪ್ಪನವರು ಅನುಮೋದಿಸಿದರು ವಿದ್ಯಾ ಬಲಾಬಲ ಸಮಿತಿಯ ಮುಂದೆ ಸಂಬಂಧಪಟ್ಟ ಅಧಿಕಾರಿಗಳ ಅಭಿಪ್ರಾಯವನ್ನು ಪಡೆದು

ಕೊ ಡ ಗು

ತಾ. ೧೩-೧೦-೧೯೪೪ನೇ ಶುಕ್ರವಾರ

ದಿವಂಗತ ಕೋಡಂಡ ದೇವಯ್ಯನವರು.

'ತ್ಯು ಒಬನ ಕಾಲಕ್ಕೆ ಬೇಕಂತ್ ಬರುವ ಮನುಷ್ಯನು ಈ ಲೋಕವನ್ನು ಬಿಟ್ಟು ಹೋಗುವಾಗ ಇಹಸ್ಥರು ಅನೇಕರು ಕಣ್ಣೀರು ಮಿಡಿಯುವಂತೆ ಮಾಡಿ ಹೋಗಬೇಕು ಆದರೇ ಸತ್ಪುರುಷ, ಆತನೇ ಪುಣ್ಯಾತ್ಮ, ಅತನ ಜೀವನವೇ ಸಾರ್ಥಿಕ್ಯವನ್ನು ಪಡೆದುದು' ಈ ದೃಷ್ಟಿಯಿಂದ ದಿವಂಗತರಾದ ಕೋಡಂಡ ದೇವಯ್ಯನವರು ತಮ್ಮ ಜೀವನವನ್ನು ಸಾರ್ಥಕಗೊಳಿಸಿದವರು. 1887 ರಲ್ಲಿ ಜನಿಸಿದ ಇವರು ಅಜರ್ಶ ಗೃಹಸ್ಥರಾಗಿ ಸರ್ವರೀತಿಯ ಜನರಿಗೂ ಆಶ್ರಯದಾತರಾಗಿ ಬಾಳಿದರು. ದೀನದರಿದ್ರದ ಸೇವಕಾಂಗಿ, ಸಾಮಾಜಿಕ, ಧಾರ್ಮಿಕ, ರಾಜಕೀಯ ಕೆಲಸಗಳಿಗಾಗಿ ತನ್ನ ಶಕ್ತಿನಿಧಿ ತ್ಯಾಗಮಾಡಿ ಜನಪರರಾಗಿದ್ದರು. ಅವರದು ಸರಿಪಂಥದ ತರ ದರ್ಪದ ಜೀವನವಲ್ಲ; ಜಗತ್ತಿನೇ ಬೆನ್ನುಹಾಕಿ ಸ್ವಾರ್ಥದಲ್ಲಿ ಮಗ್ನವಾದ ಕುಟುಂಬ ಜೀವನವೂ ಅಲ್ಲ. ಸರಳವಾದ, ಮಾತ್ಸಲ್ಯಪೂರ್ಣವಾದ, ಪ್ರೇಮಯ ಜೀವನವದು. ಯೋಗಿಯಂತೆ ತ್ಯಾಗಮಾಡಿದ ಆರಾಧ್ಯಜೀವಿಯೂ ಅವರು ಬಡವ ಬಗ್ಗರಿಗಾಗಿ ಒಂದು ಲಕ್ಷಕ್ಕೂ ಮಿರಿ ಧನಸಹಾಯಮಾಡಿದ್ದಾರಂತೆ ನೂರಾರು ಜನರಿಗೆ ವಿದ್ಯಾದಾನ ಮಾಡಿದ್ದಾರೆ ವಿದ್ಯಾದಾನಕ್ಕಾಗಿ ಅವರ ಜೀವನವು ಮುಡಿಪಾಗಿತ್ತೆಂದರೂ ಸಲ್ಲುವದು. ಒಂದು ನೂತ, ಒಂದು ಕೋಮು, ಒಂದು ಜಾತಿ ಎಂಬ ಬೇಧವಿಲ್ಲದೆ ಧರ್ಮವನ್ನು ಧರ್ಮಕ್ಕಾಗಿ ಯಾವ ಕೃತಘ್ನತೆಯನ್ನೇ ಕ್ಷಿಯಿಲ್ಲದೆ ಮಾಡಿದ ಈ ಮಹನೀಯರ ಜೀವನವು ಕೊಡಗಿನ ಶ್ರೀಮಂತರಿಗೆ ಒಂದು ಉದಾಹರಣೆಯಾಗಿ, ಜಗತ್ತನ್ನು ಆಂಯದೆ ಮೇರೆಯುವ ದರ್ಪದ ಜನರಿಗೆ ಒಂದು ಅನುಕರಣೀಯವೂ ಪಥದರ್ಶಿಯಾಗಿ, ಹೀನ, ದೀನರಿಗೆ ಒಂದು ಜ್ಯೋತಿಯಾಗಿ ಬೆಳಗುತ್ತಿದೆ. ದಿವಂಗತರು ತಮ್ಮ ಪಾರ್ಥಿವವಾದ ಶರೀರವನ್ನು ತ್ಯಜಿಸಿದ್ದರೂ ಅವರ ನೂರಾರು ಉದಾತ್ತಕೃತಿಗಳಿಂದ ನಮ್ಮ ಮಧ್ಯೆ ಜೀವಂತ ಇದ್ದಾರೆ ಅವರು ಮಾಡಿದ ಕಾರ್ಯಗಳ ಹೊಗಳಿಕೆಯಿಂದ ಪ್ರಯೋಜನವಿಲ್ಲ ನಮ್ಮ ಹೊಗಳಿಕೆಗಾಗಿ ಅವರೆ ಬೆಲೆ ಬರಬೇಕಾದರೆ ಅವರ ನೆನಪಿಗಾಗಿ ಏನಾದರೂ ಕಾರ್ಯವನ್ನು ಏನಾದರೂ ಮಾಡಬೇಕು. ವಿದ್ಯಾದಾನಕ್ಕಾಗಿ ಮಂಡಿಸಿದ್ದ ಶ್ರೀಯುತರ ಜೀವನಕ್ಕೆ ಅವರ ಶಾಂತಿ ದೊರೆಯುವ ಕೆಲಸವನ್ನು ನಾವು ಮಾಡಬೇಕು. ಅವರ ಹೆಸರಿನಲ್ಲಿ ಒಂದು ನಿಧಿಯನ್ನು ಸಂಗ್ರಹಿಸಿ ಅದರಿಂದ ಬರುವ ಬಡ್ಡಿಯಿಂದ ಸ್ಥಳ ವಿದ್ಯೆಯಲ್ಲಿ ಅಭಿರುಚಿಯಿರುವ ಬಡಬಾಲಕರಿಗೆ ವಿದ್ಯಾರ್ಥಿವೇತನವಾಗಿ ಕೊಡುವ ಏರ್ಪಾಡು ಮಾಡಿದರೆ ನಾವು ನಮ್ಮ ಕರ್ತವ್ಯ ಮಾಡಿದಂತಾಗುವದು. ಆದ್ದರಿಂದ ಇಂಥಾ ಒಂದು ಸ್ಮಾರಕ ನಿಧಿಯು ಸೇರಲ್ಪಡಲಿ ಎಂಬ ಆಗ್ಗರ ಕಾಮಧೇನುವು ಆದೃಶ್ಯ ಪಾಯಗೊಂಡ ತಮಗೆ ನೆನಪು ಚಿರಂತರವಿರುವಂತಾಗಲಿ. ದಿವಂಗತರ ಕಟುಂಬಕ್ಕೆ ದುಃಖ ಸಹಿಸಶಕ್ತಿಯನ್ನು ಭಗವಂತನು ದಯಪಾಲಿಸಲಿ. ಮೃತರ ಆತ್ಮಕ್ಕೆ ಚಿರಶಾಂತಿಯಿರಲಿ.

ಒಳದೇಶ.

ಬೇಳ್‌ಪುಡ್ ಕಂಟ್ರೋಲ್ ಇನ್ಸ್‌ಪೆಕ್ಟರರ ಹುದ್ದೆಯನ್ನು ವಜಾ ಮಾಡಿ ಶ್ರೀ ಕೆ ಶ್ರೀನಿವಾಸರಾಯರನ್ನು ಉತ್ತರಕೊಡಗಿಗೂ, ಶ್ರೀ ಗುಡ್ಡಂಡ ಕಾರ್ಯಪ್ಪನವರನ್ನು ದಕ್ಷಿಣ ಕೊಡಗಿಗೂ ಹೆಚ್ಚಿಗೆ ಆಹಾರ ಬೆಳೆಸಲು ಪ್ರಚಾರಮಾಡುವ ಆಹಾರ ಆಫೀಸರುಗಳಾಗಿ ನೇಮಕಮಾಡಲಾಗಿದೆ. ಶ್ರೀ. ಚೆಟ್ಟಂಗಡ ನಾಣಯ್ಯನವರನ್ನು ನೀರಾಜಪೇಟೆಯ ಪಾರುಪತ್ಯಗಾರರಾಗಿಯೂ, ಶ್ರೀ ಚಂಡಿರ ಬೆಳ್ಯಪ್ಪನವರನ್ನು ಶಬ್ಬಾರಿ ಸಬ್ ಇನ್ಸ್‌ಪೆಕ್ಟರಾಗಿಯೂ, ಶ್ರೀ ಕೊಕ್ಕೇಂಗಡ ಬೆಳ್ಯಪ್ಪನವರನ್ನು ಕಂಟ್ರೋಲ್ ಇನ್ಸ್‌ಪೆಕ್ಟರಾಗಿಯೂ ನೇಮಕಗೊಂಡಿದ್ದಾರೆ.

1944-45ರ ಫೈನಾನ್ಸ್ ಕಮಿಟಿಗೆ ಶ್ರೀಗಳಾದ ಐ. ಪಿ ಕಾರ್ಯಪ್ಪ, ಬಿ ಎ ಬೆಳ್ಯಪ್ಪ, ಮತ್ತು ಹೆಂಡ್ಲಿ ಪುಟ್ಟಣ್ಣನವರನ್ನು ಚುನಾಯಿಸಲಾಗಿದೆ.

ಕಳೆದ ನೆಪ್ಟೆಂಬರಿನಲ್ಲಿ ನಡೆದ ಇಂಟರ್ ವಿಷಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ನೆಲ್ಲಮಕ್ಕಡ ಎಂ.ಪುಣ್ಣಿ, ಕೊಪ್ಪಂಡ ಕರುಂಬಯ್ಯ, ಕೇತಿಯಂಡ ಮುತ್ತಣ್ಣ, ಪಟ್ಟಮಾಡ ಮುತ್ತಣ್ಣ, ಚಿಟ್ಟಿಯಂಡ ಬೋಪಣ್ಣ, ಮನೆಯಪಪ ಮುತ್ತಣ್ಣ, ಇವರುಗಳು ತೇರ್ಗಡೆಯಾಗಿರುವರು. ಬಿ. ಎ. ಪರೀಕ್ಷೆಯಲ್ಲಿ ಶ್ರೀಗಳಾದ ಮಾಡೆರ ತಮ್ಮಯ್ಯ, ಚಿಕ್ಕೇರ ಗಣಪತಿ ಇವರುಗಳು ಪಾಸಾಗಿರುವರು.

ಮಹಾತ್ಮ ಗಾಂಧಿಯವರ 76ನೇ ಜನ್ಮದಿನೋತ್ಸವವನ್ನು ತಾ 2-10-44 ರಲ್ಲಿ ಸೋಮವಾರಪೇಟೆಯಲ್ಲಿ, ಶ್ರೀ. ಜಿ. ಕೆ ಚಂದ್ರಶೇಖರರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು ಪ್ರಭಾತಫೇರಿ ಬೆಳಿಗ್ಗೆ 6 ಗಂಟೆಗೆ ನಡೆಯಿತು 10 ಗಂಟೆಗೆ ಮಹಾತ್ಮರ ಭಾವಚಿತ್ರ ಮೆರವಣಿಗೆ ಮಾಡಿ ಮಧ್ಯಾಹ್ನ 2 ಗಂಟೆಗೆ ಸಾರ್ವಜನಿಕ ಸಭೆ ನಡೆಯಿತು. ಶ್ರೀಗಳಾದ ಸಿ. ಮೊದಯ್ಯ, ಎಸ್ ಎನ್ ತಮ್ಮಯ್ಯ, ಬಿ. ಕೆ. ಶಾಂತುವೀರ ಮೊದಲಾದವರು ಗಾಂಧೀಜಿಯವರ ಗುಣಕಥನ ನುಡಿದರು.

ಶನಿವಾರಸಂತೆಯ ಕಡೆ ಮಳೆಯಿಲ್ಲದೆ ಕೊಂದರೆಯೂದ ಕಾರಣ ಸುಮಾರು 300 ರಷ್ಟು ಜನರು ಸೇರಿ ಮಲ್ಲೇಶ್ವರ ದೇವರು ಪೂಜೆಯನ್ನು ತಾ. 9ರಲ್ಲಿ ಮಾಡಿ ಮನೆಗೆ ಹಿಂತಿರುಗುವಷ್ಟರಲ್ಲಿ ಮಳೆಹೊಡೆಯಿತಿಂದೂ ಇದರಿಂದ ಸ್ಥಳದಾಯಗ ದರಗ ಸ್ವಲ್ಪ ಪ್ರಮಾಣದಲ್ಲಿ ಸುಳುಲಾಯಿತೆಂದೂ ತಿಳಿಯಬಂದಿದೆ.

ಪೊನ್ನಂಪೇಟೆಯ ಕಾಂಗ್ರೆಸ್ ಪುರಭವನದಲ್ಲಿ ಗಾಂಧಿಜಯಂತಿಯನ್ನು ತಾ 2-10-44 ರಲ್ಲಿ ಆಚರಿಸಲಾಯಿತು. ಶ್ರೀ ಕೆ ಸಿ ಕರುಂಬಯ್ಯನವರು ಗಾಂಧೀಜಿಯವರ ಜೀವನ ಮೌಲ್ಯವನ್ನು ವಿವರಿಸಿದರು.

ತಾ 5-10-44 ರಲ್ಲಿ ಅಮ್ಮತ್ತಿಯಲ್ಲಿ ಶ್ರೀ ಹಾತೂರು ಅಣ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಪತ್ರಕರ್ತರ ವಿದ್ಯಾಭಿವೃದ್ಧಿ ಸಂಘದ ಮಹಾಸಭೆಯಲ್ಲಿ ಬತ್ತದ ಬೆಲೆಯನ್ನು 120 ಪಟ್ಟಿಯ ಗಾಡಿಗೆ ರೂ. 150 ಕ್ಕಾದರೂ ನಿಗದಿಸಬೇಕೆಂದು ತೀರ್ಮಾನಿಸಲಾಯಿತು.

ತಾ 10-10-44 ರಲ್ಲಿ ದಿವಂಗತರಾದ ಕೋದಂಡ ದೇವಯ್ಯನವರ ನಿಧನದ ಬಗ್ಗೆ ಸಂತಾಪ ನೈತ್ತೆದಡಲು ದಿ. ಬ. ಕೆ. ಜಂಗಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ತಾ. 11-10-44ರಲ್ಲಿ ಮಂಡಿಕೇರಿ ಹೈಸ್ಕೂಲ್ ಹಾಲ್‌ನಲ್ಲಿ ನೆರೆದು ದಿವಂಗತರ ಆತ್ಮಕ್ಕೆ ಶಾಂತಿಯನ್ನೂ, ಕುಟುಂಬಕ್ಕೆ ದುಃಖ ಸ್ಥೈರ್ಯತಾ ಶಕ್ತಿಯನ್ನೂ ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸಿದಲ್ಲದೆ ಮೃತರ ಜ್ಞಾಪಕಾರ್ಥವಾಗಿ ಒಂದು ನಿಧಿಯನ್ನು ಸಂಗ್ರಹಿಸಿ ಅದರ ಬಡ್ಡಿಯಿಂದ ಮಂಡಿಕೇರಿ, ವೀರಾಜಪೇಟೆ ಮತ್ತು ಕಾನ್ವೆಂಟು ಹೈಸ್ಕೂಲುಗಳಲ್ಲಿನ ಉತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುವಂತೆ ತೀರ್ಮಾನಿಸಿ ಇವರನ್ನು ನಿಧಿ ಸಂಗ್ರಹ ಸಮಿತಿಯವರನ್ನಾಗಿ ಆರಿಸಲಾಯಿತು ದಿ ಬ ಕ ಚಂಗಪ್ಪನವರು (ಪೋಷಕರು), ಶ್ರೀ ಗಳಾದ ಪಿ ಎನ್. ಮಂದಪ್ಪಯ್ಯ (ಪ್ರೆಸಿಡೆಂಟ್), ಬಿ. ಎಸ್. ಕುಶಲಪ್ಪ, ಎನ್. ಸೋಮಣ್ಣ, ಪಿ. ಐ ಬೆಳ್ಯಪ್ಪ, ಎಂ. ಎಸ್ ಸಿದ್ದೀಕ್, ಕೆ. ಪಿ ತಮ್ಮಯ್ಯ, ಪಿ. ಎಂ ಉತ್ತಪ್ಪ, ಸಿ ಡಿ. ಅಪ್ಪಯ್ಯ, ಎಸ್ ಬಸಪ್ಪ ಮತ್ತು ಪಿ. ಎಂ ಚಂಗಪ್ಪ (ಸೆಕ್ರಟರಿ) ಇವರುಗಳ. ಶ್ಲಾಘನಪತ್ರ ಕೊಡಿಕೇರಿ ಹೈಸ್ಕೂಲಿನಲ್ಲಿ ಇಂಗ್ಲೀಷ ಪಂಡಿತ್ಯವನ್ನಿಡಲು ತೀರ್ಮಾನಿಸಲಾಯಿತು.

ಶ್ರೀ ಕಂಜಿರಂಡ ಪೂಣಚ್ಚನವರ ಧರ್ಮಪತ್ನಿಯವರು ಕಳೆದ ತಾ. 30ರಲ್ಲಿ ನಿಧನ ಹೊಂದಿದರು.

ಕಸ್ತೂರ್ ಬಾ ನಿಧಿ.

ಎಷ್ಟತ್ತೈದು ಲಕ್ಷದ ನಿಧಿ ಸಂಗ್ರಹಿಸಬೇಕೆಂದು ನಿಶ್ಚಯಿಸಿದ್ದ ಕಸ್ತೂರ್ ಬಾ ಸ್ಮಾರಕವು ಸೂರಯಸ್ಮೀರಮ ಲಕ್ಷವನ್ನು ದಾಟಿದ ವಿಷಯ ಮತ್ತು ಮಿರಿ ನಿಧಿ ಸಂಗ್ರಹವಾಗಲು ಬಾರದೆಯಿರುವ ಕಾರಣಗಳನ್ನು ಕುರಿತೆಯೂ ಸಾಬರಮತಿ ಆಶ್ರಮದ ಅನನ್ಯಸ್ಥಾನವನ್ನೆ, ಕಾರಣ ಇಷ್ಟೇ ಹಿರಿದೂ ಇರದ ಉದ್ದಗಲಕ್ಕೂ ಜನವಿಯು ಬೆಂಬಲ ಕೊಟ್ಟಂತೆಯೇ ಕೊಡಗಿನ ಪುಟಾಣಿಯರಾಡಿರೂ ಕೊಟ್ಟಿದ್ದಾರೆ ದ್ವಣ ಕೊಡಗಿನಲ್ಲಿ ನಿರೀಕ್ಷಿಸಿದ ಪ್ರಮಾಣ ಸಂಗ್ರಹವಾಗದಿದ್ದರೂ ಕೊಡಗಿನ ನಿಧಿಯು ನಿಧಿಯಾಯಿದ್ದ 10 ಸಾವಿರದ ಗಡಿಯನ್ನು ದಾಟಿ 14,370 ಕ್ಕೆ ತಲಪಿದು ತೊರಾಗಿ ಸಾಧನೆಯೆನ್ನಾದು ಎಂಬ ಹೆಸರು ಸಾರ್ಥಕವಾಯಿತು

ಈ ನಿಧಿ ಸಂಗ್ರಹಣಾಕಾರ್ಯದಲ್ಲಿ ಅನೇಕ ವಿದ್ಯಾರ್ಥಿಗಳು ಅನೇಕ ರೀತಿಯಿಂದ ನೆರವಾಗಿದ್ದಾರೆ ಅವರಿಗೆಲ್ಲರಿಗೂ ಕೊಡಗು ಕಸ್ತೂರ್ ಬಾ ಸ್ಮಾರಕ ನಿಧಿಯ ಸಮಿತಿಯವರು ತಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಅರ್ಪಿಸುವರು ಸಂಗ್ರಹವಾದ ಎಲ್ಲಾ ಹಣವನ್ನು ಬೆಂಗಳೂರು ಜೈಲಿನಿಂದ ಕಳುಹಿಸಲಾಗಿದೆ ನಿಧಿಯು ಎಸಿಸಿಂಗ್ರದ ಬಗೆ ಮಹಾತ್ಮಾಗಾಂಧಿಯವರು ವಿಚಾರ ವಿನಿಮಯಮಾಡುತ್ತಿದ್ದಾರೆ ಸ್ತ್ರೀಯರ ಪ್ರಯೋಜನಕ್ಕಾಗಿ ಮತ್ತು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಇದನ್ನು ಎಸಿಂಗ್ರಗೊಂಡು ಬರುವುದು ಸ್ತ್ರೀ ಪಿತವಾಗುವ ಶಾಲೆಯು ಪಾಠಾರಂಭಕ್ಕೆ ಕ್ರಮವಹಿಸುವುದು ಹೆಚ್ಚಿಗೆ ತಿಳಿಸಲಾಗುವುದು ಸ್ತ್ರೀ ಕಾರ್ಯಜಾಲಸಿರಿಯಲ್ಲಿ ಭಗವಾನುಕ್ಕೆ ಅಧಿಕಾರಿಯಾಗಿ ಗಾಂಧಿಯವರು ಅಪ್ಪಣೆ ಕೊಡಿಸಿದ್ದಾರೆ ಸಂಗ್ರಹವಾದ ಒಟ್ಟು ಹಣದ ಶೇಕಡ 75ರಷ್ಟು ಇಲ್ಲಿಯೇ ಬಳಸಲೂಬಹುದು ಆದರೆ ಜಿಲ್ಲೆಯ ಯಾವ ಕಾರ್ಯಕ್ರಮಗಳು ಜಿಲ್ಲೆಯವರಾಗಿ ನಡೆಯಲು ಮುಖ್ಯವಾಗಿ ಬೇಕಾದ ಧನದ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಇನ್ನೂ ಸಾಧ್ಯವಿದೆ ಆದ್ದರಿಂದ ನಿಧಿ ಸಂಗ್ರಹದಲ್ಲಿ ಕಾರ್ಯಕರ್ತರಾಗಿ ಆದವನ್ನು ನಿಯೋಗಿಸಬಹುದಲ್ಲಿಯೂ ಸಾರ್ವಜನಿಕರು ಸಹಾಯ ಸಹಕಾರಗಳನ್ನು ಕಾರ್ಯಕರ್ತರು ಸಂಗ್ರಹಿಸಲು ಸಾಧ್ಯವಾಗುವಂತೆ ಸಾಧ್ಯವಾದ ಸಹಾಯ ಸಹಕಾರವನ್ನು ತೋರಿಸಿಲ್ಲಿ ಚಂದಾ ಸ್ಥಾಯಿಯಾಗುವಂತೆ

ಡಿ. ಸಿದ್ದಣ್ಣ,
ಸೆಕ್ರಿಟರಿಯ್,
ಕೊಡಗು ಕ ಗಾ ಸ್ಮಾ ನಿಧಿಯ ಸಮಿತಿಗಾಗಿ

ಅಖಿಲ ಕೊಡಗು ಜವುಳಿ ವ್ಯಾಪಾರಸ್ಥರ ಸಂಘ.

ಮಂಡಿಕೇರಿ

ಮಾನ್ಯನೀಯರೇ,

ಈ ಜೋಲ್ಲಂಡ ಸಂಘದ ಕಮಿಟಿ ಮೀಟಿಂಗು ತಾ.6-10-44ರಲ್ಲಿ ನಡೆದು ಕೊಡಗಿಗೆ ಬರುವ ಮಿಲ್ಲು ಬಟ್ಟೆಯ ಕೋಟೆಯನ್ನು ತೆಗೆದುಕೊಳ್ಳಲು ಮತ್ತು ವ್ಯಾಪಾರಸ್ಥರಲ್ಲಿ ಹೆಚ್ಚಳುಕ್ಕಮವಾದ ವ್ಯವಸ್ಥೆ ಮಾಡಲು ಒಂದು ವಿಶೇಷ ಮಹಾಸಭೆಯನ್ನು ವೀರಾಜಪೇಟೆಯಲ್ಲಿ ತಾ. 10-10-44-ಲ್ಲು ನಡೆಸಲೆಂದು ತೀರ್ಮಾನಿಸಲಾಯಿತು. ಮಾನ್ಯ ಈ ವರೆಗೆ ಸಂಬಂಧಪಡದಿರುವ ವ್ಯಾಪಾರಸ್ಥರು ವಿಶೇಷ ಮಹಾಸಭೆ ಮೊನ ಲಾಗಲೇ ಅಧ್ಯಾ ತಿದಿಷ್ಟವೇ ಆಗಿಲಿ ಹಿಂದು ತಾತ್ಪ ಪಂಚಾಗಿ ಮೀಟಿಂಗಿ ನಲ್ಲಿ ಭಾಗವಹಿಸಿದರೆ ಗೆ ಬರತಕ್ಕೆ ಧಾರಕೋಟೆಯನ್ನು ಹೇರಿಕೊಳ್ಳಲು ಭಾಗಿ ನಗಳಾಗಬೇಕಾಗಿ ಈ ಲೋಲಕ ಕೋರಿ ಕೊಳ್ಳೋಣಾಗಿದೆ ಸೆಂಬರ್‌ಗತಕ್ಕವರು ಒಡನೆ ರೂ. 6ನ್ನು ಸಂಘದ ಕಾರ್ಯದರ್ಶಿಯವರಿಗೆ ಅವರ ವಿಳಾಸ ಮೇತ ಕಳುಹಿಸಿದಲ್ಲಿ ಒಡನೆ ಅವರನ್ನು ಮೆಂಬರುಗಳನ್ನಾಗಿ ತೆಗೆದುಕೊಳ್ಳಲಾಗುವುದು.

ಮಡಿಕೇರಿ, ಕೆ. ಟ ತಿಮ್ಮಯ್ಯ,
7.10.44. ಗೌ. ಕಾರ್ಯದರ್ಶಿ.

ರಣಭೇರಿ.

ಸ್ವಾರ್ಥಕ್ಕಿ ಯಿಂದಿಯಾಗುತ್ತಿರುವ ಅಂತರ್ರಾಷ್ಟ್ರೀಯ ಪರಿಸ್ಥಿತಿಯಿಂದ ಇಡೀ ಪ್ರಪಂಚವೇ ಮುಂಗಿಯುತ್ತಿದೆ. ಮುಂದೇನೋ ಘೋರ ಕೊನೆಗುಂಡಿ ತ್ತದೆ ಎಂದು ಕಲವರು ಊಹಿಸುತ್ತಿದ್ದಾರೆ. ಆದರೆ ಕಳೆದ ವಾರ ಬ್ರಿಟಿಷ್ ಪ್ರಧಾನಿಗಳಾದ ಚರ್ಚಿಲ್ಲರು ಲೋಟ್ಟೆ ಎಚ್ಚರಿಕೆಯನ್ನು ಪ್ರಕಟಿಸಲಾಗಿತ್ತು. 1945 ರಲ್ಲೂ ಯುದ್ಧವು ನಡೆಯುವ ಬಿಬ ಅವರು ಮೂರು ನಿಜವಾಗುವದೆಂ ಬುಗಳ್ಕೆ ಕಳೆದ ಎರಡು ವಾರಗಳಿಂದ ಜರ್ಮನಿಯು ತೋರಿಸುತ್ತಿರುವ ಕೌ ರ್ಯವೇ ನಿದರ್ಶನವಾಗಿದೆ. ಫ್ರಾನ್ಸಿ ನಲ್ಲಿ ಬಂದರವನ್ನು ಕರಗತಮಾಡಿ ಬಂದ ನಂತರ ಮಿತ್ರರು ಹೇಳಿಕೊಳ್ಳ ಲು ಯೋಗ್ಯವಾಗಿ ಎಲ್ಲಿಯೂ ಮುಂ ನಡಿಲ್ಲವೆನ್ನಬಹುದು. ಬದಲು ಒಂ ದೆರಡು ಕಡೆ ಜರ್ಮನಿಯಿಂದ ಹಿನ್ನೆ ಟ್ಟವಿಲ್ಲವೆಂದೆ ಬರ್ಲಿನಿಗೆ ಸಾಗ್ಗಲು ಹುಲೆಂಡ್ ಬಾಗಿಲಿನಂತಿದೆ. ಅಲ್ಲಿಗಾ ಗಲೇ ಮಿತ್ರರು ನುಗ್ಗಿದ್ದಾರೆಯೆ. ಆ ದರೆ ಜರ್ಮನಿಗೂ ಕಪ್ಪ ಕಪ್ಪ ಪ್ರದ ಶನವನ್ನು ಬಲ್ಲಿ ಬೆನ್ನಿಗೆ ಕೊಡುವ ರು. ಅನ್ಯಥ ಬಲ್ಲಿ ಜರ್ಮನ್ನೂ ಅದೇ ಬಿಕನನ್ನು ಜಪಾನಿ ಮುಂಚಿನ ಸೇನೆಗಳ ನ್ನು ಇಳಿಸಿದ್ದರು ಇಳಿದ ಯೋಧ ರು ವೀರರಂತೆಯೇ ಹೋರಾಡಿದರು. ಆ ತಿ ಹವಾಗುಣವು ಹಾಲ್ತು ಸಾಕಷ್ಟು ಸಬಾರಾಯಿ ಇಲ್ಲವೆ ಕಾರಣ ಎಂಟು ಸಾವಿರ ಸೈನಿಕರಲ್ಲಿ 2000 ಮಾತ್ರ ಉ ಳಿದರು. ಉಳಿದ ಈ ಸೈನಿಕರೂ ನಿರ್ವಾ ಹವಿಲ್ಲದೆ ಹಿಂಜರಿಯಬೇಕಾಯಿತು. ಜರ್ಮನರು 'ಸಿಗ್‌ಫೈಡ್' ವ್ಯೂಹವು ಈ ಭಾಗದಲ್ಲಿಯೇ ನಿರ್ಬಲವಾಗಿರುವ ದಾಗಿದೆ. ಆದ್ದರಿಂದಲೇ ಮಿತ್ರರು ಈ ಪೂರ್ವಕ್ಕೆ ಲಗ್ಗೆ ಹತ್ತುತ್ತಿದ್ದಾರೆ. ಅವರೆ ಜರ್ಮನರು ಇಲ್ಲಿ ತಮ್ಮ ಅಭ್ಯತೆಯ ಸೇನೆಗಳನ್ನು ನಿಲ್ಲಿಸಿದ್ದಾರೆ. ಮಿತ್ರರು ಫ್ರಾನ್ಸಿಗೆ ಲಂಟ್ಟಲಿಸಿಂತ ಬಯ ನಿರೀಯಾನವಾಗಿದ್ದು ಎಂದು ತ್ತು ಬಂದಿದ್ದ ಕಾರಣ ಜರ್ಮನರ ಶ ಕ್ತಿ ಉಡುಗಿದಯೆಂದು ಹಲವರು ತ ರ್ಕಿಸಿದ್ದರು. ಆದರೆ ಜರ್ಮನ್ನರು ಈ ನ ವ್ಯತಿಘಟನಾ ಸೈನಿಂಗ ಪಲವ ನ್ನು ಮುನ್ನುಡಿಸಿದ್ದ. ಬೆಲ್ಜಿಯಂ ಟಿನ ಕಡೆಯಲ್ಲಿ ಜರ್ಮನ್ನರಿಗೆ ದಗಳು ಅಬ್ಬರಿಸಿ ಹೋರಾಡುತ್ತಿರುವ ಕಳೆದ ವಾರದಿಂದ ಬಲವಾದ ಅಬ್ಬರವೂ ಆಡುಗಿದೆ. ಹೀಗೂ ಈವರೆಗೆ ಮುಂ ದರಿಯುತ್ತಿದ್ದ ಮಿತ್ರರನ್ನು ಜರ್ಮ ನಿ ಗದಿಯಲ್ಲಿ ಜರ್ಮನರು ಕಟ್ಟಿದಂತೆ ನಿಲ್ಲಿಸಿದ್ದಾರೆ

ಹೀಗೆ ಮಿತ್ರರನ್ನು ತಬೆಗಟ್ಟಿರುವ ಜರ್ಮನರು ಎನ್ನುವಿನ ಹೀಗೆ ತಡೆದಾರು? ಮಿತ್ರರನ್ನು ಬಿಮ್ಮೆಟ್ಟಿಸುವದು ಸಾಧ್ಯವೇ? ಜರ್ಮನರು ಜಯಪಡೆಯುವ ಸಾಧ್ಯತೆಯಿದೆಯೇ? ಎಂಬುದಾಗಿ ಕಲವರು ಕೇಳುತ್ತಾರೆ. ಜರ್ಮನರು ನಿರ್ನಿಶೆಗೊಂಡು ಕುಳಿತಿಲ್ಲ ಹಿಟ್ಲರನು ಪದೇ ಪದೇ ತನಗೆ ಹೋರಾಡಲು ಕಡಿಗೆ ಸಿದ್ಧನಿರುವನೋ ಹಾಗೆಯೇ ಆತನ ಸೇನೆಗಳೂ ಸಿದ್ಧವಿವೆ. ಆದ್ದರಿಂದ ಮಿತ್ರರನ್ನು ಗಡಿಯಲ್ಲಿಯೇ ಬಹು ದಿನಗಳ ವರೆಗೆ ತಡೆದರೂ ಆಶ್ಚರ್ಯಪಡಬೇಕಿಲ್ಲ. ಜರ್ಮನಿಗೆ ಜಯದೊರೆಯುವದೆಂಬ ಮಾರ್ಗವು ಮುಚ್ಚಾಗುತ್ತಾ ಬಂದಿದೆ. ಅನಿವಾರ್ಯವಾದ ಪರಾಜಯದಿಂದ ಜರ್ಮನಿಗೆ ಜಯದೊರೆಯುಜೇಕೇ ವಿನಾಹ ಬೇರೆ ಮಾರ್ಗದಿಂದ ದೊರೆಯದು. ಜರ್ಮನರು ತಮ್ಮ ಅಂತ್ಯ ದಿನಗಳನ್ನು ಶೂರ ತನದಿಂದ ಕಾದಾಡಿ ಮುಂಬೂಡಬಹುದು. ಆದರೆ ಇವರಿಗೆ ಅಜಯವು ಖಂಡಿತವೆಂದು ಹೆಲವರ ಅಭಿಪ್ರಾಯವಿದೆ. ಎಷ್ಟರೂ 'ಸಿಗ್‌ಫ್ರೈಡ್' ಗೋಡೆಯನ್ನು ಮುರಿದು ಜರ್ಮನಿಯೊಳಗನ್ನಿಟ್ಟಿರೆ ಜರ್ಮನರೇನಾ ಡಿಯಾರೆಂಬ ಕೇಳುವವರಿದ್ದಾರೆ. ಹಿಟ್ಲರನು ಅನು ಧ್ಯಮನುಷ್ಯನಿದ್ದಾನೆ. ಸಂತತ್ತಾ ಮಿತ್ರ ಸೈನಿಗಳಗಂ ಗಂಡಾತರವನ್ನುಂಟುಮಾಡುತ್ತಿದ್ದರೂ ಫ್ಯೂರರ್‌ಗಡಿ ಕಾಪಾಡುತ್ತಿದ್ದಾನೆ. ಅವನ ಧೈರ್ಯವನ್ನು ಮೆಚ್ಚಲೇಬೇಕು. ಜರ್ಮನಿಯ ಕೆಲವು ಪ್ರದೇಶಗಳಲ್ಲಿ ಮಿತ್ರರು ಕಾಲಿಟ್ಟಿರುವದು ನಿಜವಾದರೂ ಫ್ಯೂರರ್‌ನ ಮುಂದಿನ ಯೋಜನೆಗಳು ಗಂಡಾತರವನ್ನುಂಟುಮಾಡುತ್ತಿದ್ದರೂ ಫ್ಯೂರರ್‌ಗಡಿ ಕಾಪಾಡುತ್ತಿದ್ದಾನೆ. ಅವನ ಧೈರ್ಯವನ್ನು ಮುಂದಕ್ಕೆ ಯೂಪ ಮೂಂಬಯಿಂಜನಗಳಲಿರುವಹೋ ಬಲ್ಲವರಾರು? ಜೋಗೂ ಜರ್ಮನರು ಸುಲಭದಲ್ಲಿ ಇನ್ನವೆಂದಿಸ್ಟೆ ಈಗ ಮೇಳ ಬಯುವು ಪ್ರಜಾಪ್ರಭುತ್ವಗಳಿಂದ ಮು ನ್ನುಗ್ಗುತ್ತಿರುವ ಶಕ್ತಿಗಳ ಪ್ರಗತಿ ಈ ನಾರ ಸ್ವಲ್ಪ ಹೆಚ್ಚಾಗಿದೆ ಮುಂದಿನ ಘೋರ ಸಂಗ್ರಾಮಕ್ಕೆ ಅವರು ಸಿದ್ಧತೆ ಗೂಡಿಕೊಂಡಂತೆ ತಂದುಬಿಡುತ್ತಿದೆ. ಇತ್ತ ಇಟೆಲಿಯಲ್ಲಿ ಇಟೆಲಿಯನ್ನು ಶೀ ಘ್ರ ಅಕ್ರಮಿಸಿಕೊಳ್ಳಬೇಕೆಂದು ಮೂರ ಟಿ ಮಿತ್ರರ 8 ನೇ ಮತ್ತು 5 ನೇ ದಳ ಗಳು ಕಳೆದ ಐದು ವರ್ಷದಿಂದ ಯು ತ್ಪಿಸಿದರೂ ಇಟೆಲಿಯನ್ನು ಪೂರ್ಣ ವಶ ವಾಗಿಲ್ಲ. ಉಳಿದ ಭಾಗಗಳನ್ನು ಹಿಡಿ ಯಲು ಇನ್ನೆಷ್ಟು ದಿನಗಳು ಹಿಡಿಯಲಿವೋ ಬಲ್ಲವರಾರು?

ಚೀನಿಯರು ಜಪಾನರನ್ನು ಹಿ ಟ್ಟಿಮೂಡಿದ್ದಾರೆ ಬರ್ಮಾದಲ್ಲಿ ಅವ ರ ಸೇನೆಗಳನ್ನು ಪುಡಿಹಾರಿಸಲಾಯಿ ತು. ಅಮೇರಿಕನರು ಶಾಂತಸಾಗರ ದ್ವೀಪಗಳಲ್ಲಿ ಬಹುಜನ ಜಪಾನರನ್ನು ನಾಶಮಾಡಿರುವು ಎಂಬೀತರಹದ ವಾ ರ್ತೆಗಳು ದಿನಗಹಿ ಬರುತ್ತಿವೆ. ಇದ ರಿಂದ ಜಪಾನರ ಶಕ್ತಿ ಕುಗ್ಗಿದಯೇ? ಹಾಗೆ ಶಕ್ತಿ ಕುಗ್ಗಿದ ಕಾರಣದಿಂದಲೇ ಹಿಂದೂಸ್ಥಾನಕ್ಕೆ ಕಾಲಿಟ್ಟಿರಲು ವಾ ಪಸು ಮೋದರೇ? ಎಂಬ ಪ್ರಶ್ನೆಗಳ ನ್ನು ಹಲವರು ಕೇಳತೊಡಗಿದ್ದಾರೆ. ಚರ್ಚಿಲ್ಲರು ತಮ್ಮ ಭಾಷಣವಲ್ಲಿ ಮಳೆ ಗಾಲದ ನಂತರ ಜಪಾನರು ಹಿಂದೂ ದೇಶದ ಮೇಲೆ ಧಾಳಿ ಮಾಡಬಹುದೆಂದು ಸೂಚಿಸಿದ್ದನ್ನು ನೆನಪಿಸಿದರೆ ಒಪಾ ನರ ಬಲ ಕುಗ್ಗಿಲ್ಲವೆಂದು ಹೇಳಬಹು ದು. ಜಪಾನರಿಗೆ ನಷ್ಟವಾಗಿಲ್ಲವೆಂ ದು ಹೇಳಲಾಗುವದಿಲ್ಲ. ಆದರೂ ಜ ಗತ್ಪ್ರಸಿದ್ಧವಾದ್ದಕ್ಕಿ ಪ್ರಮುಖ ರಾ ಷ್ಟ್ರಗಳಲ್ಲಿ ಚೆಜ್ಜ ನಷ್ಟಪಡದೆ ಇರು ವಂಥ್ಯ ಒಪಾನಿಗಿವೆ. ಅವರ ನೆ ಲ, ಜಲ, ಆಕಾಶ ಸೈನಿಗಳು ಬಲಯು ತವಾಗಿವೆ. ಯುರೋಪಿನ ಯುದ್ಧ ವು ಗಿದ ಬಂದು ವರ್ಷದಲ್ಲಿ ಜಪಾನ ನ್ನು ಸೋಲಿಸುವೆನೆನ್ನುವದು ಕಷ್ಟವ ಹುದು ಎಂದು ಹಿಲಿಟರಿ ಪಂಡಿತರು ಹೇ ಳುತ್ತಿದ್ದಾರೆ. ಜಪಾನರ ಒಟ್ಟು 300000 ಜನರು ಈ ವರೆಗೆ ಯುದ್ಧ ದಲ್ಲಿ ಸುದಿದಿರುವರೆಂದೂ ಇನ್ನೂ ಆರು ರ 90 ಸೈನ್ಯ ಡಿವಿಜನ್‌ಗಳು ಇರುವ ವೆಂದೂ ಊಹೆ ಇದೆ. ಜಪಾನು ತಾಂತಸಾಗರದ ಬಹು ದ್ವೀಪಗಳ ಒ ಡೆತನವನ್ನು ಸೇಷ ಡಿಸಿದೆ. ಹೆಲವು ದ್ವೀಪಗಳಲ್ಲಿ ತಪ್ಪ ವಿನೂನ, ನೌಕಾ ಕೇಂದ್ರಗಳನ್ನು ಸ್ಥಾಪಿಸಿದೆ. ಅವರ ಈ ನೆಲೆಗಳಿಂದ ಹಲವು ದ್ವೀಪಗಳ ಸವಿಾಪಹೋಗುವದೇ ಪುಸ್ಥರವೆಂದು ಕೆಲವರು ಅಭಿಪ್ರಾಯಪಡುತ್ತಾರೆ ಅಲ್ಲದೆ ಜಪಾನರು ತಾವು ಆಕ್ರಮಿಸಿದ ಪ್ರಾಂತಗಳ ಆಳ್ವಿಕೆಯನ್ನು ಅಲ್ಲಿ ಯ ವರಿಗೇ ಕೊಟ್ಟು ಆ ಭಾಗಗಳಲ್ಲಿ ಯು ದ್ಧಕ್ಕೆ ಬೇಕಾದ ಮಹಾ ಕೈಗಾರಿಕೆಗಳ ನ್ನೂ, ವ್ಯವಸಾಯವನ್ನೂ ಪೆಸ್ಟಿನಿಂದ ಮಾಡಿಸುತ್ತಿದ್ದಾರೆ. ಆದ್ದರಿಂದ ಅವ ರ ಶಕ್ತಿಯು ಸುಲಭದಲ್ಲಿ ಕುಸ್ರಾಸವಾಗಲಾರದು. ಜಪಾನಿನ ಮೇಲೆ ಕೈಮಾಡಲು ಮಿತ್ರರು ಕಕ್ಕ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಹಡಗುಗಳ ಚಲನ ವಲನ ಪ್ರಾರಂಭವಾಗಿದೆ. ಈ ಮು ಖ್ಯ ಚರ್ಚೆಲ್ ಉಡೆನರು ರಷ್ಯಾಕ್ಕೆ ಬಂದು ಸ್ಟಾಲಿನರ ಭೇಟಿ ಮಾಡಿದ್ದಾರೆ. ಯಾವ ವಿಚಾರದ ಚರ್ಚೆಯಾಗಿದೆಯೋ ಇನ್ನೂ ಬಹಿರಂಗವಾಗಿಲ್ಲ.

ತಿದ್ದುಪಡಿ

ಕಳೆದವಾರ ಪ್ರಕಟಿಸಿರುವ ಕಸ್ತೂರ್ ಬಾ ನಿಧಿಯ ಸಟ್ಟೆಯಲ್ಲಿ ಶ್ರೀಮತಿ ತೋಟಂಚೆಲ್ಲು ಬೊಳ್ಳಮ್ಮ ಮೊದಪ್ಪ ರೂ. 25 ಎಂಬುದು ಶ್ರೀ ತೋಟಂಚೆಲ್ಲು ಮೊದಪ್ಪ ಎಂದು ತಪ್ಪಾಗಿ ಪ್ರಕಟವಾಗಿದೆ. ಅದನ್ನು ತಿದ್ದಿ ಓದಿಕೊಳ್ಳಬೇಕಾಗಿ ವಿನಂತಿ. ಸಂ]

ಕೌನ್ಸಿಲ್ ಮೀಟಿಂಗು.

(1ನೇ ಪುಟದಿಂದ ಸಾಗಿದ್ದು)

(9) ಮಾಗೂ ಮಾಸಿಯು ಮಾರ್ಕೆಟಿಗೆ ಕೊಂಡ ಕೊಂಡು ಲೈಸೆನ್ಸಗಳ್ಲ ಮುಂದಿಲ್ಲ ಆಲೈ ನೆನ್ಸಾದರನ ಕಂಟೊಂಬಿಂದ ಸಬ್ಬಾಯಸ್ಕಾಂದ್ರೆಲ್ಲಿ ರು ಕೊಟ್ಟಿಹಿದಿಯುವ ವಿಯಾಯಿತಿಯನ್ನು ಕೊ ಡಬೇಕು" ಎಂಬ ರಾಮಣ್ಣನ್ನು ಶ್ರೀ. ಎಸ್. ಅಣ್ಣಯ್ಯನವರು ಸಾಚಿಸಿದರು ಶ್ರೀ. ಎ ಎಸ್ ಪೂಣ್ಣಪ್ಪನವರು ಆಮೋದಿಸಿದರು. ಈ ವಿ ಯಾಯಿತಿಯನ್ನು ಕೊಡಬೇಕಾದರೆ ಅರ್ಜ್ಜಿ ಆಸ್ಸು ತಿದ್ದುಪಡಿಯು ಬಹುಮತದಿಂದ, ಇಂಥಾ ವಿಚಾರಾಯಿತಿ ಕೇವಲ ಕೊಡಗಿಗೆ ಮಾತ್ರ ಕೊಡಬಲ್ಲುದೆಯೆಂದೂ, ಅದ್ದರಿಂದ ಸರಕಾರವು ಈ ವಿಚಾರಕ್ಕೆ ಬೆಂಬಲಕೊಡಲಾರದೆಂದೂ ಅದರ ಬೇಕಾಬಿಟ್ಟಿ ಹಂಗೆ ಲೈಸನ್ಸು ಬದಲಾಯಿಸಕೂಡದೆಂದೂ ಸರಕಾರವು ಅತ್ಯಾವಶ್ಯಕವೆಂದೂ ವೈದ್ಯನಾಥ ಮೆಂಬರರು ಹೇಳಿದರು. ಸೂಚಕರು ರಾಮಣ್ಣನು ಈ ಭಯವೂ ಬೇರೆ ವಾಹನು ತೆಗೆದುಕೊಂಡರು.

(11) ಮಡಿಕೇರಿ ಮುನ್ಸಿಪಾಲಿಟಿಯೊಳಗಿರು ವ ಬಂಬಾದ ಸರಕಾರಿ ವಿಶಾಲ ವಾದ ಪ್ರದೇಶ ವನ್ನು ಪಬ್ಲಿಕ್ಕಲ್ಲಾಗಿ ಮುನ್ಸಿಪಾಲಿಟಿಗೆ ಬಿಟ್ಟುಕೊಡಿಸಲು" ಎಂಬ ರಾ ಮಣ್ಣನ್ನು ಶ್ರೀ. ಸಿ ನೈಸಾ ಸೆಸಿಸಾಲ್ಲಾರವರು ಸೂಚಿಸಿದರು. ಶ್ರೀ ಎ ಎ. ಚೆಂಗಪ್ಪನವರು ಆಮೋದಿಸಿದರು ಮುನ್ಸಿಪಾಲಿಟಿಗೆ ತನಗೆ ಉಗಿದುಬಿ ಬಹುಳ್ಳಿ ಯನ್ನೇ ಇಲ್ಲಾಯಿಸಿಕೊಂಡು ಹೋಗುವದು ಸಾ ಧ್ಯವಿಲ್ಲವೆಂದೂ ಬಾಗಿಲುವಾಗಿ ತ ಹೆಚ್ಚಿನ ಜನಾ ಬ್ಬಾರ ಅವರ ಬೆನ್ನಿಗೆ ಬಿದ್ದಾಲ್ಲಿಂದೂ ವೈಸಾಯ್ ಬಾಯರು ನಿರ್ಣಯವು ರಾಮಣ್ಣನ್ನು ಬೆ ಬೆಗೆ ಬೆಂಬಲಿಸಿದರು ಶ್ರೀ ಎಸ್. ಕೋಮಣ್ಣ ಮ ತ್ತು ವಿ ಎ. ಚೆಂಗಪ್ಪನವರು ಪರವಾಗಿಯು ಸ ರಕಾರ, ಮುನ್ಸಿಪಾಲಿಟಿಯವ್ ಮತ್ತು ಎ. ಬಹುಷ ನ ಮಾತುಗಳು ವಿರೋಧವಾಗಿಯೂ, ಅಂತಿಮವು ಒಕ್ಕೊರಲಾಗಿಯೂ ಇದ್ದ ಕಾರಣ ರಾಮಣ್ಣ ಪಾಸಾಗಿ ಲ್ಪ

ಕಾರ್ಯಕ್ರಮದ ಶೆಡ್ಯೂಲ್ಲಿನ್ನಿದ್ದ ವಿಷಯಗ ಳೂ ಮುಗಿದ ಕಾರಣ ಸಾಯಂಕಾಲ 5 ಗಂಟೆ ವಿಟಿಂಗು ಮುಕ್ತಾಯಗೊಂಡಿತು.



ಈ ದಿನಗಳಲ್ಲಿ ಜೀವವಿಮೆಯು ಜಾತಿ, ಮತ್ತು ಉದ್ಯೋಗಗಳ ಬೇಧಕ್ಕಿಲ್ಲದೆ ಎಲ್ಲರಿಗೂ ಅವಶ್ಯವೆಂಬುದು ನಾವೆಲ್ಲರೂ ಒಪ್ಪುವ ಸಂಗತಿ.

ವಿವರಗಳಿಗೆ ಬರೆಯಿರಿ:—

ಯೂನಿಕಾರ್ ಬ್ರದರ್ಸ್, ಲಿ.

ದಕ್ಷಿಣ ಹಿಂದೂಸ್ಥಾನಕ್ಕೆ ಸಾಮಾನ್ಯ ಪ್ರಜಾಂಟರು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

4) **ಪುತ್ತೂರು, ಕಲ್ಲಿಕೋಟೆ.**

ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ, ಏಜೆನ್ಸಿಗಳೂ ಇವೆ.

ಧಾತು ವೃದ್ಧಿ ರಸಾಯನ (ZANDU)

"ಕ್ಯಾಕ್ಟೋ—ಫಾಸ್ಫೋ—ಮೂಲ್ಫ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ ಕಾಯಿಲೆಯವರಿಗೆ, ಆಫೀಸ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಆಶಕ್ತರಿಗೆ ಪಾನಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರುಗಳಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು ಮೆದುಳಿಗೆ ಶಕ್ತಿಯನ್ನು ತುಂಬಿಸುವುದು, ನಾಲಿಗೆಗೆ ರುಚಿಯೂಡಿಗುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕಂಪು ರಕ್ತ ಕೊಡಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋಮೊಲ್ಟ್, ಹೆಪೋಗ್ಲೋಬಿನ್, ನೋದಿಗ್ಲಿಸರಿ ಫಾಸ್ ಫೇಟ್ ಪೆಪ್ಟೋನ್, ಸಾಲ್, ಮೂಲ್ಟ್ ಎಕ್ಸ್‌ಟ್ರಾಕ್ಟ್, ವಾಕ್ಟಾಸಸ ನೊದಲಾದ ಪ್ರಸಿದ್ಧ ಔಷಧಿಗಳಂಶವಿವೆ ಇಂದಿನಿಂದಲೇ ಸೇವಿಸಿ ಆರೋಗ್ಯವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಾಲಯಗಳಲ್ಲಿದೆ.

ರಘುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,

6) **ಗೋಖಲೆ ರೋಡ್, ಬೋಂಬೆ.**

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

43) **ಸ್ಥಾಪನೆ:—೧೮೯೭.**

೪೭ನೇ ವಾರ್ಷಿಕವ	ಒಟ್ಟು ಆದಾಯ	೯೭,೩೭,೦೦೦ ರೂಪಿ
ವಧಿಯಲ್ಲಿನ ಕೆಲವು	ಚಾಲ್ತಿಯಿರುವ ವಿಮೆ	೧೬,೪೯,೪೮,೦೦೦ ,,
ಸ್ವಪ್ನ ಸಂಗತಿಗಳು.	ಆಸ್ತಿ	೬,೫೦,೪೬,೯೦೦ ,,
	ಕಂಪೆನಿಯು ಆವಿಯಲ್ಲಿ ಕೊಟ್ಟ ಕ್ಲೈಮುಗಳು	೮,೩೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,	ಅರ್ಜಿಗಳನ್ನು	ಎಂಪೈರ್ ಆಫ್ ಇಂಡಿಯಾ
ಕೆಂಪೇಗೌಡ ರಸ್ತೆ, ಬೆಂಗಳೂರು.	ಸ್ವಾಗತಿಸಿದೆ.	ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ 95,0೦0, ಜನೂ ಬಾದ ರೇವಣಾತಿ 2,24,7೫೦ ವಸೂಲಾದ ಫ್ಲೋಟಿಂಗ್ 2,16,309, ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಸಿಟ್ಟುದಾರರಿಗೆ ಅವರ ಡಿಪಾಸಿಟ್ಟು ಅಘಾದದ ಮೇಲೆ 90% ಕೊಡಲಾಗುತ್ತೆ. ನಿರಖು ರೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 3. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಹೆಚ್ಚಿನ ಮೊಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0 ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ನೊಡುತ್ತಾರೆ

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಭಾಶ ಚಂದ್ರ ಬೋಸ್

ನೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಖಚೇರಿ: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, **ಯಂ. ರಂಗನಾಥಶೆಟ್ಟಿ,**

38) **ಮಡಿಕೇರಿ.** OR **ಬ್ರಾಂಚ್ ಮೇನೇಜರ್, ಮಂಗಳೂರು.**

ಕಸ್ತೂರ್ ಬಾ ಸ್ಮಾರಕ ನಿಧಿ.

ಕೊಡಗಿಗೆ ರೂ. 14,370 ಸಂಗ್ರಹವಾಯಿತು.

1 ರೂ ಕೊಟ್ಟವರು.

ತ್ರಿಗಳಾಪ ಎಂ ಬಿ. ಅಚ್ಚಣ್ಣ, ಎಂ. ಯು. ಅಚ್ಚಣ್ಣ, ಕ ವ. ಲಾ ಬಾ ಯ., ರಂ ಧಾ ಬಾಯಿ, ಎಂ. ಅಕ್ಕಮ್ಮಬಾಯಿ, ಬಿ. ಎಂ. ಚಿಣ್ಣಪ್ಪ, ಎಜಿ. ಕೆ. ಪೂರ್ಣಿ, ಬಿ. ವಿ. ಕುಂಞಪ್ಪ, ಕೆ. ಸೋಮಯ್ಯ, ಪಿ. ಎ. ಸುಬ್ಬಯ್ಯ, ಸಿ. ಕೆ. ಗೋವಿಂದನ್, ಸಿ. ಅಚ್ಚಪ್ಪ, ಎಚ್. ಎನ್. ಮಲ್ಲಪ್ಪ, ಕೆ. ಚಿಣ್ಣಪ್ಪ, ಯು. ಬಿದ್ದಪ್ಪ, ಜ. ಅಬ್ದುಲ್ ಖಾದರ್, ಬಿ. ಪಿ. ಪೋಪಯ್ಯ, ಪಿ ಪಿ. ಸುಬ್ಬಯ್ಯ, ಕೆ. ಎಸ್. ಪೂವಪ್ಪ, ಕೆ. ಉಮ್ಮರ್, ಮೂಲೆಮನೆ ರಂಗಯ್ಯಶೆಟ್ಟಿ, ಎಲ್. ಎಸ್. ಮುತ್ತಣ್ಣ, ಎಚ್. ಪಿ ಮಲ್ಲಪ್ಪ, ಎಚ್. ಸಿ. ಅಪ್ಪಯ್ಯ, ಎಜಿ. ಸಿ. ಶಾಂತಮಲ್ಲಪ್ಪ, ಎಚ್. ಬಿ. ಕುಶಾಲಪ್ಪ, ಎಸ್. ಎ. ಪೂವಯ್ಯ, ಬಿ. ಎನ್. ನಾರಾಯಣಶಟ್ಟ, ಅಂಚೆಂಗಿ ಸಿದ್ಧಬಸಪ್ಪ, ಮೂವಿನಳ್ಳಿ ಸಿದ್ಧಬಸಪ್ಪ, ಕುಪ್ಪಂಡ ಚಂಗಪ್ಪ, ನೆಲ್ಲಮಕ್ಕಡ ಕುಶಾಲಪ್ಪ, ಸೋಮಯಂಡ ಸುಬ್ಬಯ್ಯ, ಮೂಡಿಮಂಡ ಬಂಗಪ್ಪ, ಪೂದ್ರಿಮಾಡ ಬೆಳ್ಯಪ್ಪ, ಉದ್ದಪಂಡ ಚಂಗಪ್ಪ, ಕುಂಡಾಯಂಡ ತಿಮ್ಮಯ್ಯ, ಉದ್ದಪಂಡ ಅಚ್ಚಪ್ಪ, ವಿದ್ವಾನ್, ಕೆ. ವಿ. ರಮಣ, ಕೆ. ಪಿ. ಸುಬ್ಬರಾವ್, ಎ. ಪಿ. ಗೋಪಾಲಕೃಷ್ಣ, ಎನ್. ಸಿ. ಬಿದ್ದಪ್ಪ, ಎಸ್. ಎಸ್. ಕೃಷ್ಣರಾಂ, ಮಿಸೆಸ್ ಸರೋಜ ಶಂಕರನಾರಾಯಣ, ಎಂ. ಪಿ. ಗಣಪತಿ, ಮಿಸೆಸ್. ರಾಜಗೋಪಾಲ್, ಮಿಸೆಸ್. ಆನಂದತೀರ್ಥ, ಎನ್. ನಂರ್ಣಯ್ಯ, ಪಿ. ಕೆ. ಐಯ್ಯಣ್ಣ, ಪಿ. ಟಿ. ಕಾರ್ಯಪ್ಪ, ಟಿ. ಎ. ಸುಬ್ಬಯ್ಯ, ಎಸ್. ಎಚ್. ಅಬ್ದುಲ್ ರಝೂಕ್, ಪಿ. ಪಿ. ಗಣಪತಿ, ಎಂ. ಎ. ಬಿದ್ದಪ್ಪ, ಕೆ. ಪಿ. ಕುಶಾಲಪ್ಪ, ನಾರಾಯಣ, ಜೋಸೆಫ್, ಚಕ್ಕೂ, ವಕ್ಕಲಿಗರ ತಮ್ಮಯ್ಯ, ಚೋಕಂಡ ಮೊಚಯ್ಯ, ಚೋಕಂಡ ಚಂಗಪ್ಪ, ಚೋವಂಡ ಬೆಳ್ಯಪ್ಪ, ಕುಪ್ಪಚ್ಚರ ದೇವಯ್ಯ, ಎಚ್. ಬಿ. ತಮ್ಮಯ್ಯ, ಸಿ. ಬಿ. ಮಾಣ್ಣಪ್ಪ, ಸೋಮಯಂಡ ಅಚ್ಚಯ್ಯ, ವಕ್ಕಲಿಗರ ಹನುಮಯ್ಯ, ವಕ್ಕಲಿಗರ ನಂಜಪ್ಪ, ಮಿಸೆಸ್. ಪುಲಿಯಂಡ ಸೋಮಯ್ಯ, ಮಿಸೆಸ್. ಪುಲಿಯಂಡ ಪೂವಯ್ಯ, ಮಿಸೆಸ್. ವಿ. ರಾಮಯ್ಯ, ಮೇಚಂಡ ಕುಟ್ಟಪ್ಪ, ಕುಟ್ಟಂಡ ಎಂ ಸೋಮಯ್ಯ, ಕೆ. ಆರ್. ಕೃಷ್ಣಯ್ಯ, ಬಂಟ್ರು ಆಪ್ಪು, ಬಿ. ರಾಮಣ್ಣ, ಶ್ರೀಮತಿ ಕುಟ್ಟಂಡ ಪಿ. ನಂಜಪ್ಪ, ಶ್ರೀಮತಿ ಕುಟ್ಟಂಡ ಎಸ್. ಮುತ್ತಪ್ಪ, ಶ್ರೀಮತಿ ಕುಟ್ಟಂಡ ಸಿ. ಬೆಳ್ಯಪ್ಪ, ಎ. ಬಿ. ಐಯ್ಯಪ್ಪ, ಕರವಂಡ ಗಣಪತಿ, ಎಂ. ಎನ್. ಅಚ್ಯುತನ್, ಬಿ. ಸುಬ್ಬಯ್ಯ, ಡಿ ಬಿ ಬೊಳ್ಳಪ್ಪ ಪೊನ್ನೆಟ್ಟ ಮುತ್ತಪ್ಪ, ಪುಗ್ಗೇರ ಮುತ್ತಣ್ಣ, ಐರಿ ಮುತ್ತು, ಎಂ. ಪುಟ್ಟಸ್ವಾಮಿ, ಡಿ. ಎಂ. ವೀರಭದ್ರ, ಎಂ. ಎಜಿ. ಬಾದ್‌ಶಾ ಅಂಡ್, ಕೋ ಪಿ ಎನ್ ಶೇಜಯ್ಯಶೆಟ್ಟಿ, ಡಾ. ಪಿ. ಮಂಡಣ್ಣ, ಪಾಜಿ. ಟಿ. ಎ. ರಹಮಾನ್, ಸುಬ್ಬರಾವ್, ಜ. ಎಸ್. ಅಹಮದ್, ಶಮಿನಮಂರಿ ಕೆಟ್ಟಿ, ಎಚ್. ಎಂ. ಬಷೀರ್, ಎಂ. ಎಸ್. ಬೆಂಗಯ್ಯ, ಎ. ಕೆ. ಶ್ರೀಕಂಠಯ್ಯ, ನರಸಿಂಗರಾವ್, ಎನ್. ಎನ್. ಪೂರ್ಣಾಯ್ಯ, ಐ. ಪಿ. ಕೇಳರ್ಸ್, ಸಿ. ತರವನೆ, ಜಿ. ಅಹಂದನ್, ವಿ. ಅಬಮ್, ಇಬ್ರಾಹಿಂಕಕ್, ಪಿ. ಅಬ್ದುಲ್, ಬಲ್ಲಚಂಡ ಉಮ್ಮಪ್ಪ, ಜಿ. ವಂಟಕಲಕ್ಷ್ಮಮ್ಮ, ಬಿ. ಜನಂ ಬಾರ್ಗ, ಬಾಚಮಂಡ ಮಂದಪ್ಪ, ಮಹಮ್ಮದ್‌ಗೌಸ್, ಸಿ. ನಂಜಪ್ಪಯ್ಯ, ಸುಳ್ಳಿಕೋಡಿ ಅಪ್ಪಚ್ಚ, ಡೊಡ್ಡೇರ ತಿಮ್ಮಯ್ಯ, ಕುದುಪಜೆ ದೇವಯ್ಯ, ಮಂಗೇರ ಮಂದಣ್ಣ, ಕೇಕಡ ಪಳಂಗಪ್ಪ, ಟಿ. ಆರ್. ರಂಪೈವಾಚಾರ್, ಕೆ. ಬಿ. ಕಾರ್ಯಪ್ಪ, ಪಿ. ಎಸ್. ಗಣಪತಿ, ಉದಿಯಂಡ ನಂಜಪ್ಪ, ಪೊನ್ನೆಟ್ಟ ಎಂ. ಪೂಣಮ್ಮ, ಪಾಣತಲೆ ಕೃಷ್ಣಪ್ಪ, ಡಿ. ಟಿ. ಮಲ್ಲಪ್ಪ, ಪನೆಯಪಂಡ ಪಿ. ಗಣಪತಿ, ಪಟ್ಟಮಾಡ ಪೂವಯ್ಯ, ಪಟ್ಟಮಾಡ ಮುದ್ದಪ್ಪ ಪಟ್ಟಮಾಡ ಬೊಳ್ಳವ್ವ, ಪಟ್ಟಮಾಡ ಕಾವಂಣಿ, ಮೊಟ್ಟೆಯಂಡ ಉತ್ತಪ್ಪ, ನಾಳಿಯಮ್ಮನ ಕುಟ್ಟಿಮ್ಮ, ಮಿನಸೆ, ಕೆ. ಸಿ. ನಂಜುಂಡ, ಕಳ್ಳಂಗಂಡ ಸೋಮಯ್ಯ, ಎ ಪಿ ತಿಮ್ಮಪ್ಪಯ್ಯ, ನಾಯಕಂಡ ಮುದ್ದಯ್ಯ, ಕಲಿಯಂಡ ನಂಜುಂಡ, ಅಪ್ಪಾರಂಡ ಪೂವಯ್ಯ, ಕೊಂಡಿರ ನಂಜುಂಡ, ವಾಂಚಿಂ ಮಣ್ಣಪ್ಪ, ಎನ್. ಬಿ ರಾಘವೇಂಪ್ಪ, ಮಣವಟ್ಟೀರ ಮುತ್ತಪ್ಪ, ಮಚ್ಚಂಡ ಮಂದಣ್ಣ, ಪಿ ಎಂ. ಉತ್ತಪ್ಪ, ಎಂ. ಎಸ್. ಚಂಗಪ್ಪ, ಕೆ. ಸಿ ತಂಗಮ್ಮ, ಮಿಸೆಸ್. ಸಿ. ಸೀತಾ ಕಾಳಪ್ಪ, ಮಿಸೆಸ್. ಬಿ. ಎಂ. ದೇವಯ್ಯ, ಎಂ. ಆರ್. ಪರಮೇಶ್ವರಯ್ಯ, ಜಿ. ಆರ್. ಕೃಷ್ಣಯ್ಯ, ಮಿಸೆಸ್. ಎಂ. ಬಿ. ಅಪ್ಪಯ್ಯ, ಮಿಸೆಸ್. ವಿಮಲ, ಬಲ್ಲಡಿಂಡ ಕಾರ್ಯಪ್ಪ, ಬಿ. ಸಿ. ಮಂದಣ್ಣ, ಕೊರವಂಡ ದೇವಯ್ಯ, ಮಿಸೆಸ್. ಕೊರವಂಡ ದೇವಯ್ಯ, ಕೊಡಂದೇರ ಬೋಪಯ್ಯ, ಮಿಸೆಸ್. ಕೊಡಂದೇರ ಬೋಪಯ್ಯ, ಕೆ. ಎಂ. ಕಾವೇರಪ್ಪ, ಪಿ. ಬಿ. ಪೂಚಯ್ಯ, ಕೆ. ರಾಮಸ್ವಾಮಯ್ಯ, ಪಳಂಗಂಡ ಮುದ್ದಪ್ಪ, ಪಕ್ರಾದ್ದೀನ್ ಬ್ಯಾರಿ, ಬಡ್ಡಿರ ಪೂಣಚ್ಚ, ಕುಟ್ಟೆಪೀರ ವೇದಪ್ಪ, ಪಟ್ಟಮಾಡ ಬೋಪಯ್ಯ, ಕೆ. ಅಪ್ಪನಾಯಕರ್, ಪಟ್ಟಮಾಡ ಅಪ್ಪಯ್ಯ, ಟಿ. ಬಿ. ಸಂಜೀವಮೂರ್ತಿ, ಕೆ. ಕೆ. ಮುತ್ತಣ್ಣ, ಎಂ. ಡಿ. ಕುಶಾಲಪ್ಪ, ಟಿ. ವಿ. ಸುಬ್ಬಯ್ಯ, ಮೂಕಳೆರ ಉಮ್ಮಪ್ಪ, ಕೆ. ಕಾರ್ಯಪ್ಪ, ಕೆ. ಗಣಪತಿ, ಎಂ. ಎಸ್. ಚೆರ್ಮಣ, ಮಿಸೆಸ್. ಎನ್. ಸಿ ಪೊನ್ನಪ್ಪ, ವಿ. ಕೆ. ರಾಮನ್, ಬಿ ಎಂ. ವಿಶ್ವಣ್ಣ, ಪಿ. ರಾಮು ಚಿಟ್ಟಿಯೂರ್, ಟಿ. ಪಿ. ಕುಪ್ಪುಸ್ವಾಮಿ, ಎ. ಜಿ ಬೋಪಯ್ಯ, ಎಂ ಕೆ. ಗಣಪತಿ, ಯಂ. ಯಂ ಸೋಮಪ್ಪ, ಕೆ. ಟಿ. ಮೊಣ್ಣಪ್ಪ, ಬಿ. ಪಿ ಬೋಪಯ್ಯ, ಎ ಜೆ. ಮಂದಣ್ಣ, ಎಂ ಥಾಮಸ್, ಕೆ. ದೇವಯ್ಯ, ಎಂ. ತಮ್ಮಯ್ಯ, ಕೆ. ಭೀಮ, ಇವರುಗಳು.

Reg.No. M. 1500.
KODAGU MERCARA, (Coorg).

ಕೊಡಗು

ಸಂಪಾದಕರು:-ಶ್ರೀ ಪಿ. ಜಿ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೪-೦.

ಸಂಪುಟ ೨೬ | ತಾರೀಕು ೨೦—೧೦—೧೯೪೪ನೇ ಶುಕ್ರವಾರ. | ಸಂಚಿಕೆ ೨೧

—• ಕೊಡಗಿನಲ್ಲಿ ಜಾನುವಾರುಗಳ ಸುಧಾರಣಾಕ್ರಮ —•

ಲೇಖಕರು-ಶ್ರೀ ಎಸ್ ಎನ್ ತಿಮ್ಮಯ್ಯನವರು, ರಿ ವೆಟರಿನರಿ ಆಫೀಸರು, ಮಡ್ರಾಸು.

—0—

ವ್ಯವಸಾಯವು ಹಿಂದೂದೇಶದವ
ಜೀವನದ ಹಿಡಿಗಲ್ಲಾಗಿರುವಂತೆ, ವ್ಯ
ಸಾಯಕ್ಕೆ ಜಾನುವಾರುಗಳ ಸಂಪ
ತ್ತಿಗೆ ಭೂಸ್ಥಿರವೇ ಮೂಲಾಧಾರವಾಗಿ
ದೆ. ವ್ಯವಸಾಯದಲ್ಲಿ ಪ್ರಧಾನ್ಯತೆಯು
ನ್ನು ಪಡೆದ ಕೊಡಗು ದೇಶವನ್ನು ಮೇಲಿ
ನ ತತ್ವವು ಉಲ್ಲಂಘಿಸುತ್ತಾ ಬಂದಿರುವುದು
ಪ್ರಕೃತಿಯ ಸೌಂದರ್ಯದ ಬೀ
ಡಾದ ಕೊಡಗು ದೇಶದಲ್ಲಿ ಕಳೆದ ಕೆಲವು
ಷ, ಜಾನುವಾರುಗಳ ಮರಣವಿಗಾಗಲೀ
ಹೆಚ್ಚಿನ ತೊಂದರೆ ಇರಲಿಲ್ಲವೆಂದು
ಹೇಳಿದ್ದಲ್ಲಿ. ಈ
ಕೃಷಿಯರ್ಥಿಗಳಿಂದ ಕೂಡಿದ ನಮ್ಮ ದೇ
ಶ, ಅಕ್ಷಿಗೆ ಬೇಕಾದ ದನಕರುಗಳ
ನ್ನು ಸಾಕುವಿ ಪ್ರಯತ್ನಪಡ್ಡು ಕೈಗೊಳ್ಳ
ನೆಲೆಪ್ರಾಂತ್ಯವು ಪರ್ಯಾಪ್ತವಾಗಿ ದೇ
ನನ್ನು ತಪ್ಪಿಯೆಸಿಕೊಂಡಿರುವುದು
...ಬ. ವಿಶಾದಕರವಾದ ಸಂಗತಿಯಾ
ಸೆ. ಇವರ ಬದಲು ಈ ದೇಶವು
ಹೇರಳವಾದಷ್ಟು ಜಾನುವಾರುಗ
ನ್ನು ಸಾಕಿಸಲಹಿ ಕಷ್ಟವನ್ನು ತಾ
ರೇ ಉದ್ದಾರಮಾಡಿಕೊಳ್ಳುವುದಲ್ಲದೆ,
ಪ್ರಾಣಾಂತ ವೈಷ್ಟಯಿಂದ ಹೆಚ್ಚಾಗಲಿ
ರಿಸುಗಳನ್ನು ನೆರಪ್ರಾಂತ್ಯಗಳಾದ
ಲ್ಲಬಾರಿಗಾಗಲೀ, ದಕ್ಷಿಣ ಕನ್ನಡ
ಲ್ಲೆಗಾಗಲೀ ರವ್ಯವಾಡಿ, ಆಯಾಯ
ನ್ನು ಪಡೆಯುವ ಸಾಧ್ಯತೆ ಇದೆ.

ಮೈಸೂರು ಮತ್ತು ಮದ್ರಾಸು
ಲ್ಲಿಯವರಿಗೆ ಉಸಯ ಕ್ಕವಿಲ್ಲದ
ಂದಾಜು ಒಂದು ಲಕ್ಷದ ಎಂಬತ್ತ
ಾವಿರ ರೂಪಾಯಿಗಳಷ್ಟು ಬೆಲೆ ಬಾ
ುವ ದನಕರಗಳು ಕೊಡಗಿಗೆ ಪರ್ಯಾ
ಧಿ ಪೂರಾಟಕ್ಕೆ ಬರುತ್ತಿರುತ್ತವೆ.
ನೇಕ ಶಂದರ್ಭಗಳಲ್ಲಿ ದನಗಳಿಗೆ
ಾಂಕ್ರಾಮಿಕ ರೋಗಗಳು ಹಳ್ಳಿಗಳ
ಲ್ಲಿ ತಲೆದೋರಲು, ಆ ದೇಶಿಯರು ಹ
ಾವನ್ನು ಗಳಿಸುವ ಉದ್ದೇಶದಿಂದ ದ
ಕರುಗಳನ್ನು ನಮ್ಮ ದೇಶಕ್ಕೆ ಸಾ
ಸಿ ಇಲ್ಲಿ ಖಾಯಿಲೆ ಹಬ್ಬಲು ಕಾ
ಣವಾಗಿ ಪರಿಣಮಿಸಿದೆ.
ಈ ಪ್ರಯತ್ನ ನಮ್ಮಲಿರುವ ದನಕರ
ಿಗೂ ಕೂಡ ಈ ಭಯಂಕರ ಚಾಡ್ಯ
ವು ತಲೆದೋರಿ ಅತಿ ದಾರುಣವಾದ
ನಷ್ಟವನ್ನು ರೈತಾಪಿ ಜನರು ಅನು
ಭವಿಸಬೇಕಾಗಿದೆ. ಸಾಂಕ್ರಾಮಿಕ
ರೋಗಗಳ ಹಾವಳಿಯನ್ನು ತಪ್ಪಿಸಿಕೊಟ್ಟ
ಬೇಕಾದರೆ, ನಮ್ಮ ದೇಶೀಯರು ಈ
ದೇಶಕ್ಕೆ ಅನ್ವಯಿಸುವ ದನಕರುಗಳ
ನ್ನು ಸಾಕುವ ಕ್ರಮಗಳನ್ನು ಕೈಕೊ
ಳ್ಳಬೇಕಾಗಿದೆ. ಎಂದಿನ ವರೆಗೆ ಈ
ದೇಶಿಯರು ಜಾನುವಾರುಗಳನ್ನು ಹೆ
ಚ್ಚಾದ ಸಂಖ್ಯೆಯಲ್ಲಿ ಸಾಕಲು ಪ್ರಯ
ತ್ನಿಸುವುದಿಲ್ಲವೋ ಅಂದಿನ ವರೆಗೆ ಈ
ದೇಶೀಯರ ಸಂಪದಾಭಿವೃದ್ಧಿಯೂ,
ಆರ್ಥಿಕಾಭ್ಯುದಯವೂ ಮುಂದುವರಿಯ
ಲಾಗದೆಂಬುದು ಖಚಿತವಾದ ಸಂಗತಿ
ಯಾಗಿದೆ.

ಪಲನಾಡಾದ ಈ ದೇಶದಲ್ಲಿ ಜ
ನಸಾಮಾನ್ಯರಲ್ಲಿ ಮಲೇರಿಯಾ ಮೊದ
ಲಾದ ಅನೇಕ ವರದ ವ್ಯಾಧಿಗಳು ಹ
ರಡಿ, ಆರೋಗ್ಯಜೀವನವು ಬಹಳ ಪು
ಟ್ಟಿಗೆ ಹಾಳಾಗುವದರ ದೆಶೆಯಿಂದ ಬ
ಡಕನವು ದಿನೇ ದಿನೇ ಹೆಚ್ಚಾಗುತ್ತಿದೆ.
ಇವನ್ನು ಪರಿಹರಿಸಲು ಪೌಷ್ಟಿಕ ಮ
ತ್ತು ಬಲಾರ್ಧಕ ಆಹಾರವನ್ನು ಸೇವಿ
ಸಬೇಕಾಗಿದೆ. ಪ್ರಪಂಚದಲ್ಲಿ ಹಾಲಿ
ಗಿಂತಲೂ ಉತ್ತಮವಾದ ಆಹಾರವ
ಸ್ತುವು ಬೇರೆಯಿಲ್ಲವೆಂದೂ ಇಲ್ಲ. ಮು
ಕ್ಕಳಿಂದ ಹಿಡಿದು ಮುದುಕರವರವಿ
ಗೂ ಶರೀರದ ಪೋಷಣೆಗೆ ಬೇಕಾದ
ಮತ್ತು ಆರೋಗ್ಯವರ್ಧಕ ವೆಂದೆನ್ನಿಸಿ
ಕೊಂಡ ಹಾಲಿನ ಆಂಶವು ಪ್ರತಿನಿತ್ಯ
ದ ಆಹಾರದಲ್ಲಿ ಕಡಿಮೆಯಾಗಲು ಜನ
ತೆಯಲ್ಲಿ ನಾನಾ ರೋಗಾದಿಗಳೂ, ನು
ಕ್ಕಳಲ್ಲಿ ಆಕಾಲ ಮರಣಾಗೂ ಉ ಟಾ
ಗುತ್ತವೆ.

ಕೊಡಗು ದೇಶವೆ ಭಾಗದ
ಭೂಮಿ ಪೂತ್ರ ವ್ಯವಸಾಯ ರೂಪದ
ಲ್ಲಿಯೂ ಬಹಳ ಕಾದಂತಿ ಜಾನುವಾ
ರುಗಳ ಮೇವಿಗೆ ಅನುಕೂಲವಾಗಿ
ಯೂ ಇದೆ. ಬೇರೆ ಕೆಲವು ದೇಶಗಳ
ಲ್ಲಿ ದನಕರುಗಳ ಮೇವಿಗೆ ಅನುಕೂಲ
ವಿಲ್ಲದಿದ್ದರೂ ಆ ದೇಶೀಯರು ಅವರ
ವ್ಯವಸಾಯಕ್ಕೂ ಸುತ್ತು ಕಂ ವಿಗೂ
ಬೇಕಾದ ದನಗಳನ್ನು ಸಾಕುವ ಪ್ರಯ
ತ್ನವನ್ನು ಕೈಗೊಂಡು ಸಾಕ್ಯಾರ್ಥಿಕ
ರೋಗದ ಹುಟ್ಟನ್ನು ಅಡಗಿಸಿರುವ ನಿ
ದರ್ಶನಗಳು ಹಲವಾರು ಇವೆ.

ಬಹಳ ಬುದ್ಧಿವಂತರೆಂದೂ, ಜೀ
ವನದ ತರಗತಿಯಲ್ಲಿ ಉಚ್ಚತರಗತಿ
ಯವರೆಂದೂ, ಕೀರ್ತಿಯನ್ನು ಪಡೆದ
ಈ ದೇಶೀಯರಲ್ಲಿ ದೇಶದ ಏಳಿಗೆಗೆ ಬೇ
ಕಾದ ಜಾನುವಾರುಗಳನ್ನು ಸಾಕುವು
ದರಲ್ಲಿ ಜಡಿರುಚಿಯು ಕಂಡುಬರುವುದಿ
ಲ್ಲ. ಯುದ್ಧದ ನಂತರ ಜರಗುವ
ದೇಶಾ ಪುನರ್ನಿರ್ಮಾಣಕ್ಕೆ ಒಂ
ದಾಪೆ. ಜಾನುವಾರುಗಳ ಸಾಕುವಿಕೆ
ಯ ಯೋಜನೆಯನ್ನು ದೇಶೀಯರು
ಕೂಡಲೇ ಕೈಗೊಂಡು ೧೦ ವರ್ಷಗಳಲ್ಲಿ
ದೇಶಕ್ಕೆ ಬೇಕಾದ ದನಗಳನ್ನು ಈ ಕೆ
ಳಗಿನ ನಿಯಮಗಳಗನುಸಾರವಾಗಿ
ಸಾಕಲು ಪ್ರಯತ್ನಿಸಬೇಕೆಂಬುದೇ ಈ
ಲೇಖನದ ಉದ್ದೇಶವಾಗಿದೆ.

ನಿಯಮಗಳು:-1) ದೊಡ್ಡ ರೋ
ಗಬಾರದಂತೆ ಊರಿನ ಎಲ್ಲಾ ದನಗಳಿ
ಗೆ ವರ್ಷಕ್ಕೊಮ್ಮೆ ಡಾಕು ಹಾಕಿಸಿಕೊ
ಳ್ಳಬೇಕು.

2) ಹೊಸದಾಗಿ ಸಂತೆಯಿಂದ ತೆ
ಗೆದುಕೊಂಡ ರಾಸುಗಳನ್ನು 21 ದಿವ
ಸ ಹಿಂಡಿಗೆ ಸೇರಿಸದೆ ಬೇರೆ ಇಡಬೇ
ಕು. ಆದರೆ ವೈಸೂರಿಂದ ಬರುವ
ಎಲ್ಲಾ ದನಗಳಿಗೂ ಡಾಕು ಹಾಕಿಸಿ
ಕೊಡಗಿನ ಗೇಟಿನಲ್ಲಿ 21 ದಿನ ಇಡಿಸ
ಬೇಕು.

3) ರೋಗ ತಗಲಿ ಮರಣ ಹೊಂ
ದಿದ ಎಲ್ಲಾ ಜಾನುವಾರುಗಳನ್ನೂ ಹು
ಗಿದುಬಿಡಬೇಕು.

4) ಅಪ್ಪಗಳ ಚರ್ಮವು ಮಂಡಿ
ಯವರ ಕೈಸೇರುವಂತೆಯೂ ಮೂಸವು
ನಾಯಿ ನರಿಗಳಿಗೆ ಸಿಕ್ಕಾಗ ಹಾಗೆಯೂ
ಮಾಡಬೇಕು.

5) ಕಾಯಿಲೆ ಇರುವ ಕಡೆಯಿಂ
ದ ದನಕರುಗಳನ್ನು ಕಾಯಿಲೆ ಇಲ್ಲದ
ಕಡೆಗೆ ಒಯ್ಯಬಾರದು.

6) 5 ರಾಸಿಗೆ ಒಂದು ಎಕರೆಯ
ಮೇರೆ ಮೇವಿಗಾಗಿ ಸಾಕಷ್ಟು ಜಾಗ
ಕ್ಕೆ ಬೇಲಿಹಾಕಿ ಇಡಬೇಕು.

7) ದನದ ಕೊಟ್ಟಿಗೆಗಳು ಗಾಳಿ
ಬೆಳಕಿಗೆ ಅನುಕೂಲವಾಗಿದ್ದು, ಗಂಜ
ಳ ಸಗ್ಗೆರೆ ಜಿರಿದು ಹೋಗುವಂತೆ ಮಾ
ಡಿ, ದನಗಳನ್ನು ಕಟ್ಟಿ ಹಾಕಲು
ಯೋಗ್ಯ ರೀತಿಯಲ್ಲಿರಬೇಕು. ಸಗ
ಣಿಗುಂಡಿಯು ಜಾನುವಾರುಗಳ ಕೊ
ಟ್ಟಿಗೆಯಿಂದ ಬಹಳ ದೂರದಲ್ಲಿರ
ಬೇಕು.

8) ಗ್ರಾಮದಲ್ಲಿರುವ ಎಲ್ಲಾ
ಹೋರಿಗಳ ಬೀಜವನ್ನು ತೆಗೆಸಿ ಆಯಾ
ಯ ಪ್ರದೇಶಕ್ಕನುಸಾರವಾಗಿ, 100
ಮೇರೆ ಒಳ್ಳೆ ಜಾತಿ ಗೂಳಿಗಳನ್ನು ಸಾ
ಕಿ ಅವುಗಳ ಮೂಲಕ ಜಾತಿ ದನಗಳ
ನ್ನು ಪಡೆಯಲು ಪ್ರಯತ್ನಿಸಬೇಕು.

9) ಇದೇ ಮೇರೆ ಪ್ರತಿ ಗ್ರಾಮಗ
ಳಲ್ಲಿಯೂ, ಹಂದಿ, ಆಡು ಮತ್ತು
ಕೋಳಿಗಳನ್ನು ಸಾಕುವ ಕ್ರಮಗಳ
ನ್ನು ರೈತಾಪಿ ಜನರು ಕೈಗೊಳ್ಳಬೇಕು.

10) ಕೊಡಗಿಗೆ ಬೇಕಾದ ಜಾ
ನುವಾರುಗಳನ್ನು ಈ ದೇಶೀಯರು 5
ವರ್ಷಗಳಲ್ಲಿ ಸಾಕಿದ ಪಡನೆ ಸರಕಾರ
ದವರು ಬೇರೆ ಪ್ರಾಂತ್ಯಗಳಿಂದ ದನಕ
ರುಗಳು ಇಲ್ಲಿಗೆ ಬಾರದಂತೆ ಕಠಿಣ ಕಾ
ನೂನು ಕಾಯಿದೆಗಳನ್ನು ಮಾಡ
ಬೇಕು.

11) ಸರಕಾರವು ಜಾನುವಾರುಗ
ಳನ್ನು ಸಾಕುವ ಹಲವಾರು ಪ್ರದರ್ಶ
ನಾ ಕೇಂದ್ರಗಳನ್ನು ಏರ್ಪಡಿಸಿ, ರೈತಾ
ಪಿ ಜನರಿಗೆ ಇದರಲ್ಲಿ ಅಭಿರುಚಿ ಹುಟ್ಟು
ವಂತೆ ಸೂತನ ಕ್ರಮಗಳನ್ನು ಜಾರಿಗೆ
ತರಬೇಕು.

12) ಈಗಿರುವ ಪಶು ವೈದ್ಯ ಇ
ಲಾಖೆಯವರ ಸಿಬ್ಬಂದಿಗಳನ್ನು ಸಾಕ
ಷ್ಟು ಮಟ್ಟಿಗೆ ಹೆಚ್ಚಿಸಿ, ಅವರ ಉ
ದ್ಯೋಗದಲ್ಲಿ ನೂತನ ಹುರುಪನ್ನುಂ
ಟುಮಾಡುವುದು ಸರಕಾರದ ಕರ್ತವ್ಯ
ವಾಗಿರಬೇಕು.

ಕೊಡಗಿನಲ್ಲಿ ಜಾನುವಾರುಗಳಿಗೆ
ಈ ವರ್ಷ ಸಂಭವಿಸಿದ ಭಯಂಕರವಾ
ದ ಜಾಡ್ಯದ ದೆಶೆಯಿಂದ ಪ್ರಜಾವರ್ಗ
ದವರಲ್ಲಿ ಉಂಟಾದ ಸಂತಾಪವೂ ಹಾ
ನಿಯೂ ಅವರಿಗೆ ಒಂದು ಪಾಠ ಸದೃಶ
ವಾಗಿದೆ. ಆದುಕಾರಣ ಕೊಡಗಿನ
ಸರಕಾರವು ಇನ್ನಾದರೂ ಎಚ್ಚೆತ್ತು
ಜಾನುವಾರುಗಳ ಎಳ್ಗೆಯನ್ನು ಬಯ
ಸುವ ಯೋಜನೆಯನ್ನು ಕೂಡಲೇ
ಜಾರಿಗೆ ತಂದು ದೇಶದ ಸಂಪದಾಭಿ
ವೃದ್ಧಿಯನ್ನು ಹೆಚ್ಚಿಸಿ, ಈ ಪುಟ್ಟ ದೇ
ಶವನ್ನು ಪೂವರಿ ಪ್ರಾಂತ್ಯವನ್ನಾಗಿ
ನೋಡಬೇಕೆಂಬುದೇ ಘನ ಸರಕಾರದ
ವರಲ್ಲಿ ವಿನಂತಿಯಾಗಿದೆ.

—• ಶೇಲಡಾ —•

ಎಂಟು ಮಲೇರಿಯಾ ವನಸ್ಪತಿ ಪಿಲ್ಸ್



ಎಲ್ಲ ತರದ ಜ್ವರ, ಜ್ವರ
ಗಡ್ಡೆ, ತಜ್ಜನ್ಯ ಶರಕ್ತತೆ
ಮೇಲೆ ರಾಮಬಾಣ; ಲಿ
ವರ, ಹೊಟ್ಟೆನೋವು,
ಸುಲಬದ್ಧತೆ, ಸುಧಾರಿಸಿ
ಶಕ್ತಿ ಬೆಳೆಸುತ್ತದೆ. ಕ್ವಿ
ನೈನ್ ಬದಲು ವೈದ್ಯ ಡಾಕ್ಟರರು ದವಾ
ಖಾನೆಗಳಲ್ಲಿ ಉಪಯೋಗಿಸುವರು.
1000 ಗುಳಿಗೆಗಳಿಗೆ ರೂ. 15-0-0,
100ಕ್ಕೆ ರೂ. 1-12-0. ಈ ಔಷಧಿ
ಗಳಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿ ಕೊ
ಟ್ಟವರಿಗೆ ಒಂದು ಸಾವಿರ ರೂ. ಬಹು
ಮಾನ ಕೊಡಲಾಗುವುದು. ಪ್ರತಿ ಊರಿ
ನಲ್ಲಿ ಮಾರಾಟಕ್ಕೆ ಏಜೆಂಟರು ಬೇಕು.

ಶೇಲಡಾ ಕೆಮಿಕಲ್ ಕಂಪೆನಿ,
ಶಿರಸಿ, ಉತ್ತರ ಕನ್ನಡ,

ಸೋಲ್ ಏಜೆಂಟರು-
ಎಸ್. ಎಲ್. (ಅಪ್ಪುರಾವ್) ಥಾಳಪ್ಪ,
ಬಡವರ ಔಷಧಿ ಸರ್ವಿಸ್,
ಶಿರ್ಸಿ, ಉತ್ತರ ಕನ್ನಡ.

ಕೊ ಡ ಗು

ಬ. ತಂ-೧೦-೧೯೪೪ನೇ ಶುಕ್ರವಾರ

ಸುರಪಾನ ನಿರೋಧ.

ಕಳೆದ ನ್ಯಾಯವಿಧಾಯಕ ಸಭೆಯಲ್ಲಿ ಕೊಡಗಿನಲ್ಲಿ ನಿಶಾಪಾನ ನಿರೋಧವನ್ನು ಜಾರಿಗೆ ತರಬೇಕೆಂಬ ಗೊತ್ತುವಳಿಯು ಪಾಸಾಗಿದೆ. ಪಾನ ನಿರೋಧವನ್ನು ಜಾರಿಗೆ ತರುವ ಅವಶ್ಯಕತೆಯ ಬಗ್ಗೆ ವಿಚಾರಶೀಲರಾರೂ ವಿರೋಧವೂಡಲಿಕ್ಕಿಲ್ಲ. ಜನತೆಯ ಗುಣ, ನಡತೆ, ಹಿತದೃಷ್ಟಿಯಿರುವ ಸರಕಾರವೂ ಈ ವಿಚಾರಕ್ಕೆ ವಿರುದ್ಧವಾಗಿ ವರ್ತಿಸಲಾರದು. ಕೊಡಗಿನಲ್ಲಿ ಒಮ್ಮೆ ಮಾದಕ ಪದಾರ್ಥಗಳ ಉಪಯೋಗವು ಕಡಿಮೆಯಾಗಿತ್ತು. ಆದರೆ ಇತ್ತೀಚೆಗೆ ಇದು ಹಬ್ಬಿ ದೇಶದ ಬಹು ಸಂಖ್ಯಾ ಜನರು ಈ ದುಶ್ಚಟಕ್ಕೆ ಬಿಕ್ಕೆ ನರಳುತ್ತಿದ್ದಾರೆ. ಅನೇಕ ಕುಟುಂಬದ ಸಾಧ್ವೀಮಣಿಗಳು ಈ ಸುರಾಂಗನೆಯ ಮೋಹಕ್ಕೊಳಗಾದ ಪತಿಗಳಿಂದ ದಾರುಣ ದುಃಖಕ್ಕೀಡಾಗಿದ್ದಾರೆ. ಸಹಸ್ರಾರು ಮಕ್ಕಳು ಕುಟುಂಬದ ಆಧೋಗತಿಯಿಂದ ಜೀವನ ಪಥವನ್ನು ಕಳಕೊಂಡಿದ್ದಾರೆ. ಕೊಡಗಿನಲ್ಲಿ ಮಾದಕ ಪದಾರ್ಥದಿಂದ ಬರುವ ಉತ್ಪತ್ತಿಯು ಐದು ಲಕ್ಷಗಳಷ್ಟು ಅಂದರೆ ಕೊಡಗಿನ ಇಡೀ ಆದಾಯದ ಮೂರನೆ ಒಂದಂತಹದಷ್ಟಿದೆಯೆಂದರೆ ನಾಡಿನಲ್ಲಿ ಕುಡುಕತನ ಎಷ್ಟರ ಮಟ್ಟಿಗೆ ಹಬ್ಬಿದೆಯೆಂಬುದಕ್ಕೆ ಬೇರೆ ಉದಾಹರಣೆಗಳು ಬೇಕಿಲ್ಲ. ಈ ದುಃಶ್ಚಟಕ್ಕೆ ಶುತ್ಕಾದವರು ನಾಡಿನ ಬಡವರೇ ಅಲ್ಲ; ನಗರದ ಅಧಿಕಾರಿ, ಶ್ರೀಮಂತರೂ ಸಹ ಇದಕ್ಕೆ ಶರಣಾಹೋಗಿ ತಮ್ಮ ಧನ, ಗೌರವಗಳಿಗೆ ತಿಲಾಂಜಲಿ ಈಯುತ್ತಿದ್ದಾರೆ. ಇಂಥಾ ಅನೀತಿಯುತವಾದ ಅಭ್ಯಾಸವನ್ನು ಪ್ರತಿಯೊಬ್ಬರೂ ತ್ಯಜಿಸಬೇಕು. ಸರಕಾರವು ಇದನ್ನು ನಿಲ್ಲಿಸಲು ಶಾಶನ ಸಭೆಯಲ್ಲಿ ಪಾಸಾದ ಗೊತ್ತುವಳಿಯನ್ನು ಜಾರಿಗೆ ತರಬೇಕು.

ದುಡ್ಡಿನ ಮೇಲೆ ಕಣ್ಣಿಟ್ಟವರು ನೀತಿ ನಡತೆಗೆ ಬೆಲ್ಲು ಹಾಕುವದು ಸ್ವಾಭಾವಿಕ. ಅದರಂತೆಯೇ ತಪ್ಪು ಪುಡಿಗಳ ನೀತಿ ನಡತೆಗಳಗಾಗಿ, ತನಗೆ ವರ್ಷಕ್ಕೆ ಬರುತ್ತಿರುವ ಐದಾರುಲಕ್ಷ ರೂಪಾಯಿಗಳ ಆದಾಯವನ್ನು ಸರಕಾರವು ಬಲಿಕೊಡಲು ಸುಲಭವಲ್ಲಿ ಸಿದ್ಧವಾಗದು. ಈ ಆದಾಯವನ್ನು ನಿಲ್ಲಿಸಿದರೆ ದೇಶದ ಅನೇಕ ಕೆಲಸ ಕಾರ್ಯಗಳು ನಿಲ್ಲಬೇಕಾಗುವದೆಂದು ಹೇಳುವವರಿದ್ದಾರೆ. ಮೊದಲಪಾನೀಯಗಳನ್ನು ಪ್ರೋತ್ಸಹಿಸಿ ಆ ಮೂಲಕ ಬಡ ಬಗ್ಗರಿಂದ ಲಕ್ಷಾಂತರ ರೂಪಾಯಿಗಳನ್ನು ಗಳಿಸಿ, ಖಜಾನೆಯಲ್ಲಿ ಹಣ ಉಳಿಸಿ, ಅದನ್ನು ಕೇಂದ್ರ ಸರಕಾರಕ್ಕೆ ಸಾಲ ಕೊಡುವದರಿಂದಲೂ ಹೆಚ್ಚಿನ ಲಾಭ ಕಂಡುಬರುವದಿಲ್ಲ. ನಿಜ, ಈ ಹಣವು 'ಯುದ್ಧೋತ್ತರ ಪುನರ್ಘಟನೆಗಾಗಿ ಇಡಲ್ಪಟ್ಟದ್ದು'. ಆದರೆ ಬಡವರ ಹೊಟ್ಟೆಗೆ ಕಾಲು ಕೊಡುತ್ತಿರುವ ಈ ಮಾದಕ ಪದಾರ್ಥಗಳ ದುಶ್ಚಟವನ್ನು ನಿಲ್ಲಿಸುವದು ಯುದ್ಧೋತ್ತರ ಯೋಜನೆಗಳಲ್ಲಿ ತಿಲಕವ್ರಾಯವಾದುದು. ಈ ತಳಹದಿಯನ್ನು ಹಾಕಿದರೆ ಅದರ ಮೇಲೆ ಕಟ್ಟುವ ಎಲ್ಲಾ ಯೋಜನೆಗಳೂ ಸುಗಮವಾಗಿ ಕೆಲಸ ನೂಡುವವು. ಪಾನ ನಿರೋಧವನ್ನು ಜಾರಿಗೆ ತಂದರೆ ಸರಕಾರಕ್ಕೆ ಹಣದ ಅಡಚಣೆಯೂಗುವದು ನಿಜ. ಅನೇಕ ಕೆಲಸ ಕಾರ್ಯಗಳು ನಿಲ್ಲುವುದೂ ಸಹಜ. ಆದರೆ ಇಂದು ಈ ದುರ್ಭಾಸನೆಯಿಂದ ಆಗುವಷ್ಟು ಕೆಡುಕು ಈ ಹಣದ ಅಡಚಣೆಯಿಂದ ಆಗಲಾರದು. ಮಹಾತ್ಮ ಗಾಂಧಿಜಿಯವರು ಹೇಳಿದಂತೆ ಮನುಷ್ಯನ ಗುಣ, ನಡತೆ, ಶೀಲಗಳನ್ನು ಬಲಿಕೊಟ್ಟು, ಅದರಿಂದ ಸಂಪಾದಿಸಿದ ಹಣದಿಂದ ದೇಶದಲ್ಲಿ ವಿದ್ಯಾಪ್ರಸಾರ ಮೊದಲಾದ ಜನಹಿತ ಕಾರ್ಯಗಳನ್ನು ಮಾಡುವದು ಅನೈತಿಕವಾದುದು. ಜನತೆಗೆ ಕೊಡುವ ವಿದ್ಯೆ, ಇತರ ಸಲಕರಣೆಗಳು ಏತಕ್ಕಾಗಿ? ಮನುಷ್ಯನನ್ನು ಗುಣಾಢ್ಯನನ್ನಾಗಿ, ಸಮಾಜ ಹಿತೈಷಿಯಾಗಿ, ಹೆಚ್ಚೇಕೆ ಮನುಷ್ಯನನ್ನಾಗಿ ಮಾಡಲಿಕ್ಕಾಗಿ. ಇಂಥಾ ಪವಿತ್ರ ಮನುಷ್ಯನಲ್ಲಿ ಮಾದಕ ಪಾನೀಯಗಳ ಚಟವನ್ನು ಹೆಚ್ಚಿಸಿ ಆತನನ್ನು ಪಾಪ ಕೂಪದ ಅಂಧಕಾರಕ್ಕೆ ತಳ್ಳಿ ಪುನಹ ಮೇಲೆತ್ತಲು ಮಾಡುವ ಪ್ರಯತ್ನ ವೇಕೆ?

ಸುತ್ತೂ ಇರುವ ಪ್ರಾಂತಗಳಲ್ಲಿ ಬೇಕಾದ ಹಾಗೆ ಮಾದಕ ಪದಾರ್ಥಗಳು ದೊರೆಯುವಾಗ ಹೊರಗಿನಿಂದ ಕಳ್ಳ ಮಾರಾಟದ ಮೂಲಕ ದೇಶದೊಳಗೆ ಬರುವ ಮಾದಕ ಪದಾರ್ಥಗಳನ್ನು ತಡೆಯುವದು ಸಾಧ್ಯವಿಲ್ಲ; ಆದ್ದರಿಂದ ಇಲ್ಲಿ ಪಾನ ನಿರೋಧ ಅಸಾಧ್ಯವೆಂಬ ಸರಕಾರದ ವಾದವು ಸರಿಯಲ್ಲ. ಕೊಡಗಿನಲ್ಲಿ ಬತ್ತ ಹೆಚ್ಚಿದೆ. ಹೊರಗೆ ಸಾಗಿಸದರೆ ಹೇಳದ ಬೆಲೆ ದೊರೆಯುತ್ತದೆ. ಆದರೂ ಸಹ ಇದನ್ನು ಹೊರಗೆ ಸಾಗಿಸದಂತೆ ತಡೆದ ಸರಕಾರಕ್ಕೆ ಪಾನ ನಿರೋಧದ ವಿಚಾರದಲ್ಲಿ ಅಸಾಧ್ಯವಾಗುವದು ಹೇಗೆ? ಮೇಲಾಗಿ ಪಾನ ನಿರೋಧದ ಕಾರ್ಯಕ್ರಮದ ಯಶಸ್ವಿತೆಯು ಆ ಬಗ್ಗೆ ನಡೆಯುವ ಪ್ರಚಾರದ ಮೇಲೆ ನಿಂತಿದೆ. ಸರಕಾರವು ಮನಸಿಟ್ಟು ಯೋಗ್ಯರೀತಿ ಪ್ರಚಾರ ಮಾಡಿದರೆ ಕೊಡಗಿನಲ್ಲಿ ಪಾನ ನಿರೋಧವನ್ನು ಜಾರಿಗೆ ತರುವದು ಎಂದೂ ಕಷ್ಟವಲ್ಲ. ಇದರಿಂದ ಸರಕಾರಕ್ಕೆ ಕಡಿಮೆ ಬೀಳುವ ಉತ್ಪತ್ತಿಯನ್ನು ಕಂಡು ಹಿಡಿಯುವದೂ ಪ್ರಯಾಸವಲ್ಲ. ಆದ್ದರಿಂದ ಸರಕಾರವು ಪಾಸಾಗಿರುವ ಠರಾವನ್ನು ಅಂಗೀಕರಿಸಿ ಪಾನ ನಿರೋಧವನ್ನು ಜಾರಿಗೆ ತಂದು ಹಿಂದೂದೇಶದ ಉದ್ದಗಲಕ್ಕೆ ಅಮರವಾದ ಕೀರ್ತಿಯನ್ನು ಪಡೆಯಬೇಕು.

ಒಳದೇಶ.

ಈ ವರ್ಷದ ಕಾವೇರಿ ಜಾತ್ರೆಯಲ್ಲಿ ತೆಂಗಿನಕಾಯಿಗಳ ಮತ್ತು ರಾತ್ರಿ ದಾರಿಯಲ್ಲಿ ದೀಪಗಳ ಅಭಾವವು ಹೆಚ್ಚಾಗಿತ್ತಂತೆ.

ಬತ್ತದ ಕ್ರಯವನ್ನು ಏರಿಸಬೇಕೆಂಬ ಬಗ್ಗೆ ಜನರ ಪ್ರತಿನಿಧಿಗಳ ಡೆಪ್ಯುಟೇಶನ್ನು ಈ ತಾ. 31ರಲ್ಲಿ ಚೀಫ್ ಕಮಿಷನರನ್ನು ಭೇಟಿಯೂಗುವುದು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ಮಿಸ್. ಮುಂಜಾಂದಿರ ಸಿ. ಚಿಣ್ಣಮ್ಮನವರು ಕಳೆದ ಸೆಪ್ಟೆಂಬರಿನ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆಯೂಗಿರುವರು

ಪೊನ್ನಂಪೇಟೆ ಹೈಸ್ಕೂಲಿನ ನಾಲ್ಕನೆ ಫಾರಂನ ಹೆ. ಮೂಸ್ಟರಾಗಿದ್ದ ಮೆ. ಆಚ್ಚುತಬಾಳಿಗರವರು ಖಾಯಿಲೆಯಾಗಿ ಕೆಲಸಕ್ಕೆ ರಾಜೀನಾಮೆಕೊಟ್ಟ ಕಾರಣ ಅವರ ಬದಲು ಮೈಸೂರಿನ ಶ್ರೀ ಯಂ. ರಾಜರಾವ್ಯ, ಯಂ. ಎ. ಬಿ. ಟಿ ಯವರನ್ನು ಹೆ. ಮೂಸ್ಟರಾಗಿಯೂ, ಶ್ರೀ. ಜಿ. ಕೆ. ಮುತ್ತಣ್ಣನವರನ್ನು ಮತ್ತು ಸಿ. ಯಂ. ಗಣಪತ್ತಿ ಬಿ. ಎ. ಯವರನ್ನು ಅ. ಮೂಸ್ಟರುಗಳಾಗಿಯೂ ನೇಮಿಸಲಾಗಿದೆ.

ಪೊನ್ನಂಪೇಟೆ ಹೈಯರ್ ಎಲಿಮೆಂಟರಿ ಶಾಲೆಯ ಹೆ. ಮೂಸ್ಟರಾಗಿದ್ದ ಶ್ರೀ. ಡಿ. ಯನ್. ಕೃಷ್ಣಯ್ಯನವರು ಅ. ಎಜುಕೇಶನ್ ಆಫೀಸರಾಗಿ ನೇಮಕವಾದ ಕಾರಣ ಅವರ ಬದಲು ಆ ಶಾಲೆಯ ಅ. ಮೂಸ್ಟರಾಗಿದ್ದ ಶ್ರೀ. ಬಿ. ಎನ್. ಸುಬ್ಬಮ್ಮಯ್ಯನವರನ್ನು ಹೆ. ಮೂಸ್ಟರಾಗಿ ನೇಮಿಸಲಾಗಿದೆ.

ಪೊನ್ನಂಪೇಟೆ ಬಾಳಲಿ ಗ್ರಾಮದಲ್ಲಿ ವ್ಯಾಪಾರಮಾಡುವ ಮೂಪಿಲ್ಲೆ ಉಮ್ಮರ್‌ರವರು ಕಾಗದವನ್ನು ಹೆಚ್ಚು ಕ್ರಯಕ್ಕೆ ಮಾರಿದರೆಂಬ ಅಪವಾದನೆ ಮೇಲೆ ವೀರಾಜಪೇಟೆ ಮುನಿಸಿಫ್ ಮೇಜಸ್ಟ್ರೇಟರು ಅವರಿಗೆ ರೂ. 35. ಜುಲ್ಮಾನೆ ವಿಧಿಸಿರುವರು.

ಪೊನ್ನಂಪೇಟೆಯ ವ್ಯಾಪಾರಿ ಮೂಸಿಲ್ಲೆ ಯು. ಯನ್. ಅಬ್ದು ಅಂಡ್ ಬ್ರದರ್ಸ್‌ರವರು ಸಿಗರೇಟು ಇಲ್ಲವೆಂದು ಹೇಳಿ ಹೆಚ್ಚಿನ ಬೆಲೆಗೆ ಮಾರಿದರೆಂಬ ಅಪರಾಧದ ಮೇಲೆ ಜಿಲ್ಲಾ ಮೇಜಸ್ಟ್ರೇಟರು ಅವರಿಗೆ ರೂ. 270 ರೂ. ಜುಲ್ಮಾನೆ ವಿಧಿಸಿರುವರು.

ಸೆಂಟ್ರಲ್ ಎಕ್ಸಯಿಸ್ ಇಲಾಖೆಯ ಸಬ್ ಇನ್ಸ್‌ಪೆಕ್ಟರಾಗಿ ಶ್ರೀ. ಬಲ್ಲಚಂಡ ಯಂ. ಕಾಳಪ್ಪನವರನ್ನು ದಕ್ಷಿಣ ಕನ್ನಡಕ್ಕೆ ನೇಮಿಸಿರುವರು.

ಮಡಿಕೇರಿ ಸಿವಿಲ್ ಆಸ್ಪತ್ರೆಗೆ ಮೈಸೂರಿನ ಶ್ರೀ. ಬಿ. ಗೌರಮ್ಮ ಎಂ. ಬಿ. ಬಿ. ಎಸ್ ರವರನ್ನು ಲೇಡಿ ಡಾಕ್ಟರರಾಗಿ ನೇಮಿಸಿರುವರು.

ಸೋಮವಾರಪೇಟೆಯಲ್ಲಿ ನಡೆದ ಕೊಲೆಕೇಸಿನ ಸಂಬಂಧ ಬೆಟ್ಟಕುರುಬರ ಮಾದ ಎಂಬವನನ್ನು ಕಳೆದ ವಾರ ಖೈದಿಗೆ ಕೊಡಲಾಯಿತು.

ಕಳೆದ ಕಾವೇರಿ ಜಾತ್ರೆಯಲ್ಲಿ ಹರಿಜನನೊಬ್ಬನು ಭಾಗಮಂಡಲದ ಸಂಗಮ ಸ್ಥಳದಲ್ಲಿ ವಿಂದು ಏಂಡಹಾಕಿದನೆಂದು ಅವನನ್ನು ಪೊಲೀಸರು ಹಿಡಿದಿದರೆಂದೂ, ದೇವಸ್ಥಾನಕ್ಕೆ ಸಂಬಂಧಿಸಿದವರು ಅವನಿಗೆ ರೂ. 10 ಜುಲ್ಮಾನೆ ವಿಧಿಸಿದರೆಂದೂ ಸುದ್ದಿ.

ಮಡಿಕೇರಿಯಲ್ಲಿದ್ದ ಪಾರ್ವತಿ ಎಂಬ ಸುಮಾರು ನಲುವತ್ತು ವಯಸ್ಸಿನ ಹೆಂಗಸು ನಿನ್ನೆ ರಾತ್ರಿ ಯಾವುದೋ ಕಾರಣಕ್ಕಾಗಿ ವಿಷತೆಗೆದುಕೊಂಡಳೆಂದೂ, ಆಕೆಯನ್ನು ಕೂಡ್ಲೆ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆನೂಡುತ್ತಿರುವರೆಂದೂ ತಿಳಿಯಬಂದಿದೆ.

ಶ್ರೀಮಂಗಲನಾಡಿನ ಅನೇಕ ಭಾಗಗಳಲ್ಲಿ ದನಗಳ ರೋಗವೂ ಇನ್ನೂ ಪ್ರಬಲವಾಗಿದೆಯೆಂದೂ ದನಗಳು ಹೆಚ್ಚಾಗಿ ಸಾಯುತ್ತಿರುವವೆಂದೂ ತಿಳಿಯಬಂದಿದೆ.

ಮಡಿಕೇರಿಯಲ್ಲಿ ಸ್ಲೇಗಿನ ಹಾವಳಿ ಕಡಿಮೆಯಾಗಿದೆ. ಸಿಡುಬು ಕಾಯಿಲೆ ಇನ್ನೂ ಇಡಗಿಲ್ಲ. ಸೀತಳೆ, ಅಂಗರೆಕಜ್ಜಿ ಮೊದಲಾದುವು ಬಹುವಾಗಿ ಹಬ್ಬಿವೆ.

ಶನಿವಾರಸಂತೆ ಹೋಬಳಿಯ ಎಲ್ಲ. ನೂರು ಗ್ರಾಮಕ್ಕೆ 2 ವಾರಗಳ ಹಿಂದೆ ಸುಮಾರು 50 ಎನೆಗಳ ಹಿಂಡು ಬಂದು ಸುಮಾರು 300 ಬಟ್ಟೆ ಭೂಮಿಯ ಬೆಳೆಯನ್ನು ತಿಂದು, ತ್ಸಲವು ನಾಶನೂಡಿನೆಯೆಂದು ತಿಳಿದುಬಂದಿದೆ.

ಈ ತಾ. 7 ರಲ್ಲಿ ಶ್ರೀ. ಬಿ ಬಸವಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಶನಿವಾರಸಂತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸರ್ಕಾರದವರು ಭತ್ತದ ಕ್ರಯವನ್ನು ಗಾಡಿಗೆ ರೂ. 150 ಕ್ಕಾದರೂ ಏರಿಸಬೇಕೆಂದು ತೀರ್ಮಾನಿಸಿ, ಈ ಬಗ್ಗೆ ಡೆಪ್ಯುಟೇಶನ್ ಹೋಗಲು ಶ್ರೀ ಹೆಚ್. ಯಂ. ಪುಷ್ಪಣ್ಣನವರನ್ನು ಆರಿಸಲಾಯಿತು.

ತಾ. 15 ರಲ್ಲಿ ಕೊಡ್ಲಿಪೇಟೆಯಲ್ಲಿ ಶ್ರೀ. ಪುಷ್ಪಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲೂ ಹೀಗೆಯೇ ತೀರ್ಮಾನಿಸಿ, ಶ್ರೀ. ಗನ್ನಿಸಾಹೇಬರನ್ನು ಪ್ರತಿನಿಧಿಯಾಗಿ ಆರಿಸಲಾಯಿತು.

ವಿನಂತಿ.

ಕೊಡ್ಲೂರ್ ಜಾತ್ರಾರ್ಥಕ ನಿಧಿಗೆ ಕೊಡಗಿನ ಸಂಗ್ರಹವಾದ ರೂ. 14,370ನ್ನು ಯೋಗ್ಯರೀತಿಯಿಂದ ವಿನಿಯೋಗಿಸುವ ಮತ್ತು ಸುಂದಿಯೋಜನೆಗಳನ್ನು ತಯಾರಿಸಿ ಕಾರ್ಯರೂಪಕ್ಕೆ ತರಲು ಒಂದು ಸಮಿತಿಯನ್ನು ನೇಮಿಸುವ ಸಲುವಾಗಿ ತಾ. 27—10—44ನೇ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಮಡಿಕೇರಿ ಸಹಕಾರಿ ಸೆಂಟ್ರಲ್ ಬ್ಯಾಂಕ್ ಆಫೀಸಿನಲ್ಲಿ ಈ ನಿಧಿಗೆ ಧನ ಸಹಾಯ ಮಾಡಿದವರ ಸಭೆಯೊಂದು ಜರಗುವುದು. ಆ ಸಭೆಯಲ್ಲಿ ಎಲ್ಲರೂ ತಪ್ಪದೆ ಹಾಜರಾಗಬೇಕಾಗಿ ವಿನಂತಿ.

ಮಡಿಕೇರಿ, ತಾ. 19.10.44. } ಬಿ. ಡಿ. ಗಣಪತಿ
ಕಾರ್ಯದರ್ಶಿ,
ಕೊ. ಕ. ಗಾ. ಸ್ಮಾ. ನಿ

ರಣಭೇರಿ.

ಮಿತ್ರವಲಯಗಳು ಮುಂದರಿಯುದಂ
ಜರ್ಮನರು ತಡೆಗಟ್ಟಿ ಘೋರಕದ
ಮಾಡುತ್ತಿಲ್ಲವರು ತಮ್ಮ 'ಸೀ
ಫ್ಲೈಡ್' ಕೋಟೆಯಲ್ಲಿ ನಿಂತುವೇ
ಲೆಂಬೆರುವ ಮಿತ್ರ ಸೇನಾಪ್ರವಾಹವ
ನ್ನು ತಡೆದು ನಿಲ್ಲಿಸಿವುವರು. 'ಸೀಜ್
ಫ್ರೈಡ್' ಗೋಡೆಯು ಜರ್ಮನಿಯರ
ಗತ್ತುಗಾರಿಕೆಗೆ ಸರಿಯಾಗಿ ಈ ಕಳೆದ
ಒಂದು ತಿಂಗಳಿಂದ ಮಿತ್ರರ ಪ್ರಹಾರ
ಗಳನ್ನು ತಡೆದು ಇನ್ನೂ ಅಭೇದ್ಯವಾ
ಗಿ ನಿಂತಿದೆ. ಆದು ಬಿರುಕುಬಿಡುವ
ಚಿಹ್ನೆಗಳೂ ಕಂಡುಬರುವದಿಲ್ಲ ಈ
ವರೆಗೆ ಹಿಂದೆ ಓಡುತ್ತಿದ್ದ ಜರ್ಮನರು
ತಮ್ಮ ದೇಶದ ಗಡಿಯಲ್ಲಿ ಅದ್ವಿತೀಯ
ವಾದ ಶೌರ್ಯದಿಂದ ಕಾದಲು ಸಹಾ
ಯಕವಾದುದೇನು? ಇಷ್ಟು ಶಕ್ತಿಯು
ದ್ದವರು ಭೂಸೈನ್ಯದಲ್ಲಿ ಪ್ರತಿಭಟಿಸದೆ
ಹಿಂಜರಿಯಲು ಕಾರಣವೇನು? ಎಂ
ದು ಕೆಲವರು ಕೇಳುತ್ತಾರೆ. ಇದು
ಜರ್ಮನರ ಮುಂದಿನ ಯೋಜನೆಯು ಫ
ಲ ಮಿತ್ರರು ವ್ಯಾಸಿಸ್ಲೆ ಇರುವಾಗ
ಲಿಂದ ಆವರನ್ನು ಜಲ್ಲಿಯೇ ಪ್ರತಿಭಟಿ
ಸಿ ತಮ್ಮ ದಕ್ಷಿಯಸ್ಸೆಲ್ಲಾ ಅಲ್ಲಿ ಉಪ
ಯೋಗಿಸಿದ್ದ ಪಕ್ಷ ಜರ್ಮನರ ಚೈತ
ನ್ಯವು ಇಸ್ಟರ್‌ಲ್ಲಿ ಉಡುಗಿ ಹೋಗಬ
ಹುದಿತ್ತೇನೋ? ಯಾಕಂದರೆ ಫ್ರಾನ್ಸಿ
ನಲ್ಲಿ ನಿಂತು ಹೋರಾಡಲು ನೈಸರ್ಗಿಕ
ವಾಹ ಅನುಕೂಲವಿಲ್ಲ ಅಲ್ಲಿ ಯು
ದ್ಧಮಾಡುವದೆಂದರೆ ಹೆಬ್ಬುಟ್ಟು ಜನರ
ನ್ನು ಆಹುತಿಕೊಟ್ಟಂತೆ. ಆದ್ದರಿಂದ
ಕಡಿಮೆ ಜನರಿಂದ ಯಶಸ್ವಿಯಾಗಿ
ಯುದ್ಧ ಮಾಡಬಲ್ಲ ನೈಸರ್ಗಿಕ ರಾಜ್ಯ
ಗಳಿಗೆ ಸಾಧ್ಯವಿದ್ದಲ್ಲಿ ಹೋರಾಡುತ್ತಾ
ಅವರು ಹಿಂತೆಗೆದುಕೊಂಡರು. ಇದ
ರಿಂದ ಜರ್ಮನರಿಗೆ ಸಮಯವೂ ದೊ
ರೆಯಿತು. ಹಾಲೆಂಡಿನ ಭಾಗವನ್ನಾದು
ಗಡಿಯನ್ನು ಇನ್ನಷ್ಟು ಭದ್ರಮಾಡಿಕೊ
ಳ್ಳಲು ಅನುದೊರೆಯಿತು. ಹೀಗೆ ಸಿ
ದ್ಧರಾಗಿ ಜರ್ಮನರು ತಮ್ಮ ಅತ್ಯುಗ್ರ
ಪ್ರತಿಭಟನೆಗೆ ತೊಡಗಿದ್ದಾರೆ. ಇದ
ರಿಂದ ಮಿತ್ರರಿಗೆ ನಿರೀಕ್ಷಿಸಿದಷ್ಟು ಜ
ಯದೊರೆಯುತ್ತಿಲ್ಲ. ಪ್ರಾಕೃತಿಕ ಸ
ನ್ನಿವೇಶದ ಮತ್ತು ಕೃತ್ರಿಮ ವ್ಯವಸ್ಥೆಗ
ಳ ಮೂಲಕ ಸ್ವದೇಶ ಲಕ್ಷೇಯಿಸಿ
ಜರ್ಮನರು ಯಶಸ್ವಿಯಾಗಿ ಯುದ್ಧ
ಮಾಡುತ್ತಿದ್ದಾರೆ. ಪೂರ್ವಭಾಗದಲ್ಲಿ ರಷ್ಯನರು
ಮುಂದರಿಯುತ್ತಿದ್ದಾರೆ ಇತ್ತ
ಮಿತ್ರರು ಗ್ರೀಸ್ ಭಾಗದಲ್ಲಿ ಯೊಸ
ಭಯೋಗ ಪ್ರಾರಂಭಿಸಿದ್ದಾರೆ ಇದಾ
ವುದರಿಂದಲೂ ಜರ್ಮನಿಯು ಧೃತಿಗೆ
ಡದೆ ಇವಲ್ಲ ಸರಿಸ್ಥಿತಿಸಿ ಪರಾಭವಗ
ಳೆಂದೂ, ಮೊತ್ತದೇಶದ ರಕ್ಷಣೆಗಾಗಿ
ಮಾಡಬೇಕಾದ ಸ್ವಾರ್ಥತ್ಯಾಗಗಳೆಂ
ದೂ ಹರಿಗಣಿಸಿ ಹೋರಾಡುತ್ತಿದೆ. ಜ
ರ್ಮನಿಯು ಗೋಡೆಯನ್ನು ಮುರಿದು
ಒಳನುಗ್ಗಲಿಕ್ಕೆ ಇನ್ನೂ ಕಲವು ತಿಂಗ
ಳುಗಳು ಬೇಕಾಗಬಹುದು. ಜರ್ಮ
ನಿಯು ಬೇಗ ಸೋಲುವಂತೆ ಕಂಡುಬ
ರುವದಿಲ್ಲ. ಸೋಲುವ ಸಂದರ್ಭದಲ್ಲಿ
ಯೂ ಕೂಟ ಯುದ್ಧವನ್ನು, ಗೊರಿ
ಲ್ಲಾ ಯುದ್ಧ ಕಾದುವನ್ನು ಅನುಸರಿಸಿ
ಗೆದ್ದವರ ಬಳ [illegible]
ಆದು ಮೂಡುವದರಲ್ಲಿ ಸಂಶಯವಿಲ್ಲ.

ಈಗ ಅತೀ ಪ್ರಬಲವಾದ ಯು
ದ್ಧ ನಡೆಯುತ್ತಿರುವುದು ಪಶ್ಚಿಮ ಜರ್ಮ
ನಿಯ ಭಾಗದಲ್ಲಿ ಹಿಟ್ಲರನು ಸರ್ವ ಶಕ್ತಿಯ
ನ್ನೆಲ್ಲಾ ಕೇಂದ್ರೀಕರಿಸಿರುವಂತೆ ಕಂಡು
ಬರುತ್ತಿದೆ. ಮಿತ್ರರು ಅನೇಕ
ದಿನಗಳಿಂದ ಇದನ್ನು ವಶಪಡಿಸಿಕೊ
ಳ್ಳುವದು ಸಾಧ್ಯವಾಗಿರುವದಿಲ್ಲ. ಜ
ರ್ಮನಿಯ ಹೆಗ್ಗಳಿಕೆಗೆ ತಕ್ಕಂಥಾ ಶಕ್ತಿ
ಪ್ರದರ್ಶನವು ಇಲ್ಲಿ ಆಗುತ್ತಿದೆ. ಜ
ರ್ಮನರು ಈ ರಂಗದ ಎಲ್ಲಾ ಭಾಗಗ
ಳಲ್ಲಿಯೂ ಬಹು ಹೆರಿಸಿನಿಂದ ಯು
ದ್ಧ ಮಾಡುತ್ತಿದ್ದಾರೆ. ಮುಂದಿನ ಚ
ಳಿಗಾಲದ ವರೆಗೆ ಈ ಯುದ್ಧವನ್ನು ಅ
ವರು ಸಾಗಿಸಿದ್ದೇ ಆದರೆ ಶೀತಕಾಲದ
ಬ್ಲಿ ಟ್ಸ್‌ಕ್ರೀಗಳನ್ನು ಉಪಯೋಗಿಸ
ಲಾಗದ ಕಾರಣ ವಿಶ್ರಾಂತಿಯನ್ನಾದೆ
ಯೊಗದೆಂದೂ, ಚಳಿಗಾಲದ ನಂತರ
ಯೋಗ್ಯವ್ಯವಸ್ಥೆಯಿಂದ ಪುಕಹ ಮಿತ್ರ
ರನ್ನು ಪ್ರತಿಭಟಿಸಬಹುದು ಎಕ್ಯವೆಂದೂ
ಜರ್ಮನರು ತರ್ಕಿಸಿಬಹುದು. ಆದರೆ
ಮಿತ್ರರು ಈ ಬೆಳಿಗಾಲದೊಳಗಾಗಿ ಇ
ಲ್ಲಿಯು ಯುದ್ಧ ಮುಗಿಸಿಬಿಡಬೇಕೆಂಬ
ಹಂಬಲವಲ್ಲಿದ್ದಾರೆ. ಇದು ಎಷ್ಟರ
ಮಟ್ಟಿಗೆ ಸಾಧ್ಯವಾದೀತೆಂಬುದನ್ನು
ಮುಂದೆ ನೋಡಬೇಕಿದೆ.

ಈ ಮಧ್ಯೆ ಜರ್ಮನರ ಅದ್ವಿತೀ
ಯ ನಾಯಕರಾದ ಯೂಕೆ ಜಗತ್ತಿನ
ಯುದ್ಧ ಕಲಾಕೋವಿದರಲ್ಲಿ ನಿಸ್ಸೀಮರಾ
ದ ಫೀಲ್ಡ್ ಮಾರ್ಶಲ್ ರೋಮೆಲ್ಲರು
ಸತ್ತರು ಎಂಬ ವಾರ್ತೆ ಬಂದಿದೆ
ಇದು ಜರ್ಮನಿಯಿಂದ ಬಂದ ವಾರ್ತೆ
ಯೆಂಬುದಾಗಿ ತಿಳಿದುಬಂದಿದೆ. ಈ
ವಾರ್ತೆಯು ನಿಜವಿದ್ದರೆ ಜರ್ಮನಿ
ಯು ತನ್ನ ಪುತ್ರರತ್ನಗಳಲ್ಲೊಬ್ಬರ
ನ್ನು, ಹಿಟ್ಲರನ ಬಲಗೈ ಬಂಟರಲ್ಲಿ ಅ
ದ್ವಿತೀಯರನ್ನೂ ಚರಿತ್ರಾರ್ಹ ಕೀರ್ತಿ
ಯನ್ನು ಪಡೆದ ವೀರರನ್ನೂ ಕಳೆದು
ಕೊಂಡಿತು. ಕೆಲವು ದಿನಗಳಿಗೆ ಹಿಂ
ದೆ ತಲೆಗೆ ಪೆಟ್ಟಾಗಿದ್ದು ಆದರಿಂದಲೇ
ಮೃತ್ಯುವನುಖಾದರೆಂದು ವಾರ್ತೆ
ಯು ತಿಳಿಯುತ್ತದೆ. 1940ರ ಮೊ
ದಲು ರೋಮೆಲ್ಲರ ಹೆಸರು ಯಾರಿಗೂ
ತಿಳಿದಿರಲ್ಲಿಲ್ಲ ಆದರೆ 1940 ರಿಂದೀ
ಚೆಗೆ ತನ್ನ ಯೋಜನೆಗಳು, ವೀರೋ
ದಾತ್ತತೆಗಳಿಂದ ಇಡೀ ಜಗತ್ತನ್ನೇ ಗಂ
ಗಾಗೊಳಿಸಿದರು. ಒರೆಗೆ ತಾಲ
ದ ನೆಪೋಲಿಯನನಂತೆ, ಜಾಲಿಯ
ಸೀಸರನಂತೆ ಅದ್ವಿತೀಯ ಶೌರ್ಯ
ಪ್ರತಾಪಗಳನ್ನು ತೋರಿ ಮೇರಕ್ಕಾಗಿ
ಮಡಿದರು. ಇಂಥ ಪ್ರಶ್ನೆಯನ್ನು
ಪಡೆದುದಾಗಿ ಯಾವ ದೇಶವಾದ
ರೂ ಹೆಮ್ಮೆಪಡುತ್ತಿದ್ದ. ಕ್ರಿಸ್ತಾನಂತರ
ರೂ ಸಹ ಬ್ರಿಟಿಷ್ ಫ್ರಥಸಿ ಜರ್ಮ
ಲ್ಲರು, ಸೇನಾನಿ ಕೊಂಟೋಮರಿಯ
ವರು ಇವರ ರಣಕೌಶಲವನ್ನು ಕೊಂ
ಡಾಡಿದ್ದಾರೆ ರೋಮೆಲ್ಲರು ನಿಜವಾ
ಗಿಯೂ ಸತ್ತಿದ್ದರೆ ಜರ್ಮನಿಗೆ ತುಂಬ
ಲಾರದ ನಷ್ಟವಾಯಿತೆಂದು ಹೇಳುವ
ಅಗತ್ಯವಿಲ್ಲ.

ಇತ್ತ ಪೂರ್ವಭಾಗದಲ್ಲಿ ಮಿತ್ರರು
ಜರ್ಮನರ ಮೇಲೆ ಧಾಳಿಯನ್ನು ಕೈ
ಮರು ಬಲಪಡಿಸುತ್ತಿದ್ದಾರೆ. ಫಾ
ರ್ಮೋಸಾ ಸ್ಟ್ರೈಪಿನ ಮೇಲೆ ಕಳೆದ
ವಾರ ಬಲವಾದ ಧಾಳಿಮಾಡಿ
ದರು. ಜಪಾನರೂ ಅತ್ಯುಗ್ರ ರೀತಿ
ಯಿಂದ ಪ್ರತಿಭಟಿಸಿದ್ದಾರೆ. ಈ ಒಂ
ದು ದಿನ ಜಪಾನರ 91 ವಿಮಾನಗಳ
ನ್ನು ಉರುಳಿಸಲಾಯಿತೆಂದು ಮಿತ್ರರ
ವರದಿಯಿದೆ. ಅಂತು ಅಕ್ಟೋಬರ್
ತಾ. 9 ರಿಂದ ತಾ. 17ರ ವರೆಗೆ ಜ
ಪಾನರ ಒಟ್ಟು 73 ಹಡಗುಗಳನ್ನು
670 ವಿಮಾನಗಳನ್ನು ನಾಶಪಡಿಸಿರು
ವದಾಗಿ ಮಿತ್ರರು ಹೇಳುತ್ತಾರೆ.

ಈ ಮಧ್ಯೆ ಚೀನೀಯರ ಪರಿಸ್ಥಿತಿ
ವಿಶಮಾವಸ್ಥೆಗೆ ಬಂದಿಗೆ. ತಮ್ಮ ಪರಿ
ಸ್ಥಿತಿಯ ಚೆನ್ನಾಗಿಲ್ಲವೆಂದು ಚೀನಾದ
ಸರ್ವಾಧಿಕಾರಿ ಚಿಯಾಂಗ್‌ಕೈಶೆಕರು ತ
ಮ್ಮ ಮೊನ್ನೆಯ ಜೇಳಕೆಯೊಂದರಲ್ಲಿ ತಿ
ಳಿಸಿದ್ದಾರೆ. ಜಪಾನರು ಬರ್ಮಾದಿಂ
ದ ಹಿಮ್ಮೆಟ್ಟಿದರು. ತಾಂತಿಸಾಗರದ
ಲ್ಲೂ ಹಿಮ್ಮೆಟ್ಟುತ್ತಿರುವರು. ಆದರೆ
ಚೀನಾದಲ್ಲಿ ಅವರು ಬಹು ಮಟ್ಟಿನ
ಪ್ರಗತಿಪಡೆದಿದ್ದಾರೆ. ನಾನು ಹಿಂದೊ
ಮ್ಮೆ ಸೂಚಿಸಿದ್ದಂತೆ ಜಪಾನರು ಬ
ರ್ಮಾದಿಂದ ಹಿಂತೆಗೆದುಕೊಂಡುದು
ಚೀನಾ ಯುದ್ಧವನ್ನು ಮುಗಿಸುವದ
ಕ್ಕಾಗಿ ಎಂಬುದು ಸತ್ಯವಾಗಿ ಪರಿಣಮಿ
ಸಿದೆ, ಇದರಿಂದ ಸರ್ವರಿಗೂ ಕಳವಳ
ವಾಗಿದೆ. ಮಿತ್ರರು ಶಾಂತಿಸಾಗರದ
ಲ್ಲಿ ಎಷ್ಟೇ ಶೌರ್ಯತೋರಿಸುತ್ತಿರಲಿ,
ಈ ಶೌರ್ಯಪ್ರತಾಪಗಳಿಂದಲೇ ಅಂದ
ರೆಕೇವಲ ನೌಕಾಯುದ್ಧದಿಂದಲೇ ಜ
ಪಾನರನ್ನು ಸೋಲಿಸುವದು ಸಾಧ್ಯ
ವಲ್ಲ. ಜಪಾನರು ಕ್ವಾಂಗ್ಸಿ ಪ್ರಾಂತ
ದ ರಾಜಧಾನಿ ಕ್ವಿಲಿನ್‌ನನ್ನು ವಶಪಡಿ
ಸಿ ಪೂರ್ವಕಡಾವಳಿಯ ಪ್ರಾಬಲ್ಯವನ್ನು
ಆಕ್ರಮಿಸಿದ್ದಾರೆ. ಚೀನಾದ ಪರಿಸ್ಥಿ
ತಿ ಇಷ್ಟು ಶೋಚನೀಯವಾಗಲು ಅ
ವರಿಗೆ ಸರಿಯಾದ ಸಾಹಿತ್ಯಪರಬರಾ
ಯಿ ಇಲ್ಲದುದೇ ಕಾರಣವಾಗಿದೆ. ಆದ್ದ
ರಿಂದ ಮಿತ್ರರು ಶಕ್ತಿಮೀರಿ ಸಹಾಯ
ಮಾಡಿದರೆ ಸೂಕ್ಷ್ಮ ಚೀನವು ಉಳಿಯು
ವದು. ಮತ್ತು ಜಪಾನನ್ನು ಸುಲಭ
ದಲ್ಲಿ ಸೋಲಿಸುವದೂ ಸಾಧ್ಯವಾಗು
ವದು.

ನೂರು ರೂಪಾಯಿಗಳಿಗೆ
ಐದು ವರ್ಷ ಗ್ಯಾರಂಟಿಯ

ನೂರು ವಾಚುಗಳು.



ಎರಡು ಕುಪ್ಪಿ ಪು
ಷ್ಪರಾಜ ಹೇರ್ ಆ
ಯಿಲ್ ಕೊಂಡುಕೊ
ಳ್ಳುವವರಿಗೆ ಒಂದು
ನಿಕ್ಕಲ್ ಕೇಸಿನ ಡೆ
ಮ್ಮಿರಿಸ್ಟ್ ವಾಚ್,
1 ಟಾರ್ಚ್‌ಲೈಟ್,
1 ಫೌಂಟನ್ ಪೆನ್, 1 ಸೇಫ್ಟಿ ರೇಜ
ರ್, 1 ಸೋಪು, 1 ಕೈವಸ್ತ್ರ, 1 ಜೊತೆ
ಗುಂಡಿಗಳು, 4 ಕೈಲೇಸ್‌ಗಳು, 1 ಪೇ
ನಾಚಾಕು, 1 ಕತ್ತರಿ, 1 ಉಂಗುರ
ಮತ್ತು 240 ಮನೋಹರ ಚಿತ್ರಗಳು.
ಆಲ್ಲದಿದ್ದರೆ ಒಂದು ಪಾಕೆಟ್ ವಾಚ್.
ಈ ಮೇಲಿನ ಸಾಮಾನುಗಳು ಏನೂ
ಸಂಶಯವಿಲ್ಲದೆ ವಾಚುಗಳನ್ನು ಪಡ
ಕೊಂಡವರಿಗೆ ಬಹುಸೂನವಾಗಿ ದೊರೆ
ಯುತ್ತೆ. ಪೋಸ್ಟೇಜ್ ಮತ್ತು ವ್ಯಾ
ಕಿಂಗ್ ಚಾರ್ಜು ವೈಕ್ತಿಕ 0-12-0.

IDEAL TRADING CO.,
140/2 upper Chitpur Road,
CALCUTTA (K).

—೦೦—

ಶ್ರೀ ಶಾರದಾ ಕಾಫಿ
ನಿಲಯದಲ್ಲಿ ಚೀಲೆ
ಯನ್ನು ಪ್ರಮಾಣಾನು
ಯಾಯಿ ಪುಡಿಮಾಡಿ
ಕೊಡಲ್ಪಡುವುದು.

ಹುರಿದು ಪುಡಿ ಮಾ
ಡಿಸುವವರು ಬೆಳಗ್ಗೆ
9½ ಗಂಟೆ ಮೇಲೆ
ಕಾಫಿ ಚೀಲೆಯನ್ನು
ಕಳುಹಿಸಬೇಕು.

ಪಾ:—
ಪಣ 1ರ ರೂ. 1-8-0
ಅಳತೆ ಸೇರು 1ರ
ರೂ. 0-1-6

SHRI SHARADA COFFEE HOME,
4) McDOWELLS BUILDINGS, *MERCARA.*

The Canara Banking Corporation Limited.
(Incorporated in British India)
ETD— Head Office—UDIPI, (S. K.) —1906

Paid up capital .. .. .. Rs. 14,38,255
Reserves .. .. Rs. 4,10,000
Total working Resources .. .. Exceed Rs. 1 Crore

ANNOUNCEMENT.

A Branch of the Bank will be opened shortly at
1) **BOMBAY.**

— ಶುಭಾಶಯಗಳು —

ಕೊಚ್ಚಿಕಾರ್ ಬ್ರದರ್ಸ್, ಲಿ.
ಮುಖ್ಯ ವಿಜಂಟರು.
ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.
5)
ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ, ವೈದ್ಯ ಪರೀಕ್ಷಕರಿಗೂ
ಮತ್ತು ಹಿತಚಿಂತಕರಿಗೂ ತಮ್ಮ
ದೀಪಾವಳಿ
ಶುಭಾಶಯಗಳನ್ನು ಬಯಸುತ್ತಾರೆ.

ಧಾತು ವೃದ್ಧಿ ರಸಾಯನ (ZANDU)
"ಕ್ಯಾಕ್ಟೋ—ಫಾಸ್‌ಫೋ—ಮೋಲ್ಟ್"
ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.
ಈ ರಸಾಯನ } ಕಾಯಿಲೆಯುವರಿಗೆ, ಆರೋಗ್ಯವಿಂದಿರುವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಜಾನಿಕ್.
ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ತಾಕ್ಕರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ಪಿತೋದಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯನ್ನಿಗುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೊಷ್ಠ ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ
ಇದರಲ್ಲಿ ಇಲೆಕ್ಟ್ರೋ ಫಾಸ್‌ಫೋನೋಲ್ಸ್, ಹೆಮೋಗ್ಲೋಬಿನ್, ಸೋಡಿಗ್ಲಿಸರೊ ಫಾಸ್‌ಫೇಟ್ ಪೆಪ್ಟೋನ್, ಸಾಲ್, ನೂಲ್ಸ್ ಎಕ್ಸ್‌ಟ್ರಾಕ್ಟ್‌ವಾಲ್ಟಾಸವ ಮೊದಲಾದ ಪ್ರಸಿದ್ಧ ಔಷಧಿಗಳಿವೆ. ಇಂದಿನಿಂದಲೇ ಸೇವನೆ ಅತಿಶಯ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಾಲಯಗಳಲ್ಲಿದೆ.
ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
7) ಗೋಖಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
43) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಷ್ಟ ಸಂಗತಿಗಳು.	ಒಟ್ಟು ಆದಾಯ	₹೭,೩೭,೦೦೦ ಮೀರಿದೆ
	ಚಾಲ್ತಿಯಿರುವ ವಿಮೆ	೧೬,೪೯,೮೮,೦೦೦ ,,
	ಆಸ್ತಿ	೬,೫೦,೪೬,೦೦೨ ,,
	ಕಂಪೆನಿಯು ಅದಿಯಲ್ಲಿ ಕೊಟ್ಟ ಕ್ಲೈಮುಗಳು	೮,೫೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.
ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಪಸಲಾದ ಶೇರ್ ಪೆಸಲುಗಳು ರೂ. 95,060, ಜಮಾ ಬಂದ ರೇವನಾತಿ 2,24,750 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂತಾಗಳನೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಮು ರೇವನಾತಿಗಳಿಗೆ ಒಂದು ವರ್ಷದಿಂದ ನೂರು ವರ್ಷಗಳ ವರೆಗೆ ರೇಕಡ 3. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ರೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

— ಬೆಲೆ ಹೆಚ್ಚಿದರೆ ಬರಗಾಲವಿಲ್ಲ —

ಯುದ್ಧ ಪ್ರಾರಂಭವಾಪಸಂತರ ಜನ ಜೀವನದಲ್ಲಿ ಒಂದು ರೀತಿಯ ಕಷ್ಟವು ಉಸಿರ್ಸ್ತುತವಾಗಿ ಜೀವನವು ನೀರಸವಾಗತೊಡಗಿದೆ. ಸಂತೆಯ ಸ್ಥಿತಿಯೊಂದು ಸಾರ್ವಜನಿಕ ಕ್ರಯವು ವಿಪರೀತ ಏರಿಬಿಡವರು ತೀರಾ ಕಂಗಾಲಾಗಿದ್ದಾರೆ. ಇದಕ್ಕಾಗಿ ಸರಕಾರದವರು ಧಾರಣೆ ನಿಯಂತ್ರಣವನ್ನು ಜಾರಿಗೆ ತಂದು ಅದೇ ರೀತಿ ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಪರೋಟೆಯಲ್ಲಿಟ್ಟಿರುವರು. ಹೀಗೆ ಧಾರಣೆ ನಿಯಂತ್ರಿಸುವದು ಆಕ್ಷಗತ್ಯವಾದರೂ ಅದು ಮೈಯಲ್ಲಿ ಕೂತ ಸೊಳ್ಳೆಯನ್ನು ಕೊಲ್ಲುವ ಪ್ರಯತ್ನದಲ್ಲಿ ಮನುಷ್ಯನನ್ನೇ ಕೊಂದು ಹಾಕಿದಾ ರೀತಿಯಿರಗಬಾರದು. ಕೊಡಗಿನಲ್ಲಿ ಬತ್ತದ ಬೆಲೆಯನ್ನು 120 ಸರೆಯ ಗಾಡಿಗೆ ರೂ. 115 ಎಂಬುವುದಾಗಿ ನಿಶ್ಚಯಿಸಲಾಗಿದೆ. ಈ ಧಾರಣೆಯು ಪೇಟೆಯ ಇತರ ಯಾವ ವಸ್ತುಗಳ ದಾರಣೆಯನ್ನೂ ಹೊಂದಿಕೊಂಡಿಲ್ಲ ಬಹ ರೈತನ ಜೀವನಾಧಾರವಾದ ಬತ್ತದ ಬೆಲೆಯನ್ನು ಹೀಗೆ ನಿಶ್ಚಯಿಸಿದ್ದು ಆರ್ಥ ಶಾಸ್ತ್ರದ ಜೂ ಇನ್ನಾವ ಪೃಷ್ಠಿಯಿಂದಲೂ ಯೋಗ್ಯವಾದುದಲ್ಲ. ರೈತನು ತನ್ನ ಜೀವನಕ್ಕೆ ಬೇಕಾದ ಇತರ ವಸ್ತುಗಳನ್ನೆಲ್ಲಾ ಪೇಟೆಯಿಂದ ಪಡೆಯಬೇಕು. ಇವುಗಳನ್ನು ಪಡೆಯಲು ಆತನಿಗೆ ದುಡ್ಡು ಒದಗಿಸುವ ವಸ್ತುವು ಬತ್ತ. ಪೇಟೆಯ ಇತರ ವಸ್ತುಗಳ ಧಾರಣೆಯು ಆಗಾಗ ಬದಲಾಗುತ್ತದೆ. ಬತ್ತ ಗಾಡಿಗೆ ರೂ. 115 ಎಂದು ನಿಶ್ಚಯಿಸಿದಾಗ ಇದ್ದ ಇತರ ವಸ್ತುಗಳ ಕ್ರಯವು ಈಗ ಹೆಚ್ಚಿದೆ. ಪೇಟೆಯಲ್ಲಿ ಸಾಮಾನಿನ ರೂಪ ಇದ್ದ ಜಾಗೆ ವಸ್ತುಗಳ ಬೆಲೆ ನೈತ್ಯಾಸವಾಗುತ್ತಿರುವಾಗ ಬತ್ತದ ಬೆಲೆಯನ್ನು ಒಂದೇ ನಿಘಂಟಿನಲ್ಲಿ ಇಟ್ಟಿದ್ದು ಯೋಗ್ಯವಲ್ಲ. ಮೂರು ತಿಂಗಳಿಗೆ ಯೂ ಆರು ತಿಂಗಳಿಗೊಮ್ಮೆಯೂ ಪರಿಶೀಲಿಸಿ ಇದನ್ನು ಬದಲು ಮಾಡತಕ್ಕದ್ದು ಆವಶ್ಯಕತೆ. ಇತರ ವಸ್ತುಗಳು ಯೋಗ್ಯ ಬೆಲೆಗೆ ದೊರೆಯುವುದಾದರೆ ಬತ್ತಕ್ಕೆ ಹೆಚ್ಚಿನ ಧಾರಣೆ ಸಿಕ್ಕಬೇಕೆಂದು ರೈತನು ಎಂದೂ ಹೇಳುವುದಿಲ್ಲ.

ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಬಹು ಮುಟ್ಟಿಗೆ ಕಳಗಿರಿಸಿದ ಕಾರಣದಿಂದಲೇ ದೇಶದಲ್ಲಿ ಬರಗಾಲದುರ್ಭಿಕ್ಷೆಯಿಂಬುವುದಾಗಿ ತಜ್ಞರೆನೀಸಿರು ಅಭಿಪ್ರಾಯಪಟ್ಟಿದ್ದಾರೆ. ಜೀವನಾವಶ್ಯಕವಾದ ವಸ್ತುಗಳ ಬೆಲೆಯು ಅವುಗಳನ್ನು ಬೆಳೆಸಿ ಮಾರುವವನಿಗೆ ಇನ್ನೂ ಬೆಳೆಸುವ ಪ್ರೋತ್ಸಾಹವನ್ನು ಕೊಡುತ್ತಿರಬೇಕು. ಹೆಚ್ಚು ಲಾಭವಲ್ಲದಿದ್ದರೂ ಬೆಳೆಸಿದರೆ ನಷ್ಟವಿಲ್ಲ; ಶ್ರಮಕ್ಕೆ ತಕ್ಕ ಸ್ವತಿಫಲ ದೊರೆಯುತ್ತದೆ ಎಂಬ ನಂಬಿಕೆ ಕೊಡುವಂತಿರಬೇಕು. ಹಾಗಾದರೆ ರೈತನು ತಾನಾಗಿಯೇ ಸಾಧ್ಯವಾದಲ್ಲೆಲ್ಲಾ ಬೆಳೆಸಲು ಸ್ರಯತ್ನಿಸುತ್ತಾನೆ. ಧಾರಣೆಯನ್ನು ಈ ರೀತಿ ರೈತನಿಗೆ ಪ್ರೋತ್ಸಾಹ ಕೊಡುವಂತಾ ಮಟ್ಟಕ್ಕೆ ಏರಿಸಿದರೆ 'ಹೆಚ್ಚು ಬೆಳೆಯಿರಿ' 'ಉಪಯೋಗ ಬೆಳೆಯಿರಿ' 'ಧಾರಾಳವಾಗಿ ಉಳಿಸಿರಿ' ಎಂಬ ಪ್ರಚಾರದ ಆವಶ್ಯಕತೆಯೇ ಇಲ್ಲ. ಈ ರೀತಿ ರೈತನು ಪುರುಷಪ್ರಯತ್ನದಿಂದ [illegible] ಸ್ಥಿತಿಯನ್ನು ಮಾಡಿಕೊಳ್ಳುವುದಾದರೆ ಬರಗಾಲದ ಭೀತಿಯೇ ಇರುವುದಿಲ್ಲ. ತಾನು ಬೆಳೆಸುವ ವಸ್ತುಗಳಿಗೆ ಪರಿಸಾದ ಬೆಲೆ ದೊರೆಯುವ ಕಾರಣ ರೈತನು ಸ್ವಂತ ಪರಿಸರಗಳನ್ನು ಸರಿಯಾಗಿ ಮಾಡದೆ ಇನ್ನಿತರ ವ್ಯವಹಾರಗಳನ್ನು ಹುಡುಕುವನು. ಆದರಲ್ಲಿ ಹೆಚ್ಚು ನಷ್ಟಕರಿಗಳಿಲ್ಲದೆ, ಮಳೆ ಸರಿಯಾಗಿಲ್ಲದೆ, ಅಳು ದೊರೆಯದ ಈ ಕಷ್ಟ ಕಾಲದಲ್ಲಿ ಆತನಲ್ಲಿ ವ್ಯವಸಾಯದ ಬಗ್ಗೆ ಜಿಗುಪ್ಸೆ ಹುಟ್ಟುವದರಲ್ಲಿ ಸಂಶಯವಿಲ್ಲ. ಇಂಥಾ ಸಂದರ್ಭದಲ್ಲಿ ಆತನಿಗೆ ಆಕರ್ಷಣವೊಂದರ ಅನಿವಾರ್ಯಕತೆಯಿದೆ. ಇಂಥಾ ಆರಿಯು ಬರ್ತದ ಬೆಲೆಯನ್ನು ಏರಿಸುವದಿಂದಲ್ಲದೆ ಮತ್ತಾವುದಿಂದಲೂ ಆಗಲಾರದು.

ನಿಜ, ಬತ್ತದ ಬೆಲೆಯನ್ನು ಏರಿಸುವದರಿಂದ ಬತ್ತವನ್ನು ಕ್ರಯಕ್ಕೆ ಪಡೆದು ಉಸಯೋಗಿಸುವವರಿಗೆ ತೊಂದರೆಯಾಗುವದು. ಇಂದಾವರ ಹಿತವನ್ನು ಸಾಧಿಸಲು ಸರಕಾರವು ಮುಂದೆ ಬರಬೇಕು. ಮೈಸೂರು, ಕೊಚಿನ್, ತಿರುವಾಂಕೂರು ಸರಕಾರಗಳು ಹೆಚ್ಚಿನ ಬೆಲೆಗೆ ದವಸವನ್ನು ಕೊಂಡು ಉಪಯೋಗಿಸುವವರಿಗೆ ನ್ಯಾಯವಾದ ಬೆಲೆಗೆ ಸರಬರಾಯಿ ಮಾಡುತ್ತಾರೆ. ಇದರಿಂದ ಬರುವ ನಷ್ಟವನ್ನು ಸರಕಾರವೇ ನಿರ್ವಹಿಸುತ್ತಿದೆ. ಇಂಥಾ ಒಂದು ವ್ಯವಸ್ಥೆಯನ್ನು ಇಲ್ಲಿಯ ಸರಕಾರವು ಮಾಡಬೇಕು. ಕ್ರಯಕ್ಕೆ ಪಡೆದು ಉಪಯೋಗಿಸುವವರಿಗೆ ಬೇಕಾದಷ್ಟು ಬತ್ತವನ್ನು ಪಡೆದು ಆಯಾಯ ಅಂಗಡಿಗಳನ್ನು ಕೆಲವು ಆವುಗಳ ಸೂಚಿಸಿ ರೇಷನ್ ಪದ್ಧತಿಯಿಂದ ಇದನ್ನು ಸರಬರಾಯಿ ಮಾಡಬಹುದು.

ಇಂಡಿಯಾ ಸರಕಾರಕ್ಕೆ ಸೇರಿದ್ದು ಈ ಬತ್ತದ ವ್ಯವಹಾರ. ಗಾಡಿಗೆ ರೂ. 115 ನಿಶ್ಚಯಿಸಿದ್ದೂ ಇಂಡಿಯಾ ಸರಕಾರವೇ. ಆದ್ದರಿಂದ ಧಾರಣೆ ಬದಲಾಯಿಸುವದು ಸ್ಥಳೀಯ ಸರಕಾರದ ಕೈಯ್ಯಲ್ಲಿಲ್ಲ ಎಂಬುವುದಾಗಿ ಸ್ಥಳೀಯ ಸರಕಾರದ ವಾದಸರಣಿಯೊಂದಿವೆ. ಸಂಜಾಂಘಸಬ್ಬ ಸ್ವಾಂತಗಳ ಅಭಿಮತವನ್ನು ತೆಗೆದುಕೊಳ್ಳದೆ ತಃಖ್ಖಿಯಂತೆ ಕುರುಡು ರಾಜ್ಯಭಾರ ಎಂದೂ ಕೇಂದ್ರ ಸರಕಾರವು ಮಾಡದು. ದೇಶದ ಸಮೃದ್ಧ ಪರಿಸ್ಥಿತಿ, ರೈತನಿಗಿರುವ ತೊಂದರೆ, ಇತರ ಸಾಮಾನುಗಳ ಬೆಲೆ ಇವುಗಳನ್ನು ವಿವೇಚಿಸಿ ಯೋಗ್ಯ ರೀತಿಯಲ್ಲಿ ಕೇಂದ್ರ ಸರಕಾರದ ಮುಂದಿಟ್ಟರೆ ನಿಜವಾಗಿಯೂ ಬತ್ತದ ಬೆಲೆಯನ್ನು ಏರಿಸುವದರಲ್ಲಿ ಸಂಶಯವಿಲ್ಲ. ಈ ಸರ್ವ ವ್ಯವಸಾಯಕ್ಕೆ ಅಡ್ಡ ಬಂದ ತೊಂದರೆಗಳಿಂದಾಗಿ ಸುಮಾರು 1000 ಪೈಕಿ ಜನಿಸುವ ಪಾಳು ಬಿದ್ದಿದೆಯೆಂದು ಸರಕಾರದ ಅಂದಾಜಿನಲ್ಲೇ ಕಂಡುಬಂದಿರುವಾಗ ಮುಂದೆ ಸರಿಸ್ಥಿತಿ ಹೇಗಾಗಬಹುದೆಂಬುವದನ್ನು ಬೇರೆ ವಿವರಿಸಬೇಕಾದುದಿಲ್ಲ. ಆದ್ದರಿಂದ ಸ್ಥಳೀಯ ಸರಕಾರವು ಕೊಡಗಿನ ಪರಿಸ್ಥಿತಿಯನ್ನು ಯೋಗ್ಯ ರೀತಿ ಕೇಂದ್ರ ಸರಕಾರದ ಮುಂದಿಟ್ಟು ಬಡ ರೈತರಿಗೆ 120 ಪರೆಯ ಗಾಡಿಗೆ ಕಡಿಮೆ ರೂ. 150 ದೊರೆಯುಹಾಂತೆ ಮಾಡಬೇಕಿದೆ.

"ಟ್ರಾಪಿಕಲ್"
ಸಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್ ಖಾನ್, ಡಾ. ಯಂ. ಎ. ಅನ್ಸಾರಿ, ಸುಭಾಷ್‌ಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.
ಜೀವನ ಸಂಧ್ಯಾ ಕಾಲದಲ್ಲಿ ಜೀವನಿನೆಯೇ ನಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಒಂದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.
ಮುಖ್ಯ ಖಚೇರಿ: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ರೆಗೆ ಬರೆಯಿರಿ:
ಯಂ. ಯು. ಅಚ್ಚಣ್ಣ, ಯಂ. ರಂಗನಾಥಶೆಟ್ಟಿ,
39) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

KODAGU MERCARA, (Coorg).

ಕೊಡಗು

ಸಂಪಾದಕರು:—ಶ್ರೀ ಪಿ. ಐ. ಚೆಂಗಪ್ಪ, ವಾರ್ಷಿಕ ಚಂದಾ: ರೂ: ೩-೪-೦.

ಸಂಪುಟ ೨೭ | ತಾರೀಕು ೨೭—೧೦—೧೯೪೪ನೇ ಶುಕ್ರವಾರ. | ಸಂಚಿಕೆ ೨೨

ಡಾ. ಸಯ್ಯದ್ ಮಹಮ್ಮದರ ಬಿಡುಗಡೆ.

ವರ್ಕಿಂಗ್ ಕಮಿಟಿಗೆ ರಾಜಿನಾಮೆ.

—0—

ಪಂಡಿತ ಜವಾಹರಲಾಲ್ ನೆಹರೂರವರಿಗೆ ಒಂದೆ ಕೋಣೆಯಲ್ಲಿ ಇರಿಸಿದ್ದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾದ ಡಾ. ಸಯ್ಯದ ಮಹಮ್ಮದರನ್ನು ಸರಕಾರದವರು ಮೂರು ತಿಂಗಳ ಪ್ರಯತ್ನದ ವಾರೆದಲ್ಲಿ ಬಿಡುಗಡೆ ಮಾಡಿದರು. ಇವರ ಬಿಡುಗಡೆಯೂದ ಸಂತರ ಇವರು ಮಹಾತ್ಮ ಗಾಂಧಿಯನ್ನರೊಡನೆ ಕಾ. 23ರ ವರೆಗೆ ಅರು ಬಾರಿ ಭೇಟಿ ಬೆಗೆದುಕೊಂಡಿದ್ದಾರೆ. ಇವರನ್ನು ಬಿಡುಗಡೆ ಮಾಡಿದ್ದರ ಬಿಚಾರವಾಗಿ ಇವರು ಒಂದು ಹೇಳಿಕೆಯನ್ನು ಕೊಡುತ್ತಾ ಈ ರೀತಿ ಹೇಳಿದ್ದಾರೆ.

'ಮಹಾತ್ಮಾಗಾಂಧಿಯವರಿಗೆ ವೈಸರಾಯರು ಒರೆದ ತಾ. 19-8-44ರ ಪತ್ರ ನೋಡಿದೊನನೆ ವೈಸರಾಯರಾವ ಮೇಲ್ಜಾರಿಗೆ ಕೆಲವು ಸೂಚನೆಗಳನ್ನು ಕೊಡಬೇಕೆಂದು ನನಗನಿಸಿತು. ಇವರ ಧ್ಯೇಯವಾದರೂ ಗಾಂಧೀಜಿಯವರ ಜೀವನವಾದಲ್ಲಿ ಹಿಂದೀ ಸಮಸ್ಯೆಯ ಬಗ್ಗೆ ಒಂದು ಒಪ್ಪಂದವಾಗುವಂತಾಗಲೀ ಎಂಬುದೇ ಆಗಿತ್ತು. ನನಗೆ ಬ್ರಿಟಿಷರ ನ್ಯಾಯಬುದ್ಧಿಯಲ್ಲಿ ಇನ್ನೂ ನಂಬಿಕೆಯಿದೆ ಇಂಗ್ಲೆಂಡಿನಲ್ಲಿಯ ನನ್ನ ವಿದ್ಯಾರ್ಥಿಜೀವನದಿಂದಲೂ ಇದು ಬೆಳೆದು ಬಂದಿದೆ. ನನಗೆ ಅನೇಕ ಬ್ರಿಟಿಷ್ ಸ್ನೇಹಿತರು ಇದ್ದಾರೆ. ಒಮ್ಮೆ ನಾನು ಈಗ ಬ್ರಿಟಿಷ್ ಪ್ರಧಾನರಾಗಿರುವ ಚರ್ಚಿಲ್ಲರ ಬಗ್ಗೆ ಕಾರ್ಯದರ್ಶಿಯೂ ಗುವ ಅಭಿಲಾಷೆಯಲ್ಲಿದ್ದೆ. ಈ ರೀತಿಯ ಒಂದು ಸಂಬಂಧ ಇದ್ದ ಕಾರಣ ಹಿಂಬೂದೇಶದ ವೈಸರಾಯರ ಮನಸ್ಸಿನ ಮೇಲೆ ನನ್ನ ಪತ್ರದಿಂದ ಒಳ್ಳೆಯ ಪರಿಣಾಮವಾದೀತೆಂದು ನಾನು ಬರೆದಿದ್ದೆನು. ಈ ಪತ್ರವನ್ನು ನನ್ನ ಬಿಡುಗಡೆಯ ದೃಷ್ಟಿಯಿಂದ ನಾನು ಎಂದೂ ಬರೆದವನಲ್ಲ. ಈ ಕಳೆದ 30 ವರ್ಷಗಳಿಂದ ನಾನು ಹಿಂದೂದೇಶದ ಸೇವೆಯನ್ನು ನನ್ನ ಶೈಲಾದ ಮಟ್ಟಿಗೆ ಮಾಡಿರುವೆನು. ನನ್ನ ಪುರ್ಣ ಧ್ಯೇಯವೆಂದರೆ ಒಳ್ಳೆ ಮುಸಲ್ಮಾನನಾಗಿ, ಒಳ್ಳೇ ಭಾರತೀಯನಾಗಿರುವದು. ಇದರಲ್ಲಿ ಯಾವುದೂ ಒಂದಕ್ಕೊಂದು ವಿರುದ್ಧವಲ್ಲ. ನನ್ನ ಜೀವನದ ಈ ಸಂಧ್ಯಾಕಾಲದಲ್ಲಿ ನನ್ನ ಮೇರಿ ಸೇವೆಗೆ ಕೆಲವಾಜಲಿಕೊಡುವವನು ನಾನಲ್ಲ. ನನ್ನ ಆರೋಗ್ಯವು ಕಟ್ಟುನೋಟ ದಿಟ್ಟುಕಾಲ ಬದುಕುವ ಬಲವೂ ಇಲ್ಲ. ಹೀಗಿರುವಾಗ ನನ್ನ ದೇಶದ, ಯಾವ ಸಂಸ್ಥೆಗೆ ಸೇರಿದ್ದೇನೆಂದು ಹೆಮ್ಮೆ ಗೊಂಡಿರುವನೋ ಆ ಸಂಸ್ಥೆಯ ಗೌರವಕ್ಕೆ ಚ್ಯುತಿಬರುವ ಕಾರ್ಯವನ್ನು ಎಂದೂ ಮಾಡಲಾರೆ ನನ್ನ ದೇಶೀಯರು ನನ್ನ ಅಭಿಪ್ರಾಯವನ್ನು ನೋಡಿ ನಿರ್ಣಯಿಸಬಹುದು. ನನ್ನ ಪತ್ರವು ನಾನು ಯೋಚಿಸಿದ ಪರಿಣಾಮವನ್ನು ವೈಸರಾಯರ ಮೇಲೆ ಸದ್ಯಕ್ಕೆ ಮಾಡಲಿಲ್ಲ ಆದರೆ ಮುಂದಾದರೂ ಅದು ಮಾಡೀತೆಂದು ನಂಬುತ್ತೇನೆ. ನಾನು ಪತ್ರ ಬರೆಯುವಾಗ ನನ್ನ ಮಿತ್ರರಿಗೆ ಅಧಿಕವಿಕೆ ಕೊಡಬೆ ಬರೆದದ್ದು ನನ್ನ ತಪ್ಪು. ಆದರೆ ಮಿತ್ರರು ಈ ಪತ್ರ ನೋಡಿದ್ದರಿಂದ ಅಬನ್ನು ಕಳುಹಿಸಲು ಸಾಧ್ಯವಿದ್ದಿತೋ ಏನೋ. ಹೇಗೂ ಒಂದು ರೀತಿಯ ತೀರ್ಮಾನವಾಗಬೇಕೆಂಬ ನಾನು ಈ ಪತ್ರ ಬರೆದೆನು. ಈ ಪತ್ರದಲ್ಲಿ ಕಾಂಗ್ರೆಸಿನ ಆಗಸ್ಟ್ ನಿರ್ಣಯಕ್ಕೂ ನನಗೂ ಇರುವ ಜೀವನವನ್ನು ವಿವರಿಸಿದ್ದೆನು. 1942ನೇ ಆಗಸ್ಟ್ ರಂಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಈ ಕಾರಿಗೆ ವಿರುದ್ಧವಾಗಿ ಕಾರ್ಯವೆಸಲು ಅನುಮಗಿಸಿದ ತಿ ಆಗಸ್ಟ್ 8ನೇ ಮಧ್ಯಾಹ್ನ ನಾನು ವರ್ಕಿಂಗ್ ಸಮಿತಿ ಸದಸ್ಯತನಕ್ಕೆ ರಾಜಿನಾಮೆಯಿತ್ತೆ. ನಾಯಿಂದ ಲಕೂಟಿಂಗು ನಡೆಯಿಂ ಬೆಳಗಾಗುವವರೆಗೆ ಸರ್ವರೆ ರಸ್ತಾರಿ ಮಾಡಿಪೆಂಡಿಂಡ ಈ ವಿಚಾರ ಪ್ರಕಟವಾಗಲು ಅವ್ಕಾಶ ಕೊಡೆಯಲಿಲ್ಲ. ನನ್ನ ದೇಶೀಯರು ಜೈಲ್ಲಕ್ಕೆ ಲನರ್ಘಕಾರಿಯೂ ಯೂಪದೇ ಪರ್ವಾನೆಯನ್ನು ನಾನು ಕೈಕೊಂಡಿಲ್ಲ ಎಂಬುದನ್ನು ತಿಳಿಯಬಹುದೆಂದು ನಂಬುತ್ತೇನೆ ನನ್ನ ದೇಶೀಯರು ನನ್ನ ಈ ವರ್ತನೆಗೆ ಯಾವದೇ ರೀತಿಯ ಶಿಲ್ಪನೆಯನ್ನು ಪಚ್ಚಿದರೂ ದೇವರು ನನ್ನನ್ನು ಎಸ್ಟರ ಪರೆಗೆ ಬದುಕಿಸಿರುವನೋ, ಎಲ್ಲಿಯ ವರೆಗೆ ನನಗೆ ಕೆಲಸ ಮಾಡಲು ಆರೋಗ್ಯವಿರುವದೋ ಆ ವರೆಗೆ ಯಾವ ಸ್ವಾತಂತ್ರ್ಯಕ್ಕಾಗಿ ನನ್ನ ಜೀವನವನ್ನೇ ಧಾರೆಯೆರೆದಿರುವೆನೋ ಅದಕ್ಕಾಗಿ ಮತ್ತು ಇನ್ನ ನಾಡಿನ ಸೇವೆಗಾಗಿ ಚಿಂತನ ಮಾಡಿಯುವೆನು.'

ಪತ್ರದ ಸಾರ.

ನಾನು ಈ ಪತ್ರವನ್ನು ಒರೆಯುವ ಕೈರುವದು ನನ್ನ ಬಿಡುಗಡೆಯ ದೃಷ್ಟಿಯಿಂದಲ್ಲ. ಸರಕಾರವು ತಪ್ಪು ದೃಷ್ಟಿಯಿಂದ ಹಲವರನ್ನು ದಸ್ತಗಿರಿ ಮಾಡಿದೆ. ನಾನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಆಗಸ್ಟ್ ಗೊತ್ತುವಳಿಗೆ ವಿರುದ್ಧವಾಡಿದೆನು. ನಾವು ಯಾವುದೇ ಸದ್ಬುದ್ಧಿಯಿಂದ ಗೊತ್ತುವಳಿಯನ್ನು ಮಾಡಿದರೂ ಸಹ ಬ್ರಿಟಿಷ್ ಸರಕಾರವು ಅದನ್ನು ತಪ್ಪಭಿಪ್ರಾಯದಿಂದ ತಿಳಿದುಕೊಳ್ಳುವದೆಂದೂ ಅವರ ಬಿಕ್ಕಟ್ಟನ್ನು ನಮ್ಮ ಸಂದರ್ಭವಾಗಿ ಉಪಯೋಗಿಸಿಕೊಂಡರೆಂದು ಹೇಳುವದೆಂದೂ ನಾನು ಸೂಚಿಸಿ ಕಾರಿಗೆ ವಿರೋಧಿಸಿದೆ. ಆದರೆ ರಾವು ವಾಸಾಗಿ ಬಹುಬಹುತ ಕಾಂಗ್ರೆಸ್ ಸಮಿತಿಯ ಮುಂದೆ ಬಂತು. ಬಲ್ಲಿ ಅದನ್ನು ನಾನು ವಿರೋಧಿಸುವ ದೃಷ್ಟಿಯಿಂದ ಮೊಟ್ಟಿಂಗಿಗೆ ಮೊದಲೆ ನನ್ನ ವರ್ಕಿಂಗ್ ಕಮಿಟಿ ಸದಸ್ಯತನಕ್ಕೆ ರಾಜಿನಾಮೆಯಿತ್ತೆನು. ಅಖಿಲಭಾರತ ಕಾಂಗ್ರೆಸ್ ಸಮಿತಿಯಲ್ಲೂ ರಂವು ವಾಸಾಯಿತು. ಯಿದ್ದಂತೆ ಈ ಸಂದರ್ಭದಲ್ಲಿ ನಾವು ಶತ್ರುಗಳನ್ನಹಗಿಸಲು ಸಹಾಯಕರಾಗಬಹುದಲು ಈ ರೀತಿಯ ಗೊತ್ತುವಳಿ ಯೋಗ್ಯವಲ್ಲವೆಂಬ ನನ್ನ ಅಭಿಪ್ರಾಯವು ಸರಕಾರಕ್ಕೆ ತಿಳಿದಿದ್ದರೂ ಎಲ್ಲಾ ಕಾಂಗ್ರೆಸ್ ಸದಸ್ಯರೊಡನೆ ನನ್ನನ್ನು ದಸ್ತಗಿರಿಯೂ ತಾ. 9 8 42ರ ಬೆಳಗ್ಗೆ ಆಯಿತು. ಕಾಂಗ್ರೆಸು ಠರಾವನ್ನು ಪಾಸುಮಾಡಿದ್ದರೂ ಅದು ಎಂದೂ ಕಾಯಿದೆಭಂಗ ಚಳವಳಿವನ್ನು ಪ್ರಾರಂಭಿಸಲಿಲ್ಲ. ಅದು ಇನ್ನೂ ಸಂಧಾನ ಪ್ರಯತ್ನದಲ್ಲೇ ಇದ್ದಾಗ ಸರಕಾರವು ಅದರ ಮೇಲೆ ಧಾಳಿ ಮಾಡಿತು. ಆದರೆ ಅನಿರೀಕ್ಷಿತವಾಗಿ ಕೈಯಿತ್ತಿತು.

ಇಂಗ್ಲಿಷ್ ಜನರು ಒಂದು ಒಳ್ಳೆಯ ಕೆಲಸ ಮಾಡಬೇಕಾದರೆ ಅದರಿಂದ ಹಿತವಾಗುವ ಮನುಷ್ಯನಿಗೆ ಬೇರೆ ಹುಟ್ಟುವಂಥ ಪರಿಸ್ಥಿತಿ ಬಂದ ಮೇಲೆ ಮಾಡುವರು. ಆ ಮನುಷ್ಯನು ಜಗುಪ್ಸೆಯಿಂದ ಅದನ್ನು ತಿರಸ್ಕರಿಸಿದರೆ ಮತ್ತೆ ತಮ್ಮ ಉದಾರತೆಯನ್ನು ಹೊಗಳಿ ಆತನನ್ನು ಹಳಿಯುವರು. ಇಂದಿನ ರಾಜಕೀಯ ಚರಿತ್ರೆಯಲ್ಲಿ ಯಾವುದೋ ಅದೃಷ್ಟ ಫಲದಿಂದ ಬ್ರಿಟಿಷರು ಈ ವರೆಗೆ ತಮಗೆ ಕೊಂಡು ಸಾಗಿದ್ದಾರೆ. ಇದರೀಪ್ತ ಕಾವ್ಯ ಯಾವ ಸಂದರ್ಭದಲ್ಲೂ ಜಯಿಸಬಲ್ಲೆವೆಂಬ ಭಾವನೆ ಬ್ರಿಟಿಷರಲ್ಲಿ ಇರಬಹುದು. ಇದಕ್ಕೆ ನಾವು ಅವರನ್ನು ದೂಷಿಸುವುದಿಲ್ಲ. ಕಳೆದ ನಾಲ್ಕು ಶತಮಾನದಿಂದ ಯೂರೋಪಿನ ಶಕ್ತಿಗಳು ಅವರ ಮುಂದೆ ಧೂಳು ತಿಂದಿದ್ದಾರೆ. ಯಾವ ಜನಾಂಗವಾದರೂ ಇದಕ್ಕೆ ಹೆಮ್ಮೆಪಡಬೇಕು. ಆದರೆ ಈ ಆಧ್ಯಪ್ಪ, ಶಕ್ತಿ ಶಾಶ್ವತವಿರಲಾರದು. ಅವರ ಶಕ್ತಿಗಳು ಶಾಶ್ವತ ನಿರ್ಬಲರಾಗಿಯೇ ಉಳಿಯಲಾರದು. ಬ್ರಿಟಿಷರು ಸೈನಿಕ ನೈಪುಣ್ಯತೆಯಲ್ಲಿ ಹೆಸರು ಪಡೆದಿದ್ದಾರೆ ಈಗ ಅವರು ಸೈನಿಕ ನೈಪುಣ್ಯತೆಯಲ್ಲಿಯೂ ಕೀರ್ತಿ ಪಡೆಯಬೇಕು. ಆದ್ದರಿಂದ ಇವರ ಜನಾಂಗಗಳ ಬಗ್ಗೆ ತಮ್ಮ ನೀತಿಯನ್ನು ಬದಲು ಮಾಡಬೇಕು. 1939ರಲ್ಲಿ ಹಿಂದೂ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆಗೆ ಲಾರ್ಡ್ ಲಿನ್‌ಲಿತ್ಗೋ ರವರಿಗೆ ನಾನು ಕೆಲವು ಸೂಚನೆಗಳನ್ನು ಮಾಡಿದ್ದೆ. ಅವರು ಅವುಗಳನ್ನು ಹೊಗಳಿ ಒಪ್ಪಿದರು. ಆದರೆ ಅವನ್ನು ಕಾರ್ಯರೂಪದಲ್ಲಿ ತರಲು ಅವರ ಕೈ ಸ್ವತಂತ್ರವಿರಲಿಲ್ಲ ಈಗ ನಾನು ನಿಮಗೆ ಅದೇ ಸೂಚನೆಗಳನ್ನು ಮಾಡುತ್ತೇನೆ ನಿಮಗೆ ನಾನು ಮೊಸಬನು. ಆದರೂ ಗಾಂಧೀಜಿಯವರ ಜೀವಮಾನದಲ್ಲಿಯೇ ಭಾರತ ಸಮಸ್ಯೆಯ ಬಗೆಹರಿಯುವ ಪ್ರಯತ್ನ ಮಾಡಬೇಕು. ಇಂದು ಒಬ್ಬ ಯೂರೋಪಿಯನನಿಗೆ ಮಹಾತ್ಮ ಗಾಂಧಿಯವರ ಅಭಿಪ್ರಾಯಗಳು ಒಡೆಯಲಾರದ ಒಗಟಾಗಿಗಿ ಕಂಡರೆ ನಿನಿಸಿಯೂವು. ಆದರೆ ಈ ಮಹಾವ್ಯಕ್ತಿಯ ಜೀವಮಾನದಲ್ಲಿ ಒಂದು ಪ್ರಯತ್ನಕ್ಕೆ ಭಾರತದ ಜನರಲ್ಲಿ ಅವಿಶ್ವಾಸದ್ರೋಹಗಳು ಬ್ರಿಟಿಷರ ಬಗ್ಗೆ ಹೆಚ್ಚು ನಂಬಿಕೆಯಿರುವ ಗಾಂಧೀಜಿಯವರ ನಂತರ ಭಾರತವನ್ನು ಹತೋಟಿಯಲ್ಲಿಡುವದು ಭರತದ ಸ್ನೇಹವನ್ನು ಸಂಪಾದಿಸಿಕೊಳ್ಳುವದು ಪ್ರಯಾಸವಾಗಬಹುದು."

ಕೊ ಡ ಗು

ತಾ. ೩೭-೧೦-೧೯೪೪ನೇ ಶುಕ್ರವಾರ

ಪುನಹ ಉಪವಾಸವೇ ?

ಮಹಾತ್ಮ ಗಾಂಧಿಯವರು ತಮ್ಮ ಹೇಳಿಕೆಯೊಂದರಲ್ಲಿ—'ಮುಂದೆ ಒಂದು ಉಪವಾಸವು ನನಗೆ ಕಟ್ಟಿದಲ್ಲಿದೆ' ಯೆಂದು ಹೇಳಿರುವರು. ಮಹಾತ್ಮ ಗಾಂಧಿಯವರು ಉಪವಾಸ ಕೈಕೊಳ್ಳುವ ಮಾತು ಬಂದಾಗ ಇಡೀ ಭಾರತೀಯರ ಮನಸ್ಸು ಪರಿತಾಪದಿಂದ ಅಲ್ಲೋಲಕಲ್ಲೋಲವಾಗುತ್ತದೆ. ವಿದೇಶೀಯರೂ ಸಹ ಈ ವಿಚಾರದಲ್ಲಿ ಉದ್ವಿಗ್ನರಾಗುತ್ತಾರೆ. ಬ್ರಿಟಿಷ್ ಸರಕಾರವೂ ಇದರಿಂದ ಗಾಬರಿಗೊಳ್ಳುತ್ತದೆ. ಉಪವಾಸವು ಅತೀ ತೀಕ್ಷ್ಣವಾದ ಅಸ್ತ್ರ. ಅದರಲ್ಲೂ ಮಹಾತ್ಮ ಗಾಂಧಿಯವರಂಥಾ ಅದಶ್ಚಜೀವಿಗಳ ಕೈಯಲ್ಲಿ ಅದು ಜಗತ್ತನ್ನೇ ನಡುಗಿಸಬಲ್ಲುದು. ಮಹಾತ್ಮರು ಈ ಶಸ್ತ್ರವನ್ನು ತಮ್ಮ ಈ ವರೆಗಿನ ಜೀವನದಲ್ಲಿ ಹಲವು ಬಾರಿ ಉಪಯೋಗಿಸಿದ್ದಾರೆ. ಪ್ರತಿ ಬಾರಿಯೂ ಇದರಿಂದ ಅನರ್ಘನೀಯವಾದ ಜಯವನ್ನು ಪಡೆದಿದ್ದಾರೆ. ಮಹಾತ್ಮರು ಈ ಅಸ್ತ್ರವನ್ನು ಉಪಯೋಗಿಸುವದು ಜಯಪಡೆಯುವ ಕಾಂಕ್ಷೆಯಿಂದಲ್ಲ. ಯಾವದೇ ಧ್ಯೇಯಕ್ಕಾಗಿ ಕೈಕೊಳ್ಳುವ ಉಪವಾಸವು ಉಚ್ಚೆ ತಂಗತೆಯಾದಲ್ಲ. ಮಹಾತ್ಮರ ಉಪವಾಸಗಳು ಮತ್ತೊಬ್ಬರನ್ನು ಬಲಾತ್ಕರಿಸಲಿಕ್ಕಲ್ಲ. ತಮ್ಮ ಆತ್ಮಪರಿಶುದ್ಧತೆಗಾಗಿ, ನಿಶ್ಚಲ ತಪಸ್ಸಿಗಾಗಿ.

ಮಹಾತ್ಮರ ಜೀವ ಅಹಿಂಸೆಯ ನೆರಳಲ್ಲಿ ಬೆಳೆದುದು. ಸರ್ವರೂ ಸಮಾನರು; ಸರ್ವರೂ ಜಗತ್ತಿನ ಸುಖದುಃಖಗಳಿಗೆ ಸಮಭಾಗಿಗಳು ಎಂಬ ಸಮನ್ವಯದೃಷ್ಟಿಯುಳ್ಳದ್ದು. ಆದರೆ ಜಗತ್ತಿನ ರಣಕ್ಷೇತ್ರದಲ್ಲಿ ನಡೆಯುತ್ತಿರುವ ಹಿಂಸಾತ್ಮಕತ್ಯಗಳು, ಸಾಮಾಜಿಕ ಕ್ಷೇತ್ರದಲ್ಲಿಯ ಪಾಪಾಚಿರಣೆಗಳು, ಕೌಟುಂಬಿಕ ಜೀವನದಲ್ಲಿಯ ಹೆಗೆತನ ಮೋಸಗಳು ಧಾರ್ಮಿಕ ಜೀವಿ ಮಹಾತ್ಮರ ಮನಸ್ಸನ್ನು ಕಪಡಿರುವದರಲ್ಲಿ ಸಂಶಯವಿಲ್ಲ. ಇದರಿಂದ ಶುದ್ಧಿ ಪಡೆಯಲಿಕ್ಕಾಗಿ, ಹಿಂಸಾಕೃತ್ಯಗಳ ವಿರುದ್ಧ ಅವರ ಹೃದಯದಲ್ಲಿ ದಂಗೆ ಏಳುತ್ತಿರುವ ಅಹಿಂಸದ ಸಾಧನೆಗಾಗಿ ಉಪವಾಸ ಕೈಕೊಳ್ಳಲು ಅವರ ಮನಸ್ಸು ಹಾತೊರೆಯುತ್ತಿದೆ. ಸಾರ್ವತ್ರಿಕ ಹಬ್ಬುರುವ ಹಿಂಸಾಂಧಕಾರದ ಮಧ್ಯೆ ಅಹಿಂಸೆಯ ದಿವ್ಯ ಪ್ರಭೆಯನ್ನು ಬೀರುವ ವೊರ್ಗ ಕೈಕೊಳ್ಳಲಿದ್ದಾರೆಂಬುದು ಅವರ ಹೇಳಿಕೆಯಿಂದ ಗೋಚರವಾಗುವದು. ಇಂದು ಸಾರ್ವತ್ರಿಕ ಹಬ್ಬುರುವ ಹಿಂಸೆಯು ತೊಲಗಿ ಅಹಿಂಸೆಯ ಅಮರ ಪ್ರಭೆಯ ದರ್ಶನವಾಗಲಿ ಎಂಬ ಕಾಂಕ್ಷೆ ಪ್ರತಿಯೊಬ್ಬನಿಗೂ ಇದೆ. ಆದರೆ ಇದರ ಸಾಧನೆಗಾಗಿ ಮಹಾತ್ಮರು ಈ ಕಡೇ ಅಸ್ತ್ರವಾದ ಉಪವಾಸವನ್ನು ಪ್ರಯೋಗಿಸದಿರಲಿ. ಎಪ್ಪತ್ತೈದು ವರ್ಷಗಳನ್ನು ಜಾಟದ ಮಹಾತ್ಮರ ಪಾರ್ಥಿವ ಶರೀರವು ಈ ಅಗ್ನಿಪರೀಕ್ಷೆಯನ್ನು ಸಹಿಸಲಾರದು. ಜಗತ್ತಿನ ವಿಭೂತಿ ಪುರುಷರಾದ ಮಹಾತ್ಮರ ಜೀವನ ಧ್ಯೇಯವಾದ ಅಹಿಂಸದ ಪ್ರಭೆಯು ಪ್ರತಿಯೊಬ್ಬರ ಹೃದಯದಲ್ಲಿ ಪ್ರತಿಬಿಂಬಿಸಿ ಹಿಂಸೆಯು ನಾಮಾವಶೇಷವಾಗಲಿ. ಮಹಾತ್ಮರು ಉಪವಾಸ ಕೈಕೊಳ್ಳದಂತಾಗಲಿ.

ಒಳದೇಶ.

ಕೊಡಗು ಮಂಗಳೂರು ಪ್ರಾಂತ ಸಮಿತಿಯ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ತಾ. 29-10-44 ರಿಂದ 4-11-44ರ ವರೆಗೆ ಮಡಿಕೇರಿ ವೇದಾಂತ ಮಂದಿರದಲ್ಲಿ ನಾಡಹಬ್ಬವು ಜರಗುವದು. ಅನೇಕ ಆಹ್ವಾನಿತರ ಭಾಷಣಗಳು ಏರ್ಪಟ್ಟಿವೆ. ಪ್ರಥಮ ದಿನ ಶ್ರೀ ಬಿ. ಎಸ್. ಕುಶಾಲಪ್ಪನವರು, ಎರಡನೆಯ ದಿನ ರಾ. ಬ. ಕೆ. ಟಿ. ಉತ್ತಪ್ಪನವರು, ಮೂರನೆಯ ದಿನ ಶ್ರೀ ಕೆ. ಪಿ ಕುಟ್ಟಪ್ಪನವರು, ನಾಲ್ಕನೆ ದಿನ ರಾ. ಸಾ. ಎನ್. ಸುಬ್ಬಯ್ಯನವರು, ಐದನೆ ದಿನ ನಿತ್ಯನುವೆ ಮುದ್ದಪ್ಪನವರು, ಆರನೆ ದಿನ ಶ್ರೀ ಕೆ. ಮಲ್ಲಪ್ಪನವರು, ಏಳನೆ ದಿನ ಶ್ರೀ ಐ. ಸಿ. ಸುಬ್ಬಯ್ಯನವರು ಅಧ್ಯಕ್ಷತೆವಹಿಸುವರು. ಸರ್ವರಿಗೂ ಆಮಂತ್ರಣವಿದೆ.

ಆಕ್ಟೋಬರ್ ತಾರೀಕು 21 ರಿಂದ ಸಕ್ಕರೆಯನ್ನು 8 ಮಣದ ಯೂ 224 ಪೌಂಡಿನ ಚೀಲಕ್ಕೆ ರೂ. 51-2-6 ರಂತೆಯೂ, ವೀಸಕ್ಕೆ 0-13-0 ಆಣೆಯಂತೆಯೂ, ಪೌಂಡಿಗೆ 0-3-9 ಯಂತೆಯೂ ಮಾರಬೇಕೆಂದು ನಿಯಂತ್ರಿಸಲಾಗಿದೆ. ಒಂದು ಮಣಕ್ಕೆ ಹೆಚ್ಚಿನ ಸಕ್ಕರೆ ಕೊಂಡುಕೊಳ್ಳುವವರಿಗೆ ರಶೀದರ ಕೊಡಬೇಕು.

ಕೋಳಿಕಾಳಗದಲ್ಲಿ ಕೋಳಿಯ ಕಾಲಿಗೆ ಕಟ್ಟುವ ಕತ್ತಿ ತಗಲಿ ಗಾಯವಾಗಿ ಕೆದಕಲ್ಲಿನ ಬಂಟ್ರಿ ಥೂಮು ಎಂಬವನು ಮಡಿಕೇರಿ ಆಸ್ಪತ್ರೆಯಲ್ಲಿ ಮೃತನಾದನು.

ಇಂಡಿಯಾ ಸರಕಾರದವರು ಕಪ್ಪೂರ ಬಿಲ್ಲೆಗಳ ಸರಬರಾಯಿ ಬೆಲೆಯನ್ನು ನಿರುಕು ಮಾಡಿರುವದನ್ನು ಕೊಡಗು ಸರಕಾರದವರು ಜಾರಿಗೆ ತಂದಿರುವರು.

ಸ್ಟೀಲ್ ರೀಜರ್ ಟ್ರೇಡುಗಳ ಪರಸ್ಪರ ಬೆಲೆಯನ್ನು ಇಂಡಿಯಾ ಸರಕಾರದವರು ನಿರುಕು ಮಾಡಿರುವದನ್ನು ಕೊಡಗು ಸರಕಾರವು ಜಾರಿಗೆ ತಂದಿರುವರು.

ಪ್ರೈಸ್ ಕಂಟ್ರೋಲ್ ಆರ್ಡರಿನಲ್ಲಿ ಇಂಡಿಯಾ ಸರಕಾರದವರು ಕೆಲವು ತಿದ್ದುಪಡಿ ಮಾಡಿರುವದನ್ನು ಕೊಡಗು ಸರಕಾರದವರು ಪ್ರಕಟಿಸಿರುವರು.

ದುರ್ಭಾಗಿ ಚೀನ.

ದುರ್ಭಾಗಿ ಚೀನ! ಅದರ ಪ್ರಾಮುಖ್ಯ ಕೈಗಾರಿಕಾ ಕೇಂದ್ರಗಳಲ್ಲಿ ಹಲವು ಜಪಾನಿನ ವಶದಲ್ಲಿವೆ. ಚೀನದ ಮುಖ್ಯ ರೈಲ್ವೆಗಳನ್ನು ಜಪಾನರು ವಶಪಡಿಸಿಕೊಂಡಿರುವರು ಅಥವಾ ಕಡಿದಿರುವರು. ಉಳಿದ ರಸ್ತೆಗಳು ಅವಾಯಕರವೆನಿಸುವಷ್ಟು ಅಸಮಂಜಸ ಸ್ಥಿತಿಯಲ್ಲಿವೆ.

ಚೀನದಲ್ಲಿಂದು ಸುಮಾರು 20 ಸಾವಿರ ಮೋಟಾರು ಬಂಡಿಗಳು ದುರುಸ್ತಿ ಸ್ಥಿತಿಯಲ್ಲಿವೆ. ಇವುಗಳಲ್ಲಿ ಹಲವು ಬಹು ಕಾಲದ ಉಪಯೋಗದಿಂದ ಸವೆದು ಜರ್ಝರಿತವಾಗಿವೆ. ಬರ್ಮಾ ರಸ್ತೆಯು ಮುಚ್ಚಲ್ಪಟ್ಟಿಂದಿನಿಂದ, ಚೀನವು ಬರಿದಾಗುತ್ತಿರುವ ತನ್ನ ಮೋಟಾರು ಬಂಡಿಗಳ ಸ್ಥಾನಕ್ಕೆ ನವೀಕರಿಸಿಕೊಳ್ಳಲಾಗದೆ ಪೇಚಾಡುತ್ತಿದೆ.

ಇಂದು ಆನಾಕ್ರಮಿತ ಚೀನದಲ್ಲಿ ಒಟ್ಟಿಗೆ ಉಪಯೋಗಸಲ್ಲಿರುವ ಮೋಟಾರು ಬಂಡಿಗಳು 6 ಸಾವಿರಕ್ಕಿಂತ ಹೆಚ್ಚಿಲ್ಲ! ಈ ಬಂಡಿಗಳೇ ಯುದ್ಧದ ಆವಶ್ಯಕ ಉಪಕರಣಗಳನ್ನು, ಜನರಿಗೆ ಯೋಗತ್ತೂ ಸರಬರಾಯಿಯನ್ನು—(200 ಮಿಲಿಯ ಜನರಿಗೆ!) ಪೂಡುತ್ತಿರಬೇಕು! ಎನಿದು ದುರವಸ್ಥೆ! ಆ ಮೇರಿಕಾದ ಚಿಕಾಗೋ ನಗರವೊಂದರಲ್ಲೇ—ಕೇವಲ 4 ಮಿಲಿಯ ಜನರ ಆವಶ್ಯಕತೆಗಳನ್ನು ಪೂರೈಸಲು 63 ಸಾವಿರ ಮೋಟಾರು ಬಂಡಿಗಳಿವೆಯಂತೆ! ಅದಕ್ಕಿಂತ ಏನನ್ನು ಹೇಳಲು ಹೆಚ್ಚು ಜನರಿಗೆ ಮತ್ತು ಯುದ್ಧದ ಸರಬರಾಯಿಗೆ ಹತ್ತನೇ ಒಂದಂಶ ಬಂಡಿಗಳಾದರೂ ಚೀನದಲ್ಲಿ ಇಲ್ಲ! ಈ ಮಹಾ ಭಯಂಕರ ದುಃಸ್ಥಿತಿಯಲ್ಲಿ, ಪ್ರಬಲ ಶತ್ರುವನ್ನು ಚೀನವು ಕಾದಾಡುತ್ತಿದೆ

ಬಂಡಿಗಳಿಲ್ಲವಿದ್ದಾಗ ಸಿಮೆಗಳೂ, ಮನುಷ್ಯರೂ ಆ ಕೆಲಸ ಮಾಡಬೇಕಾಗುವುದು. ಚೀನಾದಲ್ಲಿಂದು ಕೆಲವು ಪಶುಗಳೂ, ಸಾವಿರಾರು ಕೂಲಿಯಾಳುಗಳೂ ಸರಕು ರವಾನೆಯ ಕೆಲಸಕ್ಕೆ ನಿಯೋಜಿತರಾಗಿರುವರು.

ರವಾನೆಯ ಕೊಂಡರೆಯಿಂದ ಎಲ್ಲಾ ಕಡೆಗಳಲ್ಲಿ ಸರಕುಗಳ ಧಾರಣೆಗಳು ಏರಿವೆ; ಆಹಾರ ಮೊದಲಾದ ವಸ್ತುಗಳ ಅಭಾವವೂ ಹೆಚ್ಚಿದೆ.

ಚೀನಿಯರ ಜೀವನ ನೆಚ್ಚಿಗೆಗಳ ಪರಗತಿಯು ಯೂವಾಗಲೂ ನಿರಾಡಂಬರವಾದುದು. ಅತ್ಯಲ್ಪ ಹಣದಲ್ಲಿ, ಅಲ್ಪಸ್ವಲ್ಪ ಉಡುಪಿನಲ್ಲಿ, ಅತ್ಯಲ್ಪವಾದ ಅಕ್ಕಿ ಮೊದಲಾದುವುಗಳಲ್ಲಿ ಅವರು ಜೀವನ ಮಾಡಬಲ್ಲರು. ಅಶನ-ವಸನಕ್ಕೆ ಕೊಂಚ ಅಭಾವವಾದರೆ ಸಹಿಸಬಲ್ಲವರು. ಆದರೆ ಇಂದಿನ ಸ್ಥಿತಿಯು 'ಅಲ್ಪ ಅಭಾವ'ವಲ್ಲ; ಪೂರ್ಣ ಅಭಾವ; ಆ ಅಭಾವದ ಕರಾಳ ರೂಪ. ಅಕ್ಕಿ ಬಟ್ಟೆಲು ಹೋಯಿತು; ಉಪ್ಪಲು ಹರಕು ಚಿಂದಿ!

ಚೀನಿಯರ ಕಾದಾಟದ ಶಕ್ತಿಯು, ಉಪಕರಣಗಳ ಕೊರತೆಯಿಂದ ಪರಿಮಿತವಾಗಿದೆ. ಜಪಾನರನ್ನು ಕಾದಾಡುವ ವೀರಾವೇಶವಿರಲ್ಲಿದೆ; ಪೂರ್ವಭೂಮಿಯನ್ನು ರಕ್ಷಿಸುವ ದೇಶಪ್ರೇಮವಿದೆ. ಇದ್ದುದರಲ್ಲಿ ಸಹಿಸಿ, ದೊರೆತುದರಿಂದ ಸಾಧ್ಯವಿದ್ದಷ್ಟು ಶತ್ರುವನ್ನು ಕಾದಾಡುತ್ತಿದ್ದಾರೆ.

ಬರ್ಮಾ ರಸ್ತೆ ಮುಚ್ಚಲ್ಪಟ್ಟು ನಾಲ್ಕು ವರ್ಷಗಳಾದವು. ಜಪಾನು, ಚೀನಕ್ಕೆ ಸರಬರಾಯಿ ತಲಪಬಹುದ್ದಾದ ಎಲ್ಲ ರಸ್ತೆಗಳನ್ನು ಮುಚ್ಚಿಬಿಟ್ಟಿದೆ. ಹೀಗೆ ರಸ್ತೆಗಳನ್ನು ಮುಚ್ಚುವುದೆಂದರೇನೆಂಬುವುದನ್ನು ವಿವರಿಸಬೇಕಿಲ್ಲ. ಚೀನಕ್ಕೆ ಅದು ಭಯಂಕರವಾದ ಬರಿದಾನ ಮತ್ತು ಕಡುದಾರಿದ್ರ್ಯ.

ಚೀನದ ಪರಿಸ್ಥಿತಿಯಿಂದು ಶೈಚನೀಯವೆಸಿಸಿದೆ; ಆದರೂ ಪೂರ್ಣ ನಿರಾಕೆಯಿಲ್ಲ. ಚೀನದ ಬದುಕು ಇಂದು ಅಮೇರಿಕಾದ ಬದುಕೂ ಹೌದು. ಜಪಾನಿನೊಡನೆ ಯುದ್ಧವಷ್ಟು ಒಂಬೊಂದು ದಿನ ಬೆಳೆಸುವುದು ಇಷ್ಟು ಹೆಚ್ಚು ಅಮೇರಿಕಾ ನೆರವು ಸುರಿಸಿದಂತೆ! ಹಾಗೆಯೇ ಬೌನಾಂಶವನ್ನು ದಣಿಸುವ ಪ್ರಶ್ನೆಯೂ ಹೌದಾ ಚೀನದಲ್ಲಿನ ಇಂದಿನ ಯುದ್ಧದ ಉದ್ದೇಶ ಜಪಾನ ಪರಾಜಯ ಮಾತ್ರವಲ್ಲ; ಮುಂದಿನ ಜಗದ್ಯೋತಿಯೂ ಹೌದು. ಚೀನಕ್ಕೆ ಹೇಗೂ ಸರಕುಗಳ ಸರಬರಾಯಿಯಾಗಬೇಕು; ಚೀನದ ಕೈಗಾರಿಕೆಗಳು ವೃದ್ಧಿ ಹೊಂದಬೇಕು. ಚೀನವು ಐಶ್ಯವಾಗಿ, ಸ್ವಜಾತಶಕ್ತಿಯ ರಾಜ್ಯವಾಗಿ ಹೊಳೆಯಬೇಕು. 'ಪ್ರಜಾಮತ'

'ಗೌರವಕ್ಕೆ ಯೋಗ್ಯ ಶರತ್ತುಗಳಲ್ಲ.'

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾದ ಪಂಡಿತ ಜವಾಹರಲಾಲ್‌ನೆಹರೂ. ಜೆ. ಬಿ. ಕೃಪಲಾನಿ, ಡಾ. ಪಟ್ಟಾಭಿ ಸೀತಾರಾಮಯ್ಯ ಇವರುಗಳು ತಮ್ಮನ್ನು ತಮ್ಮ ಬಂಧುಬಳಗದವರು ಭೇಟಿಮಾಡಬಹುದೆಂದು ಸರಕಾರವು ಕೊಟ್ಟ ಅನುಕೂಲತೆಯು ಕೈಬಿಗಳಾಗಿರುವವರ ವಿಷ್ಟು ಭೇಟಿಗೆ ಬರುವವರು ಗೌರವಕ್ಕೆ ಯೋಗ್ಯವಾದ ಶರತ್ತುಗಳಿಂದ ಕೂಡಿಲ್ಲವೆಂದು ಭೇಟಿಯು ಅವಕಾಶವನ್ನು ತಿರಸ್ಕರಿಸಿರುವರು.

ಮನೆ ಮೂರಾಟಕ್ಕಿದೆ.

ಮಡಿಕೇರಿ ಹೈಸ್ಕೂಲು ರಸ್ತೆ ಕ್ರಿಕೆಟ್ ಮೈದಾನಕ್ಕೆ ಮುಟ್ಟ ಮಂಜೂರು ಹೆಂಡು ಹಾಕಿದ ಮನೆ, ಪ್ರತ್ಯೇಕ ಅಡಿಗೆ ಮನೆ, ಹೊರಮನೆ, ಮೋಟಾರ್ ಶೆಡ್, ಕಲ್ಲು ಕಟ್ಟಿದ ಬಾವಿ, ಸುಮಾರು 1¼ ಎಕ್ರೆ ಬಾಣೆ ಹಡ್ಲು, 40 ಬಟ್ಟು ಹಡ್ಲು ಭೂಮಿ ಇವು ಮೂರಾಟಕ್ಕಿವೆ. ದನ ಕರಗಳನ್ನು ಸಾಕಲಿಕ್ಕೆ ಬಹು ಅನುಕೂಲವಾಗಿದೆ. ಆರೋಗ್ಯಕರ ಆವರಣದಲ್ಲಿವೆ. ಹೆಚ್ಚಿನ ವಿವರಕ್ಕೆ ಈ ಪತ್ರಿಕೆಗೆ ಬರೆಯಿರಿ.

'X'

2-1. C/o. ಸಂಪಾದಕರು
'ಕೊಡಗು' ಮಡಿಕೇರಿ

ರಣಭೇರಿ.

ಜರ್ಮನಿಯ ಪಶ್ಚಿಮ ಗಡಿಯ ಯುದ್ಧವು ಭೀಕರವಾಗಿ ನಡೆಯುತ್ತಿದೆ. ಕಳೆದ ವಾರ ಏಚೆನ್ ನಗರದ ಸುತ್ತು ಕದನ ನಡೆಯುತ್ತಿತ್ತು. ಜರ್ಮನ್ನರು ಬಹು ವೀರಾವೇಶದಿಂದ ಕಾದಿದರು. ಎಂದು ಕಡೆಯವರಿಗೂ ಅಗಣಿತ ನಷ್ಟವಾಗಿದೆ. ಇತ್ತಲಾಗಿ ಈ ನಗರವು ಆಸೋಲಿಕನರ ವಶವಾದ ವಾರ್ತೆ ಬಂದಿದೆ. ಮಿತ್ರರು ಫೈರ್ಯದಿಂದ ಮುಂದೆ ಸಾಗಲು ಯತ್ನಿಸುತ್ತಿರುವಂತೆಯೇ ಜರ್ಮನರು ಫೈರ್ಯಪೂರ್ವಕವಾದ ಪ್ರತಿಭಟನೆಯನ್ನೊಡ್ಡಿದ್ದಾರೆ. ಮಿತ್ರಸೇನೆಗಳು ಏಂಟ್ ವರ್ಪ್‌ಕಡೆ ಸಾಗುತ್ತಿವೆ. ಈ ಮಧ್ಯೆ ಯುದ್ಧಾನಂತರ ಜರ್ಮನಿಯನ್ನು ಯಾವ ರೀತಿ ಕಾಣಬೇಕೆಂಬ ಬಗ್ಗೆ ಸೂಚನೆಗಳು ಹೊರಡುತ್ತಿವೆ. ಜರ್ಮನಿಯನ್ನು ಕೈಗಾರಿಕೆಯಲ್ಲಿ ಬಹು ಪ್ರಬಲವಾಗಿ ಮಾಡಿದ ಪ್ರಯತ್ನ ಮಾಡಿದ ಸಮಯದಲ್ಲಿಯೇ ಅತಿಸು ಮೃತನಾಗಿರಬೇಕೆಂದು ಕೆಲವರು ಊಹಿಸುತ್ತಿದ್ದಾರೆ. ಆದರೆ ಅಕ್ಟೋಬರ್ ತಾ. 18ರಲ್ಲಿ ಒಂಬತ್ತು ಜಾಹೀರು ಹೊರಡಿಸಿ ಹಿಟ್ಲರನು ಹೀಗೆಂದಿಬ್ಬಾನೆ. 'ಯುದ್ಧ ಪ್ರಾರಂಭಿಸಿರುವವರು ನಾವಲ್ಲ. ಶತ್ರುವು ಜರ್ಮನಿಯನ್ನು ನಾಶಮಾಡಲು ಮುಂದಾಗಿಯುತ್ತಿದ್ದಾನೆ. ಆದರೆ ಜರ್ಮನರು ಧೃತಿಗೆಡುವವರಲ್ಲ. ಶತ್ರುಗಳನ್ನು ಜರ್ಮನಿಯಿಂದ ಅಲ್ಲಗಳೆಯಲು ನಿಂದಿಸಿನಿಂದ ಓಡಿಸುವೆವೆ. ಆದ್ದರಿಂದ 16 ರಿಂದ ಹಿಡಿದು 60 ವಯಸ್ಸಿನ ವರೆಗಿನ ಎಲ್ಲರೂ ಜರ್ಮನಿಯ ರಕ್ಷಣೆಗಾಗಿ ಸಿದ್ಧರಾಗಬೇಕು' ಎಂದಿದ್ದಾನೆ. ಇದೆ ವರೆಗೂ ತಮ್ಮ ಸರ್ವಸ್ವವನ್ನು ತ್ಯಾಗಮಾಡಿ ಯುದ್ಧ ಮಾಡುವ ಏರ್ಪಾಡನ್ನು ಜರ್ಮನರು ಮಾಡುತ್ತಿದ್ದಾರೆ.

ಇತ್ತ ಮಿತ್ರರು ಜರ್ಮನರ ನೆಲೆಯ ಧಾಳಿ ಪ್ರಾರಂಭಿಸಿದಂತೆ ಕಂಡುಬರುತ್ತಿದೆ. ಫಿಲಿಫೈನ್ ದ್ವೀಪಗಳ ಮೇಲೆ ಬಂದು ಮಿತ್ರರು ಇಳಿದು ಹೋರಾಡುತ್ತಿದ್ದಾರೆ. ಜಪಾನರು ಬಹು ಪ್ರಬಲವಾದ ಪ್ರತಿಭಟನೆಯನ್ನು ಮಾಡುತ್ತಿರುವರಂತೆ. ಜಪಾನು ಯುದ್ಧಕ್ಕೆಳೆಯುವಾಗ ಪರ್ಲ್ ಬಂದರದ ಮೇಲೆ ಆಸೋಲ್ಪಿ ಧಾಳಿಮಾಡಿ ಅಮೇರಿಕನರಿಗೆ ಮಾಡಿದ ನಷ್ಟಕ್ಕಿಂತಲೂ ಈಗ ಹೆಚ್ಚಿನ ನಷ್ಟವನ್ನು ಮಿತ್ರದಳಗಳಿಗೆ ಮಾಡಿರುವುದಾಗಿ ಜಪಾನರ ವಾರ್ತೆಯಿಡಿಯಂತೆ. ಇದು ಎಷ್ಟು ನಿಜವೋ ತಿಳಿಯದು. ಏನು ನಷ್ಟವಾದರೂ ಮಿತ್ರರು ಫಿಲಿಫೈನಿನಲ್ಲಿ ಇಳಿದಿದ್ದಾರೆ. ಈಗ ಬರುತ್ತಿರುವ ವಾರ್ತೆಗಳಂತೆ ಅವರು ಮುಂದರಿಯುತ್ತಲೂ ಇರುವರು. ಫಿಲಿಫೈನ್ ದ್ವೀಪ ಸಮೂಹವೆಂದರೆ ಒಂದೆರಡು ದ್ವೀಪಗಳಲ್ಲ. ಇಲ್ಲಿ 7000 ದ್ವೀಪಗಳಿವೆ. ಇವುಗಳಲ್ಲಿ ಮಿತ್ರರು ಮೂರು ದ್ವೀಪಗಳನ್ನು ಈಗ ವಶಪಡಿಸಿಕೊಂಡಿರುವುದಾಗಿ ವಾರ್ತೆಯಿದೆ. ಮಿತ್ರದಳಗಳು ಕ್ರಮಕ್ರಮವಾಗಿ ಜಪಾನಿನ ಹತ್ತಿರ ಬರುತ್ತಿವೆ.

ಈ ಮಧ್ಯೆ ಜಪಾನರು ತೀಕ್ಷ್ಣವಾದ ಹೋರಾಟದ ಮೇಲೆ ದಂಡೆತ್ತಿ ಪುನಹ ಬರುವರೆಂಬ ಸುದ್ದಿಯಿದೆ. ಬರ್ಮಾಗಡಿಯಲ್ಲಿ ಮಿತ್ರರು ಜಪಾನರನ್ನು ಹಿಮ್ಮೆಟ್ಟಿಸಿ ಟೆಡ್ಡಿಮ್ ಗಡಿಯವರೆಗೆ ಓಡಿಸಿರುವರು. ಫಿಲಿಫೈನಿನಲ್ಲಿ ಮಿತ್ರರು ಹೊಸ ಧಾಳಿ ಪ್ರಾರಂಭಿಸಿರುವಾಗ ಮತ್ತು ಚೀನಾ ಯುದ್ಧ ಮುಗಿಯದೆ ಇನ್ನೂ ನಡೆದಿರುವಾಗ ಅವರು ಭಾರತದ ಮೇಲೆ ಹೇಗೆ ಪುನಹ ಬಂದಾರೆಂಬುದು ಸಂಶಯದ ಮಾತಾದರೂ ಜಪಾನರು ಪುನಹ ಭಾರತದ ಮೇಲೆ ಧಾಳಿ ಮಾಡಿದರೆ ಆಶ್ಚರ್ಯಪಡಲು ಕಾರಣವಿಲ್ಲ. ಯಾಕೆಂದರೆ ಮಿತ್ರರು ಜಪಾನಿನತ್ತ ದೃಷ್ಟಿಯಿಟ್ಟು ಸಾಗುತ್ತಿರುವಾಗ ಅವರ ದೃಷ್ಟಿಯನ್ನು ಬೇರೆಡೆಗೆ ಹರಿಸಲು ಈ ರೀತಿಯ ಕಾರ್ಯಕ್ರಮ ಕೈಕೊಳ್ಳಲೂಬಹುದು. ಹೇಗೂ ಯುದ್ಧವು ಇನ್ನೂ ಬಹುಕಾಲ ನಡೆಯಬಹುದು. ಜರ್ಮನಿಯು ಬೇಗನೆ ಸೋಲುವಂತಿಲ್ಲ; ಇತ್ತ ಜಪಾನೂ ಶಕ್ತಿಗುಂದಿಲ್ಲ. ಅಕ್ಟೋಬರ್ 24ಕ್ಕೆ ಯುದ್ಧ ಮುಗಿಯುವದೆಂಬ ಟಬೇಟನ ಲಾಮನ ವಾಕು ಮತ್ತು ಇನ್ನನೇಕರ ಭವಿಷ್ಯವೆಲ್ಲವೂ ಸುಳ್ಳಾಗುತ್ತಾ ಬಂದಿವೆ. ಯುದ್ಧ ಶೀಘ್ರ ಮುಗಿಯುವದು ಎಂಬ ಈ ವರೆಗಿನ ಆಶೆಗಳೆಲ್ಲವೂ ನಿರಾಶೆಗಳಾಗಿ ಪರಿಣಮಿಸಿವೆ.

..... Navabharat Book Depot Udipi South India .....

— ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು —

	ರೂ. ಆ.		ರೂ. ಆ.		ರೂ. ಆ.
ಸುಲಭದಲ್ಲಿ ಇಂಗ್ಲಿಷ್	1.4	ಮೂರು ಸ್ವತಂತ್ರತೆಗಳು	0.14	ವೀರಭೂಮಿ	0.2
ಯುವಕರಿಗೆ ಮತ್ತು ನಲುಬುಕ್ಕರಿಗೆ ಸುಲಭವಾಗಿ ಇಂಗ್ಲಿಷನ್ನು ಅತ್ಯ ಸುಲಭವಿಲ್ಲದೆ ಒಲಿಸುವ ಇಂಗ್ಲಿಷ್ ಸ್ವಯಂಶೋಧಿನಿ		ಸ್ವತಂತ್ರತೇನಹೋಯಾಯು	0.3	ಪತ್ತಲಾ	0.8
		ಪ್ರಮುಖ ಪದ್ಯ	0.4	❸ ಕಥನಗಳು	
		ಹುಂಡಿ ಗಂಡಾಮಣಿ	0.4	ಕಾಮ್ಯ ಸಾಮ್ರಾಜ್ಯ	0.12
❸ ನಾಟಕಗಳು		❸ ಕತೆಗಳು		ಮುಗುಳು	0.3
ಪ್ರೇಮವಿಜಯ	0.12	ನಗನೋಟಗಳು	0.14	ಶ್ರೀಮುಖ	1.0
ಪೇಕಳ್ಳ	1.4	ಅನ್ನದೇವರು		ಪೂರ್ತಿದಾಯಿತ ಕೀರ್ತನೆ	1.0
ವೃಭಿಚಾರಿಣಿ ಯಾರು	0.12	ಮತ್ತು ಇತರ ಕತೆಗಳು	1.0	ಭಗವದ್ಗೀತಾ (ಮೂಲ—ಸಿಲ್ಕ್ ಬೈಂಡು)	1.4
ಲುಬಲಸ	0.8	ಭಾರತೀಯ ಕತೆಗಳು	0.14	❸ ಇತರ ಪುಸ್ತಕಗಳು	
ವಂದಯ ಸಿರಾಜ	0.8	ನಂದಾಮಣಿ	0.10	ಮುಂದಿನ ದೇವರು	0.3
ರಂಗಭೂಮಿ	0.8	ನಾಡಕತೆಗಳು	0.3	ರಾಷ್ಟ್ರಸಭೆಯ ಇತಿಹಾಸ	2.8
ಸ್ವಾಧಾರ	1.12	ಕಂಪೂಗಾಣದನೋಟಗಳು	0.8	ವಾಲ್ಮೀಕಾಶ್ರಮ	0.3
ಕೆಮ್ಮ ಸಂಕಟ	0.4	ನಾಗೀ ಹೃದಯ	0.14	ಮಿತ ಸಂತತಿ	0.8
ಆರೋಗ್ಯ ಸೌತಾಪ	0.12	ಅಂತರಂಗದ ಕತೆಗಳು	0.10	ಶಿಸ್ತಿನ ಜ್ಞಾನ	0.8
ಪಂಚಾಂತಿ	0.6	ಲೈನಸ್ವಾಮಿ	0.6	ಪಾಪಪೂರಿತ ಮಕ್ಕಳು	1.3
ಹೃಚ್ಛಾಯಾ	0.6	ಅಮಾತಿ ಇತ್ಯಾದಿಕತೆಗಳು	0.12	ಚಿಗುರು	0.6
ಸೇವಾಸಭೆ	0.3	ಲೋಕಾಮುಯೆ	0.6	ಇತರ ಪುಸ್ತಕಗಳ ಕೆಟಲಾಗ	1
		❸ ಕಾದಂಬರಿಗಳು		ಒ ಆಣೆ ಸ್ಟಾಂಪುಗಳು ಬರಿಯವು	
		ಪಣ್ಯಾಸಿಯ ಕೋಗಿನಲ್ಲಿ	0.8		

ನವಭಾರತ ಪುಸ್ತಕ ಭಂಡಾರ, ಪಬ್ಲಿಷರ್ಸ್, ಪಬ್ಲಿಸರ್ಸ್, ಉಡುಪಿ, ದ. ಕ.

1 ..... Navabharat Book Depot Udipi, South India 1

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್,
ಡಾ. ಎಂ. ಎ. ಅನ್ಸಾರಿ, ಸುಭಾಶ ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವಸಖಿಯೇ ನಮ್ಮನ್ನು ರಕ್ಷಿಸುವಳು ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಒಂದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಖಿಚೇರಿ: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ರಿಕೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಯಂ. ರಂಗನಾಥಶೆಟ್ಟಿ,
46) ಮಂಗಳೂರು. OR ಬ್ರಾಂಚ್ ಮೇನೇಜರ್, ಮಂಗಳೂರು.

ಅಖಿಲ ಕೊಡಗು ಜವುಳಿ ವ್ಯಾಪಾರಿಗಳ ಸಂಘ, ಮಡಿಕೇರಿ.

ಈ ಮೂಲಕ ಸಂಘದ ಮೆಂಬರುಗಳಿಗೂ ಮತ್ತು ಈ ಪರಿಸರ ಮೆಂಬರಾಗದ ವ್ಯಾಪಾರಿಗಳಿಗೂ ತಿಳಿಯಪಡಿಸುವುದೇನೆಂದರೆ—

ಈ ಸಂಘದ ವಿಶೇಷ ಮಹಾಸಭೆಯು ತಾ. 19—10—44ನೇ ಗುರುವಾರದಂದು ನಡೆದು ಈ ಕೆಳಗಿನ ನಿರ್ಣಯಗಳು ಪಾಸಾಗಿವೆ.

1. ಕೊಡಗಿಗೆ ಸಿಕ್ಕುವ ಕೋಟಾ ಬಟ್ಟೆಯನ್ನು ತೆಗೆದುಕೊಳ್ಳಲು ಹಣ ವಸೂಲಾತಿ ವಿಷಯ ಚರ್ಚೆ ಮಾಡಿ ಈಗ 1 ಲಕ್ಷ ರೂಪಾಯಿ ಬೇಕಾಗಿರಲೂ, ಇದಕ್ಕೆ ವ್ಯಾಪಾರಸ್ಥರಿಲ್ಲರೂ ಸೇರಿ ಅವರವರ ಶಕ್ತಿಯೊಸುಸಾರ ಹಾಕಬೇಕೆಂತಲೂ ಎಂದರೆ ಎ—ಬಿ—ಸಿ ಎಂದು ವ್ಯಾಪಾರಸ್ಥರನ್ನು ಮೂರು ತರಗತಿ ಮಾಡಿ ಎ ತರಗತಿಯವರಿಗೂ ರೂ. 1000, ಬಿ ಯವರು ರೂ. 500, ಸಿ ಯವರು ರೂ. 250 ಹಾಕಬೇಕೆಂತಲೂ ತೀರ್ಮಾನಿಸಿದ್ದಲ್ಲಾ ಹಾಜರಿದ್ದ ಮೆಂಬರುಗಳ ಲೆಕ್ಕ ತೆಗೆದಲ್ಲಿರೂ. ಎನತ್ತು ಸಾವಿರದ ಆಯಾಜು ಬಂದಿದೆ. ಹಾಜರಾಗದ ಮೆಂಬರುಗಳು ಒಡನೆ ತಮ್ಮ ಅಭಿಪ್ರಾಯವನ್ನು ಗೌ. ಕಾರ್ಯದರ್ಶಿಯವರಿಗೆ ತಿಳಿಸಬೇಕಿದೆ. ಮತ್ತು ಮೆಂಬರಾಗದ ವ್ಯಾಪಾರಸ್ಥರು ಒಡನೆ ಸಂಘಕ್ಕೆ ರೂ. 6ನ್ನು ಕಳುಹಿಸಿ ಮೆಂಬರಾಗಿ ಕೋಟಾ ಪಟ್ಟೆ ತೆಗೆದುಕೊಳ್ಳಲಿಚ ಕೂಡ ನುಟ್ಟಿಗೆ ತಮ್ಮ ಅಭಿಪ್ರಾಯವನ್ನು ಒಡನೆ ತಿಳಿಸಬೇಕಿದೆ. ತಪ್ಪಿದರೆ ತಮಗೆ ಬಿಕ್ಕುವ ಕೋಟ ಬಟ್ಟೆಯ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಸ್ವತಿಯೊಬ್ಬ ವ್ಯಾಪಾರಸ್ಥನೂ ತಾ. 5—11—44ರ ಒಳಗೆ ತಿಮ್ಮ ಹಣವನ್ನು ಬೆನೆರಾ ಬ್ಯಾಂಕಿಂಗ್ ಕೊರ್ಪೊರೇಷನ್ ಮಡಿಕೇರಿ, ಹಾಗೂ ಕೆನೆರಾ ಬ್ಯಾಂಕಿಂಗ್ ಕೊರ್ಪೊರೇಷನ್ ವಿರಾಜಪೇಟೆ ಇವುಗಳಿಗೆ ಕಳುಹಿಸಿಬಹುದು. ಲೆಕ್ಕವು ಸರಿಪಡಿಸಿ ಸೈಸಿಕೊಟ್ಟಿರುವುದು. ಇದನ್ನು ಸೈಸಿಕೊಟ್ಟರು ಮತ್ತು ಸೈನ್ ಸೈಸಿಡಿಟರು ಸೈನ್ ಮಾಡಿ ತೆಗೆದುಬಹುದು.

2. ಕೊಡಗಿಗೆ ಕೋಟಾ ಬಟ್ಟೆ ಸಿಗುವ ವರೆಗೆ ಬೆಂಗಳೂರು, ಮೈಸೂರು, ಬಾಲಬಾದ ಮತ್ತು ಮುಂಗಳೂರು ನಿಲ್ದಾ ಮತ್ತು ಗತಿಗಳಿಂದ ಸೊದಲಿನಂತೆ ನಮಗೆ ಬಟ್ಟೆ ಸರಬರಾಜು ಮಾಡಲು ಸಿಫಾರಸು ಮಾಡುವಂತೆ ಸ್ಥಳೀಯ ಸಂಸ್ಥೆಗಳನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

3. ಕೊಡಗಿಗೆ ತರುವ ಬಟ್ಟೆಗಳ ಮೇಲೆ ಸೈವಾಟಿಸ ಬಿರ್ಜ ಮತ್ತು ಇನ್ನಿತರ ಖರ್ಚುಗಳು ಹೆಚ್ಚಾಗಿ ಬೀಳುವುದರಿಂದ ಚಿಕ್ಕ ಕೃಯದ ಮೇಲೆ (Retail rate) ಕಮ್ಮಿ ಪಕ್ಷ 8% ಹೆಚ್ಚಾಗಿ ಹಾಕಿ ಸೂಚನೆಯಂತೆ ಕುಕುಂ ಕೊಡಬೇಕೆಂದು ಸ್ಥಳೀಯ ಸರಕಾರವನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

ವ್ಯಾಪಾರಸ್ಥರು ಈ ಮೇಲಿನ ತೀರ್ಮಾನದಂತೆ ಸರಿಸಿ ತಮಗೆ ಸಿಕ್ಕಾತಕ್ಕ ಕೋಟಾ ಬಟ್ಟೆಯನ್ನು ತೆಗೆದುಕೊಳ್ಳಲು ಒಡನೆ ಹಣ ಕಳುಹಿಸಬೇಕಾಗಿ ಕೇಳಿಕೊಳ್ಳುತ್ತೇನೆ ತಪ್ಪಿದರೆ ಅವರಿಗೆ ಬರುವ ತೊಂದರೆಗೆ ಸಂಘದವರು ಜವಾಬ್ದಾರರಲ್ಲ.

ಮಡಿಕೇರಿ, ತಾ. 25.10.44, ಕೆ. ಕೆ. ತಿಮ್ಮಯ್ಯ, ಗೌ. ಕಾರ್ಯದರ್ಶಿ.

The Canara Banking Corporation Limited.

(Incorporated in British India)

E7D — Head Office—UDIPI, (S. K.) —1936

Paid up capital .. .. .. Rs. 11,58,255
Reserves .. .. Rs. 4,10,000
Total working Resources .. .. Exceed Rs. 1 Crore

ANNOUNCEMENT.

A Branch of the Bank has been opened on 24-10-44 at BOMBAY.

2)

— ಶುಭಾಶಯಗಳು —

ಕೊಚ್ಚಿಕಾರ್ ಬ್ರದರ್ಸ್, ಲಿ.

ಮುಖ್ಯ ವಿಜಂಟರು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

6)

ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ, ವೈದ್ಯ ಪರೀಕ್ಷಕರಿಗೂ ಮತ್ತು ಹಿತಚಿಂತಕರಿಗೂ ತಮ್ಮ

ದೀಪಾವಳಿ

ಶುಭಾಶಯಗಳನ್ನು ಬಯಸುತ್ತಾರೆ.

ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ಟೋ—ಫಾಸ್‌ಫೋ—ಮೂಲ್ಪ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ ಕಾಯಿಲೆಯುಮತಿಗೆ, ಅರೋಗ್ಯದಿಂದಿರುವಪರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ಪರೀಕ್ಷಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜೀವಾಗ್ನಿಯನ್ನು ಸಂಪಡಿಸುವುದು. ಮೆದುಳಿಗೆ ತಂಪನ್ನು ಮಾಂಸಖಂಡಗಳಿಗೆ ಬಲವನ್ನು ನರಗಳಿಗೆ ಶಕ್ತಿಯನ್ನೂ ಕೊಡುವುದು. ಮೆದುಳಿಗೆ ತಂಪನ್ನು ನೀಡುವುದು. ನಾಲಿಗೆಗೆ ರುಚಿಯನ್ನುಂಟುಮಾಡುವುದು. ಇದರಲ್ಲಿ ಸಸಜೀವಪದಾರ್ಥವಾದ ಎಲ್ಲಾ ವಿಟಮಿನ್ನುಗಳು ಕೊಂಚ ರಕ್ತ ಕಣಗಳನ್ನು ಹೆಚ್ಚಿಸುವ ಆಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್‌ಫೋಮೂಲ್ಪ್, ಹೆಪೋಗ್ಲೋಬಿನ್, ಸೋಡಿಯಂ ಸರೆಂ ಫಾಸ್ ಫೇಟ್ ಸೆಸ್ಟಿನ್, ಸಾಲ್, ಮೂಲ್ಪ್ ಎಕ್ಸ್‌ಟ್ರಾಕ್ಟ್ ಮುಂತಾದ ವಿಶೇಷ ಮೊದಲಾದ ಪ್ರಸಿದ್ಧ ಔಷಧಿಗಳಿವೆ. ಇಂದಿನಿಂದಲೇ ಸೇವಿಸಿ ಅತಿಶಯ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಾಲಯಗಳಲ್ಲಿದೆ

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,

ಗೋಖಲೆ ರೋಡ್, ಬೋಂಬೆ.

8)

ಎಂಪೈರ್ ಆಫ್ ಇಂಡಿಯಾ

ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

44) ಸ್ಥಾಪನೆ:—೧೮೯೭.

ಲಭ್ಯವಾಗಿರುವ ಒಟ್ಟು ಆದಾಯ ೯೭,೩೭,೦೦೦ ರೂಪಿಯೆ
ಪಡೆಯಲ್ಪಿನ ಕೆಲವು ಚಾಲ್ತಿಯಿರುವ ವಿಮೆ ೧೬,೪೯,೮೮,೦೦೦ ,,
ಸ್ಪಷ್ಟ ಸಂಗತಿಗಳು. ಆಸ್ತಿ .... ೬,೫೦,೪೬,೦೦೦ ,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು ೮,೫೯,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಆರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. ೫೨,೦೮೦, ಜಮಾ ಬಾಕಿ ರೇವಣಾತಿ 2,24,75೦ ವಸೂಲಾದ ರೈಮುನಿಧಿ 8,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳನ್ನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಅಧಾವಧಿ ವೇಳೆಗೆ 90% ಕೊಡಲಾಗುತ್ತೆ. ನಿರಿಮು ರೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 3. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 3½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ನಡಿಸುತ್ತಾರೆ.

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

ಮಹದೇವ ದೇಸಾಯಿಯವರ ಜೀವನ ಚರಿತ್ರೆ.

ವಿಸಂಗತ ಸುಪುದೇಪ ದೇಸಾಯಿಯವರ ಜೀವನ ಚರಿತ್ರೆಯನ್ನು ಮಹಾತ್ಮ ಗಾಂಧಿಯವರು ಪೂರ್ತಿಯೂ ಬರೆಯುವರು ಎಂಬುದಾಗಿ ಗುಜರಾತ್ ಸಮಾಚಾರ ಪತ್ರಿಕೆಯು ತಿಳಿಸುತ್ತದೆ. ಆ ಗಾಯಾನ್ ಆರಮನೆಯಲ್ಲಿ ಗಾಂಧೀಜಿ ಬಂಧನದಲ್ಲಿದ್ದಾಗ ಇವರು ಈ ಪುಸ್ತಕಕ್ಕೆ ಸಂಬಂಧಪಟ್ಟ ಜಾ ಪುಟಗಳನ್ನು ಬರೆದಿದ್ದರು. ಈ ಪುಸ್ತಕರ ಚನೆಗೆ ಬೇಕಾದ ವಿಷಯಗಳನ್ನು ಶ್ರೀ ಮಹದೇವ ದೇಸಾಯಿಯವರ ಮಿತ್ರರು ಒದಗಿಸಿಕೊಡುವರು.

—೦೦—

ಇನ್ನೂರು ವರ್ಷಗಳ ನಂತರ.

ಮುಸ್ಲಿಮರ ಸಂಖ್ಯೆ ಹಿಂದೂಗಳ ಸಂಖ್ಯೆಯನ್ನು ಮೀರಬಹುದು.

ಹಿಂದೂದೇಶದಲ್ಲಿ ಹಿಂದೂಗಳ ಸಂಖ್ಯೆ ವರ್ಷಗಳಿಂದಂತೆ ಕ್ಷೀಣಿಸುತ್ತಾ ಬರುತ್ತಿದೆ. ಮುಸ್ಲಿಮರದು ವೃದ್ಧಿಯೂಗುತ್ತಿದೆ ಇದೇ ರೀತಿಯಲ್ಲಿ ಸಿಸ್ಯನೂನಗಳು ಮುಂದುವರಿಯುವುವಾದರೆ ಇನ್ನು ಎರಡು ಶತಮಾನಗಳಲ್ಲಿ ಮುಸ್ಲಿಮರ ಸಂಖ್ಯೆಯು ಹಿಂದೂಗಳ ಸಂಖ್ಯೆಯನ್ನು ಮೀರಬಹುದು; ಕನಿಷ್ಠ ಪಕ್ಷಕ್ಕೆ ಸರಿಸಮನಾನವಾಗುವುದು ನಿಶ್ಚಯ.

ಳೆದ ೬೦ ವರ್ಷಗಳ ಜಾನೇಸುಮಾರಿಯನ್ನು ಪರಿಶೀಲಿಸಿದರೆ ಹಿಂದೂಗಳ ಸಂಖ್ಯೆ ದಶಮಾನಗಳೆದಂತೆ ಕ್ಷೀಣಿಸುತ್ತಿರುವುದೂ ಮುಸ್ಲಿಮರ ಸಂಖ್ಯೆ ವರುತ್ತಿರುವುದೂ ತಾನಾಗಿ ತಿಳಿಯುತ್ತಿದೆ. ಗಲಭಾಗಲ್ಲಿ ಹಿಂದೂಗಳ ಸಂಖ್ಯೆಯು ಪ್ರತೀ ೧೦೦೦ಕ್ಕೆ ೭೫೦ ರಷ್ಟಿತ್ತು. ೧೯೧೧ರಲ್ಲಿ ಈ ಸಂಖ್ಯೆ ೬೯೫ ರಷ್ಟಾಯಿತು; ಅಂದರೆ ೧೦೦೦ ಕ್ಕೆ ೫೫ ರಂತೆ ಇಳಿದಂತಾಯಿತು. ಇದಕ್ಕೆ ವ್ಯತಿರಿಕ್ತವಾಗಿ ಮುಸ್ಲೀಮರ ಸಂಖ್ಯೆಯು ಅಸ್ಪೇ ಅವಧಿಯೊಳಗೆ ೧೯೭ ರಿಂದ ೨೦೫ಕ್ಕೆ ಏರಿದೆ. ನಿಂದರೆ ೧೦೦೦ ದಲ್ಲಿ ೮೫ ವಿರಿದಂತಾಯಿತ್ತು.

ಇದೇ ದೇಶದ ದೃಷ್ಟ್ಯಕ್ಕ ಪರಿಶೀಲಿಸುವುದಾದರೆ ಪೂರ್ತ ಈ ಇಳಿತ ಕಂಡುಬರುವುದಲ್ಲ ಪ್ರಾಂತ್ಯವಾರು ಮಿಗಡುಸಿದರೂ ಇಂತಹ ಚಿತ್ರಣಯೇ ಸ್ಪಷ್ಟವಾಗಿ ತೋರುತ್ತದೆ. ಇದರ ಸತ್ಯಾಸತ್ಯತೆಗಳನ್ನು ಈ ಕೆಳಗಿನ ತಪ್ಪಿಯಿಂದ ಸುಲಭವಾಗಿ ಕಂಡು ಹಿಡಿಯಬಹುದು.

ಪ್ರತೀ ೧೦,೦೦೦ ಕ್ಕೆ

ಸ್ತ್ರೀಯರಲ್ಲಿ ಮುಸ್ಲಿಮರು ಹಿಂದೂಗಳು.

	೧೯೪೧	೧೯೩೧	೧೯೪೧	೧೯೩೧
ಬಂಗಾಳ	೫೦೭೭	೫೪೭೬	೬೦೫೫	೫೫೫೫
ಪಂಜಾಬು	೫೫೫೩	೫೬೦೭	೫೦೪೪	೫೬೫೭
ಯು. ಪಿ.	೧೫೪೨	೧೫೫೦	೬೬೨೭	೬೬೦೬
ಬಿಹಾರ್	೧೧೪೯	೧೨೪೯	೬೪೫೦	೬೯೦೬
ಮದ್ರಾಸು	೬೦೩	೬೧೦	೧೧೬೨	೧೬೭೪

೨೦೦ ವರ್ಷಗಳ ನಂತರ.

೧೯೪೧ ರಲ್ಲಿ ಅಂದರೆ ೬೦ ವರ್ಷಗಳ ಹಿಂದೆ ಹಿಂದೂ ಮುಸ್ಲೀಮರ ಸಂಖ್ಯೆಯ ಪ್ರಮಾಣ ೪:೫ ಇತ್ತಾದರೆ ಈಗ ಅದು ೩:೪ ಈ ಪ್ರಮಾಣದ ವ್ಯತ್ಯಾಸವಿದೆ. ಅದುವರೆಗೂ ಇದೇ ಪ್ರಮಾಣದಲ್ಲಿ ಇಳಿತ ಭರತಗಳು ಹರಿದು ಹೋದರೆ ಇನ್ನು ೨೦೦ ವರ್ಷಗಳ ನಂತರ ಪ್ರಮಾಣ ಸರಿಸಮಾನ ಇಲ್ಲವೆ ಮುಸ್ಲೀಮರ ಕಡೆಗೆ ಬಾಂಡಿಷ್ಯ ಅಧಿಕವಾಗಿ ರೂಪಾಂತರ ಹೊಂದಬಹುದು.

ನ. ಭಾ

—೦೮—

'ಕಸ್ತೂರಿ ಬಾ ನಿಧನ.'

(ಶ್ರೀ. ಪಿ. ಎ. ಬೋಪಯ್ಯ, ಉಪಾಧ್ಯಾಪಕರು ಪರಪೀಡಾ ಶಾಲೆ, ಮಡಿಕೇರಿ) (ಅನುವಾದಿತ)

ಭಾರತದ ಜನಜನರ ಜಾಗೃತಿಗೆ ಸುಸಮರ್ಥ ।
ಸಾರತಂತ್ರ್ಯವ ಬಿಡಿಸಿ ಸ್ವಾತಂತ್ರ್ಯಕ್ಕಾಗಿ ॥
ನಾರಿ 'ಕಸ್ತೂರಿ ಬಾ' ಸರಿಹೋಳ್ಳಂಥಿತಂದಿ ।
ಭಾರತಿಯ ಬಂಧನವ ಮುರುತಿಗಾಗಿ ॥೧॥

ತನ್ನ ತನುಮನ ಧನವ ಜಗಕೆ ಸಾರಿದಾತಿಯ 'ಗಾಂ ।
ಬೆನ್ನ ಹಿಡಿದಳು ಪತಿಯು—ಸುಖದ ತೊರೆದು ॥
ಮನ್ನಿಸದ ಪರಹಿಂಸೆಗೆದೆಗೊಟ್ಟು ಮುನ್ನೆದೆಸು ।
ತನ್ನ ಹಕಿಯವ ಕಳೆದಳ್ಳಿರೆಯೊಳಿದ್ದು ॥೨॥

ಬಡಜನರ ಸೇವೆಯಂ ನಗ್ನತನಗಡುಜೆಂದು ।
ಬಡಜನೋದ್ಧಾರದಿಂ ನಿತ್ಯಸುಖವೆಂದು ॥
ನುತಿಯ ಸಾಧಿಸುತವಳು ಸೆರೆಯನುಸಿಗೊಳಂದು ।
ಸಡಗರದಿ ಮೃಡನ ಭಜಿಸುಪಂತಾತ್ಮಯಂ ॥೩॥

ಶಿವನಧ್ಯಾನವ ಗೈವ ಶಿವಸಪೂಜೆಯ ನೂಡ್ಪು ।
ಶಿವನ ನಾಮೂವಳಿಯ ಕೂಡಿ ಪಾಡ್ಪು ॥
ಶಿವನಾಮ ಶರಧಿಯಲಿ ಈಜ್ತೇರಿಸುಗಾಗಾಡ್ಪು ।
ಶಿವತಿವೆನ್ನುತ ಬೇಡ್ಪು ನಿದ್ದೆಯನು ದೂಡ್ಪು ॥೪॥

ಎರಡನೆಯ ಮಾಸಿಸ್ಪತ್ತೈರಹನೆಯ ದಿವಸ ।
ಧರೆಯೊಳಿಗೆ ದುಃಖದುಳಿ ಭೋರ್ಗರೆದ ದಿವಸ ॥
ಹರಿದು ಸುದೆದುದು ಎಸ್ಪತ್ತೈದನೆಯ ವರ್ಷ ।
ತರುಣಿ ಕಸ್ತೂರಿಗಂ ಸೆರೆನುನೆಯುವಾಸ ॥೫॥

ಆಗಖಾನ್ ಅರಮನೆ, ಸೆರೆದನೆಯು.ಕಾನಲಲಿ ।
ತಾಗಿ ತಂತಿಕನ ಕಂಗಳನು 'ಬಾ' ಳಲ್ಲಿ ॥
ಜಾಗು, ನಡೆ ಸಗ್ಗಕ್ಕೆ ಬೆಳಗಸುರ ಪಜ್ಜಯಲಿ ।
ಪೀಗು ನಿನ್ನಸುವಂದ ವಿಧಿ ಹರುಸವಲ್ಲಿ ॥೬॥

ವಿಧಿಯ ನಿಯಮವಂತಾರು ? ರೋದಿಸಲು
ಕೇಳುವನೇ ।
ಎದೆಯೂಡ್ದೆ ಳುವ ಶಿಲುಗೆನೆಲುಮಾ
ಬಿದುವನೆ ? ॥
ಮುದವಿ ನಾ ಮೂತಾಡಿ ಬಹೆನು ಇನಿಯನ
ವಪನೆ ।
ಕದಲೆನೆಲ್ಲಿಗು ಸತ್ಯ.ನೆನೆ ಬಿಡುವನನನೆ ? ॥೭॥

ವಿಧಿಯೊಣತಿಗೆ ಬಾಗಿ ಕುದಿದು ಹರುಸದಿ ನೆದಂದು ।
ಮುದವಿ ಪತಿಯನು ಅಂತರಂಗದಲಿ ನೆನೆದು ॥
ಹುದುಗಿರ್ದ ಸ್ವಾತಂತ್ರ್ಯಕ್ಕ ಸ್ಫೋಮನು
ಹೊರಗೆಡೆದು ।
ಮಧುರದಲಿ ಕಸ್ತೂರಿ ನುದಿದಂದಿನು ॥೮॥

ವೀರಸತಿ ಗಾಂಧಿಜಿಯ ಮನಕರುಗದವಲಿ ।
ಭಾರತೀಯರ ಮನವು ಕದಲದಿರಲಿ ॥
ಭಾರತಾಂಬೆಯ ಜಯದ ಧ್ವಜ ನಲಿಯುತಿರಲಿ ।
ಭಾರತವು ವಾಸ್ಯದಲಿ ನರಳದಿರಲಿ, ॥೯॥

ಜಾತಿಮತಗಳ ಕಲಹವೇ ಮೊಳೆದೋದದಿರಲಿ ।
ನೀತಿಯಲಿ ನಾರಿಯರು ಮುನ್ನಡೆಯುತಿರಲಿ ॥
ಸ್ವಾತಂತ್ರ್ಯಕ್ಕ ರಣದಿಂದ ಒಮ್ಮೆಟ್ಟು ದಿರಲಿ ।
ಮೊತೆಭಾರತಿಯ ಬಂಧನವು ಬಿಡಲಿ ॥೧೦॥

ನಂದಿಹೋಯಿತು 'ಬಾ' ರ ಮಣಿದೀಪಪಾನೆಡೆಗೆ ।
ಹೊಂದಿತದು ಸಗ್ಗವನು ಉಜ್ವಲಿಸಿ ಬೆಳಗೆ ॥
ಕುಂದಿದರು ಭಾರತರು ಸೊಂದುಕಪಿನುನೆದೊಳಗೆ ।
ಆಂದಿನಿಂ ಬೆಳಗಿತಮ ಅಮರರೊಳಗೆ ॥೧೧॥

ಉದ್ದಗಲಕ್ಕೆಲ್ಲ ಈ ವಾರ್ತೆ ಪಸರಿಸಿತಂದು ।
ಬಿದ್ದುಹೋರೆದರೆಲ್ಲ 'ಹಾ ಅಮ್ಮ' ಎಂದು ॥
ಅದ್ದಿದರು ತಮ್ಮೊಡಲ ಕಂಬನಿಯೋಕ್ಕಿಂದು ।
ಹೊದ್ದಿತೇ ಕತ್ತಲೆಯು ಭಾರತದೊಳೆಂದು ॥೧೨॥

ಸೇರಿದರು ಭಾರತರು ಸೆರೆಮನೆಯ ಬಳಿಯಲ್ಲಿ ।
ವೀರದೇಸಾಯಿಯನು ದಹನಗೈದಲ್ಲಿ ॥
ಮರುಕಪ್ಪಗೆಯೊಟ್ಟ ರನವಪಿಸಿದರಲ್ಲಿ ।
ಧೀರ ಗಾಂಧಿಯೆ ಚಿತೆಯನುರಿಸಿದವರು ಅಲ್ಲಿ ॥೧೩॥

ನಿಸುಧಸ್ಥಳೊ ಜಗದಿ ಕಸ್ತೂರ್ಬ ಸ್ತುತ್ಯಂ ।
ನಿಸುಧಸ್ಥಳೊ ಪತಿಯ ಹರಸಿದನು ನಿತ್ಯಂ ॥
ಈಕಳ್ಕೆಯೆಯಿಂದಮರ ಲೋಕವಾಯಿತು ಸತ್ಯಂ ।
ದೇಶಸೇವೆಯಿಂ ಕೀರ್ತಿ ಸ್ಥಿರವಾಯ್ತು

ನಿತ್ಯಂ ॥೧೪॥

Reg.No. M. 1550.
KODAGU" MERCARA, (Coorg).

ಕೊಡಗು

ಸಂಪಾದಕರು:—ಶ್ರೀ ಯ. ಬಾ. ಪೆಳ್ಳಿಪ್ಪ, ವಾರ್ಷಿಕ ಚಂದಾ: ರೂ. ೩-೮-೦.

ಸಂಪುಟ ೨೭ | ತಾರೀಕು ೩—೧೧—೧೯೪೪ನೇ ಶುಕ್ರವಾರ. | ಸಂಚಿಕೆ ೨೩

ಬತ್ತದ ಬೆಲೆ ಹೆಚ್ಚಿಸಬೇಕು.

ಕೊಡಗಿನ ಬತ್ತ ಬೆಳೆಸುವವರ ಪ್ರತಿನಿಧಿಗಳಾಗಿ ಜೀಫ್ ಕಮಿಷನರವರನ್ನು ಕಂಡು ಬತ್ತದ ಬೆಲೆಯನ್ನು ಏರಿಸುವ ಬಗ್ಗೆ ಮಾತಾಡಲು ನೇಮಕವಾದ ನಿಯೋಗವೊಂದು ತಾರೀಕು 31-10-44 ರಲ್ಲಿ ಜೀಫ್ ಕಮಿಷನರನ್ನು ಕಂಡು ದೇಶದ ಪ್ರಸ್ತುತ ಸ್ಥಿತಿಯನ್ನು ಅವರಿಗೆ ಸಂಪೂರ್ಣವಾಗಿ ಮನದಟ್ಟು ಮಾಡಿಸಿತ್ತು.

'ಪ್ರಸ್ತುತ ಯುದ್ಧದಲ್ಲಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿರುವ ಒಂದು ಪ್ರಮುಖ ವಿಷಯವೆಂದರೆ ಆಯಾ ಪ್ರದೇಶಗಳ ಧಾರಣಶಕ್ತಿಯು. ಸೈನ್ಯದವರಿಗೆ ಧಾನ್ಯವನ್ನು ಸಗಟು ಖರೀದಿಮಾಡುವವರಿಗೆ ಮತ್ತು ಸಾಲಿಟರಿಯವರಿಗೆ ಯೋಗ್ಯ ಬೆಲೆಗೆ ಬತ್ತವನ್ನು ಪಡೆದು ಅಕ್ಕಿಯನ್ನಾಗಿ ಮಾಡಿ ಯಾವುದೇ ತೊಂದರೆಯಾಗದಂತೆ ಸರಬರಾಜು ಮಾಡಲು ಸರಕಾರವು ನಿಯಂತ್ರಣವನ್ನು ಇಂದಿನಿಂದಾ ಸಂದರ್ಭಕ್ಕೆ ಸಮಯಬಲ್ಲಿ ಎಲ್ಲರೂ ಒಪ್ಪಿದರೂ ಬೆಳೆಸುವವನ ಹಿತವನ್ನು ಮರೆಯಲಾಗುವಲ್ಲಿ. ಆದರೆ ದುರಾದೃಷ್ಟವಶಾತ್ ಈ ಸರಕಾರವು ಬೆಳೆಸಲು ಇರುವ ಖರ್ಚನ್ನು ಗಣನೆಗೆ ತಾರದೆ 1942 ರಲ್ಲಿ 120 ಪರಿಯ ಒಂದು ಗಾಡಿಗೆ ರೂ. 115 ಎಂದು ಭತ್ತದ ಕ್ರಯ ನಿಶ್ಚಯಿಸಿದೆ. ವ್ಯವಸಾಯದ ಎತ್ತು ಜೀತದ ಖರ್ಚುಗಳು ಹಿಮ್ಮುಖವಾಗಿ ಏರಿದ್ದರೂ ಈ ಬೆಲೆಯು ಬದಲಾಯಿಸಲ್ಪಟ್ಟಿಲ್ಲ. ಇದು ಬೆಳೆ ಬೆಳೆಯುವವರ ಹಿತಕ್ಕೆ ತೀರಾ ವಿರುದ್ಧವಾಗಿದೆ. ಆದ್ದರಿಂದ ದೇಶದ ಉದ್ದಗಲಕ್ಕೂ 120 ಪರಿಯ ಒಂದು ಗಾಡಿ ಬತ್ತಕ್ಕೆ ರೂ. 150 ಆದರೂ ದೊರೆಯುವಂತೆ ಚಳವಳಿಯಾಗಬೇಕೆಂಬ ಚಳವಳಿಯಾಗಬೇಕೆಂಬ ಚಳವಳಿಯಾಗಬೇಕೆಂಬ

ಕೊ ಡ ಗು

ತಾ. ೩-೧೧-೧೯೪೪ನೇ ಶುಕ್ರವಾರ

ಪಂಡಿತ ನೆಹರು.

'ಹಿಂದೂದೇಶದ ಸಾವಿರಾರು ರಾಜಕೀಯ ಖೈದಿಗಳ ಪೈಕಿ ಸ್ವಾತಂತ್ರ್ಯದ ಹಳೇ ಸ್ನೇಹಿತರಾಗಿ, ಛೇಡಿತತ್ವದ ಕಡು ವಿರೋಧಿಯಾಗಿ ಒಬ್ಬ ವ್ಯಕ್ತಿಯಿದ್ದಾರೆ. ಅವರನ್ನು ದ್ರೋಹಿಗಳೆಂದು ಜೈಲಿನಲ್ಲಿಡುವದಾದರೆ 'ಸ್ವಾತಂತ್ರ್ಯ' ಎಂಬ ಶಬ್ದಕ್ಕೆ ಅರ್ಥವಿಲ್ಲ. ವೈಸರಾಯರ ಒಂದರ ಮೇಲೊಂದರಂತೆ ಬರುವ ತಾಶನಗಳು, ವಾರ್ತೆಗಳ ಮೇಲೆ ನಡೆಯುವ ಕತ್ತರಿ ಪ್ರಯೋಗಗಳು, ಕಾಮನ್ಸ್ ಸಭೆಯ ಪ್ರತ್ಯುತ್ತರಗಳು, ಇವು ಯಾವುವೂ ಆ ವ್ಯಕ್ತಿಯು ಸ್ವಾತಂತ್ರ್ಯದ ವಿರೋಧಿಯೆಂಬುದನ್ನು ನಮ್ಮ ಮನಸ್ಸಿನಲ್ಲಿ ಮೂಡಿಸಲಾರವು.' ಇದು ಮೈಕೇಲ್‌ಪ್ರೂಟ್ ಎಂಬ ಆಂಗ್ಲೇಯರು ಭಾರತದ ಭಾಗ್ಯರವಿ ಪಂಡಿತ ಜವಾಹರರನ್ನು ಕುರಿತು ಅಡಿದ ನುಡಿ. ವಾಸ್ತವವಾಗಿ ಪಂಡಿತ ಜವಾಹರರು ಹಿಂದೂದೇಶದ ಸ್ವಾತಂತ್ರ್ಯ ಸೌಧವನ್ನು ರಚಿಸುತ್ತಿರುವ ಉದ್ದಾಮ ಶಿಲ್ಪಿಗಳು. ಹಿಂದೂದೇಶದ ಮಾತ್ರವಲ್ಲ, ಇಡೀ ಜಗತ್ತಿನ ಸ್ವಾತಂತ್ರ್ಯದ ರೂಪರೇಷೆಯನ್ನು ಚಿತ್ರಿಸಿದ ಅದ್ವಿತೀಯರು. ಅಂಥಾ ಮಹಾವ್ಯಕ್ತಿ ಇಂದು ಜೈಲಿನಲ್ಲಿ ಕೊಳೆಯಬೇಕಾಗಿದೆ. ಸಹಸಲಸದಳವಾದ ಕಡುಕಾರ್ಪಣ್ಯ, ಆಪಮಾನಗಳನ್ನು ಅವರ ಮೇಲೆ ಸರಕಾರವು ಹೊರಿಸುತ್ತಿದ್ದರೂ ಅಜೇಯರಾಗಿ ಸ್ಥಿತಪ್ರಜ್ಞರಂತೆ ಜೈಲುವಾಸವನ್ನು ಕಳೆಯುತ್ತಿದ್ದಾರೆ.

ನೆಹರೂರವರ ಅವಶ್ಯಕತೆ ಇಂದು ಭರತಖಂಡಕ್ಕೆ ಅತಿಯಾಗಿ ಇದೆ. ಇಂದು ಜರ್ಮನಿ, ಜಪಾನುಗಳ ಮೇಲೆ ಕತ್ತಿಕಟ್ಟಿರುವ ಚರ್ಚಿಲ್ ಸರಕಾರವು ಹುಟ್ಟಿರನನ್ನು ಹೊಗಳಿ ಬೆನ್ನುತಟ್ಟುತ್ತಿದ್ದಾಗ, ಜಪಾನರ ಪರವಾಗಿ ಜೈನೀಯರ ಜೀವನಾಧಾರವಾದ ಬರ್ಮಾ ರಸ್ತೆಯನ್ನು ಮುಚ್ಚಿದ್ದಾಗ ನಾಝಿ–ಫೇಜಿತತ್ವಗಳ ಖಂಡನೆ ಮಾಡಿ, ಜಪಾನರ ನೀತಿಯನ್ನು ಖಂಡಿಸಿದ ಮಹಾವ್ಯಕ್ತಿ ಇಂದು ಅದೇ ಶತ್ರುಗಳ ಮೇಲೆ ಯುದ್ಧ ನಡೆಯುತ್ತಿರುವಾಗ ಬ್ರಿಟಿಷ್ ಸೆರೆಮನೆಯಲ್ಲಿ ಈ ಕಳೆದ ಎರಡು ವರ್ಷಗಳಿಂದ ಕೊಳೆಯುತ್ತಿರುವದು ಹಿಂದೂದೇಶದ ಹೀನದೆಸೆ; ಇಡೀ ಜಗತ್ತಿನ ದೌರ್ಭಾಗ್ಯ. ಬ್ರಿಟಿಷ್ ಸರಕಾರವು, ವಿತ್ರಪಕ್ಷದವರು ಈ ಯುದ್ಧವನ್ನು ಸ್ವಾತಂತ್ರ್ಯಕ್ಕಾಗಿ, ಪ್ರಜಾಪ್ರಭುತ್ವರಕ್ಷಣೆಗಾಗಿ ಮಾಡುತ್ತಿರುವೆವೆಂಬ ಶಂಖವನ್ನು ಎಷ್ಟೇ ಬಲವಾಗಿ ಊದಿಕೊಳ್ಳಬಹುದು. ಆದರೆ ಎಂದಿನ ವರೆಗೆ ಪಂಡಿತ ಜವಾಹರರು ಸೆರೆಮನೆಯಲ್ಲಿರುವರೋ, ಎಂದಿನವರೆಗೆ ಅವರ ಸಿಸ್ಯಳಂಕ ಛೇಜೀ ವಿರೋಧವಾಣಿಯು ಜಗತ್ತಿನ ದಿಗಂತದಲ್ಲಿ ಮೊರೆಯುವದಿಲ್ಲವೋ ಅಂದಿನ ವರೆಗೆ ನೆಹರುಗಳ ಬಂಧನದಿಂದ ಸರಕಾರವು ಮಾಡುತ್ತಿರುವದು ಸ್ವಾತಂತ್ರ್ಯದ ಕೊಲೆ. ಪ್ರಜಾಪ್ರಭುತ್ವದ ಸಮಾಧಿ. ಯಾತೆಂದರೆ ಪಂಡಿತ ಜವಾಹರರು ಇಂದು ಭಾರತದ ಅದ್ವಿತೀಯ ನಾಯಕರು ಮಾತ್ರವಲ್ಲ. ಜಗತ್ತಿನ ಸ್ವಾತಂತ್ರ್ಯದ, ಪ್ರಜಾಪ್ರಭುತ್ವದ ಮೂರ್ತಿ ಸ್ವರೂಪರು.

ನೆಹರೂಗಳು ಬಂಧನದಲ್ಲಿ ತನ್ನ ಆರೋಗ್ಯವನ್ನು ಕಳಕೊಂಡಿದ್ದಾರೆ. ಭಾರದಲ್ಲಿ 16 ಪೌಂಡುಗಳನ್ನು ಕಳಕೊಂಡಿದ್ದಾರೆ. ಪಾರ್ಥಿವ ಶರೀರದಲ್ಲಿ ಈ ರೀತಿಯ ಶಕ್ತಿ ಕ್ಷಯವಾಗಿದ್ದರೂ ಅವರ ಆತ್ಮತೇಜಸ್ಸು ಅವರ ನೈತಿಕ ಬಲ ಜೈಲಿನೊಳಗಿಂದ ಬೆಳಗುತ್ತಿದೆ. ಈ ಪ್ರಜ್ವಲವಾನವಾದ ದಿವ್ಯ ಪ್ರಭೆಯನ್ನು ಯಾವ ಸರಕಾರವೂ ಬಂಧಿಸಿಡಲಾರದು. ಬ್ರಿಟಿಷರ ಜೈಲುವಾಸದಿಂದ ನೆಹರುಗಳು ಭೌತಿಕವಾದ ತನ್ನ ಶಕ್ತಿಯನ್ನು ಕಳಕೊಂಡಿದ್ದರೂ, ನೆಹರೂಗಳನ್ನು ಬಂಧಿಸಿದ್ದರಿಂದ ಬ್ರಿಟಿಷ್ ಸರಕಾರವು ತನ್ನ ಪ್ರತಿಷ್ಠೆ, ತನ್ನ ಗೌರವಗಳನ್ನು ಕಳೆದುಕೊಂಡಿದೆ; ಪ್ರಜಾಪ್ರಭುತ್ವದ ಪುರೋಹಿತನೆನಿಸಿದ್ದ ರಾಷ್ಟ್ರವು ಜಗತ್ತಿನ ದೃಷ್ಟಿಯಲ್ಲಿ ತನ್ನ ಉಚ್ಚಸ್ಥಾನವನ್ನು ಕಳೆದುಕೊಂಡು ಕುರೂಪಗೊಂಡಿದೆ. ನೆಹರುಗಳನ್ನು ಬಿಡಬೇಕಾದುದು, ಭಾರತಕ್ಕೆ ಮಾತ್ರವಲ್ಲ; ಇಡೀ ಜಗತ್ತಿನ ಹಿತಕ್ಕಾಗಿ ಅವಶ್ಯವಿದೆ. ಎಗ್ನೆಸ್ ಸ್ಕೆಡ್ಡೆಯವರು ಹೇಳಿದಂತೆ, 'ನೆಹರೂಗಳನ್ನು ಬಿಡುವದು ನಮ್ಮ ಒಂದು ಯುದ್ಧ ಘೋಷಣೆಯಾಗಬೇಕು. ಅವರ ವಾಣಿಯು ಸಂಯುಕ್ತ ರಾಷ್ಟ್ರಗಳ ಸಭೆಯಲ್ಲಿ ಕೇಳಬರುವಂತೆ ಮಾಡುವದು ನಮ್ಮ ಧ್ಯೇಯವಾಗಬೇಕು. ಇದಿಲ್ಲದಿದ್ದರೆ ಪೂರ್ವ ಮತ್ತು ಪಶ್ಚಿಮದ ಲೆಕ್ಕವಿಲ್ಲದ ಜನತೆಯು ಈ ಯುದ್ಧವೂ ಕೂಡ ಹಿಂದಿನ ಯುದ್ಧಗಳಂತೆಯೇ, ಮುಂದಿನ ಯುದ್ಧದ ಬೀಜವೆಂದು ತಿಳಿಯಬೇಕಾಗುವದು.'

ಒಳದೇಶ.

ಕೊಡಗಿನಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ 227 ಜನನಗಳೂ, 266 ಮರಣಗಳೂ ಸಂಭವಿಸಿವೆ.

ಶ್ರೀ. ಕುಂಬೆರ ಕೆ. ಉತ್ತಪ್ಪನವರನ್ನು ಸೆಂಟ್ರಲ್ ಎಕ್ಸೈಜಿನ ಸಬ್ ಇನ್ಸ್‌ಪೆಕ್ಟರಾಗಿ ಕುಂದಾಪುರ ಸರ್ಕಲಿಗೆ ನೇಮಿಸಿರುವರು.

ಮಡಿಕೇರಿಯಲ್ಲಿ ಪ್ಲೇಗಿನ ರೋಗವು ಕಡಿಮೆಯಾಗಿದ್ದರೂ ಸಿಡುಬು ತಲೆಯೆತ್ತುತ್ತಿದೆ. ಈ ವಾರ ಒಬ್ಬರಿಗೆ ಹೊಸದಾಗಿ ಅಗಿದೆಯೆಂದು ಕಳೆಯ ಬಂದಿದೆ.

ವೀರಾಜಪೇಟೆ ಸರ್ಕಲಿನ ಆಹಾರ ನಿಯಂತ್ರಣ ಇನ್ಸ್‌ಪೆಕ್ಟರಾದ ಶ್ರೀ. ಕಾಳಮೂಡ ಚಟ್ಯಪ್ಪನವರು 1½ ತಿಂಗಳ ರಜೆಯಲ್ಲಿರುವದರಿಂದ ಅವರ ಬದಲಿಗೆ ಶ್ರೀ ಪಟ್ಟಡ ನಂಜಪ್ಪನವರನ್ನು ಮಡಿಕೇರಿಯಿಂದ ವರ್ಗಾಯಿಸಿ ಅವರ ಬದಲಿಗೆ ಮಡಿಕೇರಿಗೆ ಶ್ರೀ. ಪೈಕೆರ ಉತ್ತಪ್ಪನವರನ್ನು ನೇಮಿಸಿರುವರು.

ಎಕ್ಸೈಸ್ ಇನ್ಸ್‌ಪೆಕ್ಟರ್ ಹುದ್ದೆಯನ್ನು ವಜಾಮಾಡಿ ಶ್ರೀ ಮನೆಯ ಪಂದ ತಿಮ್ಮಯ್ಯನವರನ್ನು ಲ ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿ ತಾ. 1-11-44 ರಿಂದ ನೇಮಿಸಲಾಗಿದೆ.

ರಜೆಯಲ್ಲಿದ್ದ ಶ್ರೀ ಬೆಪ್ಪಂಡ ತಿಮ್ಮಯ್ಯನವರು ತಮ್ಮ ಕೆಲಸದ ಚಾರ್ಜುವಹಿಸಿಕೊಂಡಿರುವದರಿಂದ ಅವರ ಬದಲಿದ್ದ ಶ್ರೀ ಮಂಡೇಪಂಡ ತಿಮ್ಮಯ್ಯನವರನ್ನು ಸೋಮವಾರಪೇಟೆಗೆ ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿಯೂ ಶ್ರೀ. ಬಿ. ಸಿ. ರುದ್ರಪ್ಪನವರನ್ನು ಜಿಲ್ಲಾ ಜಡ್ಜರ ಆಫೀಸಿಗೂ, ಶ್ರೀ ಚೆನ್ನಿರ ಮಂದಪ್ಪನವರನ್ನು ಚೀಫ್ ಕಮಿಷನರ ಆಫೀಸಿಗೂ ವರ್ಗಾಯಿಸಿರುವರು.

ಕೊಡಗು ಸಹಕಾರ ಸೆಂಟ್ರಲ್ ಬ್ಯಾಂಕಿನ ಮಹಾಸಭೆಯು ತಾ. 23-12-44 ರಲ್ಲೂ, ಆಪಿಲ ಕೊಡಗು ಸಹಕಾರಿ ಸಮ್ಮೇಳನವು ತಾ. 24-12-44 ರಲ್ಲೂ ವೀರಾಜಪೇಟೆ ಹೈಸ್ಕೂಲ್ ಆವರಣದಲ್ಲಿ ನಡೆಯುವದು.

ಆಪಿಲ ಕೊಡಗು ಉಪಾಧ್ಯಾಯರ ಸಮ್ಮೇಳನದ ಸಂಬಂಧ 5-11-44 ರ ಬೆಳಿಗ್ಗೆ 9 ಗಂಟೆಗೆ ವೀರಾಜಪೇಟೆ ಹೈಸ್ಕೂಲಿನಿಂದ ಸಾರ್ವಜನಿಕರಿಗೆ 'ಕ್ರಾಸ್ ಕಂಟ್ರಿ ರೇಸ್' ಮತ್ತು 6-11-44 ರಲ್ಲಿ 11-30 ಗಂಟೆಗೆ ಈಜುವ ಸ್ಪರ್ಧೆಯು ಬೇತರಿಕಡುವಿನಲ್ಲೂ ನಡೆಯುವದೆಂದು ತಿಳಿಯುತ್ತದೆ.

ಕೊಡಗು ಫಾರೆಸ್ಟ್ ಇಲಾಖಾ ಅಧಿಕಾರಿಗಳಾದ ಶ್ರೀ ಚೆನ್ನಿರ ಕಾರ್ಯಪ್ಪನವರು ತಾ. 2-10-44 ರಿಂದ 3 ತಿಂಗಳ ರಜೆಯಲ್ಲಿರುವದರಿಂದ ಅವರ ಬದಲು ಕೆಲಸವನ್ನು ಸ. ಡಿವಿಜನಲ್ ಆಫೀಸರಾದ ರಾ. ಸ. ಕೋದಾಂಡ ಚೆಂಗಪ್ಪನವರು ನೋಡುತ್ತಿರುವರು.

ಕೊಡಗು ಕಸ್ತೂರ್ ಬಾ ನಿಧಿಗೆ ಸಂಗ್ರಹವಾದ ಹಣದಿಂದ ಕೊಡಗಿಗೆ ದೊರೆಯುವ ಭಾಗವನ್ನು ಯೋಗ್ಯ ರೀತಿ ಖರ್ಚು ಮಾಡಲು ಶ್ರೀಗಳಾದ ಬಿ. ಸಿದ್ದಣ್ಣ (ಪ್ರೆಸಿಡೆಂಟ್), ಜಿ. ಟಿ. ಮಂಜುನಾಥಯ್ಯ (ವೈಸ್ ಪ್ರೆಸಿಡೆಂಟ್) ಪಿ ಐ ಬೆಳ್ಯಪ್ಪ (ಸೆಕ್ರಟರಿ), ಸಿ. ಎಂ. ಪೂಣಚ್ಚ, ಕೆ. ಮಲ್ಲಪ್ಪಸೇಕ. ಪಿ. ಅಪ್ಪಯ್ಯ, ಸಿ. ಎಂ. ರಾಮಯ್ಯ, ಕೆ. ಎಂ. ಕುಶಾಲಪ್ಪನವರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಗಿದೆ. ಸಮಿತಿಯ ಸದಸ್ಯರ ಸಂಖ್ಯೆಯು ಹತ್ತು ಎಂದು ನಿಶ್ಚಯಿಸಿ ಉಳಿದ ಎರಡು ಸ್ಥಳಗಳಿಗೆ ಮಹಿಳೆಯರನ್ನು ನೇಮಿಸಲು ಖಾಲಿಬಿಡಲಾಗಿದೆ. ಶ್ರೀ ಬಿ. ಡಿ ಗಣಪತಿಯವರು ಸಹಾಯಕ ಸೆಕ್ರೆಟರಿಯಾಗಿ ಆರಿಸಲ್ಪಟ್ಟಿರುವರು.

ಶ್ರೀ. ಜೆಂಬಂಡ ಟಿ. ಬೋಪಯ್ಯನವರು ಕಳೆದ ಬಿ. ಎಸ್‌ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ವೀರಾಜಪೇಟೆಯಲ್ಲಿ ಕಟ್ಟಿರಿ ವ್ಯಾಪಾರಸ್ಥರಾದ ಶ್ರೀ ಹೆಚ್. ಅಬ್ದುಲ್‌ರಹೀಂರವರು ಸೈಕ್ಲಿಸ್ಟ್‌ರೇಜರಿನ ಬ್ಲೇಡುಗಳನ್ನು ಇಟ್ಟುಕೊಂಡು, ಗಿರಾಕಿಗಳಿಗೆ ಇಲ್ಲವೆಂದು ಹೇಳಿ ಕಳುಹಿಸಿದ್ದಕ್ಕೆ ಜಿಲ್ಲಾ ಮೇಜಸ್ಟ್ರೇಟರು ರಹೀಂರವರಿಗೆ ಒಂದನೂರು ರೂಪಾಯಿ ಜುಲ್ಮಾನೆ ವಿಧಿಸಿರುವುದಾಗಿ ತಿಳಿಯಬರುವುದಿದೆ.

ಪೊಳ್ಳಿಬೆಟ್ಟದ ದಕ್ಷಿಣ ಕೊಡಗು ಎತಲಿಟಿಕ್ ಯೂನಿಯನ್ನನ್ನು ಉಗ್ಗಪ್ಪ ನಹಸ್ಥಾನೆ ಮಾಡಿ, ಈ ತಾ. ೨೬ನೇ ಆದಿತ್ಯವಾರ ಹಾಕಿ ಪಂದ್ಯಾಟವೂ ಮತ್ತು ತಾ. 12 ನೇ ಆದಿತ್ಯವಾರ ಬೆ ೧ ಹೊತ್ತು 1 ಗಂಟೆಯಿಂದ 5 ಗಂಟೆಯವರೆಗೆ ಜವರ ವಾರ್ಷಿಕ ಅಟೋಟ ಸ್ಪರ್ಧೆಯೂ ನಡೆಯುವುದು.

ಬೇಜಾಗಿದ್ದಾರೆ.

ಹಿಂದೀ ಮತ್ತು ಕನ್ನಡವಿಲ್ಲದ ಉಪಾಧ್ಯಾಯರೊಬ್ಬರು ಬೇಕು. ನೂಲುವಿಕೆಯಲ್ಲಿ ನಿಪುಣರಾಗಿರಬೇಕು. ಪತ್ರವ್ಯವಹಾರ ಇಚ್ಛಿಸುವವರಿಗೆ ಕಳಿಗಿನ ಪತ್ರಿಕೆಗೆ ಬರೆಯಿರಿ.

ಎಂ. ಸಿ ಭೀಮಯ್ಯ,
'ನೆಹರೂ ಕುಟೀರ'
ಮಲ್ಲೂರು, ಪೊನ್ನಂಪೇಟೆ.

"ಟ್ರಾ ಪಿ ಕ ಲ್"

ಪಂ. ನೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್,
ಡಾ. ಯಂ. ಎ. ಅನ್ಸಾರಿ, ಸುಭಾಶ್‌ಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

